ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಗುರುವಾರ, 12 ಮಾರ್ಚ್ 2026
ಸಂಪುಟ 47, ಸಂಚಿಕೆ 343, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ಪ್ರತಿ ಕುಟುಂಬಕ್ಕೆ ತಿಂಗಳಿಗೊಂದು ಸಿಲಿಂಡರ್ ಖಚಿತ | ಯಾರಿಗೂ ಆತಂಕ ಬೇಡ: ಸದನದಲ್ಲಿ ಆಹಾರ ಸಚಿವ ಮುನಿಯಪ್ಪ ಭರವಸೆ | ವಾಣಿಜ್ಯ ಸಿಲಿಂಡರ್ ಪೂರೈಕೆಗೆ ತಾತ್ಕಾಲಿಕ ಕಡಿವಾಣ

ಅಭಾವ ಸ್ವಭಾವ ಬೇಡ

• **ವಿಧಾನಸಭೆ:** ಭಾರತವು ಶೇ.20–30ರಷ್ಟು ಅಡುಗೆ ಅನಿಲವನ್ನು ಸ್ವತಃ ಉತ್ಪಾದಿಸುತ್ತಿದ್ದು, ಪ್ರತಿ ಕುಟುಂಬಕ್ಕೆ ತಿಂಗಳಿಗೆ ಒಂದು ಗ್ಯಾಸ್ ಸಿಲಿಂಡರ್ ನೀಡುವುದಕ್ಕೆ ಯಾವುದೇ ಸಮಸ್ಯೆಯಿಲ್ಲ. ಜನರು ಆತಂಕಪಡಬೇಕಾಗಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಶೂನ್ಯ ವೇಳೆಯಲ್ಲಿ ಗ್ಯಾಸ್ ಸಿಲಿಂಡರ್ ಸಮಸ್ಯೆ ಕುರಿತು ಕಾಂಗ್ರೆಸ್ ಶಾಸಕ ಡಾ. ಎಚ್.ಡಿ. ರಂಗನಾಥ್ ಪ್ರಸ್ತಾಪಿಸಿದರು. ಇದಕ್ಕೆ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಪ್ರತಿಕ್ರಿಯಿಸಿ, ಅಡುಗೆ ಅನಿಲ ಸಿಲಿಂಡರ್ ದೊರೆಯುವುದಿಲ್ಲ ಎಂದು ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ಈಗಾಗಲೇ ಸಭೆ ನಡೆಸಲಾಗಿದ್ದು, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ ಎಂದು ಹೇಳಿದರು.

ಅನಿಲ ಮಿತಬಳಕೆಗೆ ಸಲಹೆ: ಇಲ್ಲಿಯವರೆಗೂ ಎಲ್ಲೂ ಅಡುಗೆ ಅನಿಲ ಸಿಲಿಂಡರ್ ಸರಬರಾಜಿನಲ್ಲಿ ಯಾವುದೇ ಸಮಸ್ಯೆ ಉಂಟಾಗಿಲ್ಲ. ಭಾರತವು ಶೇ.30ರಷ್ಟು ಅಡುಗೆ ಅನಿಲವನ್ನು ಉತ್ಪಾದಿಸುತ್ತಿದೆ. ಶೇ.70ರಷ್ಟು ಅಡುಗೆ ಅನಿಲಕ್ಕೆ ಹೊರದೇಶಗಳ ಮೇಲೆ ಅವಲಂಬಿತವಾಗಿದೆ. ➡ಪುಟ ೪

ದಿಢೀರ್ ಬೇಡಿಕೆಯಿಂದ ಅಭಾವ

• **ಬೆಂಗಳೂರು:** ಒಂದೇ ದಿನದಲ್ಲಿ ನೂರಾರು ಗ್ರಾಹಕರು ಸಿಲಿಂಡರ್‌ಗೆ ಮನವಿ ಮಾಡಿದ ಪರಿಣಾಮ ಸರಿಯಾದ ಸಮಯಕ್ಕೆ ಸಿಲಿಂಡರ್ ನೀಡಲಾಗುತ್ತಿಲ್ಲ. ಬದಲಾಗಿ ಗೃಹ ಬಳಕೆ ಸಿಲಿಂಡರ್ ಪೂರೈಕೆ ಮೊದಲಿನಂತೆಯೇ ಇದ್ದು, ಗ್ರಾಹಕರು ಆತಂಕಪಡುವ ಅವಶ್ಯಕತೆಯಿಲ್ಲ ಎಂದು ಎಲ್‌ಪಿಜಿ ಏಜೆನ್ಸಿ ಸ್ಪಷ್ಟಪಡಿಸಿದೆ. ಗೃಹ ಬಳಕೆಯ ಸಿಲಿಂಡರ್ ಪೂರೈಕೆ ಯಥಾಸ್ಥಿತಿಯಿದ್ದು, ಅದರಲ್ಲಿ ಯಾವುದೇ ರೀತಿಯಲ್ಲಿ ಬದಲಾವಣೆ ಉಂಟಾಗಿಲ್ಲ. ಆದರೆ ಸಿಲಿಂಡರ್ ಪೂರೈಕೆ ಕೊರತೆ ಉಂಟಾಗಿದೆ ಎನ್ನುವ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಹರಿದಾಡುತ್ತಿದ್ದು, ಇದರಿಂದ ಆತಂಕಗೊಂಡ ಜನರು ತಮ್ಮ ಮನೆಗಳಿಗೆ ಸಿಲಿಂಡರ್ ಬುಕ್ಕಿಂಗ್ ಮಾಡಲು ಆರಂಭಿಸಿದ್ದಾರೆ. ಆದರಲ್ಲೂ ಪ್ರಸ್ತುತ ಎಲ್‌ಪಿಜಿ ಬುಕ್ಕಿಂಗ್ ಮಾಡುವವರ ಸಂಖ್ಯೆ 8 ರಿಂದ 10 ಪಟ್ಟು ಅಧಿಕವಾಗಿದೆ. ➡ಪುಟ ೪

» ಹೋಟೆಲ್, ಕಲ್ಯಾಣ ಮಂಟಪಗಳಿಗಿಲ್ಲ ಸಿಲಿಂಡರ್
» ಶಾಲೆ-ಹಾಸ್ಟೆಲ್, ಆಸ್ಪತ್ರೆ, ತುರ್ತು ಸೇವೆಗಳಿಗೆ ಆದ್ಯತೆ



ಸದನದಲ್ಲಿ ಅಡುಗೆ ಅನಿಲ ವಾಗ್ಯುದ್ಧ

ಇಸ್ರೇಲ್–ಇರಾನ್ ಮಧ್ಯೆ ಯುದ್ಧದ ಪರಿಣಾಮ ಕಚ್ಚಾತೈಲ ಪೂರೈಕೆಯಲ್ಲಿ ಬಿಕ್ಕಟ್ಟು ಎದುರಾದರೆ, ಇತ್ತ ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಮಧ್ಯೆ ಇದು ವಾಗ್ಯುದ್ಧಕ್ಕೆ ಕಾರಣವಾಯಿತು. ಇದರಿಂದ ಕೆಲಕಾಲ ಸದನದಲ್ಲಿ ಗದ್ದಲ ಉಂಟಾ ಯಿತು. ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕ ಡಾ. ರಂಗನಾಥ್, ಅಡುಗೆ ಅನಿಲ ಬಿಕ್ಕಟ್ಟಿಗೆ ಕೇಂದ್ರ ಸರ್ಕಾರದ ವಿದೇಶಾಂಗ ನೀತಿ ಕಾರಣ ಎಂದು ಹೇಳಿದ್ದು ಗದ್ದಲಕ್ಕೆ ಕಾರಣವಾಯಿತು. ಈ ವೇಳೆ ಪ್ರತಿಪಕ್ಷದ ಎಲ್ಲಾ ಸದಸ್ಯರು ಎದ್ದು ನಿಂತು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ➡ಪುಟ ೪

ಹೋಟೆಲ್, ರೆಸ್ಟೋರೆಂಟ್‌ನವರಿಗೆ ಚಳವಳಿ ಮಾಡಿ ಎಂದು ಹೇಳಿಲ್ಲ. ಅವರ ಬೇಡಿಕೆ ಸರಿಯಾಗಿದೆ ಎಂದು ಹೇಳಿದ್ದೇನೆ. ಇದು ಪ್ರಚೋದನೆ ಹೇಗಾಗುತ್ತದೆ? ಅದನ್ನು ಈಗಲೂ ನಾನು ಹೇಳುತ್ತೇನೆ. ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಸಂಸತ್ತಿನಲ್ಲಿ ನೀಡಿದ ಹೇಳಿಕೆ ಉಲ್ಲೇಖಿಸಿದರೆ ತಪ್ಪೇನು?
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ವದಂತಿಗಳನ್ನು ನಂಬದಿರಿ

ದೇಶದ ಜನತೆಗೆ ಪ್ರಧಾನಿ ನರೇಂದ್ರ ಮೋದಿ ಮನವಿ

• **ತಿರುಚಿರಾಪಳಿ:** ಎಲ್‌ಪಿಜಿ ಪೂರೈಕೆ ಅಡಚಣೆ ಬಗ್ಗೆ ವದಂತಿಗಳ ಬಗ್ಗೆ ಗಮನಹರಿಸಬೇಡಿ, ವದಂತಿಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ ಎಂದು ಪ್ರಧಾನಿ ನರೇಂದ್ರ ಮೋದಿ ಜನರಿಗೆ ಮನವಿ ಮಾಡಿದ್ದಾರೆ. ನಾವು ಸರಿಯಾದ, ಪರಿಶೀಲಿಸಿದ ಮಾಹಿತಿಯನ್ನು ಮಾತ್ರ ಹರಡೋಣ ಎಂದು ಅವರು ಮೋದಿ ಜನರಿಗೆ ಕೇಳಿಕೊಂಡಿದ್ದಾರೆ.



ತಮಿಳುನಾಡಿನ ತಿರುಚಿರಾಪಳಿಯಲ್ಲಿ ಬೃಹತ್ ಎನ್‌ಡಿಎ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ಅನಿಲ ಸರಬರಾಜು ಮತ್ತು ಲಭ್ಯತೆಯ ಬಗ್ಗೆ ಭಯಭೀತರಾಗುವ ಅಥವಾ ವದಂತಿಗಳಿಗೆ ಗಮನ ಕೊಡುವ ಅಗತ್ಯವಿಲ್ಲ ಎಂದರು. ಯಾವುದೇ ಪರಿಸ್ಥಿತಿಯಲ್ಲಿ, ನಮ್ಮ ಸರ್ಕಾರವು ಯಾವಾಗಲೂ ಭಾರತದ ಹಿತಾಸಕ್ತಿಗಳನ್ನು ಎಲ್ಲಕ್ಕಿಂತ ಹೆಚ್ಚಾಗಿ ಹೇಗೆ ಇರಿಸುತ್ತದೆ ಎಂಬುದು ನಿಮಗೆ ತಿಳಿದಿದೆ. ಒಂದು ರಾಷ್ಟ್ರವಾಗಿ, ನಾವು ಪ್ರತಿಯೊಂದು ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತೇವೆ ಎಂಬ ವಿಶ್ವಾಸವಿದೆ ಮೋದಿ ಹೇಳಿದರು.

ಅನಿಲ ಆಮದಿಗೆ ಪರ್ಯಾಯ ವ್ಯವಸ್ಥೆ

• **ಹೊಸದಿಲ್ಲಿ:** ಅಂತಾರಾಷ್ಟ್ರೀಯ ಪೂರೈಕೆಯಲ್ಲಿನ ವ್ಯತ್ಯಯದಿಂದ ಉಂಟಾಗಿರುವ ಕೊರತೆ ನೀಗಿಸಲು ಪರ್ಯಾಯ ಮಾರ್ಗಗಳನ್ನು ಬಳಸಲಾಗುತ್ತಿದೆ. ರಾಷ್ಟ್ರೀಯ ದಾಸ್ತಾನುಗಳನ್ನು ಸ್ಥಿರಗೊಳಿಸಲು ಎರಡು ಹೊಸ ಎಲ್‌ಎನ್‌ಜಿ (ಎನ್‌ಎನ್‌ಜಿ) ಕಾರ್ಗೋಗಳು ಪ್ರಸ್ತುತ ಭಾರತಕ್ಕೆ ಬರುತ್ತಿವೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತ ಶರ್ಮಾ ಹೇಳಿದ್ದಾರೆ.

ಹಾರ್ಮುಜ್ ಮುಚ್ಚಿದರೆ ಆಹಾರ ಜೀವನ ವೆಚ್ಚ ಹೆಚ್ಚಳ: ವಿಶ್ವಸಂಸ್ಥೆ

• **ವಿಶ್ವಸಂಸ್ಥೆ:** ಇರಾನ್ ಯುದ್ಧದ ಹಿನ್ನೆಲೆಯಲ್ಲಿ ಹಾರ್ಮುಜ್ ಜಲಸಂಧಿ ಮುಚ್ಚಿದರೆ ಜಾಗತಿಕ ಆಹಾರ ಬೆಲೆಗಳು ಹಾಗೂ ಜೀವನ ವೆಚ್ಚ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಣಾಮವಾಗಿ ಈ ಪ್ರಮುಖ ಸಮುದ್ರ ಮಾರ್ಗದಲ್ಲಿ ಸಾಗಾಟ ಈಗಾಗಲೇ ವ್ಯತ್ಯಯಗೊಂಡಿದೆ ಎಂದು ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನದ(ಯುಎನ್‌ಸಿಟಿಎಡಿ) ವರದಿ ತಿಳಿಸಿದೆ. ➡ಪುಟ ೪

ತೈಲ ಮಾರುಕಟ್ಟೆ ಮೇಲೆ ಪರಿಣಾಮ




• **ದುಬೈ:** ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ತನ್ನ 16 ಹಡಗುಗಳನ್ನು ನಾಶಪಡಿಸಿದ ಪ್ರತೀಕಾರವಾಗಿ ಇರಾನ್ ಬುಧವಾರ ಹಲವು ವಾಣಿಜ್ಯ ಹಡಗುಗಳ ಮೇಲೆ ದಾಳಿ ನಡೆಸಿದ್ದು, ದುಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವೂ ಡ್ರೋನ್ ದಾಳಿ ನಡೆಸಿದೆ. ಎರಡು ಇರಾನಿಯನ್ ಡ್ರೋನ್‌ಗಳು ವಿಮಾನ ನಿಲ್ದಾಣದ ಬಳಿ ಬಿದ್ದು ನಾಲ್ವರು ಗಾಯಗೊಂಡಿದ್ದಾರೆ. ➡ಪುಟ ೪

ಪ್ರತಿಭಟನೆಗಳ ನಡುವೆ ಧ್ವನಿಮತದಿಂದ ಸದನ ತಿರಸ್ಕೃತ

ಪದಚ್ಯುತಿ ನಿರ್ಣಯಕ್ಕೆ ಸೋಲು

• **ಹೊಸದಿಲ್ಲಿ:** ಲೋಕಸಭಾ ಸಭಾಪತಿ ಓಂ ಬಿರ್ಲಾ ಪದಚ್ಯುತಿಗೆ ಆಗ್ರಹಿಸಿ ವಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು, ಬುಧವಾರ ವಿಪಕ್ಷಗಳ ಜೋರಾದ ಘೋಷಣೆಗಳು–ಪ್ರತಿಭಟನೆಗಳ ನಡುವೆ ಸದನವು ಧ್ವನಿಮತದಿಂದ ತಿರಸ್ಕರಿಸಿದೆ. ಧ್ವನಿಮತದ ನಂತರ ಕಲಾಪಗಳನ್ನು ದಿನದ ಅವಧಿಗೆ ಮುಂದೂಡಲಾಗಿದೆ. ಸದನವು ನಾಳೆ(ಗುರುವಾರ) ಬೆಳಗ್ಗೆ 11 ಗಂಟೆಗೆ ಮರು ಸಮಾವೇಶಗೊಳ್ಳಲಿದೆ. ಸಭಾಪತಿ ಬಿರ್ಲಾ ಸಭಾಪತಿ ಸ್ಥಾನ ಅಲಂಕರಿಸಲಿದ್ದು, ಕಲಾಪಗಳ ವೇಳೆ ವಿಪಕ್ಷೀಯರ ನಡವಳಿಕೆ ಕುರಿತು ಹೇಳಿಕೆ ನೀಡಲಿದ್ದಾರೆ.



ಸಭಾಪತಿಗಳು ಸದನದ ಕಲಾಪಗಳ ನಿಷ್ಪಕ್ಷವಾಗಿ ನಡೆಸಲು ವಿಫಲರಾಗಿದ್ದಾರೆ ಎಂದು ಆರೋಪಿಸಿ ವಿಪಕ್ಷಗಳು ನಿರ್ಣಯ ಮಂಡಿಸಿದ್ದವು.ಈ ವಿಚಾರದಲ್ಲಿ ತೀವ್ರವಾದ ಚರ್ಚೆ ನಡೆದಿದ್ದು ವಿಪಕ್ಷಗಳ ಆರೋಪವನ್ನು ಸರಕಾರ ತಿರಸ್ಕರಿಸಿತ್ತು.

ಚರ್ಚೆಗೆ ಉತ್ತರಿಸುವ ಸಂದರ್ಭ ವಿಪಕ್ಷಗಳನ್ನು ಕಟುವಾಗಿ ತರಾಟೆಗೆತ್ತಿಕೊಂಡ ಗೃಹ ಸಚಿವ ಅಮಿತ್ ಶಾ, ವಿಪಕ್ಷೀಯರು ಮಂಡಿಸಿದ ಅವಿಶ್ವಾಸ ನಿರ್ಣಯ ಸಂಸದೀಯ ರಾಜನೀತಿಯಲ್ಲೇ ತೀರಾ ದುರದೃಷ್ಟಕರ ಹೆಜ್ಜೆಯಾಗಿದೆ.

ಸದನದಲ್ಲಿ ಆಳುವ ಪಕ್ಷ–ವಿಪಕ್ಷಗಳ ಸಮಾನ ಪರಿಗಣಿಸುವ ಸಭಾಪತಿಗಳು ಸದನದ ತಟಸ್ಥ ಕಾವಲುಗಾರ. ಸದನದ ಸ್ಥಾಪಿತ ಇತಿಹಾಸ ಪ್ರಕಾರ, ಪರಸ್ಪರ ವಿಶ್ವಾಸದ ಆಧಾರದಲ್ಲಿ ಸದನದ ಕಲಾಪಗಳು ನಡೆಯುತ್ತೆ. ಆಳುವ ಪಕ್ಷೀಯರು–ವಿಪಕ್ಷೀಯರನ್ನು ಸಮಾನ ಪರಿಗಣಿಸುವ ಸಭಾಪತಿಗಳ ಪದಚ್ಯುತಿಗೆ ನಿರ್ಣಯ ಮಂಡನೆಯಾದದ್ದು ಸಂಸದೀಯ ರಾಜನೀತಿಗೇ ವಿರುದ್ಧ ಮತ್ತು ದುರದೃಷ್ಟಕರವೆಂದು ಟೀಕಿಸಿದರು. ➡ಪುಟ ೪

ವಿಪಕ್ಷ ನಾಯಕನಿಗೆ ದೇಶದ ಅಭಿವೃದ್ಧಿಯ ಅರಿವಿಲ್ಲ: ಮೋದಿ

ಯುದ್ಧ ಸಂಬಂಧ ಕೈ ರಾಜಕೀಯ

• **ಕೊಚ್ಚಿ:** ಕಾಂಗ್ರೆಸ್ ಮತ್ತು ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿಯನ್ನು ತೀವ್ರವಾಗಿ ತರಾಟೆಗೆತ್ತಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಏಷ್ಯಾ ಬಿಕ್ಕಟ್ಟಿಗೆ ಸಂಬಂಧಿಸಿ ವಿಪಕ್ಷವು ರಾಜಕೀಯ ಮಾಡುತ್ತಿದೆ. ವಿಪಕ್ಷ ನಾಯಕನಿಗೆ ದೇಶದ ಅಭಿವೃದ್ಧಿ ಕುರಿತು ಏನೇನೂ ತಿಳಿವಳಿಕೆ ಇಲ್ಲ ಎಂದು ಟೀಕಿಸಿದ್ದಾರೆ.



ಸಮರ ಸಂತ್ರಸ್ತ ಪಶ್ಚಿಮ ಏಷ್ಯಾದಲ್ಲಿ ಸಿಲುಕಿರುವ ಭಾರತೀಯರೆಲ್ಲರ ಸುರಕ್ಷೆಗಾಗಿ ಸರಕಾರ ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ವಾಮಪಂಥೀಯರು ಹರಡುತ್ತಿರುವ ವದಂತಿಗಳಿಗೆ ಕಿವಿಗೊಡದಿರಿ ಎಂದು ಪ್ರಧಾನಿ ಮೋದಿ ಜನರನ್ನು ವಿನಂತಿಸಿದರು.

ಪ್ರಜೆಗಳ ರಕ್ಷಿಸಿಯೇ ಸಿದ್ಧ: ಪಶ್ಚಿಮ ಏಷ್ಯಾದಲ್ಲಿನ ಇಂದಿನ ಘಟನಾವಳಿಗಳ ಬಗ್ಗೆ ನಿಮಗೆಲ್ಲ ಆತಂಕವಿರುವುದು ಸಹಜ. ನಮ್ಮ ಮಲಿಯನ್‌ಗೂ ಹೆಚ್ಚು ಸೋದರ ಸೋದರಿಯರು ಅಲ್ಲಿ ಉದ್ಯೋಗದಲ್ಲಿದ್ದಾರೆ. ➡ಪುಟ ೪

ಕೇರಳೀಯರ ಬೇಡಿಕೆ ಈಡೇರಿಸಿದ್ದೇವೆ

ಕೇರಳೀಯರ ದೀರ್ಘಕಾಲೀನ ಬೇಡಿಕೆಯಂತೆ, ಕೇರಳ ರಾಜ್ಯದ ಹೆಸರನ್ನು ಕೇರಳಂ ಎಂಬುದಾಗಿ ಪರಿವರ್ತಿಸಲು ಕೇಂದ್ರದ ಎನ್‌ಡಿಎ ಸರಕಾರ ಮಂಜೂರಾತಿ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಘೋಷಿಸಿದರು. ಈ ಹಿನ್ನೆಲೆಯಲ್ಲಿ ಕೇರಳಾದ್ಯಂತದ ಮೀನುಗಾರ ಸಮುದಾಯ ಮತ್ತು ಧೀವರ ಸಭಾ ಸದಸ್ಯರಿಗೆ ಪ್ರಧಾನಿ ಮೋದಿ ಹಾರ್ದಿಕ ಶುಭಾಶಯ ಹಾಗೂ ಶುಭಾಕಾಂಕ್ಷೆ ಕೋರಿದ್ದಾರೆ. ➡ಪುಟ ೪

ಅಮೆರಿಕದಲ್ಲಿ ರಿಲಯನ್ಸ್‌ನಿಂದ ತೈಲ ಸಂಸ್ಕರಣಾಗಾರ: ಟ್ರಂಪ್

• **ವಾಷಿಂಗ್ಟನ್:** ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಅಮೆರಿಕದಲ್ಲಿ ತನ್ನ ಮೊದಲ ಹೊಸ ತೈಲ ಸಂಸ್ಕರಣಾಗಾರವನ್ನು ನಿರ್ಮಿಸಲು ಪಾಲುದಾರಿಕೆಗೆ ಸಹಿ ಹಾಕಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಹೊಸ ಸಂಸ್ಕರಣಾಗಾರವು ಟೆಕ್ಸಾಸ್‌ನ ಬ್ರೌನ್ಸ್‌ವಿಲ್ಲೆಯಲ್ಲಿರಲಿದ್ದು, ಸಂಪೂರ್ಣವಾಗಿ ಅಮೆರಿಕ ಶೆಲ್ ತೈಲದ ಮೇಲೆ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗುವುದು ಎಂದು ಈ ಯೋಜನೆಯನ್ನು ಚಾಲನೆ ಮಾಡುವ ಸಂಸ್ಥೆ ಅಮೆರಿಕ ಫಸ್ಟ್ ರಿಫೈನಿಂಗ್ (ಎಎಫ್‌ಆರ್) ಹೇಳಿದೆ. ➡ಪುಟ ೪

» ಮುಕೇಶ್ ಅಂಬಾನಿ ಕಂಪನಿಯಿಂದ 300 ಶತಕೋಟಿ ಡಾಲರ್ ಹೂಡಿಕೆ

13 ವರ್ಷದಿಂದ ರಾಣಾಗೆ ಕೋಮಾ ಸ್ಥಿತಿ

ನಿಷ್ಕ್ರಿಯ ದಯಾಮರಣಕ್ಕೆ ಸುಪ್ರೀಂ ಕೋರ್ಟ್ ಸಮ್ಮತಿ



ಭಾರತೀಯ ನ್ಯಾಯಾಂಗ ಇತಿಹಾಸದಲ್ಲೇ ಮೊದಲ ತೀರ್ಪು

• **ಹೊಸದಿಲ್ಲಿ:** ಕಳೆದ 13 ವರ್ಷಗಳಿಂದ ಕೋಮಾ ಸ್ಥಿತಿಯಲ್ಲಿದ್ದ 32 ವರ್ಷದ ವ್ಯಕ್ತಿಯೊಬ್ಬರಿಗೆ ನೀಡಲಾಗಿರುವ ಕೃತಕ ಜೀವದಾನ ವ್ಯವಸ್ಥೆ ಹಿಂಪಡೆಯಲು ಸುಪ್ರೀಂ ಕೋರ್ಟ್ ಬುಧವಾರ ಅನುಮತಿ ನೀಡಿದೆ. ಭಾರತೀಯ ನ್ಯಾಯಾಂಗ ಇತಿಹಾಸದಲ್ಲೇ ಇದು ಮೊದಲ ಆದೇಶವಾಗಿದೆ. ಹರೀಶ್ ರಾಣಾ 2013ರಲ್ಲಿ ಮಹಡಿಯಿಂದ ಆಕಸ್ಮಿಕವಾಗಿ ಬಿದ್ದು ತಲೆಗೆ ತೀವ್ರ ಪೆಟ್ಟಾಗಿತ್ತು. ಅಂದಿನಿಂದ ಈವರೆಗೂ ಪ್ರಜ್ಞಾಹೀನ ಸ್ಥಿತಿಯಲ್ಲೇ ಇದ್ದಾರೆ. ಅವರ ಜೈವಿಕ ಅಸ್ತಿತ್ವ ಕೇವಲ ವೈದ್ಯಕೀಯ ಪೌಷ್ಟಿಕಾಂಶದ ಮೂಲಕ ಮುಂದುವರಿಯುತ್ತಿದ್ದು, ಚೇತರಿಕೆಯ ಯಾವುದೇ ಸಾಧ್ಯತೆಯಿಲ್ಲ ಎಂಬುದನ್ನು ನ್ಯಾಯಾಲಯ ಗಮನಿಸಿದೆ. ಹೀಗಾಗಿ ಚಿಕಿತ್ಸೆ ಮುಂದುವರಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂಬ ವೈದ್ಯಕೀಯ ಮಂಡಳಿಗಳ ಸರ್ವಾನುಮತದ ವರದಿಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ➡ಪುಟ ೪

ಭಾವುಕರಾಗಿ ಕಣ್ಣೀರಿಟ್ಟ ನ್ಯಾ.ಪರ್ದಿವಾಲ • ಪುಟ ೪

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ : ನವಮಿ, ನಕ್ಷತ್ರ: ಮೂಲ

ದಿನದ ಮಾತು

ಒಳ್ಳೆಯತನದಿಂದ ನಡೆದುಕೊಳ್ಳುವ ಮಗನನ್ನು ಪಡೆದ ತಂದೆ ನಿಜವಾಗಿ ನಿಧಿಯನ್ನು ಪಡೆದವನು.
▲ಮದನ ತಿಲಕ

ಶತ್ರು ಆಸ್ತಿಗಳ ನಗದೀಕರಣಕ್ಕೆ ಅಡ್ಡಿ ಮಾಡಿದ್ದು ಯಾರು?

ಗುರುತರ
• ಸೋಮಶೇಖರ ಸಿ.ಜೆ.
• ಪುಟ ೬

ಕಿರುಸುದ್ದಿ

ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ ನಿಧನ

• **ಮೈಸೂರು:** ಹೊಸ ದಿಗಂತ ಸಿನಿಮಾ ವಿಭಾಗದ ಮುಖ್ಯಸ್ಥರಾಗಿದ್ದ ಹಿರಿಯ ಸಿನಿಮಾ ಪತ್ರಕರ್ತ ಕೆ.ಜಿ. ಕುಮಾರ್ (74) ಅವರು ಬುಧವಾರ ತೀವ್ರ ಹೃದಯಾಘಾತದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಬುಧವಾರ (ಮಾ.11) ಸಂಜೆ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನಗರದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಪ್ರಯೋಜನವಾಗಲಿಲ್ಲ. ಉಡುಪಿ ನಗರದ ಕೊರಂಗ್ರಪಾಡಿಯಲ್ಲಿ ರಘುರಾಮ್ ಶೆಟ್ಟಿ ಮತ್ತು ಶಾರದಾ ಅವರ ಹಿರಿಯ ಪುತ್ರರಾಗಿ 1952ರ ನವೆಂಬರ್ 6 ರಂದು ಜನಿಸಿದ್ದ ಅವರು, ಸುಮಾರು 56 ವರ್ಷಗಳಿಂದ ಮೈಸೂರಿನ ಪ್ರಮುಖ ಪತ್ರಿಕಾ ವಿತರಕರಾಗಿ ಹಾಗೂ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದರು. ➡ಪುಟ ೪



ಇಂದು ಮೈಸೂರಲ್ಲಿ ಅಂತ್ಯಕ್ರಿಯೆ

ಮಧ್ಯಪ್ರಾಚ್ಯ ಯುದ್ಧದಿಂದ ಎಲ್‌ಪಿಜಿ ಸರಬರಾಜಿನಲ್ಲಿ ವ್ಯತ್ಯಯ | ಇಲೆಕ್ಟ್ರಿಕ್ ಪ್ಲೇಟ್, ಮೈಕ್ರೋವೇವ್, ಸೌದೆಯತ್ತ ಜನರ ಚಿತ್ತ

ಪರ್ಯಾಯ ಮಾರ್ಗದತ್ತ ಹೊಟೇಲ್ ಉದ್ಯಮ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷ ದಿಂದ ಜಾಗತಿಕ ಇಂಧನ ಸರಬರಾಜು ವ್ಯತ್ಯಯಗೊಂಡ ಪರಿಣಾಮ ದೇಶದಾದ್ಯಂತ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಉಂಟಾಗಿದ್ದು, ರೆಸ್ಟೋರೆಂಟ್‌ಗಳು, ಬೀದಿ ಆಹಾರ ಮಾರಾಟಗಾರರು ಮತ್ತು ಕೇಟರಿಂಗ್ ಉದ್ಯಮಗಳು ಪರ್ಯಾಯ ಮಾರ್ಗಗಳತ್ತ ಮುಖ ಮಾಡಿವೆ. ಇಂಡಕ್ಷನ್ ಕುಕ್‌ಟಾಪ್, ಮೈಕ್ರೋವೇವ್, ಮರದ ಕಟ್ಟಿಗೆ ಮತ್ತು ಸೌರಶಕ್ತಿ ಉಪಕರಣಗಳ ಬಳಕೆ ಮೂಲಕ ತಮ್ಮ ಅಡುಗೆ ಕಾರ್ಯವನ್ನು ಮುಂದುವರಿಸಲು ಅವರು ಪ್ರಯತ್ನಿಸುತ್ತಿದ್ದಾರೆ.

ಗೃಹ ಬಳಕೆಗೆ ಸರ್ಕಾರದ ಆದ್ಯತೆ: ಯುದ್ಧದಿಂದ ಜಾಗತಿಕ ಇಂಧನ ಸರಬರಾಜು ಮಾರ್ಗಗಳು ಅಸ್ತವ್ಯಸ್ತವಾಗಿರುವ ಹಿನ್ನೆಲೆ, ಸರ್ಕಾರ ಗೃಹ ಬಳಕೆಯ ಎಲ್‌ಪಿಜಿ ಸರಬರಾಜಿಗೆ ಆದ್ಯತೆ ನೀಡುತ್ತಿದೆ. ಇದರಿಂದ ವಾಣಿಜ್ಯ ಎಲ್‌ಪಿಜಿ ಮೇಲೆ ಅವಲಂಬಿತವಾಗಿರುವ ಸಣ್ಣ ಹೊಟೇಲ್‌ಗಳಿಂದ ಹಿಡಿದು ದೊಡ್ಡ ರೆಸ್ಟೋರೆಂಟ್‌ಗಳವರೆಗೆ ಅನೇಕ ವ್ಯವಹಾರಗಳು ಸಂಕಷ್ಟಕ್ಕೆ ಸಿಲುಕಿವೆ. ಕೆಲವೆಡೆ ದಿನಗಳು ಕಳೆದರೆ ತಾತ್ಕಾಲಿಕವಾಗಿ ಮುಚ್ಚುವ ಪರಿಸ್ಥಿತಿಯೂ ಎದುರಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ದಿಲ್ಲಿ ರೆಸ್ಟೋರೆಂಟ್‌ಗಳಲ್ಲಿ ಅನಿಲ ಕೊರತೆ: ರಾಷ್ಟ್ರ ರಾಜಧಾನಿ ದಿಲ್ಲಿಯಲ್ಲಿ ಎಲ್‌ಪಿಜಿ ಸರಬರಾಜು ಅಸ್ತವ್ಯಸ್ತವಾಗಿದೆ. ಅನೇಕ ರೆಸ್ಟೋರೆಂಟ್‌ಗಳಿಗೆ ಒಂದು ಅಥವಾ ಎರಡು ದಿನಕ್ಕೆ ಸಾಕಾಗುವಷ್ಟು ಮಾತ್ರ ಗ್ಯಾಸ್ ಉಳಿದಿದೆ ಎಂದು ಉದ್ಯಮ ಪ್ರತಿನಿಧಿಗಳು ತಿಳಿಸಿದ್ದಾರೆ. ದಿಲ್ಲಿ ಹೈಕೋರ್ಟ್‌ನ ವಕೀಲರ ಕ್ಯಾಂಟೀನ್ ಬುಧವಾರ ಗ್ಯಾಸ್ ಕೊರತೆಯಿಂದ ಮೇನ್ ಕೋರ್ಸ್ ಮೆನು ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. ನಂತರ ಎಲ್‌ಪಿಜಿ ಸಿಗುತ್ತಿದ್ದಂತೆಯೇ ಸೇವೆ ಪುನರಾರಂಭಿಸಲಾಯಿತು.



ಚಪ್ಪನ್ ದುಕಾನ್‌ನಲ್ಲಿ ಇಲೆಕ್ಟ್ರಿಕ್ ಉಪಕರಣ: ಮಧ್ಯಪ್ರದೇಶದ ಇಂದೋರ್‌ನ ಪ್ರಸಿದ್ಧ ಚಪ್ಪನ್ ದುಕಾನ್ ಬೀದಿ ಆಹಾರ ಕೇಂದ್ರದಲ್ಲಿ ವ್ಯಾಪಾರಿಗಳು ಗ್ಯಾಸ್ ಬರ್ನರ್‌ಗಳ ಬದಲು ಇಲೆಕ್ಟ್ರಿಕ್ ಉಪಕರಣಗಳನ್ನು ಬಳಸಲು ಆರಂಭಿಸಿದ್ದಾರೆ. ಚಾಟ್ ಚೌಪಾಟಿ ಟ್ರೇಡರ್ಸ್ ಅಸೋಸಿಯೇಶನ್ ಅಧ್ಯಕ್ಷ ಗುಂಜನ್ ಶರ್ಮಾ ಹೇಳುವಂತೆ, ವಾಣಿಜ್ಯ ಎಲ್‌ಪಿಜಿ ಸರಬರಾಜು ನಿಂತಿದೆ. ಆದ್ದರಿಂದ ನಾವು ಇಲೆಕ್ಟ್ರಿಕ್ ಉಪಕರಣಗಳನ್ನು ಖರೀದಿ ಮಾಡಿ ಬಳಸಲು ಆರಂಭಿಸಿದ್ದೇವೆ. ಅಗತ್ಯವಿದ್ದರೆ ಸೌರಶಕ್ತಿ ಉಪಕರಣಗಳನ್ನೂ ಬಳಸುವ ಯೋಚನೆ ಇದೆ ಎಂದು ಅವರು ಹೇಳಿದರು.

ರೈಲ್ವೆ ಕೇಟರಿಂಗ್ ಘಟಕಗಳಿಗೆ ಪರ್ಯಾಯ ಸೂಚನೆ ಭಾರತೀಯ ರೈಲ್ವೆ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮ ತನ್ನ ಪಶ್ಚಿಮ ವಲಯದ ಆಹಾರ ಘಟಕಗಳಿಗೆ ಮೈಕ್ರೋವೇವ್ ಓವನ್ ಹಾಗೂ ಇಂಡಕ್ಷನ್ ಪ್ಲೇಟ್‌ಗಳನ್ನು ಬಳಸುವಂತೆ ಸೂಚಿಸಿದೆ. ಮಂಗಳವಾರ ಹೊರಡಿಸಿದ ಪ್ರಕಟಣೆಯಲ್ಲಿ ಪ್ರಯಾಣಿಕರಿಗೆ ನಿರಂತರ ಆಹಾರ ಸೇವೆ ನೀಡಲು ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ತಿಳಿಸಲಾಗಿದೆ.

ಉತ್ತರಾಖಂಡದಲ್ಲಿ ಮರದ ಸೌದೆ ವ್ಯವಸ್ಥೆ: ಉತ್ತರಾಖಂಡದಲ್ಲಿ ಪರಿಸ್ಥಿತಿ ಗಂಭೀರವಾದರೆ ವ್ಯಾಪಾರಿಗಳಿಗೆ ಮರದ ಇಂಧನ ಒದಗಿಸಲು ಸರ್ಕಾರ ಸಿದ್ಧತೆ ನಡೆಸಿದೆ. ಅರಣ್ಯ ಸಚಿವ ಸುಬೋಧ್ ಉನಿಯಾಲ್ ಪ್ರಸ್ತುತ ಪರಿಸ್ಥಿತಿ ಸಂಕಷ್ಟದಂತಿದೆ ಎಂದು ಹೇಳಿದ್ದಾರೆ.

ಪುದುಚೇರಿ, ರಾಜಸ್ಥಾನದಲ್ಲಿ ಕಾರ್ಯ ಸಮಯ ಕಡಿತ: ಪುದುಚೇರಿ ಮತ್ತು ರಾಜಸ್ಥಾನದಲ್ಲೂ ಎಲ್‌ಪಿಜಿ ಕೊರತೆಯಿಂದ ಅಡುಗೆ ಮನೆಗಳು ಒತ್ತಡದಲ್ಲಿವೆ. ಕೆಲ ರೆಸ್ಟೋರೆಂಟ್‌ಗಳು ಕೆಲಸದ ಸಮಯವನ್ನು ಕಡಿಮೆ ಮಾಡಿದ್ದು, ಕೆಲವು ಮರದ ಇಂಧನ ಅಥವಾ ಎಲೆಕ್ಟ್ರಿಕ್ ಕುಕ್ಕರ್‌ಗಳನ್ನು ಬಳಸಲು ಆರಂಭಿಸಿವೆ.

ಪುದುಚೇರಿಯಲ್ಲಿ ಅನೇಕ ರಸ್ತೆ ಬದಿಯ ಹೊಟೇಲ್‌ಗಳು ಮುಚ್ಚಲ್ಪಟ್ಟಿದ್ದು, ಕೆಲವು ಸ್ಥಳಗಳಲ್ಲಿ ಮೆನು ಕೂಡ ಕಡಿತಗೊಳಿಸಲಾಗಿದೆ.

ಮದುವೆ ಖರ್ಚು ಹೆಚ್ಚಳದ ಆತಂಕ: ರಾಜಸ್ಥಾನದಲ್ಲಿ ಸುಮಾರು 6,000 ರಿಂದ 7,000 ರೆಸ್ಟೋರೆಂಟ್‌ಗಳು ಮತ್ತು ಢಾಬಾಗಳು ವಾಣಿಜ್ಯ ಎಲ್‌ಪಿಜಿ ಮೇಲೆ ಅವಲಂಬಿತವಾಗಿವೆ. ಹಾಸ್ಟೆಲ್ ಮೆಸ್ ಮತ್ತು ಹೆದ್ದಾರಿ ಹೋಟೆಲ್‌ಗಳೂ ಇದೇ ಸಿಲಿಂಡರ್‌ಗಳನ್ನು ಬಳಸುತ್ತವೆ. ಜೈಪುರ ಟೆಂಟ್ ಡೀಲರ್ಸ್ ಅಸೋಸಿಯೇಶನ್ ಅಧ್ಯಕ್ಷ ರವಿ ಜಿಂದಾಲ್ ಪ್ರಕಾರ, ಎಲ್‌ಪಿಜಿ ಕೊರತೆಯಿಂದ ಮದುವೆ ವೆಚ್ಚವು 25,000 ರೂ.ಗಳಿಂದ 30,000 ರೂ.ವರೆಗೆ ಹೆಚ್ಚಾಗಬಹುದು.





ಸಮುದ್ರ ಮಧ್ಯೆ ಸಿಲುಕಿದ ಭಾರತದ 28 ಹಡಗುಗಳು

ಪರ್ಷಿಯನ್ ಕೊಲ್ಲಿಯಲ್ಲಿ 28 ಭಾರತೀಯ ಹಡಗುಗಳು ಸಿಲುಕಿಕೊಂಡಿದ್ದು, ಇದರಲ್ಲಿ 778 ನಾವಿಕರಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ. ಇವುಗಳಲ್ಲಿ 24 ಹಡಗುಗಳು ಹಾರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ 677 ನಾವಿಕರೊಂದಿಗಿದ್ದರೆ, 4 ಹಡಗುಗಳು 101 ನಾವಿಕರೊಂದಿಗೆ ಪೂರ್ವ ಭಾಗದಲ್ಲಿವೆ ಎಂದು ಬಂದರು, ಹಡಗು ಮತ್ತು ಜಲಮಾರ್ಗ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ. ನಾವು ಎಲ್ಲಾ ಹಡಗುಗಳನ್ನು ಅವುಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಸಕ್ರಿಯವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ. ಅಧಿಕಾರಿಗಳು, ಹಡಗು ವ್ಯವಸ್ಥಾಪಕರು ಮತ್ತು ನೇಮಕಾತಿ ಏಜೆನ್ಸಿಗಳು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರಿಗೆ ವೈದ್ಯಕೀಯ ಸಹಾಯವನ್ನು ಒದಗಿಸಲು ಭಾರತೀಯ ರಾಯಭಾರ ಕಚೇರಿಗಳು ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿವೆ ಎಂದು ಅಧಿಕಾರಿ ಹೇಳಿದರು. ಪರ್ಷಿಯನ್ ಕೊಲ್ಲಿ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮತ್ತು ಬದಲಾಗುತ್ತಿರುವ ಕಡಲ ಪರಿಸ್ಥಿತಿಯನ್ನು ಸಚಿವಾಲಯವು ನಿಕಟವಾಗಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರೆಸಿದೆ. ಭಾರತೀಯ ಹಡಗುಗಳು ಮತ್ತು ನಾವಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಬದಲಾಗುತ್ತಿರುವ ಕಡಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮೇಲ್ವಿಚಾರಣೆ ಮತ್ತು ಸನ್ನದ್ಧತೆಯ ಕ್ರಮಗಳನ್ನು ಬಲಪಡಿಸಿದೆ ಎಂದು ಸಿನ್ಹಾ ಹೇಳಿದರು.

ಭಾರತೀಯರಿಬ್ಬರ ಸಾವು

ವ್ಯಾಪಾರಿ ಹಡಗುಗಳ ಮೇಲೆ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದು, ಓರ್ವ ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ಬುಧವಾರ ತಿಳಿಸಿದ್ದಾರೆ.

ಮೊಜ್ತಬಾ ಉತ್ತರಾಧಿಕಾರಕ್ಕೆ ತಂದೆಯಿಂದಲೇ ಅಸಮ್ಮತಿ

ಟೆಹ್ರಾನ್: ದಿವಂಗತ ಆಯತೊಲ್ಲಾ ಅಲಿ ಖಮೇನಿಯ ಅಂತಿಮ ನಿರ್ಣಯವನ್ನು ನಿರ್ಲಕ್ಷಿಸಿ, ಅವರ ಮಗ ಮೊಜ್ತಬಾ ಖಮೇನಿಯನ್ನು ಇರಾನ್‌ನ ಸರ್ವೋಚ್ಚ ನಾಯಕನನ್ನಾಗಿ ನೇಮಿಸಲಾಗಿದೆ ಎಂದು ವರದಿಯಾಗಿದೆ. ಇದು ಅವರ ತಂದೆಯ ಔಪಚಾರಿಕ ವಿರೋಧದ ನಡುವೆಯೂ ನಡೆದಿದೆ ಎಂಬ ಕುತೂಹಲಕಾರಿ ಅಂಶ ಬಹಿರಂಗವಾಗಿದೆ.

ಮರಣಶಾಸನದ ಉಲ್ಲಂಘನೆ: ಮೊಜ್ತಬಾರನ್ನು ಉತ್ತರಾಧಿಕಾರಿಯನ್ನಾಗಿ ಮಾಡಬಾರದೆಂದು ಆಯತೊಲ್ಲಾ ತಮ್ಮ ಮರಣಶಾಸನದಲ್ಲಿ ನಿರ್ದಿಷ್ಟವಾಗಿ ವಿನಂತಿಸಿದ್ದರು ಎಂದು ನ್ಯೂಯಾರ್ಕ್ ಪೋಸ್ಟ್ ವರದಿ ಮಾಡಿದೆ. 56 ವರ್ಷದ ಮೊಜ್ತಬಾ ಅವರಿಗೆ ರಾಜಕೀಯ ಘನತೆ ಮತ್ತು ಅಗತ್ಯ ಅನುಭವದ ಕೊರತೆಯಿದೆ ಎಂದು ಖಮೇನಿ ಭಾವಿಸಿದ್ದರು, ಹೀಗಾಗಿಯೇ ಈ ವಿರೋಧ ವ್ಯಕ್ತಪಡಿಸಿದ್ದರು ಎಂದು ತಿಳಿದುಬಂದಿದೆ.

ಐಆರ್‌ಜಿಸಿ ಹಸ್ತಕ್ಷೇಪ: ಈ ಆದೇಶ ಹೊರತಾಗಿಯೂ, ಇಸ್ಲಾಮಿಕ್ ಕ್ರಾಂತಿಕಾರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ) ಒತ್ತಡದಿಂದ ಈ ನೇಮಕಾತಿ ನಡೆದಿದೆ ಎನ್ನಲಾಗಿದೆ. ಪರಿಣಿತರ ಮಂಡಳಿಯ ಮೇಲೆ ಈ ನಿರ್ಧಾರಕ್ಕಾಗಿ ಒತ್ತಡ ಹೇರಲಾಗಿದೆ ಮತ್ತು ಹಲವಾರು ಧರ್ಮಗುರುಗಳು ಮತದಾನ ಬಹಿಷ್ಕರಿಸಿದ್ದರು ಎಂದು ಪತ್ರಿಕೆಯ ವರದಿಯಲ್ಲಿ ಹೇಳಲಾಗಿದೆ.

ಕಾಂಗ್ರೆಸ್‌ನ ಸೆಲ್ಫ್ ಗೋಲ್

ದೇಶದಲ್ಲಿ ಸಿಲಿಂಡರ್‌ಗಳ ಕೊರತೆಯಾಗಿದೆ, ಜನ ಏಜೆನ್ಸಿಗಳ ಮುಂದೆ ಕ್ಯೂ ನಿಂತಿದ್ದಾರೆ ಎಂದು ಬಿಂಬಿಸುವ ಸಲುವಾಗಿ 2011ರ ಫೋಟೋವೊಂದನ್ನು ತನ್ನ ಎಕ್ಸ್ ಖಾತೆಯಲ್ಲಿ ಹಾಕಿಕೊಂಡು, ಕಾಂಗ್ರೆಸ್ ಸೆಲ್ಫ್ ಗೋಲ್‌ಗೆ ಬಿದ್ದಿದೆ. ಕೇಂದ್ರ ಸರ್ಕಾರದ ವಿರುದ್ಧ ಟೀಕೆ ವ್ಯಕ್ತಪಡಿಸುವ ಸಲುವಾಗಿ ಜನ ಸಿಲಿಂಡರ್‌ಗಳನ್ನು ಇರಿಸಿಕೊಂಡು ಸಾಲಿನಲ್ಲಿ ನಿಂತಿರುವ ಫೋಟೋ ಹಾಕಿ, ಮೋದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗಿತ್ತು. ಆದರೆ, ಈ ಪೋಸ್ಟ್ ಬಂದ ಕೂಡಲೇ ಜನ ಫೋಟೋ ಬಗ್ಗೆ ಹುಡುಕಿ, ಅದು 2011ರ ಫೋಟೋ ಎಂಬುದನ್ನು ಬಹಿರಂಗ ಮಾಡಿದರು.



ಅಷ್ಟೇ ಅಲ್ಲ, 2011ರಲ್ಲಿ ದೇಶದಲ್ಲಿ ಕಾಂಗ್ರೆಸ್ ನೇತೃತ್ವದ, ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ವೇಳೆಯದಾಗಿದ್ದು, ಆಗ ಸಿಲಿಂಡರ್ ಕೊರತೆ ಕಾಣಿಸಿಕೊಂಡು ಜನ ಬೀದಿಗಿಳಿದಿದ್ದರು. ಈಗ ಅದನ್ನು ಶಟರ್‌ಸ್ಟಾಕ್‌ನಲ್ಲಿ ಡೌನ್‌ಲೋಡ್ ಮಾಡಿ ಬಳಕೆ ಮಾಡಲಾಗಿದೆ. ಅದೇ ಫೋಟೋವನ್ನು ಈಗ ಪೋಸ್ಟ್ ನಲ್ಲಿ ಹಾಕಿಕೊಂಡಿರುವ ಕಾಂಗ್ರೆಸ್ ಮತ್ತೆ ಸಾಮಾಜಿಕ ಜಾಲತಾಣಗಳಲ್ಲಿ ಜನರಿಂದ ಟೀಕೆಗೊಳಗಾಗಿದೆ. ಬಿಜೆಪಿಯ ಯುವ ಮೋರ್ಚಾದ ಎಕ್ಸ್ ಹ್ಯಾಂಡಲ್‌ನಲ್ಲೂ ಈ ಬಗ್ಗೆ ಟೀಕೆ ಮಾಡಲಾಗಿದೆ.

ನೌಕೆ ಮೇಲೆ ಕ್ಷಿಪಣಿ ದಾಳಿ: ಇಬ್ಬರು ಭಾರತೀಯರು ಬಲಿ

ಬ್ಯಾಂಕಾಕ್: ಹಾರ್ಮುಜ್ ಜಲಸಂಧಿಯಲ್ಲಿ ಭಾರತದತ್ತ ಬರುತ್ತಿದ್ದ ಮಯೂರಿ ನಾರಿ ಸರಕು ನೌಕೆಗೆ ಅಪರಿಚಿತ ಕ್ಷಿಪಣಿಗಳು ಅಪ್ಪಳಿಸಿದ ಪರಿಣಾಮ ಇಬ್ಬರು ಭಾರತೀಯರು ಸಾವನ್ನಪ್ಪಿ ಒಬ್ಬ ನಾಪತ್ತೆಯಾದ ದುರಂತ ನಡೆದಿದೆ ಎಂದು ಥೈಲ್ಯಾಂಡ್ ಅಧಿಕಾರಿಗಳು ಸೋಮವಾರ ದೃಢಪಡಿಸಿದ್ದಾರೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಈ ಜಲಸಂಧಿ, ಈಗ ಪ್ರಾದೇಶಿಕ ಉದ್ವಿಗ್ನತೆ ಎದುರಿಸುತ್ತಿದೆ.

ಕ್ಷಿಪಣಿ ದಾಳಿಯ ಪರಿಣಾಮ ಹಡಗಿಗೆ ತೀವ್ರ ಹಾನಿಯಾಗಿದ್ದು, ತಕ್ಷಣವೇ ತುರ್ತು ರಕ್ಷಣಾ ಸಂದೇಶ ರವಾನಿಸಿದೆ. ಹಡಗಿನಲ್ಲಿದ್ದ ಬಹುತೇಕ ಸಿಬ್ಬಂದಿಯನ್ನು ಹತ್ತಿರದ ನೌಕಾಪಡೆಯ ಹಡಗುಗಳು ಯಶಸ್ವಿಯಾಗಿ ರಕ್ಷಿಸಿವೆಯಾದರೂ, ಥೈಲ್ಯಾಂಡ್ ಮೂಲದ ಮೂವರು ಪ್ರಜೆಗಳ ಪತ್ತೆಯಾಗಿಲ್ಲ. ಈ ಅಸ್ಥಿರ ಸಮುದ್ರ ವ್ಯಾಪ್ತಿಯಲ್ಲಿ ನಾಪತ್ತೆಯಾದ ನಾವಿಕರನ್ನು ಪತ್ತೆಹಚ್ಚಲು ರಕ್ಷಣಾ ಕಾರ್ಯಾಚರಣೆಗಳು ಮುಂದುವರಿದಿವೆ ಎಂದು ತಿಳಿದುಬಂದಿದೆ. ಕ್ಷಿಪಣಿಗಳ ಮೂಲದ ಬಗ್ಗೆ ತನಿಖೆ ಮುಂದುವರಿಯುತ್ತಿದ್ದು, ಅಂತಾರಾಷ್ಟ್ರೀಯ ಕಡಲ ಏಜೆನ್ಸಿ ಗಳಿಗೆ ಎಚ್ಚರಿಕೆ ನೀಡಲಾಗಿದೆ. ಈ ದಾಳಿಯ ಜವಾಬ್ದಾರಿಯನ್ನು ಇದುವರೆಗೆ ಯಾವುದೇ ರಾಷ್ಟ್ರ ಅಥವಾ ಗುಂಪು ಹೊತ್ತುಕೊಂಡಿಲ್ಲ.



ಟ್ರಂಪ್-ಪುಟಿನ್ ದೂರವಾಣಿ ಕರೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ರಷ್ಯಾದ ಸಹವರ್ತಿ ವ್ಲಾಡಿಮಿರ್ ಪುಟಿನ್ ಇರಾನ್‌ನಲ್ಲಿನ ಯುದ್ಧ ಮತ್ತು ಉಕ್ರೇನ್‌ನಲ್ಲಿ ಶಾಂತಿಯ ಸಾಧ್ಯತೆಗಳ ಬಗ್ಗೆ ಚರ್ಚಿಸಿದ್ದಾರೆ. ಟ್ರಂಪ್ ಅವರು ಪುಟಿನ್ ಅವರಿಗೆ ಕರೆ ಮಾಡಿದ್ದಾರೆ. ಈ ವರ್ಷದ ತಮ್ಮ ಮೊದಲ ದೂರವಾಣಿ ಕರೆಯಲ್ಲಿ, ಇರಾನ್‌ನಲ್ಲಿನ ಸಂಘರ್ಷವನ್ನು ತ್ವರಿತವಾಗಿ ಕೊನೆಗೊಳಿಸಲು, ಉಕ್ರೇನ್‌ನಲ್ಲಿನ ಮಿಲಿಟರಿ ಪರಿಸ್ಥಿತಿ ಮತ್ತು ಜಾಗತಿಕ ತೈಲ ಮಾರುಕಟ್ಟೆಯ ಮೇಲೆ ವೆನೆಜುವೆಲಾದಲ್ಲಿನ ಘಟನೆಗಳ ಪರಿಣಾಮದ ಬಗ್ಗೆ ರಷ್ಯಾದ ವಿಚಾರಗಳನ್ನು ಚರ್ಚಿಸಿದ್ದಾರೆ ಎಂದು ಕ್ರೆಮ್ಲಿನ್ ಹೇಳಿದೆ. ನಾನು ಅಧ್ಯಕ್ಷ ಪುಟಿನ್ ಅವರೊಂದಿಗೆ ಉತ್ತಮ ಕರೆಯನ್ನು ಹೊಂದಿದ್ದೇನೆ ಎಂದು ಟ್ರಂಪ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಇರಾನ್‌ನ ಮೇಲಿನ ಅಮೆರಿಕ-ಇಸ್ರೇಲಿ ಯುದ್ಧವು ಜಾಗತಿಕ ಇಂಧನ ಬಿಕ್ಕಟ್ಟನ್ನು ಪ್ರಚೋದಿಸಿದೆ ಎಂದು ಪುಟಿನ್ ಈ ಹಿಂದೆ ಹೇಳಿದ್ದರು.

ಕಿರುಸುದ್ದಿ

ಎಲ್‌ಇಟಿ ಉಗ್ರ ವಧೆ

ಶ್ರೀನಗರ: ರಾಜೌರಿ ಜಿಲ್ಲೆಯ ವಾಸ್ತವಿಕ ಗಡಿ ನಿಯಂತ್ರಣ ರೇಖೆಯೊಳಗೆ (ಎಲ್‌ಒಸಿ) ನುಸುಳುವಿಕೆ ವಿಫಲ ಯತ್ನ ವೇಳೆ ವಧೆಯಾದ ಭಯೋತ್ಪಾದಕನನ್ನು ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ (ಎಲ್‌ಇಟಿ) ಸಂಘಟನೆ ಸದಸ್ಯ ಎಂದು ಗುರುತಿಸಲಾಗಿದೆ. ಸೇನೆಯ ಪ್ರಕಾರ, ಭಯೋತ್ಪಾದಕನನ್ನು ಮಂಗಳವಾರ ನೌಶೆರಾ ಸೆಕ್ಟರ್‌ನ ಜಾಂಗರ್ ಪ್ರದೇಶದಲ್ಲಿ ಹೊಡೆದುರುಳಿಸಲಾಗಿದೆ. ಆತ ಮತ್ತೊಬ್ಬ ಸಹಚರನೊಂದಿಗೆ ಗಡಿಯುದ್ದಕ್ಕೂ ನುಸುಳಲು ಪ್ರಯತ್ನಿಸುತ್ತಿದ್ದನು. ವಧೆಯಾದ ಉಗ್ರ ಪಿಒಕೆ ನಿವಾಸಿ ಹಮಾಜಾ ಯೂಸುಫ್ ಎಂದು ಗೊತ್ತಾಗಿದೆ.

ಪಾಕಿಸ್ತಾನ ಪರ ಬೇಹು: ನೌಕಾಪಡೆ ನೌಕರ ಸೆರೆ

ಲಖನೌ: ಪಾಕಿಸ್ತಾನದ ಗುಪ್ತಚರ ಸಂಸ್ಥೆ, ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಗಾಗಿ ಬೇಹುಗಾರಿಕೆ ಮತ್ತು ನೌಕಾ ಆಸ್ತಿಗಳಿಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಂಡ ಆರೋಪದ ಮೇಲೆ ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ಭಾರತೀಯ ನೌಕಾಪಡೆ ಉದ್ಯೋಗಿಯನ್ನು ಬಂಧಿಸಿದೆ. ಆರೋಪಿಯನ್ನು ಆದರ್ಶ್ ಕುಮಾರ್ ಅಲಿಯಾಸ್ ಲಕ್ಕಿ ಎಂದು ಗುರುತಿಸಲಾಗಿದ್ದು, ಬಂಧಿತ ಪಾಕಿಸ್ತಾನ ಮೂಲದ ಐಎಸ್‌ಐ ಹ್ಯಾಂಡ್ಲರ್‌ನೊಂದಿಗೆ ಸಂಪರ್ಕದಲ್ಲಿದ್ದನು.

ಭಾರತ ಎರಡನೇ ಅಗ್ರ ಶಸ್ತ್ರಾಸ್ತ್ರ ಆಮದುದಾರ

ಹೊಸದಿಲ್ಲಿ: 2021ರಿಂದ 2025ರವರೆಗೆ ಜಾಗತಿಕ ಶಸ್ತ್ರಾಸ್ತ್ರ ಆಮದಿನ ಶೇ.8.2ರಷ್ಟು ಪಾಲನ್ನು ಭಾರತ ಹೊಂದಿದೆ. ಆದೇರೀತಿ ವಿಶ್ವದ ಅಗ್ರ ಶಸ್ತ್ರಾಸ್ತ್ರ ಆಮದುದಾರರಲ್ಲಿ ಎರಡನೇ ಅತಿದೊಡ್ಡ ಶಸ್ತ್ರಾಸ್ತ್ರ ಮತ್ತು ಮಿಲಿಟರಿ ಸಲಕರಣೆಗಳ ಆಮದುದಾರನಾಗಿ ಮುಂದುವರಿದಿದೆ ಎಂದು ಸ್ಟಾಕ್ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್ಸಿಟ್ಯೂಟ್ ವರದಿ(ಸಿಪ್ರಿ) ಬಿಡುಗಡೆ ಮಾಡಿದೆ. ಈ ಹಿಂದೆ ಭಾರತವು ವಿಶ್ವದ ಎರಡನೇ ಅತಿದೊಡ್ಡ ಶಸ್ತ್ರಾಸ್ತ್ರ ಆಮದುದಾರ ದೇಶವಾಗಿತ್ತು. ಅದರ ಆಮದುಗಳು 2016-20 ಮತ್ತು 2021-25 ನಡುವೆ ಸ್ವಲ್ಪಮಟ್ಟಿಗೆ(ಶೇ.4) ಕಡಿಮೆಯಾಗಿತ್ತು. ಭಾರತೀಯ ಶಸ್ತ್ರಾಸ್ತ್ರ ಆಮದಿನ ಅತಿದೊಡ್ಡ ಪಾಲು ರಷ್ಯಾದಿಂದ ಬಂದಿದೆ. ಮಿಲಿಟರಿ ಹಾರ್ಡ್‌ವೇರ್‌ಗಳಿಗೆ ರಷ್ಯಾ ಭಾರತದ ಪ್ರಮುಖ ಪೂರೈಕೆದಾರನಾಗಿ ಉಳಿದಿದೆ ಎಂದು ವರದಿಯಿಂದ ಮಾಹಿತಿ ಬಂದಿದೆ. ಭಾರತವು ಫ್ರಾನ್ಸ್ ಮತ್ತು ಇಸ್ರೇಲ್‌ನಿಂದಲೂ ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಿದೆ. ಈ ಮಧ್ಯೆ ಪಾಕಿಸ್ತಾನದ ಶಸ್ತ್ರಾಸ್ತ್ರ ಆಮದು 2016-20 ಮತ್ತು 2021-25 ನಡುವೆ ಶೇ. 66 ರಷ್ಟು ಹೆಚ್ಚಾಗಿದೆ. ಪಾಕಿಸ್ತಾನದ ಶಸ್ತ್ರಾಸ್ತ್ರ ಆಮದಿನ ಶೇ.80ರಷ್ಟನ್ನು ಚೀನಾ 2021-25 ನಲ್ಲಿ ಪೂರೈಸಿದೆ. ಇದು 2016-20 ನಲ್ಲಿ ಶೇ. 73ರಷ್ಟಿತ್ತು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಯುರೋಪಿಯನ್ ರಾಷ್ಟ್ರಗಳಿಗೆ ಶಸ್ತ್ರಾಸ್ತ್ರಗಳ ಹರಿವಿನ ತೀವ್ರ ಹೆಚ್ಚಳವು ಜಾಗತಿಕ ಶಸ್ತ್ರಾಸ್ತ್ರ ವರ್ಗಾವಣೆಯನ್ನು ಸುಮಾರು ಶೇ. 10 ಪ್ರತಿಶತದಷ್ಟು ಹೆಚ್ಚಿಸಿದೆ ಎಂದು ಸಿಪ್ರಿ ಹೇಳಿದೆ.

ಗೂಗಲ್ ಸೇರಿ ಅಮೆರಿಕದ ಕಂಪನಿಗಳಿಗೆ ದಾಳಿ ಎಚ್ಚರಿಕೆ

ಟೆಹ್ರಾನ್: ಇಸ್ರೇಲ್ ಮತ್ತು ಗಲ್ಫ್ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗೂಗಲ್, ಅಮೆಜಾನ್, ಮೈಕ್ರೋಸಾಫ್ಟ್ ಮತ್ತು ಎನ್ವಿಡಿಯಾ ಸೇರಿದಂತೆ ಅಮೆರಿಕದ ಪ್ರಮುಖ ತಂತ್ರಜ್ಞಾನ ಸಂಸ್ಥೆಗಳನ್ನು ಗುರಿಯಾಗಿಸಿ ದಾಳಿ ಮಾಡುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಈ ಸಂಸ್ಥೆಗಳು ಇಸ್ಲಾಮಿಕ್ ಗಣರಾಜ್ಯದ ವಿರುದ್ಧ ಪಾಶ್ಚಿಮಾತ್ಯ ಗುಪ್ತಚರ ಕಾರ್ಯಾಚರಣೆಗಳಿಗೆ ಸಹಾಯ ಮಾಡುತ್ತಿರುವ ಹಿನ್ನೆಲೆ ಇರಾನ್ ಈ ಎಚ್ಚರಿಗೆ ನೀಡಿದೆ. ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ವಿರುದ್ಧ ಡಿಜಿಟಲ್ ಬೇಹುಗಾರಿಕೆ ಅಥವಾ ಸೈಬರ್ ಯುದ್ಧಕ್ಕೆ ಸಹಾಯ ಮಾಡುವ ಯಾವುದೇ ಸಂಸ್ಥೆ ತೀವ್ರ ಪ್ರತೀಕಾರ ಎದುರಿಸಬೇಕಾಗುತ್ತದೆ ಎಂದು ಇರಾನ್ ನಾಯಕತ್ವ ಎಚ್ಚರಿಸಿದೆ. ಈ ಟೆಕ್ ಸಂಸ್ಥೆಗಳು ಕೇವಲ ತಟಸ್ಥ ಘಟಕಗಳಾಗಿ ಉಳಿದಿಲ್ಲ, ಬದಲಿಗೆ ಜಾಗತಿಕ ಭೌಗೋಳಿಕ ರಾಜಕೀಯ ಸಂಘರ್ಷಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ ಎಂದು ಭದ್ರತಾ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ. ಈ ಬೆದರಿಕೆಗಳಿಗೆ ಪ್ರತಿಕ್ರಿಯಿಸಿರುವ ಟೆಕ್ ಕಂಪನಿಗಳು, ತಾವು ಕೇವಲ ತಾಂತ್ರಿಕ ಸೇವಾ ಪೂರೈಕೆದಾರರು ಎಂದು ಸ್ಪಷ್ಟಪಡಿಸಿವೆ. ಈ ಕಂಪನಿಗಳು ಇರಾನ್‌ನ ಆರೋಪಗಳನ್ನು ನಿರಾಕರಿಸಿದ್ದು, ತಮ್ಮ ಜಾಗತಿಕ ಬಳಕೆದಾರರ ದತ್ತಾಂಶ ಮತ್ತು ಮೂಲಸೌಕರ್ಯಗಳನ್ನು ಸಂಭಾವ್ಯ ಸೈಬರ್ ದಾಳಿಗಳಿಂದ ರಕ್ಷಿಸಲು ಭದ್ರತಾ ಕ್ರಮಗಳನ್ನು ಬಲಪಡಿಸಿರುವುದಾಗಿ ತಿಳಿಸಿವೆ. ಗ್ರಹಿಸಿದ ಬೆದರಿಕೆಗಳಿಗೆ ಪ್ರತಿಕ್ರಿಯೆಯಾಗಿ, ಇರಾನ್ ಈ ಕಂಪನಿಗಳ ಜಾಗತಿಕ ಸೇವೆಗಳಿಗೆ ಅಡ್ಡಿಪಡಿಸಲು ತನ್ನ ಸೈಬರ್ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತಿದೆ, ಎಂದು ವರದಿಯಾಗಿದೆ. ಈ ಬೆಳವಣಿಗೆ, ತೆಹ್ರಾನ್ ಮತ್ತು ವಾಷಿಂಗ್ಟನ್ ನಡುವಿನ ಡಿಜಿಟಲ್ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ವಿತ್ತ ಕೊರತೆ ನಿಯಮಕ್ಕೆ ಬದ್ಧರಾಗಿ: ನೀತಿ ಆಯೋಗ

ಹೊಸದಿಲ್ಲಿ: ಶಿಸ್ತುಬದ್ಧವಾಗಿ ವೆಚ್ಚಗಳ ನಿರ್ವಹಣೆ, ಜಿಎಸ್‌ಟಿ ಮೂಲವನ್ನು ವಿಸ್ತೃತಗೊಳಿಸುವುದು, ತಮ್ಮ ಸ್ವಂತ ತೆರಿಗೆ ಸಾಮರ್ಥ್ಯವನ್ನು ವಿಸ್ತರಿಸಿ ಬಲಪಡಿಸುವ ಮುಖೇನ, ಎಫ್‌ಆರ್‌ಬಿಎಂ ಕಾಯ್ದೆಯಲ್ಲಿ ಹಣಕಾಸು ಕೊರತೆ ನಿಯಮಗಳಿಗೆ ಬದ್ಧರಾಗುವಂತೆ ನೀತಿ ಆಯೋಗವು ಬುಧವಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸಲಹೆ ಮಾಡಿದೆ. ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ(ಎಫ್‌ಆರ್‌ಬಿಎಂ) ಕಾಯ್ದೆಯು, ಜಿಡಿಪಿ ಶೇಕಡಾವಾರು ಪ್ರಮಾಣದಲ್ಲಿ ವಿತ್ತೀಯ ಮತ್ತು ಆದಾಯ ಕೊರತೆಗಳ ನಿರ್ಬಂಧಿಸುವ ಮುಖೇನ ದೇಶದ ಸಾಲ ಮಟ್ಟವನ್ನು ನಿಯಂತ್ರಿಸುತ್ತದೆ. ಅಗಾಧ ಕಂದಾಯ ಕೊರತೆ ಎದುರಿಸುತ್ತಿರುವ ರಾಜ್ಯಗಳು, ಕಂದಾಯ ವೆಚ್ಚವನ್ನು ಸುಸ್ಥಿರ ಕಂದಾಯ ಪ್ರಗತಿ ಜತೆ ಸರಿದೂಗಿಸಲು ಪ್ರಾಧಾನ್ಯತೆ ನೀಡಬೇಕೆಂದು, 2023-24 ಸಾಲಿಗೆ ಅನ್ವಯಿಸುವ ನೀತಿ ಆಯೋಗದ 2026ರ ಹಣಕಾಸು ಸ್ವಾಸ್ಥ್ಯ ಸೂಚ್ಯಂಕ(ಎಫ್‌ಎಚ್‌ಐ) ವರದಿಯಲ್ಲಿ ಸಲಹೆ ನೀಡಲಾಗಿದೆ. ರಾಜ್ಯಗಳ ಪೈಕಿ ಒಡಿಶಾ, ಜಾರ್ಖಂಡ್, ಗುಜರಾತ್, ಮಹಾರಾಷ್ಟ್ರ, ಛತ್ತೀಸ್‌ಗಢ, ತೆಲಂಗಾಣ, ಉತ್ತರಪ್ರದೇಶ, ಕರ್ನಾಟಕ ಹಾಗೂ ಮಧ್ಯಪ್ರದೇಶಗಳು ದಕ್ಷ ಹಣಕಾಸು ವ್ಯವಸ್ಥೆ ಹೊಂದಿರುವ ಭಾರತದ ಹತ್ತು ಮುಂಚೂಣಿ ರಾಜ್ಯಗಳು ಎಂದು 2023-24ನೇ ಹಣಕಾಸು ವರ್ಷಕ್ಕೆ ಅನ್ವಯಿಸುವ, ಇತ್ತೀಚಿನ ಹಣಕಾಸು ಸ್ವಾಸ್ಥ್ಯ ಸೂಚ್ಯಂಕ ವರದಿ ಪ್ರಕಟಿಸಿದೆ. ಪಂಜಾಬ್, ಪ.ಬಂಗಾಳ ಹಾಗೂ ಕೇರಳಗಳು ಸೂಚ್ಯಂಕದಲ್ಲಿ ತೀರಾ ಕೆಳಗಿನ ಸ್ಥಾನ ಪಡೆದಿವೆ. 2022-23ರಲ್ಲಿ ರಾಜ್ಯಗಳ ಹಣಕಾಸು ಸ್ಥಿತಿಗತಿ ಆಧಾರದಲ್ಲಿ ಪ್ರಕಟಿತ 2025ರ ಎಫ್‌ಎಚ್‌ಐನಲ್ಲಿ ಒಡಿಶಾವು ನಂ.1ಸ್ಥಾನದಲ್ಲಿದೆ.

47 ದೇಗುಲಗಳಿಗೆ ಹಿಂದುಯೇತರರ ಪ್ರವೇಶಕ್ಕೆ ನಿಷೇಧ

ಡೆಹ್ರಾಡೂನ್: ಚಾರ್ ಧಾಮ್ ಯಾತ್ರೆಗೂ ಮುನ್ನ ಬದರಿನಾಥ್-ಕೇದಾರನಾಥ ದೇವಾಲಯ ಸಮಿತಿ(ಬಿಕೆಟಿಸಿ) ತನ್ನ ವ್ಯಾಪ್ತಿಗೆ ಬರುವ ಪ್ರಮುಖ ದೇವಾಲಯಗಳಾದ 47 ದೇವಾಲಯಗಳಿಗೆ ಹಿಂದುಯೇತರರ ಪ್ರವೇಶವನ್ನು ನಿಷೇಧಿಸಿದೆ. ಮಾರ್ಚ್ 10ರಂದು ಡೆಹ್ರಾಡೂನ್‌ನಲ್ಲಿರುವ ಬಿಕೆಟಿಸಿಯ ಶಿಬಿರ ಕಚೇರಿಯಲ್ಲಿ ನಡೆದ ಬಜೆಟ್ ಸಭೆಯಲ್ಲಿ ಈ ನಿರ್ಣಯವನ್ನು ಅಂಗೀಕರಿಸಲಾಯಿತು. ಬಿಕೆಟಿಸಿ ಅಧ್ಯಕ್ಷ ಹೇಮಂತ್ ದ್ವಿವೇದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಹಣಕಾಸು ವರ್ಷದ 1 ಕೋಟಿ ರೂ. ಬಜೆಟ್‌ಗೆ ಅನುಮೋದನೆ ನೀಡಲಾಯಿತು. ಅಂತಹ ನಿರ್ಬಂಧದ ಬೇಡಿಕೆಯು ದೀರ್ಘಕಾಲದಿಂದಲೂ ಇದೆ ಎಂದು ಹೇಳಿದ ದ್ವಿವೇದಿ, ಸನಾತನ ಧರ್ಮವನ್ನು ಅನುಸರಿಸುವ ಮತ್ತು ಬಾಬಾ ಕೇದಾರನಾಥ ಮತ್ತು ಬದ್ರಿ ವಿಶಾಲ್ ಅವರ ಮೇಲೆ ನಂಬಿಕೆ ಹೊಂದಿರುವವರಿಗೆ ಮಾತ್ರ ಸ್ವಾಗತವಿದೆ ಎಂದು ಹೇಳಿದರು. 47 ದೇವಾಲಯಗಳ ಗರ್ಭಗುಡಿ ಮತ್ತು ಆವರಣಕ್ಕೆ ಹಿಂದುಯೇತರರ ಪ್ರವೇಶವನ್ನು ಈಗ ಅಧಿಕೃತವಾಗಿ ನಿಷೇಧಿಸಲಾಗಿದೆ ಎಂದು ಅವರು ದೃಢಪಡಿಸಿದರು.

1.64 ಕೋಟಿ ರೂ. ಮೌಲ್ಯದ ಚಿನ್ನ, 3.61 ಕೋಟಿ ರೂ. ನಗದು ವಶ

ಶಸ್ತ್ರಾಸ್ತ್ರ ಸಹಿತ 108 ನಕ್ಸಲರ ಶರಣಾಗತಿ

ರಾಯ್ಪುರ: ನಕ್ಸಲ್ ಮುಕ್ತ ಭಾರರದ ಗಡುವು ಸನಿಹವಾಗುತ್ತಿದ್ದಂತೆ ಒಟ್ಟು 3.95 ಕೋಟಿ ರೂ. ಬಹುಮಾನವಿದ್ದ 108 ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ. ದಂಡಕಾರಣ್ಯ ವಿಶೇಷ ವಲಯ ಸಮಿತಿಯ ಬಿಜಾಪುರದ 37, ದಂತೇವಾಡದ 30, ಸುಕ್ಮಾದ 18, ಬಸ್ತರ್‌ನ 16, ನಾರಾಯಣಪುರದ ನಾಲ್ಕು ಮತ್ತು ಕಾಂಕೇರ್‌ನ ಮೂವರು ಮಾವೋವಾದಿಗಳು ಶಸ್ತ್ರಾಸ್ತ್ರಗಳ ಸಮೇತ ಶರಣಾಗಿದ್ದಾರೆ.

ಶರಣಾಗತಿಯಾಗಿದವರ ಪೈಕಿ ಆರು ಮಂದಿ ವಿಭಾಗೀಯ ಕಮಾಂಡರ್‌ಗಳಾಗಿದ್ದು, ತಲಾ 8 ಲಕ್ಷ ರೂ. ಬಹುಮಾನವನ್ನು ಹೊಂದಿದ್ದರು.

ಕಳೆದ 26 ತಿಂಗಳಲ್ಲಿ 2,714 ಮಾವೋವಾದಿ ಕಾರ್ಯಕರ್ತರು ರಾಜ್ಯದ ಮುಖ್ಯವಾಹಿನಿಗೆ ಮರಳಿದ್ದಾರೆ. ಬಸ್ತರ್ ವಿಭಾಗವೊಂದರಲ್ಲೇ 2024ರ ಜನವರಿ 1ರಿಂದ 2026ರ ಮಾರ್ಚ್ 9 ನಡುವೆ 2,625 ಮಾವೋವಾದಿಗಳು ಶರಣಾಗಿದ್ದಾರೆ.

10 ಮಾವೋಗಳ ಶರಣು: ಮತ್ತೊಂದು ಪ್ರಕರಣದಲ್ಲಿ 10 ಮಾವೋವಾದಿಗಳು ಬುಧವಾರ ಕಂಧಮಾಲ್ ಪೊಲೀಸರ ಮುಂದೆ ಶರಣಾಗಿದ್ದಾರೆ. ಈ ಪೈಕಿ ಓರ್ವ ನಕ್ಸಲ್ ಕೇಡರ್ ನಾಯಕನಾಗಿದ್ದು, ತಲೆಗೆ 55 ಲಕ್ಷ ರೂ. ಬಹುಮಾನವಿತ್ತು. ಎಲ್ಲಾ 10 ನಕ್ಸಲರು ಛತ್ತೀಸ್‌ಗಢದವರು ಮತ್ತು ಇತರ ಮದ್ದುಗುಂಡುಗಳೊಂದಿಗೆ 10 ಬಂದೂಕುಗಳೊಂದಿಗೆ ಶರಣಾಗಿದ್ದಾರೆ. ಇವರು ಒಟ್ಟು 1.15 ಕೋಟಿ ರೂ. ಬಹುಮಾನವನ್ನು ಹೊಂದಿದ್ದರು.



ಇತಿಹಾಸದಲ್ಲೇ ಮೊದಲು: ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳ ಜತೆಗೆ, ಮಾವೋವಾದಿಗಳ ಕಸದ ಬುಟ್ಟಿಗಳಿಂದ 3.61 ಕೋಟಿ ರೂ. ನಗದು ಮತ್ತು ಸುಮಾರು 1.64 ಕೋಟಿ ರೂ. ಮೌಲ್ಯದ 1 ಕೆಜಿ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಇದು ದೇಶದ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಇತಿಹಾಸದಲ್ಲಿ ಒಂದೇ ಸ್ಥಳದಿಂದ ವಶಪಡಿಸಿಕೊಂಡ ಅತಿ ಹೆಚ್ಚು ನಗದು ಮತ್ತು ಬೆಲೆಬಾಳುವ ವಸ್ತುಗಳಾಗಿವೆ.

ಅಪಾರ ಶಸ್ತ್ರಾಸ್ತ್ರ ವಶ : ಎಕೆ-47, ಐಎನ್‌ಎಸ್‌ಎಎಸ್ ಮತ್ತು ಎಸ್‌ಎಲ್‌ಆರ್ ರೈಫಲ್‌ಗಳು, ಲಘು ಮೆಷಿನ್‌ಗನ್‌ಗಳು, 303 ರೈಫಲ್‌ಗಳು ಮತ್ತು ಬ್ಯಾರೆಲ್ ಗ್ರೆನೇಡ್ ಲಾಂಚರ್‌ಗಳು ಸೇರಿದಂತೆ ಒಟ್ಟು 101 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸರಸಂಘಚಾಲಕ ಡಾ.ಭಾಗ್ವತ್, ಬಿಜೆಪಿ ರಾಷ್ಟ್ರಾಧ್ಯಕ್ಷ ನವೀನ್ ಸೇರಿ ಹಲವರು ಭಾಗಿ

ನಾಳೆಯಿಂದ ಆರ್‌ಎಸ್‌ಎಸ್ ಎಬಿಪಿಎಸ್

ಚಂಡೀಗಢ: ಹರ್ಯಾಣದ ಪಾಣಿಪತ್‌ಗೆ ಸಮೀಪದ ಸಮಲ್ಖಾ ನಗರದಲ್ಲಿ ಮಾ.13ರಿಂದ ನಡೆಯುವ ಅಖಿಲ ಭಾರತ ಪ್ರತಿನಿಧಿ ಸಭಾದಲ್ಲಿ ಗತ ವರ್ಷದಲ್ಲಿ ಆರೆಸ್ಸೆಸ್ ಚಟುವಟಿಕೆಗಳ ವಿಶ್ಲೇಷಣೆ-ಚರ್ಚೆ ಹಾಗೂ ಭಾವೀ ಯೋಜನೆಗಳ ಕುರಿತು ನಿರ್ಧಾರ ಕೈಗೊಳ್ಳಲಾಗುವುದು.

ಆರೆಸ್ಸೆಸ್ ಸರಸಂಘಚಾಲಕ ಚಾಲಕ ಡಾ.ಮೋಹನ್ ಭಾಗ್ವತ್, ಆರೆಸ್ಸೆಸ್‌ನ ಇತರ ಹಿರಿಯ ನಾಯಕರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಹಾಗೂ ಸಂಘ ಪರಿವಾರಕ್ಕೆ ಸಂಬಂಧಿತ 32 ಸಂಘಟನೆಗಳ ಅಧ್ಯಕ್ಷರು, ಹಿರಿಯ ನಾಯಕರು ಪ್ರತಿನಿಧಿ ಸಭಾದಲ್ಲಿ ಪಾಲ್ಗೊಳ್ಳಲಿದ್ದಾರೆ.

ಪ್ರತಿನಿಧಿ ಸಭಾದಲ್ಲಿ 2025-26ರಲ್ಲಿ ಆರೆಸ್ಸೆಸ್ ಚಟುಟಿಕೆಗಳ ಪರಾಮರ್ಶೆ ನಡೆಯುವುದು ಮತ್ತು ವಿವಿಧ ವಲಯಗಳಲ್ಲಿ ಸಂಘವು ಸಾಕಾರಗೊಳಿಸಿರುವ ಮಹತ್ತ್ವದ ಉಪಕ್ರಮಗಳ ವರದಿ ಮಂಡಿಸಲಾಗುವುದು ಎಂದು ಆರೆಸ್ಸೆಸ್ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

10 ಕೋಟಿಗೂ ಅಧಿಕ ಮನೆ ಮನೆ ಸಂಪರ್ಕ: ಪ್ರಸಕ್ತ ವರ್ಷ ಸಂಘದ ಶತಮಾನೋತ್ಸವ ಹಿನ್ನೆಲೆಯಲ್ಲಿ ಆಯೋಜಿತ ಗೃಹ ಸಂಪರ್ಕ, ಹಿಂದು ಸಂಗಮ, ಯುವ ಸಮಾವೇಶಗಳು, ಗಣ್ಯ ನಾಗರಿಕರ ಸಮಾವೇಶ, ಸಾಮಾಜಿಕ ಸೌಹಾರ್ದ ಸಭೆಗಳ ಸಹಿತ ಪ್ರಮುಖ ಕಾರ್ಯಕ್ರಮಗಳು, ಅಭಿಯಾನಗಳ ಕುರಿತು ಚರ್ಚೆ ನಡೆಯಲಿದೆ. ಗೃಹ ಸಂಪರ್ಕದಡಿ ಆರೆಸ್ಸೆಸ್ 10 ಕೋಟಿಗೂ ಅಧಿಕ ಮನೆಗಳನ್ನು ಸಂಪರ್ಕಿಸಿದೆ ಎಂದು ಅಂಬೇಕರ್ ಮಾಹಿತಿ ನೀಡಿದರು.



6 ಸಾವಿರ ಮೀರಿ ಹೊಸ ಶಾಖೆಗಳ ಸ್ಥಾಪನೆ: ಅಂದಾಜು 6 ಸಾವಿರ ಮೀರಿ ಹೊಸ ಶಾಖೆಗಳ ಸ್ಥಾಪನೆ ಸಹಿತ ಕಳೆದ ವರ್ಷದಲ್ಲಿ ಸಂಘದ ಕಾರ್ಯ ಚಟುವಟಿಕೆಗಳು ತುಂಬು ವಿಸ್ತರಣೆಯಾಗಿವೆ. ಇದರ ಪೂರ್ತಿ ವಿವರವನ್ನು ಪ್ರತಿನಿಧಿ ಸಭಾದಲ್ಲಿ ಮಂಡಿಸಲಾಗುವುದು. ಸಂಘದ ಕಾರ್ಯಚಟುವಟಿಕೆಗಳನ್ನು ಯಾವ ರೀತಿ ವಿಸ್ತೃತಗೊಳಿಸಬಹುದು, ಸಂಘ ಪ್ರಸ್ತಾಪಿಸಿರುವ ಉಪಕ್ರಮಗಳ ಜತೆ ಈ ಪ್ರಕ್ರಿಯೆಗಳಲ್ಲಿ ಸಾರ್ವಜನಿಕರ ಪಾತ್ರದ ಬಗ್ಗೆ ಚರ್ಚೆ ನಡೆಯಲಿದೆ. ಆರೆಸ್ಸೆಸ್ ಚಟುವಟಿಕೆಗಳ ವ್ಯಾಪ್ತಿ ವಿಸ್ತರಿಸಲು ನಿರಂತರ ಪ್ರಯತ್ನಗಳು ಸಾಗಿವೆ ಎಂದು ಅಂಬೇಕರ್ ತಿಳಿಸಿದ್ದಾರೆ.

ನಿರ್ಧಾರವಾಗಲಿದೆ ಕ್ರಿಯಾಯೋಜನೆ: ಸಂಘ ಶಿಕ್ಷಾ ವರ್ಗಗಳು, ಕಾರ್ಯಕರ್ತ ವಿಕಾಸ ವರ್ಗಗಳು ಮತ್ತಿತರ ತರಬೇತಿ ಕಾರ್ಯಕ್ರಮಗಳ ಆಯೋಜನೆ ಬಗ್ಗೆ ಚರ್ಚೆ ಮತ್ತು ಮುಂಬರುವ ವರ್ಷಕ್ಕೆ ಸಂಘದ ಕ್ರಿಯಾ ಯೋಜನೆಯನ್ನು ಪ್ರತಿನಿಧಿ ಸಭಾದಲ್ಲಿ ಅಂತಿಮಗೊಳಿಸಲಾಗುವುದು. ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರ ಸಹಿತ ಹಿರಿಯ ಪದಾಧಿಕಾರಿಗಳು ಪ್ರತಿನಿಧಿ ಸಭಾದಲ್ಲಿ ಭಾಗವಹಿಸುವರು ಎಂದರು.

ಕಿರುಸುದ್ದಿ

ಅಂಬಿಕಾ ಮಹಾವಿದ್ಯಾಲಯ: ಮೂವರು ಹಿರಿಯ ವಿದ್ಯಾರ್ಥಿನಿಯರಿಗೆ ರ್‍ಯಾಂಕ್





ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯಲ್ಲಿನ ಅಂಬಿಕಾ ಪದವಿ ಕಾಲೇಜಿನ ಮೂವರು ಹಿರಿಯ ವಿದ್ಯಾರ್ಥಿನಿಯರು ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಗಳಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಗಣಿತ ಶಾಸ್ತ್ರ ಎಂ.ಎಸ್ಸಿ. ಪದವಿ ಅಧ್ಯಯನ ನಡೆಸಿರುವ ವರೇಣ್ಯಾ ಬಿ. ಪ್ರಥಮ ರ್‍ಯಾಂಕ್ ಗಳಿಸಿದರೆ, ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕ್ಲಿನಿಕಲ್ ಸೈಕಾಲಜಿ ವಿದ್ಯಾರ್ಥಿನಿ ನಯನಾ ದ್ವಿತೀಯ ರ್‍ಯಾಂಕ್ ಗಳಿಸಿ ದ್ದಾರೆ. ಬೆಂಗಳೂರು ವಿ.ವಿ.ಯಲ್ಲಿ ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ನಡೆಸಿರುವ ಮೇಘಾ ಡಿ. 4ನೇ ರ್‍ಯಾಂಕ್‌ಗೆ ಭಾಜನರಾಗಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ವಿರಾಜಪೇಟೆಯ ಕೆ.ಎಲ್. ಸೂರಜ್ ಗೆ 525ನೇ ರ್‍ಯಾಂಕ್



ಮಡಿಕೇರಿ: ವಿರಾಜಪೇಟೆ ಮೂಲದ ಪ್ರಸ್ತುತ ಮೈಸೂರಿನ ಸಿದ್ಧಾರ್ಥ ನಗರದಲ್ಲಿ ನೆಲೆಸಿರುವ ಕೆ.ಎಲ್.ಸೂರಜ್ (29) ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ 525ನೇ ರ್‍ಯಾಂಕ್ ಪಡೆದಿದ್ದಾರೆ. ಇದು ಐಎಎಸ್‌ನ ನಿರೀಕ್ಷೆಯಲ್ಲಿರುವ ಅವರ ನಾಲ್ಕನೇ ಪ್ರಯತ್ನದ ಫಲವಾಗಿದ್ದು, ರ್‍ಯಾಂಕ್‌ನಲ್ಲಿ ಸುಧಾರಣೆ ಕಂಡಿದ್ದಾರೆ. 2024 ರಲ್ಲಿ 3ನೇ ಪ್ರಯತ್ನದಲ್ಲಿ 713ನೇ ರ್‍ಯಾಂಕ್ ಗಳಿಸಿ ಕರ್ನಾಟಕ ಕೇಡರ್‌ನಲ್ಲೇ ಐಪಿಎಸ್ ಆಗಿ ಆಯ್ಕೆಯಾಗಿದ್ದು, ಪ್ರಸ್ತುತ ಹೈದರಾಬಾದ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಕೆ.ಎಲ್.ಸೂರಜ್ (29) ಅವರು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವಿರಾಜಪೇಟೆಯ ಕೆ.ಬಿ.ಶಾಂತಪ್ಪ ಅವರ ಕಿರಿಯ ಸಹೋದರ ನಿವೃತ್ತ ಐಆರ್‌ಎಸ್ ಅಧಿಕಾರಿ ಕೆ.ಬಿ.ಲಿಂಗರಾಜ್ ಅವರ ಪುತ್ರ.

ಎಂ.ಕಾಂ ಪರೀಕ್ಷೆಯಲ್ಲಿ ರಚನಾಗೆ ದ್ವಿತೀಯ ರ್‍ಯಾಂಕ್



ಕುಂದಾಪುರ: ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಎಂ.ಕಾಂ. ವಿದ್ಯಾರ್ಥಿನಿ ರಚನಾ ಅವರು ಮಂಗಳೂರು ವಿಶ್ವವಿದ್ಯಾನಿಲಯ ನಡೆಸಿದ 2024-25 ನೇ ಸಾಲಿನ ಎಂ.ಕಾಂ ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ. ಜಪ್ತಿಯ ರಾಜೀವ ಶೆಟ್ಟಿ ಮತ್ತು ರತ್ನಾವತಿ ದಂಪತಿಯ ಪುತ್ರಿಯಾಗಿರುವ ಇವರು, ಪ್ರಸ್ತುತ ತೀರ್ಥಹಳ್ಳಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾಲೇಜಿನ ಪ್ರಾಂಶುಪಾಲ ರಾಮರಾಯ ಆಚಾರ್ಯ, ಬೋಧಕ-ಬೋಧಕೇತರ ವರ್ಗದವರು, ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಪೋಷಕ ಸಂಘದವರು, ಹಳೆ ವಿದ್ಯಾರ್ಥಿಗಳು ವಿದ್ಯಾರ್ಥಿನಿಯನ್ನು ಅಭಿನಂದಿಸಿದ್ದಾರೆ.

ಅಂಜನಾ ಬಾಳಿಗರಿಗೆ ಐದನೇ ರ್‍ಯಾಂಕ್



ಮಂಗಳೂರು: 2024-25ನೇ ಸಾಲಿನ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಎಂ.ಕಾಂ. ವಿಭಾಗದಲ್ಲಿ ಕೆನರಾ ಕಾಲೇಜಿನ ಅಂಜನಾ ಬಾಳಿಗ ಬಿ. ಐದನೇ ರ್‍ಯಾಂಕ್‌ಪಡೆದಿದ್ದಾರೆ.

ಕಾಸರಗೋಡು ಜಿಲ್ಲೆಯ ಎಲ್ಲಾ ಬೂತ್‌ಗಳಲ್ಲಿ ವೆಬ್‌ಕಾಸ್ಟಿಂಗ್, ಎರಡು ತುಕಡಿ ಕೇಂದ್ರ ಪಡೆಗಳ ನಿಯೋಜನೆ

ಕೇರಳ ಚುನಾವಣಾ ಸಿದ್ಧತೆಗಳು ಪೂರ್ಣ

ಕಾಸರಗೋಡು: ರಾಜ್ಯ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯ ಎಲ್ಲಾ ಬೂತ್‌ಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಏರ್ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಅರ್ಜುನ್ ಪಾಂಡ್ಯನ್ ಮಾಹಿತಿ ನೀಡಿದ್ದಾರೆ.

ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ನಡೆದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸ್ತುತ ಕೇಂದ್ರ ಸೇನೆಯ ಎರಡು ತುಕಡಿಗಳನ್ನು ನಿಯೋಜಿಸಲಾಗಿದೆ. ಹೆಚ್ಚಿನ ಭದ್ರತಾ ಪಡೆಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಭಾಷಾ ಸಮಸ್ಯೆ ಇರುವ ಸ್ಥಳಗಳಲ್ಲಿ ಚುನಾವಣೆಗೆ ಸಂಬಂಧಿಸಿದ ಸರಕಾರದ ಪ್ರಕಟಣೆಗಳು ಮತ್ತು ಆದೇಶಗಳನ್ನು ಕನ್ನಡದಲ್ಲಿಯೂ ನೀಡಬೇಕು ಎಂಬ ಬೇಡಿಕೆಯನ್ನು ಸಭೆಯಲ್ಲಿ ಮುಂದಿರಿಸಲಾಯಿತು. ಈ ವಿಷಯವನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಭರವಸೆಯಿತ್ತರು.

ಚುನಾವಣಾ ವಿಭಾಗದ ಉಪ ಜಿಲ್ಲಾಧಿಕಾರಿ ಎ.ಎನ್.ಗೋಪಕುಮಾರ್, ಚುನಾವಣಾ ವಿಭಾಗ ಅಧೀಕ್ಷಕ ಎ.ರಾಜೀವನ್, ಚುನಾವಣಾ ವಿಭಾಗದ



ಇತರ ಅಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಂ.ಕುಂಞಂಬು ನಂಬಿಯಾರ್, ಸಿ.ಎಂ.ಮುಸ್ತಾಫ, ಹರೀಶ್ ಬಿ.ನಂಬಿಯಾರ್, ಹ್ಯಾರಿಸ್ ಚೂರಿ, ಪಿ.ರಮೇಶ್ ಕಾಸರಗೋಡು, ಕೆ.ಎ.ಮಹಮ್ಮದ್ ಹನೀಫ್, ವಿ.ರಾಜನ್, ಕೆ.ಪಿ.ರವೀಂದ್ರನ್, ಉಮ್ಮರ್ ಪಾಡಲಡ್ಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ನೋಡಲ್ ಅಧಿಕಾರಿಗಳ ನೇಮಕ

ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ವಿವಿಧ ಚುನಾವಣಾ ಚಟುವಟಿಕೆಗಳನ್ನು ಸಂಘಟಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ನೋಡಲ್ ಅಧಿಕಾರಿಗಳನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಅರ್ಜುನ್ ಪಾಂಡ್ಯನ್ ನೇಮಿಸಿ ಆದೇಶ ಹೊರಡಿಸಿದ್ದಾರೆ.

ಮಾನವಶಕ್ತಿ ನಿರ್ವಹಣೆ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಮಾದರಿ ನೀತಿ ಸಂಹಿತೆಯ ನೋಡಲ್ ಅಧಿಕಾರಿಯಾಗಿ ಎಡಿಎಂ ಕೆ.ವಿ.ಶ್ರುತಿ, ತರಬೇತಿ ವಿಭಾಗದ ನೋಡಲ್ ಅಧಿಕಾರಿಯಾಗಿ ಆರ್‌ಆರ್ ತಹಶೀಲ್ದಾರ್ ಕೆ.ಬಿ.ರಾಮು, ಇವಿಎಂ ನಿರ್ವಹಣೆಯ ನೋಡಲ್ ಅಧಿಕಾರಿಯಾಗಿ ಎಲ್‌ಎಸ್‌ಜಿಡಿ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ, ವಸ್ತು ನಿರ್ವಹಣೆ ಮತ್ತು ಆರ್‌ಟಿಒ ಉಸ್ತುವಾರಿ ನೋಡಲ್ ಅಧಿಕಾರಿಯಾಗಿ ಹಿರಿಯ ಅಧಿಕಾರಿ ಕೆ.ರಮೇಶನ್, ಗಣಕೀಕರಣ ನೋಡಲ್ ಅಧಿಕಾರಿಯಾಗಿ ಜೆ.ಗೆರಾಡ್ ಅವರನ್ನು ನೇಮಿಸಲಾಗಿದೆ.

ಮಾಹಿತಿ ಅಧಿಕಾರಿಯಾಗಿ ಕೆ.ಲೀನಾ, ಸ್ವೀಪ್ ನೋಡಲ್ ಅಧಿಕಾರಿಯಾಗಿ ಕುಟುಂಬಶ್ರೀ ಜಿಲ್ಲಾ ಸಂಯೋಜಕ ಕೆ.ರತೀಶ್ ಕುಮಾರ್, ವೆಚ್ಚ ನೋಡಲ್ ಅಧಿಕಾರಿಯಾಗಿ ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ವಿ.ಚಂದ್ರನ್, ಮತಪತ್ರ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಶಿಕ್ಷಣ ಅಧಿಕಾರಿ ಆರ್.ರೋಹನ್‌ರಾಜ್, ಅಂಚೆ ಮತಪತ್ರ ಸೇವಾ ಮತದಾರರು ಮತ್ತು ಇಡಿಸಿ ನೋಡಲ್ ಅಧಿಕಾರಿಯಾಗಿ ಎಲ್‌ಎಸ್‌ಜಿಡಿ ವಿಜಿಲೆನ್ಸ್ ಅಧಿಕಾರಿ ಟಿ.ಟಿ.ಸುರೇಂದ್ರನ್, ಎಸ್‌ಎಂಎಸ್ ಮಾನಿಟರಿಂಗ್ ಮತ್ತು ಕಮ್ಯುನಿಕೇಷನ್ ಪ್ಲಾನ್ ಮತದಾರರ ಸಹಾಯವಾಣಿಯ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂಧನನ್ ಅವರನ್ನು ಆರಿಸಲಾಗಿದೆ.

ಎಸ್‌ಎಂಎಸ್ ಮಾನಿಟರಿಂಗ್ ಮತ್ತು ಕಮ್ಯುನಿಕೇಷನ್ ಪ್ಲಾನ್ ಮತದಾರರ ಸಹಾಯವಾಣಿಯ ನೋಡಲ್ ಅಧಿಕಾರಿಯಾಗಿ ಹಿರಿಯ ಅಧಿಕಾರಿ ವಿ.ಶ್ರೀಕುಮಾರ್, ಸಾಮಾಜಿಕ ನ್ಯಾಯ ವಿಕ್ಷಕ ನೋಡಲ್ ಅಧಿಕಾರಿಯಾಗಿ ಡಿಟಿಪಿಸಿ ಕಾರ್ಯದರ್ಶಿ ಕೆ.ಜಿಜೇಶ್ ಅವರನ್ನು ನೇಮಿಸಲಾಗಿದೆ. ದಿವ್ಯಾಂಗರ ನೋಡಲ್ ಅಧಿಕಾರಿಯಾಗಿ ಪ್ರಭಾರಿ ಅಧಿಕಾರಿ ಎಂ.ಅಬ್ದುಲ್ಲ, ಹಸಿರು ಶಿಷ್ಟಾಚಾರದ ನೋಡಲ್ ಅಧಿಕಾರಿಯಾ ಶುಚಿತ್ವಾ ಮಿಷನ್ ಸಂಯೋಜಕ ಪಿ.ಜಯನ್ ಅವರನ್ನು ಆರಿಸಲಾಗಿದೆ.

ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಚಟುವಟಿಕೆಗಳನ್ನು ಸಮರ್ಪಕವಾಗಿ ಮುಂದುವರಿಸುವಂತೆ ಜಿಲ್ಲಾಧಿಕಾರಿಗಳು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ಪಿಲಾತಬೆಟ್ಟು ಗ್ರಾಮದ ನೇರಳಕಟ್ಟೆ ಎಂಬಲ್ಲಿ ಖಾಸಗಿ ಜಾಗದಲ್ಲಿರುವ ತೆಂಗಿನ ತೋಟಕ್ಕೆ ಬುಧವಾರ ಬೆಂಕಿ ಬಿದ್ದ ಪರಿಣಾಮ ಸುಮಾರು 30 ರಷ್ಟು ತೆಂಗಿನ ಮರದ ಬುಡ ಸುಟ್ಟು ಹೋಗಿದೆ. ಸ್ಥಳೀಯರು ಬೆಂಕಿ ನಂದಿಸುವ ಕಾರ್ಯ ನಡೆಸಿದ್ದರು. ಬಳಿಕ ಬಂಟ್ವಾಳ ಅಗ್ನಿಶಾಮಕ ದಳದವರು ಆಗಮಿಸಿ ಬೆಂಕಿಯನ್ನು ಹತೋಟಿಗೆ ತರುವಲ್ಲಿ ಯಶಸ್ವಿಯಾದರು. ಅಗ್ನಿ ಆಕಸ್ಮಿಕಕ್ಕೆ ಕಾರಣ ತಿಳಿದು ಬಂದಿಲ್ಲ. ಮೆಸ್ಕಾಂ ಸಿಬಂದಿ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದರು.

ನಾಪತ್ತೆಯಾಗಿದ್ದ ಕೊಣಾಜೆಯ ಯುವಕನ ಶವ ಸೋಮೇಶ್ವರದ ಕೆರೆಯಲ್ಲಿ ಕೊಳೆತ ಸ್ಥಿತಿಯಲ್ಲಿ ಪತ್ತೆ

ಉಳ್ಳಾಲ: ಸೋಮವಾರದಂದು ಬೆಳಿಗ್ಗೆ ಮನೆಯಿಂದ ಕೆಲಸಕ್ಕೆ ತೆರಳಿ ನಾಪತ್ತೆಯಾಗಿದ್ದ ಕೊಣಾಜೆಯ ಯುವಕನೋರ್ವನ ಶವವು ಕೊಳೆತ ಸ್ಥಿತಿಯಲ್ಲಿ ಸೋಮೇಶ್ವರದ ಸೋಮನಾಥ ಕ್ಷೇತ್ರದ ಗದಾತೀರ್ಥ ಕೆರೆಯಲ್ಲಿ ಬುಧವಾರ ಬೆಳಿಗ್ಗೆ ಪತ್ತೆಯಾಗಿದೆ. ಪತ್ನಿಯಿಂದ ವಿಚ್ಛೇದನಗೊಂಡ ಖಿನ್ನತೆಯಲ್ಲಿ ಯುವಕ ಆತಹತ್ಯೆಗೈದಿರುವುದಾಗಿ ಶಂಕಿಸಲಾಗಿದೆ.



ಉಳ್ಳಾಲ ತಾಲೂಕಿನ ಕೊಣಾಜೆಯ ಮುಚ್ಚಿಲ ಕೋಡಿಯ ನಿವಾಸಿ ದಿನೇಶ್ ಶೆಟ್ಟಿಗಾರ್ ಎಂಬವರ ಪುತ್ರ ವಿವೇಕ್ ಶೆಟ್ಟಿಗಾರ್ (32) ಮೃತ ಯುವಕನಾಗಿದ್ದಾನೆ. ಮಂಗಳೂರಿನ ಕದ್ರಿಯ ವೇದ ಮೋಟಾರ್ಸ್‌ನಲ್ಲಿ ಉದ್ಯೋಗದಲ್ಲಿದ್ದ ವಿವೇಕ್ ಸೋಮವಾರ ಬೆಳಿಗ್ಗೆ ಮನೆಯಿಂದ ಕೆಲಸಕ್ಕೆ ತೆರಳಿದ್ದರು. ಅಂದು ರಾತ್ರಿ 9 ಗಂಟೆಯ ಸುಮಾರಿಗೆ ತಾಯಿಗೆ ಫೋನ್ ಮಾಡಿ ದೇವಸ್ಥಾನಕ್ಕೆ ತೆರಳುವುದಾಗಿ ತಿಳಿಸಿದ್ದರೆನ್ನಲಾಗಿದೆ. ಮಧ್ಯರಾತ್ರಿ 12 ಗಂಟೆಯಾದರೂ ಮಗ ಮನೆಗೆ ವಾಪಸ್ಸು ಬರದೇ ಇದ್ದ ಕಾರಣ ತಾಯಿ ಫೋನ್ ಮಾಡಿದ್ದು, ವಿವೇಕ್ ಕರೆ ಸ್ವೀಕರಿಸಿರಲಿಲ್ಲ. ವಿವೇಕ್ ಮಂಗಳವಾರವೂ ಮನೆಗೂ ಬಾರದೆ, ಮೊಬೈಲ್ ಕರೆಯನ್ನು ಸ್ವೀಕರಿಸದೇ ಇದ್ದಾಗ ಗಾಬರಿಗೊಂಡ ಮನೆಯವರು ಎಲ್ಲಾ ಕಡೆ ಹುಡುಕಾಡಿದ್ದು, ಕೊನೆಗೆ ಕೊಣಾಜೆ ಪೊಲೀಸ್ ಠಾಣೆಗೆ ತೆರಳಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ವಿವೇಕ್ ಅವರ ದ್ವಿಚಕ್ರ ವಾಹನದ ಜೊತೆ ಪಾದರಕ್ಷೆಗಳು ಮಂಗಳವಾರ ಬೆಳಿಗ್ಗೆ ಸೋಮೇಶ್ವರ ಕಡಲಕಿನಾರೆಯಲ್ಲಿ ಪತ್ತೆಯಾಗಿತ್ತು.

ಮೃತ ವಿವೇಕ್ ವಿವಾಹಿತನಾಗಿದ್ದು ಪತ್ನಿ ಆತನಿಂದ ವಿಚ್ಛೇದನ ಪಡೆದು ಕೆಲ ದಿನಗಳ ಹಿಂದಷ್ಟೆ ಬೇರೆ ಮದುವೆಯಾಗಿದ್ದಳಂತೆ. ಇದೇ ವಿಚಾರದಲ್ಲಿ ವಿವೇಕ್ ಖಿನ್ನತೆಗೊಳಗಾಗಿ ಆತ್ಮಹತ್ಯೆಗೈದಿರುವುದಾಗಿ ಶಂಕಿಸಲಾಗಿದೆ.

ಉಳ್ಳಾಲ ಪೊಲೀಸರು ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾಣಿಸಿ ಪ್ರಕರಣ ದಾಖಲಿಸಿ ದ್ದಾರೆ. ಮೃತ ವಿವೇಕ್ ತಂದೆ, ತಾಯಿ ಮತ್ತು ಏಕೈಕ ಸಹೋದರಿಯನ್ನು ಆಗಲಿದ್ದಾರೆ.

ಕಾಡಾನೆಗಳ ದಾಳಿಗೆ ಕೊಡಗಿನಲ್ಲಿ ಹೆಚ್ಚುತ್ತಿರುವ ಸಾವು

ಅರಣ್ಯ ಇಲಾಖೆಯಿಂದ ತುರ್ತು ಕ್ರಮ

ಮಡಿಕೇರಿ: ಜಿಲ್ಲೆಯ ಹಲವೆಡೆ ಕಾಡಾನೆಗಳ ದಾಳಿಯಿಂದ ನಾಲ್ವರು ಸಾವಿಗೀಡಾಗಿರುವ ಹಿನ್ನಲೆ ಅರಣ್ಯ ಇಲಾಖೆ ಜಾಗೃತಗೊಂಡಿದೆ.

ಸಿದ್ದಾಪುರ ಸಮೀಪದ ಚೆನ್ನಯ್ಯನಕೋಟೆ ಗ್ರಾಮದ ಕ್ರಿಸ್ಟಲ್ ಎಸ್ಟೇಟ್ ಪ್ರದೇಶದಲ್ಲಿ ಕಾಣಿಸಿಕೊಂಡಿದ್ದ ಮೀರಾ ಗುಂಪಿನ ಏಳು ಕಾಡಾನೆಗಳನ್ನು ಅರಣ್ಯ ಇಲಾಖೆಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ ಆಬ್ಬೂರು ಗೇಟ್ ಮೂಲಕ ದೇವಮಚ್ಚಿ ಮೀಸಲು ಅರಣ್ಯಕ್ಕೆ ಹಿಮ್ಮೆಟ್ಟಿಸಿದ್ದಾರೆ.

ಕೊಡಗು ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೋನಾಲಿ ವರ್ಷಿಣಿ ಹಾಗೂ ವೀರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ ಅವರ ನಿರ್ದೇಶನದಲ್ಲಿ, ತಿತಿಮತಿ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ ಅವರ ಮಾರ್ಗದರ್ಶನದಲ್ಲಿ ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ ಅವರ ಮಾರ್ಗದರ್ಶನದಲ್ಲಿ ಕಾಡಾನೆಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ನಡೆಯಿತು.

ಕಾರ್ಯಾಚರಣೆಯಲ್ಲಿ ಅರಣ್ಯ ಪಾಲಕ ರಾಜೇಶ್ ಚೆನ್ನಂಗಿ, ಆರ್‌ಆರ್‌ಟಿ ಸಿಬ್ಬಂದಿಗಳು, ವನ್ಯಜೀವಿ ವಲಯದ ಉಪ ವಲಯ ಅರಣ್ಯಾಧಿಕಾರಿ ಚನ್ನವೀರೇಶ್ ಹಾಗೂ ಸಿಬ್ಬಂದಿಗಳು, ತಿತಿಮತಿ ಇಟಿಎಫ್ ಉಪ ವಲಯ ಅರಣ್ಯಾಧಿಕಾರಿ ದೇವರಾಜ್ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.



ಪಹರೆ ಕಾಯುವ ಕಾರ್ಯಕ್ಕೆ ಅರಣ್ಯ ಸಿಬ್ಬಂದಿಗಳ ನಿಯೋಜನೆ

ಉಪ ವಲಯ ಅರಣ್ಯಾಧಿಕಾರಿ ಶಶಿ ಪಿ.ಟಿ. ಅವರ ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿಗಳು ಕಾರ್ಯಾಚರಣೆ ಕೈಗೊಂಡು ಕಾಡಾನೆಗಳನ್ನು ಸುರಕ್ಷಿತವಾಗಿ ದೇವಮಚ್ಚಿ ಮೀಸಲು ಅರಣ್ಯದ ಕಡೆಗೆ ಹಿಮ್ಮೆಟ್ಟಿಸಿದರು. ರಾತ್ರಿ ವೇಳೆ ಕಾಡಾನೆಗಳು ಮತ್ತೆ ನಾಡಿಗೆ ನುಗ್ಗದಂತೆ ತಡೆಯುವ ಉದ್ದೇಶದಿಂದ ಆಬ್ಬೂರು ಗೇಟ್ ಹಾಗೂ ಚೆನ್ನಂಗಿ ಗೇಟ್ ಬಳಿ ಅರಣ್ಯ ಸಿಬ್ಬಂದಿಗಳನ್ನು ಪಹರೆ ಕಾಯುವ ಕಾರ್ಯಕ್ಕೆ ನಿಯೋಜಿಸಲಾಗಿದೆ ಎಂದು ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ ಮತ್ತು ಆನೆಚೌಕೂರು ವಲಯ ಅರಣ್ಯಾಧಿಕಾರಿ ದೇವರಾಜ್ ತಿಳಿಸಿದ್ದಾರೆ.

ಶ್ರೀರಾಮ ಸೌಹಾರ್ದ ಸಹಕಾರಿ ಸಂಘಕ್ಕೆ ಅವಿರೋಧ ಆಯ್ಕೆ

ಬಂಟ್ವಾಳ: ಕಲ್ಲಡ್ಕದ ಶ್ರೀರಾಮ ಸೌಹಾರ್ದ ಸಹಕಾರಿ ಸಂಘದ ಚುನಾವಣೆ ಪ್ರಕ್ರಿಯೆ ಚುನಾವಣಾ ಅಧಿಕಾರಿ ಡಾ. ಜ್ಯೋತಿ ಡಿ. ನೇತೃತ್ವದಲ್ಲಿ ನಡೆಯಿತು. ಮಾ. 7ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಮಾ. 9ರಂದು ನಾಮಪತ್ರ ಪರಿಶೀಲಿಸಿ ಡಾ. ಪ್ರಭಾಕರ ಭಟ್ ಕಲ್ಲಡ್ಕ, ನಾರಾಯಣ ಸೋಮಯಾಜಿ, ವಸಂತ ಮಾಧವ, ಸುಜಿತ್ ಕುಮಾರ್, ಶ್ರೀಕೃಷ್ಣಪ್ರಸಾದ್ ಕೆ. ಎನ್., ವಸಂತ ಬಲ್ಲಾಳ್, ರವಿರಾಜ್ ಕಣಂತೂರು, ಕುಶಾಲಪ್ಪ ಅಮ್ಟೂರು, ಸತೀಶ್ ಕುಮಾರ್ ಶಿವಗಿರಿ, ನಾರಾಯಣ ಶೆಟ್ಟಿ, ನಾಗರಾಜ ಕೆ. ಎಸ್., ಮಲ್ಲಿಕಾ ಆರ್. ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಲಾಗಿದೆ.

ಸಾರ್ವಜನಿಕ ಸ್ಥಳದಲ್ಲಿ ಸಿಗರೇಟ್ ಸೇವನೆ, ಗುಟ್ಕಾ ಉಗಿದರೆ ರೂ. 1000 ದಂಡ

ಪ್ಲಾಸ್ಟಿಕ್, ಪತ್ರಿಕೆಯಲ್ಲಿ ಹೊಟೇಲ್ ಬಿಸಿ ಆಹಾರ ಪಾರ್ಸೆಲ್ ನಿಷೇಧಕ್ಕೆ ಸೂಚನೆ

ಮಂಗಳೂರು: ಹೊಟೇಲ್, ಕ್ಯಾಂಟೀನ್, ಕೆಫೆಗಳಲ್ಲಿ ಪ್ಲಾಸ್ಟಿಕ್ ಕವರ್, ಪತ್ರಿಕೆಗಳಲ್ಲಿ ಬಿಸಿ ಆಹಾರ ಪದಾರ್ಥಗಳನ್ನು ಪಾರ್ಸೆಲ್ ಮಾಡುವುದನ್ನು ನಿಷೇಧಿಸಲು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ರಾಜು ಕೆ. ಸೂಚಿಸಿದ್ದಾರೆ.

ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ಲಾಸ್ಟಿಕ್‌ನಲ್ಲಿರುವ ಹಾನಿಕಾರಕ ರಾಸಾಯನಿಕಗಳು ಬಿಸಿ ಆಹಾರಕ್ಕೆ ಸೇರಿ ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತಿದೆ. ಹೊಟೇಲ್, ಕ್ಯಾಂಟೀನ್‌ಗಳಿಂದ ಹೆಚ್ಚಾಗಿ ಕಾರ್ಮಿಕರು ಅಥವಾ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಬಿಸಿ ಆಹಾರ ಪದಾರ್ಥಗಳನ್ನು ಕೊಂಡೊಯ್ಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ಕವರ್, ನ್ಯೂಸ್ ಪೇಪರ್‌ಗಳಲ್ಲಿ ಬಿಸಿ ಆಹಾರ ಪದಾರ್ಥಕ್ಕೆ ಪ್ಲಾಸ್ಟಿಕ್ ಬಳಕೆ ಕಡ್ಡಾಯವಾಗಿ ನಿಷೇಧಿಸಲು ಸೂಕ್ತ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್, ತಂಬಾಕು ಸೇವನೆ ನಿಷೇಧ, ಎಚ್ಚರಿಕೆಯ ಫಲಕ ಇಲ್ಲದೆ ಇರುವುದು, ಅಂಗಡಿ, ಹೋಟೆಲ್ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಸಿಗರ್ ಲೈಟರ್, ಬೆಂಕಿ ಪೊಟ್ಟಣಗಳನ್ನು ಇಟ್ಟರೆ ಅವರಿಗೆ ದಂಡವಿಧಿಸಬೇಕು. ತಂಬಾಕು ಬ್ರಾಂಡ್ ಹೆಸರಿನೊಂದಿಗೆ ಜಾಹಿರಾತು ಫಲಕಗಳು ಅಥವಾ ಯಾವುದೇ ರೀತಿಯಲ್ಲಿ ತಂಬಾಕು ಉತ್ಪನ್ನಗಳ ಪ್ರಚಾರ, 21 ವರ್ಷದೊಳಗಿನವರಿಗೆ ತಂಬಾಕು ಮಾರಾಟ ಮಾಡಿದರೆ, ಚಿಲ್ಲರೆ ಅಂಗಡಿಗಳಲ್ಲಿ ಸಿಗರೇಟ್, ತಂಬಾಕು ಉತ್ಪನ್ನಗಳ ಪ್ರದರ್ಶನ ಮಾಡಿದರೆ ದಂಡ ವಿಧಿಸಲು ಅಪರ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಶಾಲಾ ಕಾಲೇಜುಗಳ 100 ಮೀಟರ್ ಅಂತರದೊಳಗೆ ತಂಬಾಕು ಮಾರಾಟ ಮಾಡುವವರ ಬಗ್ಗೆ ಶಾಲಾ-ಕಾಲೇಜುಗಳ ಮುಖ್ಯಸ್ಥರು ನಿಗಾ ವಹಿಸಬೇಕು. ಅಂತಹ ಅಂಗಡಿಗಳ ಪಟ್ಟಿಯನ್ನು ತಮ್ಮ ವ್ಯಾಪಿಯಲ್ಲಿರುವ ಸ್ಥಳಿಯಾಡಳಿತಕ್ಕೆ ಮತ್ತು ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಸಲ್ಲಿಸಬೇಕು. ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಸ್ಥಳೀಯಾಡಳಿತ ಸಂಸ್ಥೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಜಿಲ್ಲೆಯಲ್ಲಿ ತಂಬಾಕು ಮಾರಾಟ ಮತ್ತು ಸೇವನೆಯನ್ನು ನಿಯಂತ್ರಿಸಬಹುದು ಎಂದು ರಾಜು ಕೆ. ತಿಳಿಸಿದರು.

ಶಾಲಾ ಕಾಲೇಜುಗಳಲ್ಲಿ 100 ಮೀಟರ್ ಅಂತರದೊಳಗೆ ತಂಬಾಕು ಮಾರಾಟ ನಿಷೇಧ ಬೋರ್ಡ್ ಕಡ್ಡಾಯವಾಗಿ ಹಾಕಬೇಕು, ಜಿಲ್ಲೆಯಲ್ಲಿ ತಂಬಾಕಿಗೆ ಸಂಬಂಧಿಸಿದಂತೆ ಜಾಹೀರಾತು ಫಲಕಗಳು ಕಂಡು ಬಂದಿದ್ದು, ತಂಬಾಕು ನಿಯಂತ್ರಣ ಕಾಯ್ದೆ ಪ್ರಕಾರ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು. ತಂಬಾಕಿನ ಅಪಾಯಕ್ಕೆ ಸಿಲುಕುವ ರಿಕ್ಷಾಚಾಲಕರು, ಕಟ್ಟಡಕಾರ್ಮಿಕರು, ಪೌರಕಾರ್ಮಿಕರು ಇರುವ ಸ್ಥಳಕ್ಕೆ ಹೋಗಿ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಹೇಳಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ತಿಮ್ಮಯ್ಯ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ನವೀನ್ ಚಂದ್ರ ಕುಲಾಲ್, ತಾಲೂಕು ಆರೋಗ್ಯಾಧಿಕಾರಿ ಡಾ.ಸುಜಯ್, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಚಿಲ್ಲರೆ ಸಿಗರೇಟ್ ಮಾರಾಟಕ್ಕೆ ಅವಕಾಶವಿಲ್ಲ

ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇವಿಸಿದವರಿಗೆ ಮತ್ತು ಗುಟ್ಕಾ ಜಗಿದು ಉಗಿಯುವವರಿಗೆ 1000 ರೂ. ವರೆಗೆ ದಂಡ ವಿಧಿಸಲಾಗುತ್ತದೆ. ಅಂಗಡಿಗಳಲ್ಲಿ ಚಿಲ್ಲರೆ ಸಿಗರೇಟ್ ಮಾರಾಟ ಮಾಡಲು ಅವಕಾಶವಿಲ್ಲ. ಇದನ್ನು ಉಲ್ಲಂಘಿಸಿದ ಅಂಗಡಿಗಳಿಗೂ ದಂಡ ವಿಧಿಸಲಾಗುವುದು ಎಂದರು. ಕೋಟ್ಪಾ ಕಾರ್ಯಾಚರಣೆಯಲ್ಲಿ ಜಿಲ್ಲೆಯಲ್ಲಿ ಒಟ್ಟು 2,587 ಪ್ರಕರಣ ದಾಖಲಾಗಿದ್ದು, 3.89 ಲಕ್ಷ ರೂ. ದಂಡ ಸಂಗ್ರಹಿಸಲಾಗಿದೆ. ತಂಬಾಕಿಗೆ ಸಂಬಂಧಿಸಿದಂತೆ ಸುಮಾರು 52 ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಗಿದೆ. ತಂಬಾಕು ಉತ್ಪನ್ನ ಪ್ಯಾಕ್‌ನಲ್ಲಿ ಆರೋಗ್ಯ ಎಚ್ಚರಿಕೆಯ ಚಿತ್ರಗಳು ಶೇ. 85 ಕ್ಕಿಂತ ಕಡಿಮೆ ಅಳತೆಯಲ್ಲಿದ್ದರೆ ಮತ್ತು ಹಳೆಯದಾದ ಎಚ್ಚರಿಕೆಯ ಚಿತ್ರಗಳನ್ನು ಹಾಕಿದರೆ ದಂಡ ವಿಧಿಸಲಾಗುತ್ತದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಮಂಗಳೂರು ಮಹಾ ನಗರ ಪಾಲಿಕೆ ವಾರ್ಡ್ ಸಂಖ್ಯೆ 7

ಇಲ್ಲಿ ನೀರಿಗಿಂತ ಒಳಚರಂಡಿಯದ್ದೇ ಸಮಸ್ಯೆ!

ಮಂಗಳೂರು: ಮಂಗಳೂರು ಮಹಾ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 7ರಲ್ಲಿ ಕುಡಿಯುವ ನೀರಿಗಿಂತ ಒಳ ಚರಂಡಿ ಸಮಸ್ಯೆಯೇ ಹೆಚ್ಚಾಗಿದೆ. ಕುಡಿಯುವ ನೀರು ಸಾಧಾರಣವಾಗಿ ಮನೆ ಮನೆ ತಲುಪುತ್ತಿದೆ. ಬರುವ ನೀರನ್ನು ಶೇಖರಿಸಿಕೊಂಡು ಜತನವಾಗಿ ಉಪಯೋಗಿಸುತ್ತೇವೆ. ಆದ್ದರಿಂದ ನೀರಿನ ಸಮಸ್ಯೆ ಕಾಡುವುದಿಲ್ಲಿಇ. ಆದರೆ, ಇಲ್ಲಿನದ್ದು ಒಳಚರಂಡಿ ವ್ಯವಸ್ಥೆ ಮಾತ್ರ ಹೇಳತೀರದ್ದಾಗಿದೆ ಎನ್ನುತ್ತಾರೆ ಇಡ್ಯಾ ಪಶ್ಚಿಮದ ಜನತೆ.

ಸುರತ್ಕಲ್ ವಿದ್ಯಾದಾಯಿನಿ ಸಮೀಪದ ಟ್ಯಾಂಕು, ಎನ್‌ಐಟಿಕೆ ಬಳಿಯ ಟ್ಯಾಂಕ್‌ನಿಂದ ನೀರಿನ ಸರಬರಾಜಾಗುತ್ತಿದೆ. ಪಶ್ಚಿಮದಲ್ಲಿ ಸಮುದ್ರ ತೀರದ ಉದ್ದಕ್ಕೂ ತಗ್ಗು ಪ್ರದೇಶವನ್ನು ಹೊಂದಿರುವುದರಿಂದ ನೀರಿನ ಸಮಸ್ಯೆ ಇಲ್ಲಿ ಕಾಡುತ್ತಿಲ್ಲ. ಸುರತ್ಕಲ್ ಬಂಟರ ಭವನದ ಸುತ್ತಮುತ್ತ ಸ್ವಲ್ಪ ಸಮಸ್ಯೆಯಿದ್ದು, ಜಲಸಿರಿ ಯೋಜನೆಯ ಮೂಲಕ ಸಮರ್ಪಕವಾಗಿ ನೀರಿನ ವಿತರಣೆ ಆಗಬೇಕಿದೆ. ಏಪ್ರಿಲ್ ಮೇ ತಿಂಗಳಲ್ಲಿ ಅಗತ್ಯವಿದ್ದಲ್ಲಿ ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಟ್ಯಾಂಕರ್ ಮೂಲಕವೂ ನೀರು ಸರಬರಾಜಾಗುತ್ತದೆ. ಈ ಭಾಗದಲ್ಲಿ ಬಾವಿ ನೀರು, ಬೋರ್‌ವೆಲ್ ಬಳಕೆಯಿದೆ.

ವಾರ್ಡ್ ನಂಬರ್ ಏಳರಲ್ಲಿರುವ ಗುಡ್ಡೆಕೊಪ್ಲ ಎಸ್ ಟಿ ಪಿ ಪ್ರಥಮ ಹಂತದಲ್ಲಿ ವೈಫಲ್ಯವನ್ನು ಕಂಡಿದ್ದರಿಂದ ಇದೀಗ ಬೀಗ ಮುದ್ರೆ ಹಾಕಲಾಗಿದ್ದು ಈ ಭಾಗದಲ್ಲಿ ವಾಣಿಜ್ಯ ಕಟ್ಟಡ, ವಸತಿ ಸಮುಚ್ಚಯ ಒಳಚರಂಡಿ ಸಂಪರ್ಕವಿಲ್ಲದೆ ಸಮಸ್ಯೆ ಎದುರಿಸುತ್ತಿದೆ. ಬಡಾವಣೆ ಮನೆಗಳಲ್ಲಿ ಹಲವೆಡೆ ಪಿಟ್ ವ್ಯವಸ್ಥೆ ಹೊಂದಿದ್ದು ಹೊಸ ಮನೆ ಹೊಸ ಸಮುಚ್ಚಯಗಳಿಗೆ ಒಳಚರಂಡಿ ಸಂಪರ್ಕ ಅಗತ್ಯವಾಗಿದೆ.





ಹೋರಾಟ ಆರಂಭಿಸುತ್ತೇವೆ

ಸುರತ್ಕಲ್ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಮಳೆಗಾಲದ ಮುನ್ನ ಮೂರ್ನಾಲ್ಕು ತಿಂಗಳು ಇರುವುದಾದರೂ ಪಾಲಿಕೆ ಪೂರೈಕೆ ಜಾಲವನ್ನು ಸರಿಪಡಿಸಬೇಕು. ಇದರ ಜೊತೆಗೆ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದೇ ನಮಗೆ ಅತಿ ದೊಡ್ಡ ಸಮಸ್ಯೆ. ನಮ್ಮಿಂದ ಕೋಟಿ ಕೋಟಿ ತೆರಿಗೆ ತೆಗೆದುಕೊಳ್ಳುತ್ತಿದ್ದು, ಸೌಲಭ್ಯ ಮಾತ್ರ ನೀಡುತ್ತಿಲ್ಲ. ಈ ಬಗ್ಗೆ ಸಾರ್ವಜನಿಕರು ಹೋರಾಟ ಆರಂಭಿಸಲಿದ್ದೇವೆ.

■ ವೈ.ರವೀಂದ್ರ, ರಾವ್, ಸುರತ್ಕಲ್



ಆಡಳಿತ ಎಚ್ಚರಿಕೆ ವಹಿಸಬೇಕು

ಈ ಭಾಗದ ಜನತೆ ಹೆಚ್ಚಾಗಿ ಬಾವಿ ಬೋರ್‌ವೆಲ್ ಇತರ ಮೂಲಗಳನ್ನು ಜನರು ಬಳಕೆ ಮಾಡುತ್ತಿದ್ದಾರೆ. ಆದ್ದರಿಂದ ನೀರಿನ ಸಮಸ್ಯೆ ಅಷ್ಟಾಗಿ ಇಲ್ಲ.ಅಗತ್ಯ ಬಿದ್ದರೆ ಮಂಗಳೂರು ಮಹಾನಗರ ಪಾಲಿಕೆಯಿಂದ ಟ್ಯಾಂಕರ್ ಮೂಲಕ ನೀರು ಪೂರೈಕೆ ಆಗುವಂತೆ ಸ್ಥಳೀಯ ಆಡಳಿತ ನೋಡಿಕೊಳ್ಳಬೇಕು.

■ ಶ್ರೀಕಾಂತ್ ಸಾಲಿಯಾನ್, ಗುಡ್ಡೆ ಕೊಪ್ಲ

ಮಳೆ ನೀರುವ ಹರಿಯುವ ತೋಡಿನಲ್ಲಿ ತ್ಯಾಜ್ಯ ನೀರು

ಮಳೆ ನೀರು ಹರಿಯುವ ತೋಡಿನಲ್ಲಿ ತ್ಯಾಜ್ಯ ನೀರು ಹರಿಯುತ್ತಿದ್ದು ಮಂಗಳೂರು ಮಹಾನಗರ ಪಾಲಿಕೆಯು ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿಲ್ಲ. ಸ್ಥಳೀಯ ಹೋಟೆಲ್ ಉದ್ಯಮಿಗಳು, ವಸತಿ ಸಮುಚ್ಚಯದ ಮಾಲಕರು ಒಳಚರಂಡಿ ಬೇಕು ಎಂಬ ಅಭಿಯಾನವನ್ನು ಆರಂಭಿಸಿದ್ದು, ಈ ನಿಟ್ಟಿನಲ್ಲಿ ಈ ಭಾಗದಲ್ಲಿ ಹೋರಾಟ ಆರಂಭವಾಗಿದೆ. ಉಸ್ತುವಾರಿ ಸಚಿವರಿಗೂ ಈ ಬಗ್ಗೆ ಸ್ಥಳೀಯರು ಮನವಿ ಅರ್ಪಿಸಿದ್ದಾರೆ. ಈ ವಾರ್ಡ್‌ನಲ್ಲಿ ಪ್ರಮುಖ ರಸ್ತೆಗಳು ಬಹುತೇಕ ಕಾಂಕ್ರಿಟೀಕರಣವಾಗಿದೆ. ಬೀದಿ ದೀಪ ವ್ಯವಸ್ಥೆ ಸಮರ್ಪಕವಾಗಿ ಆಗಬೇಕಿದೆ. ಹಲವಾರು ಖಾಸಗಿ ಬಡಾವಣೆಗಳನ್ನು ಹೊಂದಿದ್ದು ಈಗಲೂ ಮಣ್ಣಿನ ರಸ್ತೆ ಇದ್ದು ಮುಂದಿನ ದಿನಗಳಲ್ಲಿ ಡಾಮರೂ ರಸ್ತೆ ಇಲ್ಲವೇ ಕಾಂಗ್ರೆಸ್ ರಸ್ತೆಯ ನಿರೀಕ್ಷೆಯಲ್ಲಿದ್ದಾರೆ ಇಲ್ಲಿನ ನಿವಾಸಿಗಳು.

ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಹೊಸದಾಗಿ ಜಲಸಿರಿಯ ಮೂಲಕ ಸದಾಶಿವನಗರ್ ವ್ಯಾಪ್ತಿಯಲ್ಲಿ ನೀರಿನ ಸಂಪರ್ಕ ಲಭ್ಯವಾಗಿದೆ. ಒಂದು ಭಾಗದಲ್ಲಿ ತಗ್ಗಾದ ಪ್ರದೇಶ ಬಡಾವಣೆ ಇರುವುದರಿಂದ ನೀರು ಮನೆ ಮನೆ ತಲುಪುತ್ತಿದೆ. ಬಂಟರ ಭವನ ಹಾಗೂ ಕೆಲವೆಡೆ ನೀರಿನ ಸಮಸ್ಯೆ ಆಗಾಗ ಕಂಡುಬರುತ್ತಿದೆ ಎನ್ನುತ್ತಾರೆ ಇಲ್ಲಿ ನಿವಾಸಿ ಶ್ರೀಕಾಂತ್ ಸಾಲಿಯಾನ್ ಗುಡ್ಡೆ ಕೊಪ್ಲ ಅವರು.

ವಾರ್ಡ್ ನಂಬರ್ 7 ಇಡ್ಯಾ (ಪಶ್ಚಿಮ)

ನಾಳೆ ವಾರ್ಡ್ - 8 ಹೊಸಬೆಟ್ಟುವಿನ ಸ್ಥಿತಿಗತಿ

ಯುದ್ಧ ಸಂಬಂಧ ಕೈ ರಾಜಕೀಯ

ಪುಟ ೧➡ ಆದರೆ ಒಂದು ವಿಚಾರ ನೆನಪಿಡಿ, ಇಂದಿನ ಭಾರತ ವಿದೇಶಗಳಲ್ಲಿ ಸಿಲುಕಿಕೊಂಡಿರುವ ಭಾರತೀಯರನ್ನು ನಿರ್ಲಕ್ಷಿಸುವ ಭಾರತವಲ್ಲ. ಇಂದೀಗ ದೇಶವಾಳುತ್ತಿರುವುದು ಬಿಜೆಪಿ-ಎನ್‌ಡಿಎ. ನಮ್ಮ ಸಹ ಪ್ರಜೆಗಳು ಎಲ್ಲೇ ಸಂಕಷ್ಟಕ್ಕೆ ಸಿಲುಕಿದರೂ ನಮ್ಮ ಸಂಪೂರ್ಣ ಶಕ್ತಿ ಬಳಸಿ ಅವರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆಸಿಕೊಂಡೇ ಸಿದ್ಧ ಎಂದು ಪ್ರಧಾನಿ ಮೋದಿ ಭರವಸೆ ನೀಡಿದರು. ಕೊಲ್ಲಿ ರಾಷ್ಟ್ರಗಳ ಸರಕಾರಗಳು ನಮ್ಮ ಪ್ರಜೆಗಳನ್ನು ಸಂರಕ್ಷಿಸುತ್ತಿರುವುದಕ್ಕೆ ತಾನು ಆಭಾರಿ. ನಮ್ಮ ಭಾರತೀಯ ದೂತಾವಾಸಗಳೂ ಅಹರ್ನಿಶಿ ನೆಲೆಯಲ್ಲಿ ಭಾರತೀಯರಿಗೆ ನೆರವಾಗುತ್ತಿವೆ. ಆಹಾರ, ಔಷಧ, ಕಾನೂನು ನೆರವು ಹೀಗೆ ಎಲ್ಲವನ್ನೂ ನಮ್ಮ ಪ್ರಜೆಗಳಿಗೆ ಒದಗಿಸಲಾಗುತ್ತಿದೆ. ವಾಸ್ತವ ಇದಾಗಿದ್ದರೂ ಕಾಂಗ್ರೆಸ್ ಇಂತಹ ಜಾಗತಿಕ ಬಿಕ್ಕಟ್ಟಿನ ವಿಚಾರದಲ್ಲೂ ರಾಜಕೀಯ ಮಾಡುತ್ತಿರುವುದು ತೀರಾ ದುರದೃಷ್ಟಕರ. ಸನ್ನಿವೇಶವನ್ನು ಮತ್ತಷ್ಟು ಹದಗೆಡಿಸುವ ಮತ್ತು ಜನರನ್ನು ಸಂಕಷ್ಟಕ್ಕೆ ನೂಕುವಂತಹ ಆರೋಪಗಳನ್ನು ಕಾಂಗ್ರೆಸ್ ಮಾಡುತ್ತಿರುವುದು ಸರಿಯಲ್ಲ. ಇದರಿಂದ ಸಂತ್ರಸ್ತ ಜನರು ಕಟ್ಟಕಡೆಗೆ ನನ್ನನ್ನು ದೂರುವಂತಾಗಬೇಕು ಎಂಬುದು ಕಾಂಗ್ರೆಸ್‌ನ ತಂತ್ರವೆಂದು ಪ್ರಧಾನಿ ಮೋದಿ ಆರೋಪಿಸಿದರು.


ಯುವರಾಜನಿಗೆ ಗೊತ್ತೇ ಇಲ್ಲ: ಕಾಂಗ್ರೆಸ್‌ನ ಯುವರಾಜನಿಗೆ ದೇಶದಲ್ಲಿ ಸಾಕಾರಗೊಳ್ಳುತ್ತಿರುವ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಗೊತ್ತೇ ಇಲ್ಲ. ಕೇರಳಸಹಿತ ಭಾರತದ ವಿವಿಧ ಕಂಪನಿಗಳು ಮತ್ತು ಯುವಶಕ್ತಿ ಡ್ರೋನ್ ಉತ್ಪಾದನೆಯಲ್ಲಿ ತೊಡಗಿರುವುದು, ಕೇರಳಮ್‌ನ ಯುವಕರು ಕೂಡ ಡ್ರೋನ್ ಸ್ಟಾರ್ಟ್‌ಅಪ್‌ಗಳನ್ನು ನಿರ್ಮಿಸುತ್ತಿರುವ ಸಾಧನೆ ಕೂಡ ಈ ಯುವರಾಜನಿಗೆ ಅರಿಯದ್ದು ವಿಪರ್ಯಾಸ. ಸಣ್ಣ ವೃತ್ತಕ್ಕೆ ಸೀಮಿತವಾದ ಯುವರಾಜನಿಗೆ ಭಾರತದ ಪ್ರಗತಿ ಖಂಡಿತ ಅರ್ಥವಾಗುವುದಿಲ್ಲ, ಕಾಣುವುದಿಲ್ಲ ಎಂದು ಕಟುವಾಗಿ ಟೀಕಿಸಿದರು. ಭಾರತ ಮಾತ್ರ ಚೀನಾಗೆ ಪೈಪೋಟಿ ನೀಡಬಲ್ಲ ರಾಷ್ಟ್ರ. ಆದರೆ ಇಲ್ಲಿ ಸರಿಯಾದ ನೀತಿಗಳೇ ಇಲ್ಲ. ಚೀನಾ ಡ್ರೋನ್ ಉತ್ಪಾದನಾ ರಂಗದಲ್ಲಿ ಮುಂಚೂಣಿಯಲ್ಲಿದ್ದು ಹಿಡಿತ ಸಾಧಿಸುತ್ತಿದೆ. ಭಾರತದ ಸಾಧನೆ ಸಾಲದು ಎಂದು ರಾಹುಲ್ ತಿರುವನಂತಪುರದಲ್ಲಿ ಈಚೆಗೆ ಕಾರ್ಯಕ್ರಮವೊಂದರಲ್ಲಿ ನೀಡಿದ ಅಸಂಬದ್ಧ ಹೇಳಿಕೆಗೆ ಪ್ರತಿಯಾಗಿ ಪ್ರಧಾನಿ ಮೋದಿ ತೀಕ್ಷ್ಣ ತಿರುಗೇಟು ನೀಡಿದ್ದಾರೆ.

ಅಪರಾಧಗಳಲ್ಲಿ ಪಾಲುದಾರರು: ಶಬರಿಮಲೆಯ ಗರ್ಭಗುಡಿಯ ದ್ವಾರಪಾಲಕ ವಿಗ್ರಹಗಳ ಬಂಗಾರ ಕಳವಾದ ಪ್ರಕರಣದಲ್ಲಿ ಆಳುವ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗಳನ್ನು ತರಾಟೆಗೆತ್ತಿಕೊಂಡ ಪ್ರಧಾನಿ ಮೋದಿ, ಇವೆರಡೂ ಕೂಟಗಳು ಭ್ರಷ್ಟಾಚಾರ, ಕೋಮುವಾದಿ ರಾಜನೀತಿ ಸಹಿತ ಅಪರಾಧ ಕೃತ್ಯಗಳಲ್ಲಿ ಪಾಲುದಾರರಿದ್ದು, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು, ಉದ್ದಿಮೆಗಳ ಸ್ಥಾಪನೆ ಸಾಕಾರಗೊಳ್ಳದಂತೆ ತಡೆದಿವೆ ಎಂದು ಆರೋಪಿಸಿದರು. ಶಬರಿಮಲೆ ದೇಗುಲದ ಬಂಗಾರ ಅಪಹರಣದಲ್ಲಿ ಇವೆರಡೂ ಕೂಟಗಳು ಪಾಲುದಾರರು. ಎಲ್‌ಡಿಎಫ್ ನಾಯಕರು ದೇಗುಲದ ಬಂಗಾರ ಸುಲಿಗೆ ಮಾಡಿದ ಆರೋಪವಿದೆ. ಇದೇ ವೇಳೆ ಸುಲಿಗೆ ಮಾಡಿದ ಬಂಗಾರವನ್ನು ವಿಕ್ರಯಿಸಿದ ಆರೋಪ ಯುಡಿಎಫ್ ಮೇಲಿದೆ ಎಂದು ಆಪಾದಿಸಿದರು. ಚುನಾವಣಾ ಹೊಸ್ತಿಲಲ್ಲಿರುವ ಕೇರಳದಲ್ಲಿ ಸಾರ್ವಜನಿಕ ರ್‍ಯಾಲಿ ಉದ್ದೇಶಿಸಿ ಪ್ರಧಾನಿ ಮಾತನಾಡಿದರು. ಈ ಬಾರಿ ಕೇರಳದಲ್ಲಿ ಬಿಜೆಪಿ ಜಯಭೇರಿ ಬಾರಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಕೇರಳೀಯರ ಬೇಡಿಕೆ ಈಡೇರಿಸಿದ್ದೇವೆ

ಪುಟ ೧➡ ಮೀನುಗಾರ ಸಮುದಾಯದ ಹಕ್ಕುಗಳ ಸಂರಕ್ಷಣೆಗಾಗಿ ಧೀವರ ಸಭಾ ಕಳೆದ ಐದು ದಶಕಗಳಿಂದ ಅವಿರತ ಶ್ರಮಿಸಿದೆ. 50 ವರ್ಷಗಳ ಹೋರಾಟದ ಯಾನದುದ್ದಕ್ಕೂ ತಮ್ಮ ಅದಮ್ಯ ಸಮರ್ಪಣಾ ಭಾವ ಮತ್ತು ಸೇವಾಭಾವವನ್ನು ಸಭಾದ ಸದಸ್ಯರು ಮೆರೆದಿದ್ದಾರೆಂದು ಪ್ರಧಾನಿ ಮೋದಿ ಪ್ರಶಂಸಿಸಿದರು. ಅಖಿಲ ಕೇರಳ ಧೀವರ ಸಭಾದ ಸ್ವರ್ಣ ಮಹೋತ್ಸವವನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿದರು.

ರಾಮಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪೋಲೀಸರೇ ಲಂಚ ಪಡೆಯುವಾಗ ಲೋಕಾಯುಕ್ತರಿಗೆ ಸಿಕ್ಕಿಬಿದ್ದಿರುವುದು ಮುಜುಗರದ ಸಂಗತಿ – ಡಾ/ಜಿ.ಪರಮೇಶ್ವರ್
- ಇನ್ನು ಮುಂದಾದರೂ ಸಿಕ್ಕಿ ಬೀಳದಂತೆ ಲಂಚ ಪಡೆಯುವ ಕಲೆಯನ್ನು ಅವರು ಕಲಿಯಬೇಕಾಗಿದೆ!

ದಿನ ಭವಿಷ್ಯ

ಮೇಷ ವೃತ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ದಂಪತಿ ನಡುವಿನ ವಿರಸ ಶಮನಕ್ಕೆ ನಿಧಾನಗತಿ ಹಿಡಿದೀತು. ಬಿಕ್ಕಟ್ಟಿನಲ್ಲಿ ಮೌನಧಾರಣೆ ಒಳ್ಳೆಯದಾದೀತು.

ವೃಷಭ ಚಿಂತೆ ತಂದ ವಿಷಯವೊಂದು ಇಂದು ಇತ್ಯರ್ಥ ಕಾಣಲಿದೆ. ಹಿರಿಯರ ಮಾತಿಗೆ ಪ್ರತಿಯಾಡದಿರಿ. ಹಣದ ಕೊರತೆ ನೀಗುವುದು.

ಮಿಥುನ ನಿರೀಕ್ಷಿಸಿದ್ದಕ್ಕಿಂತ ಹೆಚ್ಚೇ ಒಳ್ಳೆಯ ಬೆಳವಣಿಗೆ. ಇದರಿಂದ ಮನಸ್ಸಿಗೆ ಉಲ್ಲಾಸ. ಆತ್ಮೀಯರ ಜತೆ ಸಂತೋಷ ಹಂಚಿಕೊಳ್ಳಲು ತುಡಿತ. ಧನಪ್ರಾಪ್ತಿ.

ಕಟಕ ನಿರಾಶೆ ಬಿಡಿ, ಇಂದು ನಿಮಗೆ ಒಳ್ಳೆಯದಾಗುವ ಕಾಲ. ಚಿಂತೆ ಪರಿಹಾರ, ಆಕಾಂಕ್ಷೆ ಈಡೇರಿಕೆ. ಪ್ರೀತಿಯಲ್ಲಿ ಯಶಸ್ಸು, ಪೂರಕ ಸ್ಪಂದನೆ.

ಸಿಂಹ ವೃತ್ತಿಯಲ್ಲಿ ಬಯಸಿದ ಬೆಳವಣಿಗೆ. ನಿಮ್ಮ ದೃಢತೆ ಮೆಚ್ಚುಗೆಗೆ ಪಾತ್ರವಾಗಲಿದೆ. ಹೊಸ ವಾಹನ ಖರೀದಿಗೆ ಕಾಲ ಕೂಡಿಬರಲಿದೆ.

ಕನ್ಯಾ ನಿಮ್ಮ ಕೌಶಲದ ಕೆಲಸಕ್ಕೆ ಮೆಚ್ಚುಗೆ. ವೃತ್ತಿಯ ಸ್ಪರ್ಧೆಯಲ್ಲಿ ಗೆಲ್ಲುವಿರಿ. ದಂಪತಿ ಮಧ್ಯೆ ಅನವಶ್ಯ ಜಗಳವಾದೀತು. ಹೊಂದಾಣಿಕೆಯಿರಲಿ.

ತುಲಾ ವೃತ್ತಿಯಲ್ಲಿ ಹೊಸ ಯೋಜನೆ ಅಳವಡಿಸಲು ಸಕಾಲ. ಒತ್ತಡವು ನಿಮ್ಮ ಏಕಾಗ್ರತೆಗೆ ಭಂಗ ತಂದೀತು. ಏಕಾಂಗಿಗಳಿಗೆ ವಿವಾಹ ಬಂಧ ಸಂಭವ.

ವೃಶ್ಚಿಕ ಹೊಸತನಕ್ಕೆ ತುಡಿಯುವಿರಿ. ಜೀವನಶೈಲಿ ಬದಲಿಸಲು ಮನಸ್ಸು ಮಾಡಿ. ಪ್ರಗತಿಗೆ ಅಡ್ಡಿ ಬರುವುದನ್ನು ತ್ಯಜಿಸಿರಿ. ಧನವ್ಯಯ.

ಧನು ಇತರರ ಜತೆ ಮಾತನಾಡುವಾಗ ಎಚ್ಚರ ವಹಿಸಿ. ಹದತಪ್ಪಿದ ಮಾತು ದೊಡ್ಡ ಜಗಳಕ್ಕೆ ಕಾರಣವಾದೀತು. ಕೌಟುಂಬಿಕ ಬಿಕ್ಕಟ್ಟು.

ಮಕರ ಅನಪೇಕ್ಷಿತ ಘಟನೆಯ ಕಾರಣದಿಂದ ವಿಶ್ವಾಸದಲ್ಲಿ ಕೊರತೆ. ನಿಮ್ಮ ಸಾಧನೆಗೆ ತೃಪ್ತಿ ಪಡಿ. ಸಾಧ್ಯವಾಗದ್ದಕ್ಕೆ ಕೊರಗುತ್ತಾ ಕೂರದಿರಿ.

ಕುಂಭ ನಿಮ್ಮ ಕಾರ್ಯಕ್ಕೆ ಮೆಚ್ಚುಗೆ ಪಡೆಯುವಿರಿ. ಆತ್ಮೀಯರ ಸ್ನೇಹ ಕಡಿದುಕೊಳ್ಳದಿರಿ. ಸಣ್ಣ ವಿಷಯವನ್ನು ದೊಡ್ಡದು ಮಾಡದಿರಿ.

ಮೀನ ಮನಸ್ಸಿನ ಶಾಂತಿ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಚಾರಕ್ಕೆ ಜಗಳ ಮಾಡಬೇಡಿ. ಎಲ್ಲರ ಜತೆ ಹೊಂದಾಣಿಕೆಯಿರಲಿ. ಮಕ್ಕಳ ಸಾಧನೆ ತೃಪ್ತಿಕರ.

ರಾಹುಕಾಲ: 1.30–3.00
ಗುಳಿಕಕಾಲ: 9.00–10.30

ಅದೃಷ್ಟ ಸಂಖ್ಯೆ: 7,5,0,9

ಅಭಾವ ಸ್ವಭಾವ ಬೇಡ

ಪುಟ ೧➡ ಇಸ್ರೇಲ್–ಇರಾನ್ ಯುದ್ಧದ ಪರಿಣಾಮ ಕಚ್ಚಾತೈಲವನ್ನು ಹೊತ್ತು ತರುವ 10 ಹಡಗುಗಳು ಅಲ್ಲಿ ಸಿಲುಕಿಕೊಂಡಿವೆ. ಇದರಿಂದ ಬಿಕ್ಕಟ್ಟು ಎದುರಾಗಿದೆ. ಇದು ಯುದ್ಧದ ಸಮಯ, ಇಂತಹ ಸಂದರ್ಭದಲ್ಲಿ ಗ್ರಾಹಕರು ಮಿತ ಬಳಕೆ ಮಾಡಬೇಕು, ಅಡುಗೆ ಅನಿಲ ವ್ಯರ್ಥ ಮಾಡಬಾರದು ಎಂದು ಮನವಿ ಮಾಡಿದರು.

ಭಾರತ್ ಪೆಟ್ರೋಲಿಯಂ, ಹಿಂದೂಸ್ತಾನ್ ಪೆಟ್ರೋಲಿಯಂ, ಇಂಡಿಯನ್ ಆಯಿಲ್ ಸಹಿತ ಇತರೆ ತೈಲ ಸರಬರಾಜು ಕಂಪನಿಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ಅಡುಗೆ ಅನಿಲ ಸರಬರಾಜು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗಿದೆ. ಸಭೆಯಲ್ಲಿ ಒಂದು ತಿಂಗಳಿಗೆ ಒಂದು ಕುಟುಂಬಕ್ಕೆ ಒಂದು ಸಿಲಿಂಡರ್ ಕೊಡಲು ತೀರ್ಮಾನ ಮಾಡಲಾಗಿದೆ. ಕನಿಷ್ಠ 4–5 ಸದಸ್ಯರಿರುವ ಒಂದು ಕುಟುಂಬಕ್ಕೆ 14 ಕೆ.ಜಿ. ಅಡುಗೆ ಅನಿಲ ಸಿಲಿಂಡರ್ ಒಂದರಿಂದ ಒಂದು ಕಾಲು ತಿಂಗಳು ಬಳಕೆಗೆ ಲಭ್ಯವಾಗುತ್ತದೆ. ಇಂಥ ಗಂಭೀರವಾದ ಪರಿಸ್ಥಿತಿಯಲ್ಲಿಯೂ ಒಂದು ಕುಟುಂಬ ಒಂದು ತಿಂಗಳಲ್ಲಿ ಒಂದು ಸಿಲಿಂಡರ್ ಪಡೆದುಕೊಳ್ಳಬಹುದು ಎಂದು ವಿವರಿಸಿದರು.

ಹೋಟೆಲ್, ಕಲ್ಯಾಣ ಮಂಟಪಗಳಿಗಿಲ್ಲ ಸಿಲಿಂಡರ್: ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಮೇಲೆ ಕೊಂಚ ಮಟ್ಟಿಗೆ ನಿಯಂತ್ರಣ ಹೇರಲಾಗಿದೆ. ಹೋಟೆಲ್, ಕಲ್ಯಾಣ ಮಂಟಪಗಳಲ್ಲಿ ಹಾಗೂ ಇತರೆ ಅನಗತ್ಯ ಬಳಕೆಗೆ ಕಡಿವಾಣ ಹಾಕಲಾಗಿದೆ. ಇದು ತಾತ್ಕಾಲಿಕ ನಿರ್ಬಂಧವೇ ಆಗಿದೆ.

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಶಾಲೆ-ಹಾಸ್ಟೆಲ್‌ಗಳು, ಆಸ್ಪತ್ರೆಗಳು ಮತ್ತು ತುರ್ತು ಸೇವೆಗಳಿಗೆ ಸರಬರಾಜು ಮಾಡಲಾಗುತ್ತದೆ. ಗ್ಯಾಸ್ ಬೇಡಿಕೆ ಹೆಚ್ಚಿರುವ ನೆಪ ಇಟ್ಟುಕೊಂಡು ಅಕ್ರಮವಾಗಿ ದಿನಬಳಕೆಯ ಅಡುಗೆ ಅನಿಲ ಸಿಲಿಂಡರ್ ಅಥವಾ ವಾಣಿಜ್ಯ ಬಳಕೆಯ ಸಿಲಿಂಡರ್ ಯಾರಾದರೂ ಅಕ್ರಮವಾಗಿ ದಾಸ್ತಾನು, ಶೇಖರಣೆ ಮಾಡಿದರೆ ಮುಲಾಜಿಲ್ಲದೆ, ಕಾನೂನು ರೀತಿ ಪ್ರಕರಣ ದಾಖಲಿಸುತ್ತೇವೆ ಎಂದು ಸಚಿವರು ಎಚ್ಚರಿಕೆ ನೀಡಿದರು. ಸದ್ಯ ಸಿಲಿಂಡರ್ ಬಳಕೆ ಮಾರ್ಗಸೂಚಿ ಮತ್ತು ಇತರೆ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕಾರ್ಯದರ್ಶಿ ನೇತೃತ್ವದಲ್ಲಿ ವಾರಕ್ಕೊಮ್ಮೆ ಸಭೆ ನಡೆಸಲಾಗುವುದು ಎಂದು ಸಚಿವ ಮುನಿಯಪ್ಪ ತಿಳಿಸಿದರು.

ಸದನದಲ್ಲಿ ಅಡುಗೆ ಅನಿಲ ವಾಗ್ಯುದ್ಧ

ಪುಟ ೧➡ ಇನ್ನೊಂದೆಡೆ ಆಡಳಿತ ಪಕ್ಷದ ಸದಸ್ಯರು, ಸಚಿವರು ಕೂಡ ಎದ್ದು ನಿಂತಿದ್ದರಿಂದ ಆರೋಪ, ಪ್ರತ್ಯಾರೋಪ ಮುಂದುವರಿಯಿತು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಗದ್ದಲ ನಿಯಂತ್ರಣಕ್ಕೆ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಸಚಿವ ಪ್ರಿಯಾಂಕ್ ಖರ್ಗೆ, ಸಂಸತ್ತಿನಲ್ಲಿ ಕೇಂದ್ರ ಸರ್ಕಾರ ಸುಳ್ಳು ಮಾಹಿತಿ ನೀಡಿದೆ. ಅಡುಗೆ ಅನಿಲ ಪೂರೈಸುವ ಯೋಗ್ಯತೆಯಿಲ್ಲ ಎಂದು ಹೇಳಿದಾಗ ಪ್ರತಿಪಕ್ಷ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಶಾಸಕ ಸುನೀಲ್ ಕುಮಾರ್, ಯುದ್ಧದ ಸಂದರ್ಭವಾದ್ದರಿಂದ ರಾಜಕಾರಣ ಮಾಡಬಾರದು ಎಂದರು. ಈ ಸರ್ಕಾರಕ್ಕೆ ಇಷ್ಟು ವರ್ಷಗಳಲ್ಲಿ ಸರ್ವರ್ ಸಮಸ್ಯೆ ಬಗೆಹರಿಸಲು ಯೋಗ್ಯತೆ ಇಲ್ಲ. ಕಳೆದ ಆರು ತಿಂಗಳಿಂದ ಕರಾವಳಿಯಲ್ಲಿ ಮರಳು ದೊರೆಯುತ್ತಿಲ್ಲ. ಅದನ್ನು ಪರಿಹರಿಸಲು ಯೋಗ್ಯತೆಯಿಲ್ಲ. ಆಸ್ಪತ್ರೆಗಳಲ್ಲಿ ಔಷಧ ಕೊರತೆಯನ್ನು ನೀಗಿಸಲು ಯೋಗ್ಯತೆಯಿಲ್ಲ. ಸರ್ಕಾರಿ ನೌಕರರಿಗೆ ವೇತನ ಕೊಡಲು ಯೋಗ್ಯತೆ ಇಲ್ಲ. ಯುದ್ಧ ನಡೆಯುತ್ತಿರುವಾಗ ಹೇಗಿರಬೇಕೆಂಬುದನ್ನು ಕಾಂಗ್ರೆಸ್ಸಿನವರಿಗೆ ಕಲಿಸಬೇಕು ಎಂದು ಸುನೀಲ್ ಕುಮಾರ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ದಿಢೀರ್ ಬೇಡಿಕೆಯಿಂದ ಅಭಾವ

ಪುಟ ೧➡ **ಸರ್ವರ್ ಡೌನ್:** ಒಂದೇ ಸಮಯದಲ್ಲಿ ನೂರಾರು ಗ್ರಾಹಕರು ಸಿಲಿಂಡರ್ ಬುಕ್ಕಿಂಗ್ ಮಾಡಲು ಕರೆಮಾಡುತ್ತಿದ್ದಾರೆ. ಇದರಿಂದ ಸರ್ವರ್ ಡೌನ್ ಉಂಟಾಗಿದ್ದು, ಇದರ ಪರಿಣಾಮ ಸಿಲಿಂಡರ್ ಬುಕ್ಕಿಂಗ್‌ನಲ್ಲಿ ತಡವಾಗುತ್ತಿದೆ ಎಂದು ಸಿಲಿಂಡರ್ ವಿತರಕ ಶಂಕರ್ ಹೇಳಿದರು. ಮೊದಲು, ನನಗೆ ಒಂದು ಅಥವಾ ಎರಡು ದಿನಗಳಲ್ಲಿ ಸಿಲಿಂಡರ್ ಸಿಗುತ್ತಿತ್ತು, ಆದರೆ ಈಗ ಬುಕಿಂಗ್ ಮಾಡಿದ ಒಂದು ವಾರದ ನಂತರವೂ ಸಿಲಿಂಡರ್ ಸಿಗುತ್ತಿಲ್ಲ. ಹಾಗಾಗಿ ರಶೀದಿ ಪಡೆಯಲು ನಾನು ಇಲ್ಲಿಗೆ ಬಂದಿದ್ದೇನೆ ಎಂದು ಗ್ರಾಹಕರೊಬ್ಬರು ತಿಳಿಸಿದರು.

ಪ್ರಸಾದ ವಿನಿಯೋಗಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಿ: ರಾಜ್ಯದ 15 ಪ್ರಮುಖ ಮುಜರಾಯಿ ದೇವಸ್ಥಾನಗಳಲ್ಲಿ ಸ್ವಲ್ಪ ಸಮಸ್ಯೆಯಾಗಿದೆ. ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯದ ಬಗ್ಗೆ ಸದನದಲ್ಲಿ ಚರ್ಚೆ ಆಗಿದೆ. ಪ್ರಸಾದ ವಿನಿಯೋಗಕ್ಕೆ ಉಂಟಾಗುತ್ತಿರುವ ಸಮಸ್ಯೆ ಚರ್ಚೆ ಮಾಡಿದ್ದೇವೆ. ತೊಂದರೆ ಆಗದಂತೆ ನೋಡಿಕೊಳ್ಳಲು ಆಡಳಿತ ಮಂಡಳಿಗೆ ತಿಳಿಸಿದ್ದೇವೆ. ದೇಗುಲಕ್ಕೆ ಬಂದು ಪ್ರಸಾದ ಸ್ವೀಕರಿಸಿದರೆ ಮಾತ್ರ ಭಕ್ತರಿಗೆ ಸಮಾಧಾನ. ಹೀಗಾಗಿ ಕಡಿಮೆ ಇಂಧನ ಬಳಸಿ ಪ್ರಸಾದ ತಯಾರಿಕೆ ಬಗ್ಗೆ ನಿರ್ಧಾರ ಮಾಡಿಲ್ಲ. ಪರಿಸ್ಥಿತಿ ನೋಡಿ ಮುಂದೆ ಚರ್ಚೆ ಮಾಡುತ್ತೇವೆ ಎಂದು ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಹೋಟೆಲ್‌ಗಳಲ್ಲಿ ಸೌದೆ ಒಲೆ! ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಕಡಿಮೆಯಾದ ಹಿನ್ನಲೆಯಲ್ಲಿ ಬುಧವಾರ ನಗರದಲ್ಲಿನ ಹಲವು ಹೋಟೆಲ್‌ಗಳಲ್ಲಿ ಸಿಲಿಂಡರ್ ಕೊರತೆಯಾಗಿ ಸೌದೆ ಒಲೆಯಲ್ಲಿ ಅಡುಗೆ ಮಾಡಿದ್ದಾರೆ. ಇನ್ನು ಕೆಲವು ಹೋಟೆಲ್‌ಗಳಲ್ಲಿ ಕಡಿಮೆ ಬಳಕೆಯಲ್ಲಿ ತಯಾರಾಗುವ ತಿನಿಸುಗಳನ್ನು ಮಾತ್ರ ತಯಾರು ಮಾಡಿದ್ದರು.



ಇಂಥ ವಿಚಾರಗಳಲ್ಲಿ ರಾಜಕೀಯ ಮಾಡಬಾರದು. ಪರ್ಯಾಯ ಏನೆಂಬುದನ್ನು ಹೇಳಬೇಕು. ರಾಜ್ಯದ ಮುಖ್ಯಮಂತ್ರಿ ಪ್ರತಿಭಟನೆ, ಧರಣಿ ಮಾಡಿ ಎಂದರೆ ಹೇಗೆ? ಜವಾಬ್ದಾರಿಯುತ ಸ್ಥಾನದಲ್ಲಿ ರುವವರು ಕಾನೂನು ಸುವ್ಯವಸ್ಥೆ ಕಾಪಾಡಬೇಕು.
■ **ಆರ್. ಅಶೋಕ,** ಪ್ರತಿಪಕ್ಷ ನಾಯಕ

ತೈಲ ಮಾರುಕಟ್ಟೆ ಮೇಲೆ ಪರಿಣಾಮ

ಪುಟ ೧➡ ಪರ್ಷಿಯನ್ ಕೊಲ್ಲಿಯಲ್ಲಿ ಸಾಗುತ್ತಿದ್ದ ಕೆಲವು ವಾಣಿಜ್ಯ ಹಡಗುಗಳ ಮೇಲೂ ದಾಳಿ ನಡೆದಿದ್ದು, ಒಮಾನ್ ಸಮುದ್ರದ ಬಳಿ ಸಾಗುತ್ತಿದ್ದ ಥಾಯ್ಲೆಂಡ್ ಕಾರ್ಗೋ ಹಡಗು 'ಮಯುರಿ ನರೀ'ಗೆ ಕ್ಷಿಪಣಿ ತಗುಲಿ ಬೆಂಕಿ ಕಾಣಿಸಿಕೊಂಡಿದೆ. ಹಡಗಿನಲ್ಲಿ ಇದ್ದ 20 ಮಂದಿಯನ್ನು ಒಮಾನ್ ನೌಕಾಪಡೆ ರಕ್ಷಿಸಿದ್ದು, ಮೂವರು ಸಿಬ್ಬಂದಿ ಕಾಣೆಯಾಗಿದ್ದಾರೆ. ಕುವೈತ್ ತನ್ನ ರಕ್ಷಣಾ ವ್ಯವಸ್ಥೆ ಮೂಲಕ ಎಂಟು ಇರಾನಿಯನ್ ಡ್ರೋನ್‌ಗಳನ್ನು ಹೊಡೆದುರುಳಿಸಿದೆ. ಸೌದಿ ಅರೇಬಿಯಾದತ್ತ ಬರುತ್ತಿದ್ದ ಐದು ಡ್ರೋನ್‌ಗಳನ್ನು ಸಹ ಅಡ್ಡಗಟ್ಟಿ ನಾಶಪಡಿಸಲಾಗಿದೆ. ಹಾರ್ಮುಜ್ ಕಣಿವೆಯ ಮೂಲಕ ಸಾಗುವ ತೈಲ ಸಾಗಾಟ ಬಹುತೇಕ ಸ್ಥಗಿತಗೊಂಡಿದ್ದು, ಜಾಗತಿಕ ತೈಲ ಸರಬರಾಜಿನ ಮೇಲೆ ಆತಂಕ ಹೆಚ್ಚಿಸಿದೆ. ಈ ನಡುವೆ ಲೆಬನಾನ್ ಹಾಗೂ ಇರಾನ್‌ನಲ್ಲಿನ ಗುರಿಗಳ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿದೆ. ಲೆಬನಾನ್‌ನಲ್ಲಿ ನಡೆದ ದಾಳಿಗಳಲ್ಲಿ ಕನಿಷ್ಠ 14 ಮಂದಿ ಮೃತಪಟ್ಟಿದ್ದಾರೆ. ಫೆ.28ರಿಂದ ಆರಂಭವಾದ ಸಂಘರ್ಷದಲ್ಲಿ ಲೆಬನಾನ್‌ನಲ್ಲಿ 500ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಜಾಗತಿಕ ಮಾರುಕಟ್ಟೆಗಳಲ್ಲಿ ತೈಲದ ಬೆಲೆಗಳು ಏರಿಕೆಯಾಗಿದ್ದು, ಬ್ರೆಂಟ್ ಕ್ರೂಡ್ ಬೆಲೆ ಯುದ್ಧ ಆರಂಭವಾದ ನಂತರ ಸುಮಾರು ಶೇ.20 ಶೇಕಡಾ ಹೆಚ್ಚಾಗಿದೆ. ಹಾರ್ಮುಜ್ ಕಣಿವೆ ಬಂದ್ ಆಗುವ ಸಾಧ್ಯತೆಗಳಿಂದ ಜಾಗತಿಕ ಆರ್ಥಿಕತೆಯ ಮೇಲೂ ಪರಿಣಾಮ ಬೀರುವ ಭೀತಿ ವ್ಯಕ್ತವಾಗಿದೆ.

ಹಾರ್ಮುಜ್ ಮುಚ್ಚಿದರೆ ಆಹಾರ ಜೀವನ ವೆಚ್ಚ ಹೆಚ್ಚಳ: ವಿಶ್ವಸಂಸ್ಥೆ

ಪುಟ ೧➡ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಇರಾನ್ ಮೇಲಿನ ದಾಳಿಗಳು ಹಾಗೂ ಅದರ ಪ್ರತಿಯಾಗಿ ಟೆಹ್ರಾನ್ ಕೈಗೊಂಡ ಕ್ರಮಗಳು ಪರಿಸ್ಥಿತಿಯನ್ನು ಮತ್ತಷ್ಟು ತೀವ್ರಗೊಳಿಸಿವೆ. ಇದರ ಪರಿಣಾಮವಾಗಿ ಜಾಗತಿಕ ಇಂಧನ ಮಾರುಕಟ್ಟೆ, ಸಾಗಾಣಿಕೆ ವ್ಯವಸ್ಥೆ ಮತ್ತು ಸರಕು ಸರಪಳಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಇಂಧನದ ಬೆಲೆ ಏರಿಕೆ, ರಸಗೊಬ್ಬರ ವೆಚ್ಚ, ಸಾಗಾಣಿಕೆ ದರಗಳು ಹೆಚ್ಚಿದರೆ ಆಹಾರ ಬೆಲೆಗಳೂ ಏರಬಹುದು ಎಂದು ವರದಿ ತಿಳಿಸಿದೆ. ಯುಎನ್‌ಸಿಟಿಎಡಿ ಪ್ರಕಾರ, ಇಂತಹ ಪ್ರಮುಖ ಸಮುದ್ರ ಮಾರ್ಗಗಳು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳಿಗೆ ತುಂಬಾ ಸೂಕ್ಷ್ಮವಾಗಿವೆ. ಈ ಮಾರ್ಗ ದೀರ್ಘಕಾಲ ಮುಚ್ಚಿದರೆ ಅದರ ಪರಿಣಾಮ ಜಾಗತಿಕ ಸರಕು ಸರಪಳಿಗಳು ಮತ್ತು ವಸ್ತು ಮಾರುಕಟ್ಟೆಗಳಲ್ಲಿ ಸ್ಪಷ್ಟವಾಗಿ ಕಾಣಿಸಬಹುದು. ಅದರ ಆರ್ಥಿಕ ಪರಿಣಾಮಗಳು ಎಷ್ಟು ಗಂಭೀರವಾಗಿರುತ್ತವೆ ಎಂಬುದು ಸಂಘರ್ಷದ ಅವಧಿ, ತೀವ್ರತೆ ಮತ್ತು ಅದರ ವ್ಯಾಪ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಈಗಾಗಲೇ ಹೆಚ್ಚಿನ ಸಾಲಭಾರ, ಸೀಮಿತ ಹಣಕಾಸು ಸಾಮರ್ಥ್ಯ ಮತ್ತು ಹಣಕಾಸು ಸೌಲಭ್ಯಗಳ ಕೊರತೆ ಎದುರಿಸುತ್ತಿರುವ ಅಭಿವೃದ್ಧಿಶೀಲ ದೇಶಗಳಿಗೆ ಇದು ಮತ್ತಷ್ಟು ಒತ್ತಡವನ್ನು ಉಂಟುಮಾಡಬಹುದು. ಇಂಧನ, ಸಾರಿಗೆ ಮತ್ತು ಆಹಾರ ವೆಚ್ಚಗಳು ಹೆಚ್ಚಿದರೆ ಸರ್ಕಾರಗಳ ಹಣಕಾಸು ಸ್ಥಿತಿ ಹಾಗೂ ಜನರ ದಿನನಿತ್ಯದ ಖರ್ಚುಗಳ ಮೇಲೂ ಪರಿಣಾಮ ಬೀರುತ್ತದೆ. ತೈಲದ ಬೆಲೆ ಏರಿದರೆ ಸಾಮಾನ್ಯವಾಗಿ ಆಹಾರ ಬೆಲೆಗಳೂ ಏರುತ್ತವೆ. ಅನಿಲದ ಬೆಲೆ ಹೆಚ್ಚಿದರೆ ರಸಗೊಬ್ಬರದ ಬೆಲೆಗಳೂ ಹೆಚ್ಚುತ್ತವೆ ಎಂದು ವರದಿ ಎಚ್ಚರಿಸಿದೆ. ಯುದ್ಧ ಮುಂದುವರಿದಷ್ಟು ಕಾಲ ಈ ಸಮುದ್ರ ಮಾರ್ಗವನ್ನು ಬಂದ್ ಮಾಡುತ್ತೇವೆ ಎಂದು ಇರಾನ್ ಹೇಳಿದೆ.

ನಿಷ್ಕ್ರಿಯ ದಯಾಮರಣಕ್ಕೆ ಸುಪ್ರೀಂ ಸಮ್ಮತಿ

ಪುಟ ೧➡ **ಕಾನೂನು ನಿರ್ದೇಶನಗಳು:** ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಕೆ.ವಿ. ವಿಶ್ವನಾಥನ್ ಅವರ ಪೀಠ, ರಾಣಾ ಅವರನ್ನು ಪಾಲಿಯೇಟಿವ್ ಕೇರ್ ವಿಭಾಗಕ್ಕೆ ದಾಖಲಿಸುವಂತೆ ದಿಲ್ಲಿ ಏಮ್ಸ್‌ಗೆ ನಿರ್ದೇಶನ ನೀಡಿದೆ. ರೋಗಿಯ ಘನತೆಯನ್ನು ಕಾಪಾಡುವ ಸಲುವಾಗಿ ಅತ್ಯಂತ ಮಾನವೀಯ ರೀತಿಯಲ್ಲಿ ಜೀವದಾನ ವ್ಯವಸ್ಥೆ ಹಿಂಪಡೆಯಬೇಕು, ಎಂದು ಒತ್ತಿಹೇಳಲಾಗಿದೆ. ಈ ತೀರ್ಪು 2018ರ 'ಕಾಮನ್ ಕಾಸ್' ತೀರ್ಪಿಗೆ ಅನುಗುಣವಾಗಿದ್ದು, 21ನೇ ವಿಧಿಯಲ್ಲಿ ಗೌರವಯುತವಾಗಿ ಸಾಯುವ ಹಕ್ಕನ್ನು ಮೂಲಭೂತ ಹಕ್ಕೆಂದು ಗುರುತಿಸಲಾಗಿದೆ.

ಭವಿಷ್ಯದ ಮಾರ್ಗಸೂಚಿಗಳು: ನಿಷ್ಕ್ರಿಯ ದಯಾಮರಣಕ್ಕೆ ಸಂಬಂಧಿಸಿದಂತೆ ಸಮಗ್ರ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಲಾಗಿದೆ. ಅಲ್ಲದೆ, ಭವಿಷ್ಯದಲ್ಲಿ ನ್ಯಾಯಾಂಗದ ಹಸ್ತಕ್ಷೇಪದ ಅಗತ್ಯ ಕಡಿಮೆ ಮಾಡಲು, ಎರಡನೇ ಹಂತದ ವೈದ್ಯಕೀಯ ಮಂಡಳಿಗಳನ್ನು ರಚಿಸಲು ಅನುಕೂಲವಾಗುವಂತೆ ಎಲ್ಲಾ ಜಿಲ್ಲೆಗಳ ಮುಖ್ಯ ವೈದ್ಯಕೀಯ ಅಧಿಕಾರಿಗಳು ನೋಂದಾಯಿತ ವೈದ್ಯರ ಸಮಿತಿ ರಚಿಸುವಂತೆ ಸರ್ವೋಚ್ಚ ನ್ಯಾಯಾಲಯ ಸೂಚನೆ ನೀಡಿದೆ.

ಭಾವುಕರಾಗಿ ಕಣ್ಣೀರಿಟ್ಟ ನ್ಯಾ.ಪರ್ದಿವಾಲ

ತೀರ್ಪು ನೀಡುವಾಗ ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಅವರು ಭಾವುಕರಾಗಿ ಕಣ್ಣೀರು ಹಾಕಿದ್ದಾರೆ. ಈ ವೇಳೆ ಹರೀಶ್ ರಾಣಾ ಪೋಷಕರನ್ನುದ್ದೇಶಿಸಿ ಮಾತನಾಡಿದ ಅವರು, ನೀವು ನಿಮ್ಮ ಮಗನನ್ನು ಕೈಬಿಡುತ್ತಿಲ್ಲ. ಬದಲಾಗಿ ಅವನಿಗೆ ಘನತೆಯಿಂದ ಈ ಲೋಕದಿಂದ ನಿರ್ಗಮಿಸಲು ದಾರಿ ಮಾಡಿಕೊಡುತ್ತಿದ್ದೀರಿ. ಇದು ಕರುಣೆ ಮತ್ತು ಧೈರ್ಯದ ಕೆಲಸ ಎಂದು ಕಣ್ಣೀರು ಹಾಕಿದ್ದಾರೆ. ನಮ್ಮ ನಿರ್ಧಾರ ಕೇವಲ ಕಾನೂನಿನ ತರ್ಕವಲ್ಲ, ಇದು ಪ್ರೀತಿ, ವೈದ್ಯಕೀಯ ವಿಜ್ಞಾನ ಮತ್ತು ಮಾನವೀಯತೆಯ ಸಂಗಮವಾಗಿದೆ ಎಂದು ಹೇಳಿದರು.

ಅನಾಥ ಮಕ್ಕಳ ರಕ್ಷಣೆಗಾಗಿ ರೈಲ್ವೆ ಆಪರೇಷನ್ ನನ್ಹೇ

▸ ಅನುಷಾ ಕೆ.

• **ಬೆಂಗಳೂರು:** ರೈಲ್ವೆ ಆಸ್ತಿಯ ರಕ್ಷಣೆಯೊಂದಿಗೆ ಪ್ರಯಾಣಿಕರ ಸುರಕ್ಷತೆ ಒದಗಿಸುವ ಸಲುವಾಗಿ ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿದ್ದಾರೆ. ಮನೆಬಿಟ್ಟು ಓಡಿಬಂದ ಮಕ್ಕಳು, ಅನಾಥ ಮಕ್ಕಳನ್ನು ರಕ್ಷಿಸುವ ಮೂಲಕ ಮಾನವೀಯತೆ ಮೆರೆಯುತ್ತಿದ್ದಾರೆ.

ಯಾವುದೋ ಕಾರಣಕ್ಕೆ ಮನೆ ಬಿಟ್ಟು ಓಡಿ ಬಂದ ಮಕ್ಕಳು, ಪೋಷಕರಿಂದ ತಪ್ಪಿಸಿಕೊಂಡ ಮಕ್ಕಳು ಯಾವುದೇ ನೆಲಯಿಲ್ಲದೆ ಅನಾಥರಂತೆ ರೈಲ್ವೆ ನಿಲ್ದಾಣದಲ್ಲಿ ಅಲೆದಾಡುತ್ತಿರುತ್ತಾರೆ. ಅಂತಹ ಮಕ್ಕಳನ್ನು ರಕ್ಷಿಸಿ, ಆ ಮಕ್ಕಳನ್ನು ಮರಳಿ ಪೋಷಕರ ಮಡಿಲು ಸೇರಿಸುವುದರೊಂದಿಗೆ ಮಾನವ ಕಳ್ಳಸಾಗಾಣಿಕೆಯಾಗುವುದನ್ನು ತಡೆಯುವಲ್ಲಿ ಆರ್‌ಪಿಎಫ್ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ರೈಲ್ವೆ ನಿಲ್ದಾಣದಲ್ಲಿ ಪೋಷಕರಿಂದ ತಪ್ಪಿಸಿಕೊಂಡು ಹಲವು ಮಕ್ಕಳು ತಮ್ಮ ಕುಟುಂಬಗಳಿಂದ ಅನಿವಾರ್ಯವಾಗಿ ದೂರವಾಗಿ ಬಿಡುತ್ತಾರೆ. ಅಂತಹ ಸಂದರ್ಭದಲ್ಲಿ ಪ್ರಯಾಣಿಕರಿಗೆ ಅನುಮಾನಕ್ಕೆ ಆಸ್ಪದವೇ ಇಲ್ಲದಂತೆ ಚಾಣಾಕ್ಷತನದಿಂದ ಕೆಲವರು ಇಂತಹ ಅನಾಥ ಮಕ್ಕಳನ್ನು ಹಣಕ್ಕಾಗಿ ಕಳ್ಳಸಾಗಾಣಿಕೆ ಮಾಡಲು ಯತ್ನಿಸುತ್ತಾರೆ.

ಹೀಗೆ ಕಳ್ಳಸಾಗಾಣಿಕೆಯಾಗುವ ಮಕ್ಕಳನ್ನು ಪತ್ತೆ ಹಚ್ಚುವ ಸಲುವಾಗಿ ಆರ್‌ಪಿಎಫ್ ಸಿಬ್ಬಂದಿ ಎನ್‌ಜಿಒಗಳ ಸಹಯೋಗದಲ್ಲಿ ಆಪರೇಷನ್ ನನ್ಹೇ ಎನ್ನುವ ವಿಶೇಷ ಕಾರ್ಯಾಚರಣೆ ಕೈಗೊಂಡು ಮಕ್ಕಳನ್ನು ಮರಳಿ ಪೋಷಕರ ಮಡಿಲಿಗೆ ಸೇರಿಸುತ್ತಾರೆ.

ನೈಋತ್ಯ ರೈಲ್ವೆಯ ಮೈಸೂರು, ಬೆಂಗಳೂರು ಹಾಗೂ ಹುಬ್ಬಳ್ಳಿ ಮೂರು ವಿಭಾಗದಲ್ಲಿ 2023ರಲ್ಲಿ ಒಟ್ಟು 406 ಇಂತಹ ಮಕ್ಕಳನ್ನು ರಕ್ಷಿಸಲಾಗಿದೆ. ಇವುಗಳಲ್ಲಿ ಮೈಸೂರಿನಲ್ಲಿ 56 ಗಂಡುಮಕ್ಕಳು, 13 ಹೆಣ್ಣು ಮಕ್ಕಳು, ಬೆಂಗಳೂರಿನಲ್ಲಿ 187 ಗಂಡುಮಕ್ಕಳು, 50 ಹೆಣ್ಣು ಮಕ್ಕಳು, ಹುಬ್ಬಳ್ಳಿಯಲ್ಲಿ 83 ಗಂಡು ಮಕ್ಕಳು, 17 ಹೆಣ್ಣು ಮಕ್ಕಳು ಸೇರಿದಂತೆ ಒಟ್ಟು 406 ಮಕ್ಕಳನ್ನು ರಕ್ಷಿಸಿದ್ದಾರೆ.



ಕಾರ್ಯಾಚರಣೆ ಹೀಗಿರುತ್ತೆ

ಅಸಲಿಗೆ ಯಾವ ತಪಾಸಣೆಯನ್ನೂ ನಡೆಸದ ಆಪರೇಷನ್ ನನ್ಹೆ ತಂಡದ ಸದಸ್ಯರು, ಪ್ರಯಾಣಿಕರಂತೆ ಸಂಚರಿಸುತ್ತಾರೆ. ಆದರೆ, ಮಕ್ಕಳ ಕಣ್ಣಿನಲ್ಲಿನ ಭಯ, ಅಸಹಾಯಕತೆ, ಅಪರಿಚಿತರೊಟ್ಟಿಗೆ ಕುಳಿತ ಭಂಗಿ, ಚಲನವಲನದ ಮೇಲೆ ಹದ್ದಿನ ಕಣ್ಣಿಟ್ಟಿರುತ್ತಾರೆ. ಅನುಮಾನ ಬಂದ ಕೂಡಲೇ ಕಾರ್ಯಾಚರಣೆ ಮಾಡುತ್ತಾರೆ. ಅಗತ್ಯ ಪರಿಶೀಲನೆಯ ನಂತರ ಅವರ ಕುಟುಂಬಗಳಿಗೆ ಅಥವಾ ಎನ್‌ಜಿಒ/ಪೊಲೀಸರಿಗೆ ಹಸ್ತಾಂತರಿಸುತ್ತಾರೆ.

ಶರಾವತಿ ಪಂಪ್ಡ್ ಸ್ಟೋರೇಜ್: ಹೈಕೋರ್ಟ್ ತಡೆ

• **ಬೆಂಗಳೂರು:** ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೈಗೆತ್ತಿಕೊಳ್ಳಲಿರುವ ಉದ್ದೇಶಿತ 10 ಸಾವಿರ ಕೋಟಿ ವೆಚ್ಚದ ಶರಾವತಿ ಪಂಪ್ಡ್ ಸ್ಟೋರೇಜ್ ಜಲವಿದ್ಯುತ್ ಯೋಜನೆ ಕಾಮಗಾರಿಯನ್ನು ಅರಣ್ಯದಲ್ಲಿ ಕೈಗೊಳ್ಳುವುದಕ್ಕೆ ಗಂಭೀರ ಆತಂಖ ವ್ಯಕ್ತಪಡಿಸಿರುವ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಸಾಗರದ ಅಖಿಲೇಶ್ ಚಿಪ್ಲಿ, ಉಡುಪಿಯ ಡಾ.ರವೀಂದ್ರನಾಥ ಶಾನಬಾಗ್ ಮತ್ತು ಶಿವಮೊಗ್ಗದ ಸಿ.ಬಿ. ಮನೋಹರ ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾ. ಸಿ.ಎಂ. ಪೂಣಚ್ಚ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಆಲಿಸಿದ ಪೀಠವು, ಅರಣ್ಯ ಮತ್ತು ಶರಾವತಿ ನದಿ ಕಣಿವೆ ಹಾಗೂ ಪರಿಸರ ಸೂಕ್ಷ್ಮ ವಲಯದಲ್ಲಿ ಯೋಜನೆಗೆ ಸಂಬಂಧಿಸಿದಂತೆ ವಾಸ್ತವದಲ್ಲಿ ಯಾವುದೇ ಚಟುವಟಿಕೆಯನ್ನು ನ್ಯಾಯಾಲಯದ ಆದೇಶದ ಹೊರತಾಗಿ ನಡೆಸಕೂಡದು ಎಂದು ಆದೇಶಿಸಿದೆ.

ಅಮೆರಿಕದಲ್ಲಿ ರಿಲಯನ್ಸ್‌ನಿಂದ ತೈಲ ಸಂಸ್ಕರಣಾಗಾರ: ಟ್ರಂಪ್

ಪುಟ ೧➡ ರಿಫೈನರಿಯಲ್ಲಿ ಉತ್ಪತ್ತಿಯಾಗುವ ಇಂಧನಗಳನ್ನು ಖರೀದಿಸಲು ರಿಲಯನ್ಸ್ 20 ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಿದೆ, 2026ರ ಎರಡನೇ ತ್ರೈಮಾಸಿಕದಲ್ಲಿ ಯೋಜನೆಗೆ ಚಾಲನೆ ನೀಡಲಾಗುತ್ತದೆ. ಈ ಬಗ್ಗೆ ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್‌ನಲ್ಲಿ, ಈ ಯೋಜನೆಯಲ್ಲಿ ಪಾಲುದಾರನಾಗಿ ರಿಲಯನ್ಸ್ ಅವರು ಐತಿಹಾಸಿಕ 300 ಶತಕೋಟಿ ಡಾಲರ್ ಡೀಲ್ ಎಂದು ಹೇಳಿದ್ದಾರೆ. 10 ಅಂಕಿಗಳ ಮೌಲ್ಯಮಾಪನದಲ್ಲಿ ಜಾಗತಿಕ ಬಲಿಷ್ಠ ಕಂಪನಿಯಿಂದ 9 ಅಂಕಿಗಳ ಹೂಡಿಕೆಯನ್ನು ಪಡೆದಿದೆ ಎಂದು ಎಫ್‌ಆರ್ ಕೂಡ ಹೇಳಿದೆ. ಈ ಒಪ್ಪಂದಕ್ಕೆ ಸಹಿ ಪ್ರಕ್ರಿಯೆಗೊಂಡರೇ 1977ರಲ್ಲಿ ಲೂಯಿಸಿಯಾನದ ಮ್ಯಾರಥಾನ್‌ನ ಗ್ಯಾರಿವಿಲ್ಲೆ ಸೌಲಭ್ಯ ಬಳಿಕ ಇದು ಅಮೆರಿಕದಲ್ಲಿನ ಮೊದಲ ಹೊಸ ಪ್ರಮುಖ ಸಂಸ್ಕರಣಾ ಯೋಜನೆಯಾಗಿ ಹೊರಹೊಮ್ಮಲಿದೆ. ಉದ್ಯಮದ ತಜ್ಞರ ಪ್ರಕಾರ, ಈ ಯೋಜನೆಗೆ 4 ರಿಂದ 5 ಶತಕೋಟಿ ಡಾಲರ್ ವೆಚ್ಚವಾಗಬಹುದು. ಈಗಾಗಲೇ ಇಂಧನ ವ್ಯಾಪಾರ, ತಂತ್ರಜ್ಞಾನ ಪಾಲುದಾರಿಕೆ ಮತ್ತು ಹೂಡಿಕೆಗಳ ಮೂಲಕ ಅಮೆರಿಕದಲ್ಲಿ ರಿಲಯನ್ಸ್ ದೀರ್ಘಕಾಲದ ವಾಣಿಜ್ಯ ವ್ಯವಹಾರಗಳಲ್ಲಿ ಪಾಲುದಾರಿಕೆ ಹೊಂದಿದೆ. ಈವರೆಗೆ ಒಪ್ಪಂದದ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ನೀಡಿಲ್ಲ.

ಅನಿಲ ಉತ್ಪಾದನೆ ಹೆಚ್ಚಳಕ್ಕೆ ರಿಲಯನ್ಸ್ ನಿರ್ಧಾರ: ರಿಲಯನ್ಸ್ ಇಂಡಸ್ಟ್ರೀಸ್ ನಿಂದ ಮಹತ್ತರವಾದ ಘೋಷಣೆ ಮಾಡಲಾಗಿದೆ. ಜಾಮ್ ನಗರದಲ್ಲಿ ಇರುವಂಥ ಸಂಸ್ಕರಣಾಗಾರ ಹಾಗೂ ಪೆಟ್ರೋಕೆಮಿಕಲ್ಸ್ ಸಮುಚ್ಚಯದಿಂದ ಎಲ್‌ಪಿಜಿ ಉತ್ಪಾದನೆಯನ್ನು ಸ್ವಯಂಪ್ರೇರಿತವಾಗಿ ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸುವುದಕ್ಕೆ ನಿರ್ಧಾರ ಕೈಗೊಳ್ಳಲಾಗಿದೆ.

ಹಿರಿಯ ಸಿನಿ ಪತ್ರಕರ್ತ ಕೆ.ಜೆ. ಕುಮಾರ್ ನಿಧನ

ಪುಟ ೧➡ 1969ರಲ್ಲಿ ಸೋದರ ಮಾವ ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಎ. ರಾಮಣ್ಣ ಸಂಪಾದಕತ್ವದ ವಿಜಯ ದಿನಪತ್ರಿಕೆಯಲ್ಲಿ ಪತ್ರಕರ್ತರಾಗಿ ವೃತ್ತಿ ಬದುಕು ಆರಂಭಿಸಿದರು. ನಂತರ ವಿಜಯ ದಿನಪತ್ರಿಕೆ ಪ್ರಕಾಶಕ – ಮುದ್ರಕರಾಗಿದ್ದರು. ನಂತರ ಅವರು ಸಿನಿಮಾ ಪತ್ರಕರ್ತರಾಗಿ ಸುಧಾ ವಾರಪತ್ರಿಕೆ, ವಿಜಯ ಚಿತ್ರ ಸಿನಿಮಾ ಮಾಸ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿದ ನಂತರ, 1978ರಿಂದ ರೂಪತಾರಾ ಸಿನಿಮಾ ಮಾಸ ಪತ್ರಿಕೆಗೆ ಮೂರೂ ದಶಕಗಳ ಕಾಲ ಸೇವೆ ಸಲ್ಲಿಸಿದರು. 1993ರಲ್ಲಿ ಉದಯವಾಣಿ ದಿನಪತ್ರಿಕೆ ಬೆಂಗಳೂರು ಆವೃತ್ತಿ ಆರಂಭವಾದಾಗ ಮೈಸೂರಿನ ಪ್ರತಿನಿಧಿಯಾಗಿ ಸುಮಾರು ಒಂದೂವರೆ ದಶಕ ಕಾರ್ಯನಿರ್ವಹಿಸಿದ್ದರು. ಕಳೆದ ಒಂದೂವರೆ ದಶಕದಿಂದ ಹೊಸ ದಿಗಂತ ದಿನಪತ್ರಿಕೆಯ ಸಿನಿಮಾ ವಿಭಾಗದ ಮುಖ್ಯಸ್ಥರಾಗಿದ್ದರು.

ಪತ್ರಿಕಾ ಕ್ಷೇತ್ರವಲ್ಲದೆ ಹೋಟೆಲ್ ಉದ್ಯಮದಲ್ಲೂ ತೊಡಗಿಸಿಕೊಂಡಿದ್ದ ಅವರು ಮೈಸೂರಿನ ಸರಸ್ವತಿಪುರಂನಲ್ಲಿ ಕುಟೀರ ಮನೆ ಎಂಬ ಹೋಟೆಲ್ ಸ್ಥಾಪಿಸಿದ್ದರು. ಪತ್ರಕರ್ತರಾಗಿ ಕನ್ನಡ ಚಿತ್ರೋದ್ಯಮದಲ್ಲಿ ಬಹಳ ಜನಪ್ರಿಯರಾಗಿದ್ದ ಕೆ. ಜೆ. ಕುಮಾರ್ ಅವರು ಕನ್ನಡ ಚಿತ್ರರಂಗದ ದಿಗ್ಗಜರಾದ ಡಾ.ರಾಜ್ ಕುಮಾರ್, ಡಾ.ವಿಷ್ಣುವರ್ಧನ್, ಅಂಬರೀಷ್, ರಜನಿಕಾಂತ್, ಶಶಿಕುಮಾರ್, ನಿರ್ಮಾಪಕರಾದ ದ್ವಾರಕೀಶ್, ವೀರಸ್ವಾಮಿ, ನಿರ್ದೇಶಕರಾದ ಪುಟ್ಟಣ್ಣ ಕಣಗಾಲ್, ಸಿದ್ದಲಿಂಗಯ್ಯ, ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದರು. ಕುಮಾರ್ ಅವರಿಗೆ ಪತ್ನಿ ಉಷಾ, ಪುತ್ರಿ ಸುನಯ ಶೆಟ್ಟಿ, ಸೋದರಿ ಹಾಗೂ ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಪ್ರಕಾಶ್ ಇದ್ದಾರೆ.

ಸಂತಾಪ: ಕೆ.ಜೆ. ಕುಮಾರ್ ಅವರ ನಿಧನಕ್ಕೆ ಹೊಸ ದಿಗಂತ ಆಡಳಿತ ಮಂಡಳಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ, ನಿರ್ಮಾಪಕ ಸೂರಪ್ಪಬಾಬು, ನಟಿ ಹೇಮಾಚೌಧರಿ, ಹೊಸಬೆಳಕು ಚಿತ್ರ ಸಹನಿರ್ಮಾಪಕ ಸದಾನಂದ ಅವರು ಸಂತಾಪ ಸೂಚಿಸಿದ್ದಾರೆ.

ಇಂದು ಅಂತಿಮ ದರ್ಶನ

ಗುರುವಾರ (ಮಾ.12) ಬೆಳಗ್ಗೆ ಮೈಸೂರಿನ ಯಾದವಗಿರಿಯಲ್ಲಿರುವ ಮೃತರ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ಮಧ್ಯಾಹ್ನದ ನಂತರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪದಚ್ಯುತಿ ನಿರ್ಣಯಕ್ಕೆ ಸೋಲು

ಪುಟ ೧➡ **ತೀರಾ ಅಪೂರ್ವ:** ಭಾರತದ ಸಂಸದೀಯ ಚರಿತ್ರೆಯಲ್ಲೇ ಲೋಕಸಭಾ ಸಭಾಪತಿಗಳ ವಿರುದ್ಧ ಇಂತಹ ನಿರ್ಣಯ ಮಂಡನೆಯಾದದ್ದು ತೀರಾ ಅಪೂರ್ವ. ನಾಲ್ಕು ದಶಕಗಳ ಹಿಂದೆ ಇಂತಹ ಪ್ರಯತ್ನ ನಡೆದಿತ್ತು. ಬಿಜೆಪಿ ಕೂಡ ಅದೆಷ್ಟೋ ವರ್ಷ ಕಾಲ ವಿಪಕ್ಷ ಸ್ಥಾನದಲ್ಲಿತ್ತಾದರೂ ಸಭಾಪತಿಗಳ ವಿರುದ್ಧವೇ ಅವಿಶ್ವಾಸ ನಿರ್ಣಯ ಮಂಡಿಸಿಲ್ಲ.

ನಿಯಮಾನುಸಾರ ಸಂಸತ್ ಕಲಾಪ: ಸಂಸತ್ತಿನ ಕಲಾಪ, ಕಾರ್ಯನಿರ್ವಹಣೆಗಳು ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ ನಡೆಯಬೇಕೇ ವಿನಾ ರಾಜಕೀಯ ಬೇಡಿಕೆಗಳನ್ನು ಹೊಂದಿಕೊಂಡಲ್ಲ. ಸದನವು ನಿಯಮ ಪ್ರಕಾರ ನಡೆಯುವುದೇ ವಿನಾ ಯಾವುದೇ ರಾಜಕೀಯ ಪಕ್ಷದ ನಿಯಮ ಪ್ರಕಾರ ಅಲ್ಲ.

ಸಭಾಪತಿಗಳ ಸಮಗ್ರತೆಯನ್ನು ಪ್ರಶ್ನಿಸುವುದು ಸಂಸದೀಯ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನೇ ಶಂಕಿಸುವುದಕ್ಕೆ ಸಮಾನ. ಸರಕಾರವನ್ನು ವಿರೋಧಿಸುವುದಕ್ಕಾಗಿ ತಾವುಗಳು ಪ್ರಜಾಸತ್ತೆಯ ಘನತೆಯ ದ್ಯೋತಕವಾಗಿರುವ ಸಭಾಪತಿಗಳ ವಿರುದ್ಧ ಆರೋಪ ಹೊರಿಸುತ್ತಿದ್ದೀರಾ. ಇದು ಖಂಡಿತ ಸರಿಯಲ್ಲ ಎಂದು ಸಚಿವ ಶಾ ವಿಪಕ್ಷೀಯರನ್ನು ತರಾಟೆಗೆತ್ತಿಕೊಂಡರು.

ಯಾರೇ ಆಗಿರಲಿ, ಸದನದ ನಿಯಮಕ್ಕೆ ಅತೀತರಲ್ಲ-ಶಾ: ಅಸಂಸದೀಯ ಪದಗಳನ್ನು ಕಡತದಿಂದ ಕಿತ್ತುಹಾಕಿ, ಸಂಸದೀಯ ನಿಯಮಗಳ ಚೌಕಟ್ಟಿನೊಳಗೆ ಸದನದ ಕಲಾಪಗಳ ನಿರ್ವಹಿಸುವ ಅಧಿಕಾರ ಸಭಾಪತಿಗಳಿಗಿದೆ. ಈ ಸದನವೊಂದು ಮೇಳ ಅಥವಾ ಉತ್ಸವಾಂಗಣವಲ್ಲ. ಇಲ್ಲಿ ಪ್ರತಿಯೊಬ್ಬರೂ ನಿಯಮಕ್ಕೆ ಬದ್ಧರಾಗಿ ವರ್ತಿಸಬೇಕು. ವ್ಯಕ್ತಿ ಯಾರೇ ಆಗಿರಲಿ, ಸದನವು ಸಮ್ಮತಿಸದ ರೀತಿ-ಭಾಷೆಯಲ್ಲಿ ಮಾತನಾಡಲು ಯಾರಿಗೂ ಹಕ್ಕಿಲ್ಲವೆಂದು ಸಚಿವ ಶಾ ಗುಡುಗಿದರು.

ಲೋಕಸಭಾ ಸಭಾಪತಿಗಳ ಪದಚ್ಯುತಿಗೆ ಆಗ್ರಹಿಸುವ ನಿರ್ಣಯವನ್ನು ಭಾರತದ ಸಂಸದೀಯ ಚರಿತ್ರೆಯಲ್ಲಿ ಕೇವಲ ಮೂರು ಬಾರಿ ಮಂಡಿಸಲಾಗಿದೆ. ಬಿಜೆಪಿಯಾಗಲಿ, ಎನ್‌ಡಿಎ ಆಗಲಿ ಇಂತಹ ನಿರ್ಣಯ ಮಂಡನೆ ಮಾಡಿಲ್ಲ. 75ವರ್ಷಗಳ ಕಾಲ ಸಂಸತ್ತಿನ ಉಭಯ ಸದನಗಳು ಬಲಿಷ್ಠವಾಗಿದ್ದವು ಮತ್ತು ಭಾರತದ ಪ್ರಜಾಸತ್ತೆಯ ಬುನಾದಿ ಕೂಡ. ಆದರೆ ಪ್ರಸ್ತುತ ನಿರ್ಣಯವು ಈ ದಂತಕತೆಯನ್ನು ದಮನಿಸುವ ಗಂಡಾಂತರ ಸೃಜಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಪಕ್ಷೀಯರ ಪ್ರತ್ಯುತ್ತರ: ಭಿನ್ನ ಅಭಿಪ್ರಾಯ ವ್ಯಕ್ತಪಡಿಸಲು ಸಂಸತ್ತಿನಲ್ಲಿ ಅವಕಾಶ ಸಿಗುತ್ತಿಲ್ಲ . ಈ ಬಗ್ಗೆ ನಮ್ಮ ಕಳವಳ ವ್ಯಕ್ತಪಡಿಸಲು ನಿರ್ಣಯ ಮಂಡಿಸಿದ್ದೇವೆಂದು ಪ್ರತಿಪಕ್ಷೀಯರು ವಾದಿಸಿದರು. ಸಭಾಪತಿಗಳಿಂದ ಸೂಕ್ತ ರಕ್ಷಣೆ ಸಿಗುತ್ತಿಲ್ಲವೆಂಬ ಭಾವನೆ ವಿಪಕ್ಷ ಸದಸ್ಯರಲ್ಲಿದೆ ಎಂದು ಆರ್‌ಜೆಡಿ ಸಂಸದ ಅಭಯ ಕುಮಾರ್ ಸಿನ್ಹಾ ಆರೋಪಿಸಿದರು.

ಎಸ್ಟಿ ಪಟ್ಟಿಗೆ ಸೇರಿಸಲು ಪ್ರಸ್ತಾವನೆ ಸ್ವೀಕೃತ

ವಿಧಾನಪರಿಷತ್: ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಜಾತಿಗಳನ್ನು ಈಗಾಗಲೇ ಕರ್ನಾಟಕದ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಜಾತಿಗಳಾದ ಟೋಕರೆ ಕೋಲಿ, ಕೋಯಾ ಕೋಲಿಡೋರ,



ಕೋಲ್ಲಾ, ಜಾತಿಗಳ ಪರ್ಯಾಯ ಪದಗಳೆಂದು ಪರಿಗಣಿಸಲು ಹೊಸದಾಗಿ ಕುಲಶಾಸ್ತ್ರೀಯ ಅಧ್ಯಯನ ವನ್ನು ಕೈಗೊಳ್ಳಲು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ (ಮೈಸೂರು) ವತಿಯಿಂದ ಕಳೆದ ಫೆ.19 ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ ಎಂದು ಸಭಾನಾಯಕ ಎನ್.ಎಸ್. ಭೋಸರಾಜು ತಿಳಿಸಿದರು.

ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ಸದಸ್ಯ ಶಿವಣಪ್ಪ ಕಮಕನೂರ ಅವರ ಪ್ರಶ್ನೆಗೆ ಮುಖ್ಯಮಂತ್ರಿಗಳ ಪರವಾಗಿ ಉತ್ತರಿಸಿದ ಸಚಿವರು, ರಾಜ್ಯ ಸರ್ಕಾರ ಈ ಹಿಂದೆ 2010ರಲ್ಲಿ ಹೊರಡಿಸಿರುವ ಆದೇಶದಲ್ಲಿ ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಉಪ ಜಾತಿಗಳ (ಕೋಲಿ, ಕಬ್ಬಲಿಗ, ಬೆಸ್ತ ಅಂಬಿಗ ಮತ್ತು ಬಾರ್ಕಿ ಒಳಗೊಂಡಂತೆ) ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ವರದಿ ಪಡೆದು ಸಲ್ಲಿಸಲು ಆದೇಶಿಸಲಾಗಿತ್ತು ಎಂದರು.

ಅಂತಿಮವಾಗಿ ಕೇಂದ್ರ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಅವರು 2023 ರ ಅ.30ರ ಪತ್ರದಲ್ಲಿ ಪ್ರಸ್ತಾಪಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ ಮತ್ತೊಮ್ಮೆ ಸೂಕ್ತ ಸಮರ್ಥನೆ/ಸ್ಪಷ್ಟೀಕರಣ/ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸುವಂತೆ ಕುಲಸಚಿವರು, ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಕುಲಸಚಿವರಿಗೆ ಕೋರಲಾಗಿದ್ದು, ಕುಲಸಚಿವರು, ಕನ್ನಡ ವಿಶ್ವ ವಿದ್ಯಾಲಯ ಕುಲಸಚಿವರಿಂದ ವರದಿ ಬಂದ ತಕ್ಷಣ ಸರ್ಕಾರಕ್ಕೆ ಮಾಹಿತಿಯನ್ನು ಸಲ್ಲಿಸಲಾಗುವುದು ಎಂದು ಹೇಳಿದರು.


ಒಂದು ಹಂತದಲ್ಲಿ ತಳವಾರ ಸಾಬಣ್ಣ ಅವರು ಮಾತನಾಡಲು ಅವಕಾಶ ಸಿಗಲಿಲ್ಲ ಎಂದು ಆಕ್ಷೇಪಿಸಿ ಸಭಾಪತಿಯವರ ಪೀಠದ ಮುಂದಿನ ಬಾವಿಗೆ ಇಳಿದು ಕೆಲ ನಿಮಿಷಗಳ ಧರಣಿ ಆರಂಭಿಸಿದರು.

ಈ ವೇಳೆ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಧ್ಯಪ್ರವೇಶಿದ ಹಿನ್ನೆಲೆಯಲ್ಲಿ ಧರಣಿ ಕೈಬಿಟ್ಟು ತಮ್ಮ ಸ್ಥಾನಕ್ಕೆ ಮರಳಿದಾಗ ಸಭಾಪತಿಯವರು ಮತ್ತೊಮ್ಮೆ ಅವರಿಗೆ ಮಾತನಾಡಲು ಅವಕಾಶ ನೀಡಿದರು.

ಸರ್ಕಾರಕ್ಕೆ ದಾಖಲೆ ಸಲ್ಲಿಕೆ

ಕೋಲಿ, ಕಬ್ಬಲಿಗ, ಅಂಬಿಗ, ಬೆಸ್ತ ಜಾತಿಗಳು ಈ ಐದೂ ಜಾತಿಗಳ ಶಬ್ದಗಳು 1956 ರ ಪುನರ್ ವಿಂಗಡಣೆ ಪಟ್ಟಿಯಲ್ಲಿ ಎಸ್‌ಟಿ ಪಟ್ಟಿಯಿಂದ ಕೈಬಿಟ್ಟು ಹೋಗಿವೆ. ನಾನೇ ಅಧ್ಯಯನ ಮಾಡಿ 103 ದಾಖಲೆಗಳನ್ನು ಸರ್ಕಾರಕ್ಕೆ ಕೊಟ್ಟಿದೇನೆ. ದಾಖಲೆ ಸಹಿತ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ಸದಸ್ಯ ತಳವಾರ ಸಾಬಣ್ಣ ಆಗ್ರಹಿಸಿದರು.

ಕಲಾಪ ವೀಕ್ಷಣೆ



ವಿಧಾನ ಪರಿಷತ್‌ನಲ್ಲಿ ಬುಧವಾರ ನಡೆದ ಕಲಾಪ ವೀಕ್ಷಿಸುತ್ತಿರುವ ಕಾಲೇಜು ವಿದ್ಯಾರ್ಥಿಗಳು.

ಸ್ಟಾರ್ಟ್‌ಅಪ್ ಆರಂಭಕ್ಕೆ ಅದ್ಭುತ ಅವಕಾಶ: ಸಚಿವ

ವಿಧಾನಸಭೆ: ಕರಾವಳಿ ಜಿಲ್ಲೆಗಳಲ್ಲಿ ಐಟಿ-ಬಿಟಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್ ಆರಂಭಕ್ಕೆ ಅದ್ಭುತ ಅವಕಾಶವಿದೆ. ಅಲ್ಲಿ ಉತ್ತಮ ವಾತಾವರಣ ಒದಗಿಸಿದರೆ ಮುಂದಿನ ಮೂರು ವರ್ಷಗಳಲ್ಲಿ ಶೇ.2 ಜಿಡಿಪಿ ಹೆಚ್ಚಳ ಸಾಧ್ಯವಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ವೇದವ್ಯಾಸ ಕಾಮತ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಜಿಡಿಪಿಯಲ್ಲಿ ಬೆಂಗಳೂರಿನ ಪಾಲು ಶೇ.39.4 ಆಗಿದ್ದರೆ, ಮಂಗಳೂರಿನ ಪಾಲು ಶೇ.5.4 ಆಗಿದೆ. ನಂತರದ ಜಿಲ್ಲೆ ಶೇ.3.4 ಇದೆ. ಕರಾವಳಿ ಪ್ರದೇಶದಲ್ಲಿ ಉತ್ತಮ ವಾತಾವರಣ ಒದಗಿಸಿದರೆ ಆರ್ಥಿಕ ಪ್ರಗತಿಗೆ ವೇಗ ನೀಡಬಹುದು ಎಂದರು. ಕರಾವಳಿ ಪ್ರದೇಶದಲ್ಲಿ ನವೋದ್ಯಮಿಗಳನ್ನು ಉತ್ತೇಜಿಸಲು ಪ್ರತಿ ವರ್ಷ ಮಂಗಳೂರಿನಲ್ಲಿ ಬೆಂಗಳೂರು ಟೆಕ್ ಸಮ್ಮಿಟ್‌ನ ಪೂರ್ವಭಾವಿಯಾಗಿ ಶೃಂಗಸಭೆ ಟೆಕ್ನೋವಾಂಜಾ ಸಮ್ಮೇಳನ ಆಯೋಜಿಸಲಾಗುತ್ತಿದೆ. ಬಿಯಾಂಡ್ ಬೆಂಗಳೂರು ಕ್ಲಸ್ಟರ್ ಸೀಡ್ ಫಂಡ್ 25 ಕೋಟಿ ರೂ.ಗಳನ್ನು ನೀಡಲಾಗಿದೆ.

ಕರ್ನಾಟಕ ಆಕ್ಸಿಲರೇಶನ್ ನೆಟ್ವರ್ಕ್‌ನಲ್ಲಿ ಕರಾವಳಿ ಪ್ರದೇಶದ ಸ್ಟಾರ್ಟ್ ಅಪ್‌ಗಳಿಗಾಗಿ ಶೈನ್ ಫೌಂಡೇಶನ್ ಅನ್ನು ಗುರುತಿಸಿ, ಪ್ರಸ್ತುತ ಆಕ್ಸಿಲರೇಶನ್ ಪ್ರೋಗ್ರಾಂ ನಡೆಸಲಾಗುತ್ತಿದೆ. ಕರಾವಳಿ ಪ್ರದೇಶದ ಸ್ಟಾರ್ಟ್‌ಅಪ್‌ಗಳಿಗೆ ಬೆಂಬಲ ನೀಡಲು ಮಂಗಳೂರಿನ ಎಐಸಿ ನಿಟ್ಟೆ ಸಹಯೋಗದೊಂದಿಗೆ ಕಾಮನ್ ಇನ್ಸ್ಟ್ರುಮೆಂಟೇಶನ್ ಫೆಸಿಲಿಟಿಯನ್ನು ಸ್ಥಾಪಿಸಲಾಗಿದೆ. ಮಂಗಳೂರಿನ ಆಕ್ವಾ ಮರೀನ್ ಬಯೋಟೆಕ್ ಸಂಶೋಧನೆಯನ್ನು ಉತ್ತೇಜಿಸಲು ಉತ್ಪಾದನೆ ಹೆಚ್ಚಿಸಲಾಗುವುದು ಎಂದರು.

ಕಿರುಸುದ್ದಿ

ಬಂದರು ಅಧಿಕಾರಿ ನೇಮಕ

ವಿಧಾನಪರಿಷತ್: ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿನ ಬಂದರು ಅಧಿಕಾರಿ ಹುದ್ದೆಗಳನ್ನು ಶೀಘ್ರದಲ್ಲಿ ಭರ್ತಿ ಮಾಡಲಾಗುವುದು ಎಂದು ಮೀನುಗಾರಿಕೆ ಬಂದರು ಮತ್ತು ಒಳನಾಡು ಸಾರಿಗೆ ಸಚಿವ ಮಂಕಾಳ ವೈದ್ಯ ತಿಳಿಸಿದರು.



ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿ ಸದಸ್ಯ ಗಣಪತಿ ದುಮ್ಮಾ ಉಳ್ವೇಕರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕ ಜಲಸಾರಿಗೆ ಮಂಡಳಿಯಲ್ಲಿ ಒಟ್ಟು ಮೂರು ಬಂದರು ಅಧಿಕಾರಿ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ ಎರಡು ಬಂದರು ಅಧಿಕಾರಿ ಹುದ್ದೆಗಳು ಖಾಲಿ ಇವೆ. ಒಂದು ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗಿದೆ ಎಂದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಪರಿಶಿಷ್ಟರಿಗೆ ವಿನಿಯೋಗ: ಮಹದೇವಪ್ಪ

ವಿಧಾನಸಭೆ: ಆಯವ್ಯಯದಲ್ಲಿ ಘೋಷಿಸಿದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಬೇರೆ ಬೇರೆ ಇಲಾಖೆಗೆ ಹಂಚಿಕೆ ಮಾಡಿದರೂ ಅದನ್ನು ಪರಿಶಿಷ್ಟ ಸಮುದಾಯಕ್ಕೇ ವಿನಿಯೋಗ ಮಾಡಲಾಗುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ತಿಳಿಸಿದರು.



ಪ್ರಶೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಚಂದ್ರಪ್ಪ ಎಂ. ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಸ್‌ಸಿಎಸ್‌ಪಿ-ಟಿಎಸ್‌ಪಿ ಯೋಜನೆಯನ್ನು ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳು ಜಾರಿಗೆ ತಂದಿವೆ. ಈ ಕಾನೂನು ಜಾರಿಗೆ ಬಂದ ಮೇಲೆ ಪರಿಶಿಷ್ಟ ಸಮುದಾಯದ ಜನಸಂಖ್ಯೆಗೆ ತಕ್ಕಂತೆ ಬಜೆಟ್‌ನಲ್ಲಿ ಹಣ ಮೀಸಲಿಡಲಾಗುತ್ತದೆ. ಹೀಗೆ ಮೀಸಲಿರಿಸಿದ ಹಣವನ್ನು ಬೇರೆ ಬೇರೆ ಇಲಾಖೆಗೆ ನೀಡಿದರೂ ಆ ಇಲಾಖೆ ಮೂಲಕ ಪರಿಶಿಷ್ಟ ಸಮುದಾಯದ ಕಲ್ಯಾಣಕ್ಕೆ ವಿನಿಯೋಗಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಚಂದ್ರಮೌಳೇಶ್ವರ ದೇಗುಲದ ಅಭಿವೃದ್ಧಿಗೆ ಕ್ರಮ: ಸಚಿವ

ವಿಧಾನಪರಿಷತ್: ನಗರಾಭಿವೃದ್ಧಿ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆ ದೊರೆತು ಅನುದಾನ ಬಿಡುಗಡೆಯಾದ ನಂತರ ಕೇಂದ್ರ ಪುರಾತತ್ವ, ಪ್ರವಾಸೋದ್ಯಮ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಹುಬ್ಬಳ್ಳಿಯ ಚಂದ್ರಮೌಳೇಶ್ವರ ದೇವಾಲಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪರಿಶೀ ಲನೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಧಾರ್ಮಿಕ ದತ್ತಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಪ್ರದೀಪ್ ಶೆಟ್ಟರ್ ಅವರ ಪ್ರಶ್ನೆಗೆ ಪ್ರತಿಕ್ರಿಯಿ ಸಿದ ಅವರು, ಹುಬ್ಬಳ್ಳಿಯ ಉಣಕಲ್‌ನ ಚಂದ್ರಮೌಳೇಶ್ವರ ದೇವಾಲಯ ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಸಿ ಅಧಿಸೂಚಿತ ಸಂಸ್ಥೆಯಾಗಿದೆ ಮತ್ತು ಕೇಂದ್ರ ಪುರಾತತ್ವ ಇಲಾಖೆಯ ನಿರ್ವಹಣೆ ಒಳಪಡುವ ಸಂರಕ್ಷಿತ ಸಂಸ್ಥೆಯಾಗಿದೆ. ಈ ದೇವಾಲಯವು ಪುರಾತನ ಪ್ರಸಿದ್ಧ ದೇವಾಲಯವಾಗಿದೆ. ಇಲ್ಲಿ ಬರುವ ಭಕ್ತಾಧಿಗಳಿಗೆ ಮೂಲಸೌಕರ್ಯ ಕಲ್ಪಿಸಲು ಅಗತ್ಯವಾಗಿದೆ ಎಂದರು. ಹುಬ್ಬಳ್ಳಿಯ ಮುಜರಾಯಿ/ಮುಜರಾಯೇತರ ದೇವಾಲಯಗಳಿಗೆ ಜೀರ್ಣೋದ್ಧಾರ/ನಿರ್ಮಾಣ, ಆರಾಧನಾ ಯೋಜನೆ ಅಡಿ ಪ್ರಸಕ್ತ ಸಾಲಿನಲ್ಲಿ ಒಟ್ಟು 28.74 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ. ಅದರಂತೆ ಈ ಚಂದ್ರಮೌಳೇಶ್ವರ ದೇವಾಲಯವು ನಗರ ಪಾಲಿಕೆ ವ್ಯಾಪ್ತಿಯಲ್ಲಿದ್ದು, ಅಗತ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳಾವಕಾಶದ ಕೊರತೆಯಿದೆ ಎಂದು ತಿಳಿಸಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ

ಸುಸ್ಥಿರ ಡೇಟಾ ಸೆಂಟರ್

ವಿಧಾನಸಭೆ: ತಂತ್ರಜ್ಞಾನ ಕ್ಷೇತ್ರದಲ್ಲಿನ ಬದಲಾವಣೆಗಳಿಗೆ ತಕ್ಕಂತೆ ರಾಜ್ಯದಲ್ಲಿ ಸುಸ್ಥಿರ ಡೇಟಾ ಸೆಂಟರ್ ಪಾಲಿಸಿ ರೂಪಿಸುವುದಾಗಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಧೀರಜ್ ಮುನಿರಾಜು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ಪ್ರಸ್ತುತ 32 ಖಾಸಗಿ ಡೇಟಾ ಸೆಂಟರ್‌ಗಳು ಕಾರ್ಯನಿರ್ವಹಿಸುತ್ತಿವೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಗಳಾಗುತ್ತಿವೆ. ಎಐ, ಮಿಷನ್ ಲರ್ನಿಂಗ್, ಎಮರ್ಜಿಂಗ್ ಟೆಕ್ನಾಲಜಿಗಳಿಗೆ ಡೇಟಾ ಸೆಂಟರ್‌ಗಳ ಅಗತ್ಯವಿದೆ.

ಈ ಡೇಟಾ ಸೆಂಟರ್‌ಗಳಿಗೆ ದೊಡ್ಡ ಪ್ರಮಾಣದ ವಿದ್ಯುತ್ ಮತ್ತು ನೀರು ಬೇಕು. ರಾಜ್ಯ ಸರ್ಕಾರದ ಹಾಲಿ ಡೇಟಾ ಸೆಂಟರ್ ಪಾಲಿಸಿ 3-4 ವರ್ಷಗಳಷ್ಟು ಹಳೆಯದಾಗಿದೆ. ಹೀಗಾಗಿ ಇದನ್ನು ಪುನರ್ ಪರಿಶೀಲಿಸಿ ಸುಸ್ಥಿರ ಡೇಟಾ ಸೆಂಟರ್ ಪಾಲಿಸಿ ರೂಪಿಸಲು ಪ್ರಯತ್ನಿಸುವುದಾಗಿ ಮಾಹಿತಿ ನೀಡಿದರು.

ಸರ್ಕಾರದಿಂದ ಡೇಟಾ ಸೆಂಟರ್ ಸ್ಥಾಪಿಸುವುದು ಕಷ್ಟ. ಒಂದು ಮೆಗಾ ವ್ಯಾಟ್‌ಗೆ 70 ಕೋಟಿ ರೂ. ಬೇಕು. ಒಂದೆಕರೆ ಜಾಗದಲ್ಲಿ 1 ಮೆಗಾ ವ್ಯಾಟ್ ಮಾತ್ರ ಸಿಗಲಿದೆ. ಈ 1 ಮೆಗಾ ವ್ಯಾಟ್‌ಗೆ 25 ಮಿಲಿಯನ್ ಲೀಟರ್ ನೀರಿನ ಅವಶ್ಯಕತೆಯಿದೆ. ಚಾಟ್ ಜಿಪಿಟಿಯಲ್ಲಿ ಐದು ಪ್ರಶ್ನೆ ಕೇಳಿದರೆ, 500 ಲೀಟರ್ ನೀರು ಹೋಗುತ್ತದೆ. ಹೀಗಾಗಿ ಈ ಡೇಟಾ ಸೆಂಟರ್ ಪಾಲಿಸಿಯನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ ಎಂದು ಹೇಳಿದರು.

ಡೇಟಾ ಸೆಂಟರ್‌ಗಳಿಗೆ ಕರಾವಳಿ ಸೂಕ್ತ ಪ್ರದೇಶ

ಕರಾವಳಿ ಪ್ರದೇಶವು ಈ ಡೇಟಾ ಸೆಂಟರ್‌ಗಳಿಗೆ ಸೂಕ್ತವಾಗಿದೆ. ಮಂಗಳೂರು ಸೇರಿದಂತೆ ರಾಜ್ಯದ ಕರಾವಳಿ ಪ್ರದೇಶದಲ್ಲಿ ಸಬ್ ಸೀ ಕೇಬಲ್ ತರುವ ನಿಟ್ಟಿನಲ್ಲಿ ಖಾಸಗಿ ಕಂಪನಿಗಳೊಂದಿಗೆ ಚರ್ಚಿಸಿದ್ದೇನೆ.



ಕೇಂದ್ರದ ಟೆಲಿಕಾಂ ಇಲಾಖೆಗೂ ಪತ್ರ ಬರೆದು ಸಚಿವರೊಂದಿಗೂ ಚರ್ಚಿಸಿದ್ದೇನೆ. ಸರ್ಕಾರದಿಂದ ಮಾಡಲು ಸಾಧ್ಯವಿಲ್ಲ. ಖಾಸಗಿಯವರು ಡೇಟಾ ಸೆಂಟರ್ ಮಾಡಿದರೆ ಸಹಕಾರ ನೀಡುವುದಾಗಿ ಹೇಳಿದ್ದಾರೆ ಎಂದು ವಿವರಿಸಿದರು. ದೊಡ್ಡಬಳ್ಳಾಪುರದಲ್ಲಿ ಕೈಗಾರಿಕೆಗಳಿಗೆ ಭೂಮಿ ಕೊರತೆಯಿಲ್ಲ. ಪಾಲಿಸಿ ಕೊರತೆ ಇಲ್ಲ. ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ(ಲೀಪ್)ದಡಿ ಬಂಡವಾಳ ಹೂಡಿಕೆಗೆ ಒತ್ತು ನೀಡುವುದಾಗಿ ಭರವಸೆ ನೀಡಿದರು. ಗೂಗಲ್ ಕಂಪನಿ ಆಂಧ್ರಪ್ರದೇಶ ವಿಶಾಖಪಟ್ಟಣಕ್ಕೆ ಹೋಗಿದರ ಬಗ್ಗೆ ಚರ್ಚೆಯಾಗುತ್ತಿದೆ. ಆಂಧ್ರಪ್ರದೇಶ ಸರ್ಕಾರವು ಗೂಗಲ್ ಕಂಪನಿಗೆ 22 ಸಾವಿರ ಕೋಟಿ ರೂ. ಸಬ್ಸಿಡಿ, ಭೂಮಿ ಖರೀದಿಯಲ್ಲಿ ಶೇ.20ರಷ್ಟು ಸಬ್ಸಿಡಿ, ಪ್ರತಿ ಯುನಿಟ್ ವಿದ್ಯುತ್‌ಗೆ 1 ರೂ.ನಂತೆ 15 ವರ್ಷ ಪವರ್ ಟಾರಿಫ್, 10 ವರ್ಷ ರಾಜ್ಯ ಜಿಎಸ್‌ಟಿ ವಿನಾಯಿತಿ, ಶೇ.100ರಷ್ಟು ಸ್ಟಾಂಪ್ ಡ್ಯೂಟಿ ಉಚಿತ, ಕ್ಯಾಪಿಟಲ್ ಸಬ್ಸಿಡಿ ಸೇರಿದಂತೆ ಹಲವು ಸೌಲಭ್ಯ ನೀಡಿದೆ. ಈ ಗೂಗಲ್ ಕಂಪನಿಯಿಂದ ಆಂಧ್ರಪ್ರದೇಶದಲ್ಲಿ 1,500 ಉದ್ಯೋಗ ಮಾತ್ರ ಸೃಷ್ಟಿಯಾಗಲಿದೆ ಎಂದು ಸಚಿವರು ಹೇಳಿದರು.

ಅನುದಾನ ಬಿಡುಗಡೆಗೆ ಸಿಎಂ ಜತೆ ಚರ್ಚೆ: ಸಚಿವ ತಂಗಡಗಿ

ವಿಧಾನಸಭೆ: ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮಕ್ಕೆ 100 ಕೋಟಿ ರೂ. ಅನುದಾನ ಒದಗಿಸಬೇಕೆಂದು ಬಿಲ್ಲವ - ಈಡಿಗ ಸಮುದಾಯಕ್ಕೆ ಸೇರಿದ ಶಾಸಕರು ಸದನದಲ್ಲಿ ಬೇಡಿಕೆಯಿಟ್ಟರು. ಹೆಚ್ಚಿನ ಅನುದಾನ ನೀಡಲು ಸಿಎಂ ಅವರೊಂದಿಗೆ ಚರ್ಚಿಸುವುದಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ರಾಜೇಶ್ ನಾಯಕ್ ವಿಷಯ ಪ್ರಸ್ತಾಪಿಸಿ, ನಿಗಮಕ್ಕೆ ಅಧ್ಯಕ್ಷರನ್ನು ನೇಮಿಸಿದ್ದು ಬಿಟ್ಟರೆ ಬೇರೆ ಏನು ಆಗಿಲ್ಲ. ನಿಗಮಕ್ಕೆ ಹೆಚ್ಚಿನ ಅನುದಾನ ನೀಡಿ ಚಟುವಟಿಕೆಗಳನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು ಇದಕ್ಕುತ್ತರಿಸಿದ ಸಚಿವರು, ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆಯಲ್ಲಿ ನೋಂದಣಿ ಮಾಡಲಾಗಿದೆ. ನಾರಾಯಣ ಕೋಶ ದಲ್ಲಿದ್ದ 10 ಕೋಟಿ ರೂ.ಗಳನ್ನು ನಾರಾ ಯಣಗುರು ಅಭಿವೃದ್ಧಿ ನಿಗಮಕ್ಕೆ ವರ್ಗಾವಣೆ ಮಾಡಲಾಗಿದೆ ಎಂದರು.

ಬಿಜೆಪಿ ಶಾಸಕ ವಿ.ಸುನೀಲ್ ಕುಮಾರ್ ಮಧ್ಯ ಪ್ರವೇಶಿಸಿ, ನಿಗಮಕ್ಕೆ ಎಂಟು ತಿಂಗಳ ಹಿಂದೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಆದರೆ, ನಿಗಮ ನೋಂದಣಿ ಆಗಿದ್ದು ಜನವರಿಯಲ್ಲಿ ಬಿಜೆಪಿ ಸರ್ಕಾರವಿದ್ದಾಗ ಕೋಶ ಸ್ಥಾಪಿಸಿ ಮೂಲ ಧನ 10 ಕೋಟಿ ರೂ.ಇಡಲಾಗಿತ್ತು. ಅದನ್ನೇ ವರ್ಗಾವಣೆ ಮಾಡಿ ಕೊಂಡಿದ್ದೀರಿ. ಕನಿಷ್ಠ 100 ಕೋಟಿ ರೂ. ಅನುದಾನ ನೀಡಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲ ಕೃಷ್ಣ ಮಾತನಾಡಿ, ಈ ನಿಗಮಕ್ಕೆ 500-600 ಕೋಟಿ ರೂ. ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ಬಿಜೆಪಿ ಅವಧಿಯಲ್ಲಿ ಕೋಶ ಸ್ಥಾಪಿಸಿ 10 ಕೋಟಿ ರೂ. ಇಟ್ಟಿದ್ದು ಬಿಟ್ಟರೆ ಬೇರೆ ಏನೂ ಮಾಡಿಲ್ಲ. ನಾವು ರೂಪರೇಷೆ ಸಿದ್ಧ ಮಾಡಿ ಅಭಿವೃದ್ಧಿ ನಿಗಮ ಮಾಡಿದ್ದೇವೆ. ಹೆಚ್ಚಿನ ಅನುದಾನಕ್ಕೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸುತ್ತೇನೆ ಎಂಬ ಭರವಸೆ ನೀಡಿದರು.

ನಿಗಮಕ್ಕೆ 50 ರಿಂದ 100 ಕೋಟಿ ಅನುದಾನ ಇಡಬೇಕು ಎಂಬ ಅಪೇಕ್ಷೆ ಇದೆ. ನಾರಾಯಣಗುರು ಅಭಿವೃದ್ಧಿ ನಿಗಮದಿಂದ ಆ ಸಮುದಾಯದವರಿಗೆ ನೇರ ಸಾಲ, ಗಂಗಾ ಕಲ್ಯಾಣ ಸೇರಿದಂತೆ ಹಲವಾರು ಸೌಲಭ್ಯ ನೀಡಲಾಗುವುದು ಎಂದೂ ಅವರು ಹೇಳಿದರು.

ಅನ್ಯಾಯ ತಡೆಗೆ ಕ್ರಮ: ಸಚಿವ ಕೃಷ್ಣ ಬೈರೇಗೌಡ

ಮಾರ್ಗಸೂಚಿ ದರ ಪರಿಷ್ಕರಣೆ

ವಿಧಾನಪರಿಷತ್: ಭೂ-ಸ್ವಾಧೀನ ಪ್ರಕ್ರಿಯೆ ಪರಿಹಾರದ ವಿಚಾರದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲು ಕಾಲ ಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆ ಮಾಡುವುದೇ ಪರಿಹಾರವಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ.



ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕೆ.ಎಸ್. ನವೀನ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಭೂ-ಸ್ವಾಧೀನಕ್ಕೆ ರೈತರಿಗೆ ಪರಿಹಾರ ನೀಡುವ ಸಂಬಂಧ 2013ರ ಕಾನೂನಿನಲ್ಲಿ ಸ್ಪಷ್ಟವಾಗಿದೆ. ಈ ಕಾನೂನಿನ ಪ್ರಕಾರ ಭೂ-ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಂತಹ ಭೂಮಿಗೆ ಹೊಸ ದಾಗಿ ಮಾರ್ಗಸೂಚಿ ದರವನ್ನು ಪರಿಷ್ಕರಿಸುವುದಿಲ್ಲ. ಬದಲಾಗಿ ಹಿಂದಿನ ಮಾರ್ಗಸೂಚಿ ದರ ಅಥವಾ ಹಿಂದಿನ ಮೂರು ವರ್ಷದ ಮಾರುಕಟ್ಟೆಯ ನೋಂದಾಯಿತ ಸೇಲ್ ಡೀಡ್ (ಮಾರಾಟ ಪತ್ರ) ದರವನ್ನು ಪರಿಗಣಿಸಲಾಗುತ್ತದೆ. ಆ ಪೈಕಿ ಭೂಮಿ ಹೆಚ್ಚಿನ ದರಕ್ಕೆ ವಹಿವಾಟು ಆಗಿರುವ ಆಧಾರದಲ್ಲಿ ಸರಾಸರಿ ಮೊತ್ತವನ್ನು ಪರಿಹಾರವಾಗಿ ನಿಗದಿಪಡಿಸಲಾಗುತ್ತದೆ ಎಂದು ವಿವರಿಸಿದರು.

ಕೆಲವು ಕಡೆ ಮಾರ್ಗಸೂಚಿ ದರಕ್ಕೂ ಮಾರುಕಟ್ಟೆ ದರಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಕೆಲವು ಕಡೆ ಭೂಮಿ ಮಾರ್ಗಸೂಚಿ ದರ 2 ಲಕ್ಷ ಇದ್ದರೆ, ಮಾರುಕಟ್ಟೆ ಮೌಲ್ಯ 70 ರಿಂದ 80 ಲಕ್ಷ ಇದೆ. ಪರಿಣಾಮ ಕಪ್ಪು ಹಣದ ವಹಿವಾಟಿಗೂ ಇದು ಕಾರಣವಾಗಿದೆ. ಹೀಗಾಗಿ ಈ ಎಲ್ಲಾ ಅಕ್ರಮ ವಹಿವಾಟುಗಳನ್ನೂ ನಿಯಂತ್ರಿಸಿ ರೈತರಿಗೂ ನ್ಯಾಯ ಬದ್ಧ ಪರಿಹಾರ ನೀಡಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆಯೊಂದೇ ಪರಿಹಾರ ಎಂದು ಅವರು ವಿವರಿಸಿದರು. ರೈತರಿಗೆ ಅನ್ಯಾಯವಾಗದಂತೆ ಪರಿಹಾರ ನೀಡಲು ಸರ್ಕಾರ ಬದ್ಧವಾಗಿದ್ದು, ದರ ಪರಿಷ್ಕರಣೆಯಿಂದ ರೈತರಿಗೆ ಮತ್ತಷ್ಟು ಅನುಕೂಲ ವಾಗಲಿದೆ. ಅಕ್ರಮ ಹಾಗೂ ಕಪ್ಪು ಹಣ ವಹಿವಾಟಿಗೂ ತಡೆಯಾಗಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಕೆ.ಎಸ್. ನವೀನ್ ಅವರ ಹಳೆಯ ಮಾರ್ಗಸೂಚಿ ದರದ ಆಧಾರದಲ್ಲೇ ಪರಿಹಾರದ ಮೊತ್ತವನ್ನು ನಿಗದಿಪಡಿಸುವುದು ರೈತರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ? ಎಂಬ ಮರುಪ್ರಶ್ನೆಗೆ ಉತ್ತರ ನೀಡಿದ ಕೃಷ್ಣ ಬೈರೇಗೌಡ, ಸರ್ಕಾರ ಪ್ರತಿನಿತ್ಯ ಒಂದಲ್ಲಾ ಒಂದು ಕಾರಣಕ್ಕೆ ಭೂ- ಸ್ವಾಧೀನ ಮಾಡುತ್ತಲೇ ಇರುತ್ತದೆ. ಕಾಲದಿಂದ ಕಾಲಕ್ಕೆ ದರ ಪರಿಷ್ಕರಣೆ ಮಾಡದಿದ್ದಲ್ಲಿ ರೈತರಿಗೆ ನಷ್ಟವಾಗುತ್ತದೆ ಎಂಬುದು ಸತ್ಯ. ಇದೇ ಕಾರಣಕ್ಕೆ ನಾವೂ ಮಾರ್ಗಸೂಚಿ ದರ ಪರಿಷ್ಕರಣೆ ಆಗಬೇಕು ಎನ್ನುತ್ತೇವೆ. ಆದರೆ, ಅದಕ್ಕೂ ವಿರೋಧ ವ್ಯಕ್ತಪಡಿಸುತ್ತಾರೆ ಎಂದು ವಿಷಾದಿಸಿದರು.

90 ದಿನಗಳೊಳಗಾಗಿ ಹುದ್ದೆ ಭರ್ತಿ: ಹೆಬ್ಬಾಳಕರ್

ವಿಧಾನಸಭೆ: ಅಂಗನವಾಡಿ ಕೇಂದ್ರಗಳಲ್ಲಿ ಯಾವುದೇ ಹುದ್ದೆ ಖಾಲಿಯಾದ 90 ದಿನಗಳೊಳಗಾಗಿ ಭರ್ತಿ ಮಾಡಬೇಕೆಂದು ಕಳೆದ ಡಿಸೆಂಬರ್‌ನಲ್ಲೇ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.



» ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭರವಸೆ

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಆಯ್ಕೆ ಸಮಿತಿ ಮೂಲಕ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ ಎಂದರು.

ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಆಯ್ಕೆ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡಲಾಗುತ್ತಿದೆ. ಆ ಊರಿನ ನಿವಾಸಿಗಳು ಇಲ್ಲದಿದ್ದರೆ, ಗ್ರಾಮ ಪಂಚಾಯತ್ ಅಥವಾ ಹೋಬಳಿ ವ್ಯಾಪ್ತಿಯಲ್ಲಿ ವಾಸವಾಗಿದ್ದರೂ ಅಂಥ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು ಎಂದು ತಿಳಿಸಿದರು.

ಉಡುಪಿ ಜಿಲ್ಲೆಯಲ್ಲಿ 26 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 132 ಅಂಗನವಾಡಿ ಸಹಾಯಕಿ ಹುದ್ದೆಗಳು ಖಾಲಿಯಿವೆ. ಇದರಲ್ಲಿ 16 ಅಂಗನವಾಡಿ ಕಾರ್ಯಕರ್ತೆಯರು ಹಾಗು 131 ಅಂಗನವಾಡಿ ಸಹಾಯಕಿ ಹುದ್ದೆಗಳ ಆನ್‌ಲೈನ್ ನೇಮಕಾತಿ ಪ್ರಕ್ರಿಯೆಯೂ ಅಂತಿಮ ಹಂತದಲ್ಲಿದೆ. ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ತಾತ್ಕಾಲಿಕ ಆಯ್ಕೆ ಪಟ್ಟಿ ಹೊರಡಿಸಲಾಗಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಾಹಿತಿ ನೀಡಿದರು.

ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ

ವಿಧಾನಸಭೆ: ಮುಂದಿನ ಎರಡು ತಿಂಗಳಲ್ಲಿ 2023-24 ಮತ್ತು 2024-25ನೇ ಉದ್ಯೋಗಿನಿ ಯೋಜನೆಯ ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಸಿದ್ದು ಸವದಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶಾಸಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳ ಆಯ್ಕೆ ಆಗುವುದು ವಿಳಂಬವಾಗಿದ್ದರಿಂದ ಸಹಾಯಧನ ಪಾವತಿಗೆ ತಡವಾಗಿದೆ. ಈ ಸಂಬಂಧ ಸಮಿತಿ ಸಭೆಗಳನ್ನು ತುರ್ತಾಗಿ ನಡೆಸಿ, ಶಾಸಕರನ್ನು ಖುದ್ದಾಗಿ ಭೇಟಿ ಮಾಡಿ ಆಯ್ಕೆ ಸಮಿತಿ ಸಭೆಯನ್ನು ನಡೆಸುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು. ಈ ವರ್ಷದ ಉದ್ಯೋಗಿನಿ ಯೋಜನೆಯ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಉದ್ಯೋಗಿನಿ ಯೋಜನೆಯನ್ನು ಜಾರಿಗೆ ತಂದಿರುವುದೇ ಮಹಿಳಾ ಸಬಲೀಕರಣಕ್ಕಾಗಿ. ಜೊತೆಗೆ ಗೃಹಲಕ್ಷ್ಮೀ, ಶಕ್ತಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು. ಉದ್ಯೋಗಿನಿ ಯೋಜನೆಯ ಸಹಾಯಧನ ತಲುಪಲು ಬ್ಯಾಂಕ್‌ಗಳು ಕೂಡ ಸರಿಯಾಗಿ ಸಹಕರಿಸುತ್ತಿಲ್ಲ. ಶಾಸಕರು ಆಯ್ಕೆ ಮಾಡಿದ ಫಲಾನುಭವಿಗಳಲ್ಲಿ ಸಿಬಿಲ್ ಸ್ಕೋರ್ ಆಧಾರದ ಮೇಲೆ ಬ್ಯಾಂಕ್‌ಗಳೂ ಫಲಾನುಭವಿಗಳನ್ನು ಆಯ್ಕೆ ಮಾಡಲು ವಿಳಂಬ ಮಾಡುತ್ತಿವೆ. ಈ ಕುರಿತು ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಬ್ಯಾಂಕ್ಸ್ (ಎಸ್‌ಎಲ್‌ಬಿಸಿ) ಕಮಿಟಿಯಲ್ಲಿ ಈ ಸಂಬಂಧ ಸಾಲ ಮಂಜೂರಾತಿಯನ್ನು ತುರ್ತಾಗಿ ಕ್ರಮವಹಿಸಲು ತಿಳಿಸಲಾಗಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.



ಕಾಲೊನಿಗಳ ಅಭಿವೃದ್ಧಿಗೆ ನೀಡಿದ್ದ ಅನುದಾನ ಕಡಿತ

ವಿಧಾನಸಭೆ: ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಗತಿ ಕಾಲೊನಿ ಅಭಿವೃದ್ಧಿಗೆ 70 ಕೋಟಿ ರೂ. ಅನುದಾನ ನೀಡಲಾಗಿದೆ. ಇದರಲ್ಲಿ ಹುಣಸೂರು ಮತ್ತು ಕೃಷ್ಣರಾಜ ಕ್ಷೇತ್ರಗಳಿಗೆ ತಲಾ 1 ಕೋಟಿ ರೂ. ಮಾತ್ರ ಕೊಟ್ಟಿದೆ ಎಂದು ಜೆಡಿಎಸ್ ಶಾಸಕ ಹರೀಶ್ ಗೌಡ ಆಕ್ಷೇಪಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ವರುಣಾ ಕ್ಷೇತ್ರಕ್ಕೆ 14 ಕೋಟಿ ರೂ.ಗಳನ್ನು ನೀಡಲಾಗಿದೆ. ಒಟ್ಟು 11 ಕ್ಷೇತ್ರಗಳಲ್ಲಿ 9 ಕ್ಷೇತ್ರಗಳಿಗೆ 4-14 ಕೋಟಿ ರೂ.ವರೆಗೆ ಅನುದಾನ ಹಂಚಿಕೆ ಮಾಡಲಾಗಿದೆ. ನಮ್ಮ ಕ್ಷೇತ್ರದಲ್ಲಿ ಶೇ.35ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದವರಿದ್ದಾರೆ ಎಂದರು.

ಶಾಸಕ ಟಿ.ಎ.ಶರವಣ ಕೇಳಿದ ಪ್ರಶ್ನೆಗೆ ರಾಮಲಿಂಗಾರೆಡ್ಡಿ ಉತ್ತರ

ನಕಲಿ ಪ್ರಮಾಣಪತ್ರ: ಕಾನೂನು ಕ್ರಮ

ವಿಧಾನಪರಿಷತ್: ಸಾರಿಗೆ ಇಲಾಖೆಯಲ್ಲಿ ಲಿಪಿಕ ವರ್ಗದವರು ಬಡ್ತಿ ಪಡೆಯಲು ನಕಲಿ ಡಿಪ್ಲೊಮಾ ಪ್ರಮಾಣಪತ್ರ ನೀಡಿದ ಆರೋಪದ ಸಂಬಂಧ ಈಗಾಗಲೇ ನಿವೃತ್ತ ನ್ಯಾಯಾಧೀಶ ನಾರಾಯಣ ಅವರನ್ನು ಈಗಾಗಲೇ ನೇಮಿಸಿ ಗೆಜೆಟ್ ನೋಟಿಫಿಕೇಶನ್ ಮಾಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಶಾಸಕ ಟಿ.ಎ.ಶರವಣ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಸದ್ಯ ನಿವೃತ್ತ ನ್ಯಾಯಾಧೀಶರ ಹಂತದಲ್ಲಿದೆ. ತನಿಖೆ ನಡೆಸ ಲಾಗುವುದು ಎಂದರು.

ಟಿ.ಎ. ಶರವಣ ಮಾತನಾಡಿ, ಕೆಸಿಎಸ್‌ಆರ್ ಕಾಯ್ದೆಯಂತೆ ನಕಲಿ ಪ್ರಮಾಣ ಪತ್ರ ನೀಡಿದವರ ಮೇಲೂ ಕ್ರಮವಾಗಬೇಕು. ಮೈಸೂರು, ಬೆಳಗಾವಿಗಳಲ್ಲಿ ಪರೀಕ್ಷೆ ಬರೆದವರು ಕೇವಲ 1 ಗಂಟೆಯಲ್ಲಿ ಬೆಂಗಳೂರಿಗೆ ಬಂದು ಹೇಗೆ ಪರೀಕ್ಷೆ ಬರೆಯಲು ಸಾಧ್ಯ? ಇವರಿಗೆ ಹೇಗೆ ಪ್ರಮಾಣ ಪತ್ರವನ್ನು ಕೊಡಲಾಯಿತು? ಇದರ ಬಗ್ಗೆಯೂ ತನಿಖೆಯಾಗಿ ಕ್ರಮ ಆಗಬೇಕು. ಕಷ್ಟಪಟ್ಟ ಅಭ್ಯರ್ಥಿಗಳಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ರಾಮಲಿಂಗಾರೆಡ್ಡಿ, ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಅಧಿಕಾರಿಗಳ ನಡೆಗೆ ಆಕ್ಷೇಪ

ಸಾರಿಗೆ ಇಲಾಖೆಯಲ್ಲಿ ಲಿಪಿಕ ನೌಕರರುಗಳು ಡಿಪ್ಲೊಮಾ ನಕಲಿ ಪ್ರಮಾಣಪತ್ರ ಪಡೆದುಕೊಂಡ ಬಗ್ಗೆ ಕಳೆದ ಬೆಳಗಾವಿ



ಅಧಿವೇಶನದಲ್ಲೂ ಪ್ರಸ್ತಾಪಿಸಲಾಗಿತ್ತು. ಆಗ ಸಂಪೂರ್ಣ ವರದಿ ಕೊಡಿ ಲೋಕಾಯುಕ್ತ ತನಿಖೆಗೆ ಆದೇಶಿಸುತ್ತೇನೆ ಎಂದಿದ್ದರು. ಅದರಂತೆ 2025 ರ ಡಿ.15 ರಂದು ಸಚಿವರಿಗೆ ಟಿಪ್ಪಣಿಯೊಂದಿಗೆ ಸಂಪೂರ್ಣ ದಾಖಲಾತಿ ನೀಡಿದ್ದೆ. ಆದರೆ, ಮೂರು ತಿಂಗಳು ಕಳೆದರೂ ನೌಕರರ ಮೇಲೆ ಯಾವುದೇ ತನಿಖೆಯಾಗಲಿ, ಕ್ರಮವಾಗಲಿ ಆಗಿಲ್ಲ. ಈಗ ಸದನದಲ್ಲಿ ಮಾತನಾಡಬೇಕು ಎಂದು ಫೆ.23 ರಂದು ಪ್ರಶ್ನೆ ಕೊಟ್ಟ ಒಂದು ವಾರಗಳ ನಂತರ ಅಕ್ರಮ ಎಸಗಿದವರಿಗೆ ನೋಟಿಸ್ ಕೊಟ್ಟಿದ್ದಾರೆ. 15 ದಿನದಲ್ಲಿ ಉತ್ತರ ಕೊಡಿ ಎಂದು ನೆಪಕ್ಕೆ ಹೇಳಿದ್ದಾರೆ. ಸಚಿವರ ಬಗ್ಗೆ ಗೌರವ ಇದೆ. ಅವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಇಲಾಖೆಯ ಅಧಿಕಾರಿಗಳು ಸಚಿವರನ್ನೂ ಯಾವ ರೀತಿ ದಾರಿ ತಪ್ಪಿಸುವ ಕೆಲಸ ಮಾಡುತ್ತಾರೆ ಎಂದು ಟಿ.ಎ. ಶರವಣ ಬೇಸರ ವ್ಯಕ್ತಪಡಿಸಿದರು.

ನೈಸ್ ರಸ್ತೆ ದ್ವಿಚಕ್ರ ವಾಹನ ಸವಾರರು ನಿರಾಳ: ಸತೀಶ್ ಜಾರಕಿಹೊಳಿ

ಟೋಲ್ ಶುಲ್ಕ ರದ್ದಿಗೆ ಚಿಂತನೆ

ವಿಧಾನಪರಿಷತ್: ನೈಸ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳಿಂದ ವಸೂಲಿ ಮಾಡುತ್ತಿರುವ ಟೋಲ್ ಶುಲ್ಕವನ್ನು ರದ್ದುಪಡಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭರವಸೆ ನೀಡಿದ್ದಾರೆ.



ಮೇಲ್ಮನೆಯಲ್ಲಿ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್‌ನ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಕುರಿತು ಸಚಿವ ಸಂಪುಟ ಉಪಸಮಿತಿ ರಚಿಸಿದ್ದೇವೆ. ಇದನ್ನು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು. 2025ರ ಏ.11ರಂದು ನಡೆದ ಸಚಿವ ಸಂಪುಟ ಸಭೆ ನಿರ್ಣಯದಂತೆ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿಪಿ) ಯೋಜನೆ ಪರಿಶೀಲಿಸಲು ಸಚಿವ ಸಂಪುಟ ಉಪಸಮಿತಿ ರಚಿಸಲಾಗಿದೆ. ಈ ಸಮಿತಿಯು ಈವರೆಗೆ ರಸ್ತೆ ನಿರ್ಮಾಣಕ್ಕೆ ಮಾಡಿರಬಹುದಾದ ಹೂಡಿಕೆ, ಬಳಸಿದ ಜಮೀನು ಹಾಗೂ 2008 ರಿಂದ ಈವರೆಗೆ ಟೋಲ್ ಮೂಲಕ ಗಳಿಸಿರುವ ಆದಾಯದ ಲೆಕ್ಕವನ್ನು ಪರಿಶೀಲಿಸಲಿದೆ ಎಂದರು.

ಸರ್ಕಾರ ಹಾಗೂ ಮೆ.ನಂದಿ ಇನ್ ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯ ಒಪ್ಪಂದದ ಅನ್ವಯ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಜಮೀನನ್ನು ಕೆಐಎಡಿಬಿ ವತಿಯಿಂದ ಭೂ-ಸ್ವಾಧೀನಪಡಿಸಿಕೊಂಡು ಸಂಸ್ಥೆಗೆ ಹಸ್ತಾಂತರಿಸುವುದು ಹಾಗೂ ಸಂಸ್ಥೆಯು ಟೋಲ್ ರಸ್ತೆ ಮತ್ತು 5 ಟೌನ್‌ಶಿಫ್‌ಗಳ ನಿರ್ಮಾಣವನ್ನು ಕೈಗೊಳ್ಳುವುದು ಯೋಜನೆಯ ಮುಖ್ಯ ಷರತ್ತು ಆಗಿರುತ್ತದೆ. ಈ ನಿಟ್ಟಿನಲ್ಲಿ ಉಳಿದಂತೆ, ಕೆಲಸದ ಒಪ್ಪಂದದಲ್ಲಿರುವಂತೆ ಎಲ್ಲಾ ಷರತ್ತುಗಳನ್ನು ನೈಸ್ ಸಂಸ್ಥೆಯವರು ಬಿಎಂಐಸಿಸಿ ಯೋಜನೆಯನ್ನು ಅನುಷ್ಠಾನ ಗೊಳಿಸಬೇಕಾಗಿರುತ್ತದೆ.

ಹಾಗಾಗಿ ಬಿಎಂಐಸಿ ಯೋಜನೆಯ ರಸ್ತೆಗಳಲ್ಲಿ ಉಂಟಾಗುತ್ತಿರುವ ಅಪಘಾತಗಳನ್ನು ತಗ್ಗಿಸಲು, ವೇಗದ ಮಿತಿ ನಿಗಾವಹಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೊಳಪಡುವ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಅಳವಡಿಸಿರುವ ಎಐ ಕ್ಯಾಮರಾಗಳನ್ನು ನೈಸ್ ರಸ್ತೆಯಲ್ಲಿ ಅಳವಡಿಸಲು ನಿರ್ಧರಿಸಲಾಗಿದೆ. ನೈಸ್ ಸಂಸ್ಥೆಯವರು ಈಗಿರುವ ರಸ್ತೆಗಳಲ್ಲಿ 40 ಸ್ಥಳ ಗುರುತಿಸಿದ್ದು, 2 ಸ್ಥಳಗಳಲ್ಲಿ ಎಐ ಕ್ಯಾಮರಾ ಅಳವಡಿಸಿದೆ ಎಂದು ಸಚಿವರು ಮಾಹಿತಿ ನೀಡಿದರು.

ಸೇತುವೆಗಳ ಪುನರ್ ನಿರ್ಮಾಣ

ವಿಧಾನಪರಿಷತ್: ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಮೇಲಿರುವ ಸೇತುವೆಗಳ ಪುನರ್ ನಿರ್ಮಾಣ ಹಾಗೂ ಪುನಶ್ಚೇತನ, ಕಾಲುಸಂಕ ಕಾಮಗಾರಿಗಳನ್ನು 2 ಸಾವಿರ ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ತಾತ್ವಿಕ ಅನುಮೋದನೆ ನೀಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು. ಕಲಾಪದ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಐವನ್ ಡಿಸೋಜಾ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರಾವಳಿ ಭಾಗದಲ್ಲಿ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಲಘುವಾಹನ ಸಂಚಾರಕ್ಕೆ ಮಾತ್ರ ಯೋಗ್ಯವಾಗಿರುವ 15 ಸೇತುವೆಗಳನ್ನು ಗುರುತಿಸಲಾಗಿದೆ ಎಂದರು. ಕರಾವಳಿ ಭಾಗದಲ್ಲಿ ಸೇತುವೆ ಕೆಳಭಾಗದಲ್ಲಿ ಮರಳನ್ನು ತೆಗೆಯುತ್ತಿರುವ ಪ್ರಕರಣಗಳ ಬಗ್ಗೆ ಡಿಸಿ ಮಾಹಿತಿ ಪಡೆದು, ಕ್ರಮವಹಿಸಲಾಗುವುದು. ಕರಾವಳಿ ಸೇತುವೆಗಳ ಪುನರ್ ನಿರ್ಮಾಣ, ಪುನಶ್ಚೇತನಕ್ಕಾಗಿ 561.12 ಕೋಟಿ ರೂ. ಅಂದಾಜು ಮೊತ್ತದ 28 ಕಾಮಗಾರಿಗಳು ಅನುಮೋದನೆಗೊಂಡಿರುತ್ತವೆ ಹಾಗೂ 129 ಕೋಟಿ ರೂ. ಅಂದಾಜು ಮೊತ್ತದ 4 ಕಾಲುಸಂಕ ಹಾಗೂ 3 ಸೇತುವೆ ಪುನರ್ ಕಾಮಗಾರಿಗಳ ಪ್ರಸ್ತಾವನೆ ಇದೆ ಎಂದರು.

ಸಂಪಾದಕೀಯ

ಅನಿಲ ಸಮಸ್ಯೆ ಶಾಶ್ವತವಲ್ಲ

ಸಮಸ್ಯೆ ಒಂದು ದೇಶ ತನ್ನನ್ನು ರಕ್ಷಿಸಿಕೊಳ್ಳಲೊ ಅಥವಾ ಮಹತ್ವಾಕಾಂಕ್ಷೆಯಿಂದಲೋ ಮಾಡುವ ಯುದ್ಧ ಆ ದೇಶದ ಸಾಮಾಜಿಕ, ಆರ್ಥಿಕ ವ್ಯವಸ್ಥೆಗಳ ಮೇಲೆ ಎಂಥ ಪರಿಣಾಮವನ್ನು ಬೀರುತ್ತದೆ ಎಂಬುದು ಯುದ್ಧದಷ್ಟು ಜನಪ್ರೀಯ ಕಥನವಲ್ಲ! ಯುದ್ಧದಲ್ಲಿ ಪ್ರತ್ಯಕ್ಷ ಪಾಲ್ಗೊಳ್ಳುವ ದೇಶಗಳು ಕದನ ವಿರಾಮದ ನಂತರ ಸೊರಗುತ್ತವೆ. ಮತ್ತೆ ಎದ್ದೇಳಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿರುತ್ತವೆ. ಬಹುತೇಕ ಬಾರಿ ಆ ದೇಶದ ಯುದ್ಧಪೂರ್ವದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಸಂಪೂರ್ಣ ಬದಲಾಗಿ ಹೊಸ ನಿಯಮಗಳು ಜಾರಿಗೆ ಬರುತ್ತವೆ. ಇದರ ಉದ್ದೇಶ ತನ್ನನ್ನು ಸುಧಾರಿಸಿಕೊಳ್ಳುವುದೇ ಹೊರತು ಯುದ್ಧದಿಂದ ತಾನೇನೋ ಕಲಿತೆ ಎಂಬುದಲ್ಲ.

ಜಗತ್ತಿನಲ್ಲಿ ಯುದ್ಧಗಳು ಕೇವಲ ಎರಡು ದೇಶಗಳ ನಡುವೆ ಮಾತ್ರ ಸಂಭವಿಸುವುದಲ್ಲ ಎಂಬ ಸರಳ ಸತ್ಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಯುದ್ಧದ ಪರಿಣಾಮ ಇಡೀ ಜಗತ್ತಿನ ಮೇಲಾಗುತ್ತದೆ. ಎರಡು ಮಹಾಯುದ್ಧಗಳು ವಿಶ್ವಸಮರದ ಸ್ವರೂಪವನ್ನು ಪಡೆದುಕೊಂಡಿದ್ದು ಕೂಡ ಯುದ್ಧಗಳ ಇಂಥ ವ್ಯಾಪಿಸಿಕೊಳ್ಳುವ ಗುಣದಿಂದ. ಆದರೆ ಯುದ್ಧದ ಪರಿಣಾಮಗಳನ್ನು ಕೂಲಂಕಷವಾಗಿ ನಿಕಷಕ್ಕೆ ಒಡ್ಡುವಲ್ಲಿ ವಿಶ್ಲೇಷಣೆಗಳು ಸೋತಿವೆ. ಇಂದು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಅಮೆರಿಕಾ, ಇಸ್ರೇಲ್ ಮತ್ತು ಇರಾನಿಗೆ ಮಾತ್ರ ಸಂಬಂಧಿಸಿದ್ದಾಗಿ ಉಳಿದಿಲ್ಲ. ಮಧ್ಯಪ್ರಾಚ್ಯದ ಅನೇಕ ದೇಶಗಳೂ ಈಗ ಯುದ್ಧದಲ್ಲಿ ನೇರವಾಗಿ ಭಾಗಿಯಾಗಿವೆ. ಭಾರತಕ್ಕೆ ಈ ಎಲ್ಲಾ ದೇಶಗಳ ಜೊತೆ ನಾನಾ ವಿಷಯಗಳಲ್ಲಿ ಸಂಬಂಧವಿದೆ. ವ್ಯಾಪಾರ, ವಾಣಿಜ್ಯ, ರಾಜತಾಂತ್ರಿಕ ವಿಷಯಗಳೇ ಅಲ್ಲದೆ ಈ ಎಲ್ಲಾ ದೇಶಗಳಲ್ಲಿ ಲಕ್ಷಾಂತರ ಭಾರತೀಯರಿದ್ದಾರೆ. ಭಾರತಕ್ಕೀಗ ಯಾವ ದೇಶಗಳ ಮೇಲೆ ಬಾಂಬು ಬಿದ್ದರೂ ಪರಿಣಾಮ ತನ್ನ ಮೇಲಾದಂತೆ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯವಾಗಿ ತೈಲ ಮತ್ತು ತೈಲೋತ್ಪನ್ನಗಳನ್ನು ಅವಲಂಬಿರುವ ದೇಶಗಳು ಮಧ್ಯಪ್ರಾಚ್ಯದ ಯುದ್ಧದಿಂದ ಸಂತ್ರಸ್ಥಗೊಂಡಿವೆ.

ಭಾರತದಲ್ಲಿ ಅಡಿಗೆ ಅನಿಲದ ಕೊರತೆ ಕಂಡುಬಂದಿದೆ ಎಂಬ ಹುಯಿಲು ಮತ್ತು ಯುದ್ಧದ ಪರಿಣಾಮಗಳನ್ನು ಚಿಂತಿಸುವಂತೆ ಮಾಡಿದೆ. ಅನಿಲದ ದಾಸ್ತಾನು ಇಟ್ಟುಕೊಳ್ಳದ ದೇಶದ ಆಡಳಿತ ಮುಂದಾಲೋಚನೆಯಿಲ್ಲದ್ದು ಎಂದು ತೆಗಳುವುದೇ ಮುಖ್ಯ ಎಂಬಂತೆ ಅದು ಟೀಕೆಗೊಳಗಾಗುತ್ತಿದೆ. ಆದರೆ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ನಾನಾ ಕಾರಣಗಳಿಂದ ವಿಳಂಬವಾಗುತ್ತಿದೆಯೇ ವಿನಾ ಸಮಸ್ಯೆ ಅಡಿಗೆ ಮನೆಗೆ ಮುಟ್ಟಿಲ್ಲ. ಆದರೆ ಮುಂದೊಂದು ದಿನ ಆ ಸ್ಥಿತಿಯೂ ಬರಬಹುದು. ಯುದ್ಧದ ಪರಿಣಾಮವನ್ನು ಯಾವ ಆಡಳಿತದಿಂದಲೂ ಬದಲಿಸಲಾಗುವುದಿಲ್ಲ. ಆದರೆ ಅನಿಲ ಕೊರತೆಗೆ ಸರ್ಕಾರವನ್ನು ಟೀಕಿಸುವುದು ಉತ್ತರವಾಗದು. ಇಂಥ ಸ್ಥಿತಿ ಪ್ರತಿ ದೇಶಗಳಿಗೂ ಬಂದಂತೆ ಭಾರತಕ್ಕೂ ಬರಲಿದೆ. ಆದರೆ ಚಾಣಾಕ್ಷ ಆಡಳಿತ ಸಮಸ್ಯೆಗೆ ಶೀಘ್ರ ಪರಿಹಾರವನ್ನು ಹುಡುಕುತ್ತದೆ. ಭಾರತದ ಆಡಳಿತ ಅಂಥ ಪರಿಹಾರವನ್ನು ಖಂಡಿತಾ ಶೀಘ್ರವಾಗಿ ಹುಡುಕುತ್ತದೆ. ಅದರ ಬಳಿ ನಾನಾ ಉಪಾಯಗಳಂತೂ ಇದ್ದೇ ಇರುತ್ತವೆ. ಆದರೆ ಅನಿಲದ ಮೂಲಕ ಆರಂಭವಾಗಿರುವುದು ಸರ್ಕಾರವನ್ನು ಹೊಣೆಮಾಡುವ ಪೂರ್ವಗ್ರಹಪೀಡಿತ ಸಂಚು ಎಂಬುದನ್ನು ಅರಿಯಬೇಕಿದೆ. ಪರರಿಂದ ಅವಲಂಬಿತವಾಗಿರುವ ಎಲ್ಲಾ ಸರಕುಗಳೂ ಒಂದಲ್ಲಾ ಒಂದು ದಿನ ಇಂಥ ದುಸ್ಥಿತಿಯನ್ನು ತರುತ್ತವೆ. ಅದಕ್ಕೆ ಪರಿಹಾರ ಕೂಡ ಭಾರತದೊಳಗೆಯೇ ಇದೆ. ಅದರತ್ತ ಚಿಂತನೆ ಹರಿಯಲಿ.

ಶತ್ರು ಆಸ್ತಿಗಳ ನಗದೀಕರಣಕ್ಕೆ ಅಡ್ಡಿ ಮಾಡಿದ್ದು ಯಾರು?

ಗುರುತರ

ಸೋಮಶೇಖರ ಸಿ.ಜೆ.
sompreethi@gmail.com



ಭಾರತ ವಿಭಜನೆಯ ಸಮಯದಲ್ಲಿ ಉಂಟಾದ ಅತಿ ದೊಡ್ಡ ಐತಿಹಾಸಿಕ ಗಾಯಗಳಲ್ಲಿ ಒಂದು 'ಶತ್ರು ಆಸ್ತಿ' ಎಂಬ ಪ್ರಶ್ನೆ. ಎಲ್ಲರಿಗೂ ಗೊತ್ತೇ ಇರಬೇಕು. ದೇಶ ವಿಭಜನೆ ಕಾಲದಲ್ಲಿ ಆದ ಗೊಂದಲಗಳು, ಸಾವು ನೋವುಗಳು, ಕಷ್ಟ ಕಾರ್ಪಣ್ಯಗಳು... ಇದರ ನಡುವೆಯೇ, ಆಗ ಇಲ್ಲಿ ಬಿಟ್ಟು ಹೋದ ಆಸ್ತಿಗಳನ್ನು ಏನು ಮಾಡಬೇಕು ಎಂಬುದೇ ಬಹಳಷ್ಟು ದಿನಗಳ ವರೆಗೆ ಪರಿಹಾರ ಮಾಡದ ಸಂಗತಿಯಾಗಿತ್ತು.

ನೋಡಿ, 1947ರಲ್ಲಿ ದೇಶ ವಿಭಜನೆಯಾಗುತ್ತಿದ್ದಂತೆ ಲಕ್ಷಾಂತರ ಜನರು ಗಡಿ ದಾಟಿ ಪಾಕಿಸ್ತಾನಕ್ಕೆ ವಲಸೆ ಹೋದರು. ಅವರಲ್ಲಿ ಹಲವರು ಭಾರತದಲ್ಲಿದ್ದ ತಮ್ಮ ಮನೆಗಳು, ಭೂಮಿಗಳು, ಕಾರ್ಖಾನೆಗಳು, ವ್ಯಾಪಾರ ಕಟ್ಟಡಗಳು ಮತ್ತು ಅನೇಕ ಮೌಲ್ಯಯುತ ಆಸ್ತಿಗಳನ್ನು ಇಲ್ಲಿ ಬಿಟ್ಟು ಹೋಗಿದ್ದರು. ದೇಶದ ಭದ್ರತೆ ಮತ್ತು ಕಾನೂನು ದೃಷ್ಟಿಯಿಂದ ಈ ಆಸ್ತಿಗಳನ್ನು ಸರ್ಕಾರ 'ಶತ್ರು ಆಸ್ತಿ' ಎಂದು ಘೋಷಿಸಿ ತನ್ನ ವಶಕ್ಕೆ ತೆಗೆದುಕೊಂಡಿತು. ನಂತರ 1965 ಮತ್ತು 1971ರ ಭಾರತಪಾಕಿಸ್ತಾನ ಯುದ್ಧಗಳ ಸಂದರ್ಭದಲ್ಲೂ ಇದೇ ಕ್ರಮ ಮುಂದುವರಿಯಿತು. ಈ ಆಸ್ತಿಗಳನ್ನು ನಿರ್ವಹಿಸಲು 'ಕಸ್ಟೋಡಿಯನ್ ಆಫ್ ಎನಮಿ ಪ್ರಾಪರ್ಟಿ ಫಾರ್ ಇಂಡಿಯಾ'ಎಂಬ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಲಕ್ನೋ, ಕೋಲ್ಕತಾ ಮತ್ತು ಮುಂಬೈ ಈ ಸಂಸ್ಥೆಯ ಪ್ರಮುಖ ಕೇಂದ್ರಗಳಾಗಿವೆ. ದಿಲ್ಲಿಯಲ್ಲಿ ಇದರ ಪ್ರಧಾನ ಕಚೇರಿ ಇದೆ.

ದೇಶಾದ್ಯಂತ ಇಂತಹ ಆಸ್ತಿಗಳ ಸಂಖ್ಯೆ ಸಾವಿರಾರು. ಸರ್ಕಾರದ ದಾಖಲೆಗಳ ಪ್ರಕಾರ ಸುಮಾರು 12,000ಕ್ಕೂ ಹೆಚ್ಚು ಶತ್ರು ಆಸ್ತಿಗಳನ್ನು ಭಾರತ ಸರ್ಕಾರ ವಶಕ್ಕೆ ತೆಗೆದುಕೊಂಡಿದೆ. ಇವುಗಳಲ್ಲಿ ಮನೆಗಳು, ವ್ಯಾಪಾರ ಕಟ್ಟಡಗಳು, ಭೂಮಿಗಳು, ಕೈಗಾರಿಕಾ ಘಟಕಗಳು, ಷೇರುಗಳು ಸೇರಿದಂತೆ ಅನೇಕ ರೀತಿಯ ಆಸ್ತಿಗಳು ಸೇರಿವೆ. ರಾಜ್ಯವಾರು ನೋಡಿದರೆ ಉತ್ತರ ಪ್ರದೇಶದಲ್ಲೇ ಅತ್ಯಧಿಕ ಶತ್ರು ಆಸ್ತಿಗಳು ಪತ್ತೆಯಾಗಿವೆ. ಅದರ ನಂತರ ಪಶ್ಚಿಮ ಬಂಗಾಳ, ದೆಹಲಿ, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳು ಬರುತ್ತವೆ. ವಿಶೇಷವಾಗಿ ಲಕ್ನೋ ಘಟಕ ಶತ್ರು ಆಸ್ತಿಗಳ ದಾಖಲೆ, ಕಾನೂನು ವಿಚಾರಣೆ ಮತ್ತು ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಲ್ಲಿ ಸಂವೇದನಾತ್ಮಕವಾಗಿ ಮತ್ತು ಅತಿಸೂಕ್ಷ್ಮವಾಗಿ ಶತ್ರು ಆಸ್ತಿಗಳ ಬಗ್ಗೆ ವ್ಯವಹರಿಸಲಾಗುತ್ತಿದೆ.

ಆದರೆ ದೇಶದ ಆಡಳಿತ ವ್ಯವಸ್ಥೆಯ ವಿಫಲತೆಗಳನ್ನು ತೋರಿಸುವಂತೆ, ಈ ಆಸ್ತಿಗಳ ಪ್ರಶ್ನೆ ಹಲವು ದಶಕಗಳ ಕಾಲ ಗೊಂದಲದಲ್ಲೇ ಉಳಿಯಿತು. ಸ್ವಾತಂತ್ರ್ಯಾನಂತರ ಹಲವು ಸರ್ಕಾರಗಳು ಬಂದರೂ ಶತ್ರು ಆಸ್ತಿಗಳ ಬಗ್ಗೆ ಸ್ಪಷ್ಟ ಮತ್ತು ದೃಢ ನೀತಿ ರೂಪಿಸಲು ವಿಫಲವಾದವು. ಅನೇಕ ಆಸ್ತಿಗಳು ಕಾನೂನು ವಿವಾದಗಳಲ್ಲಿ ಸಿಲುಕಿಕೊಂಡಿದ್ದವು. ಕೆಲವೆಡೆ ಸ್ಥಳೀಯ ಪ್ರಭಾವಿಗಳು ಮತ್ತು ಅಕ್ರಮ ಒತ್ತುವರಿದಾರರು ಆಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು. ಇನ್ನೂ ಕೆಲವು ಕಡೆ ದಾಖಲೆಗಳೇ ಸರಿಯಾಗಿ ಲಭ್ಯವಿರಲಿಲ್ಲ. ಪರಿಣಾಮವಾಗಿ ಸರ್ಕಾರದ ವಶದಲ್ಲಿದ್ದ ಈ ಅಮೂಲ್ಯ ಸಂಪತ್ತು ನಿರ್ಲಕ್ಷ್ಯದಿಂದ ಹಾಳಾಗುತ್ತಲೇ ಹೋಯಿತು. ರಾಷ್ಟ್ರಕ್ಕೆ ಆದಾಯ ತರುವ ಬದಲು ಈ ಆಸ್ತಿಗಳು ನಿರ್ವಹಣಾ ಗೊಂದಲಗಳ ಸಂಕೇತವಾಗಿ ಪರಿಣಮಿಸಿದ್ದವು.

ಸರ್ಕಾರಗಳು ಬದಲಾದರೂ ಸಮಸ್ಯೆ ಬದಲಾಗಲಿಲ್ಲ. ವರ್ಷಗಳ ಕಾಲ ಫೈಲ್‌ಗಳು ಕಚೇರಿಗಳಲ್ಲಿ ಧೂಳು ತಿನ್ನುತ್ತಿದ್ದವು. ನ್ಯಾಯಾಲಯಗಳಲ್ಲಿ ಪ್ರಕರಣಗಳು ಮುಂದುವರಿಯುತ್ತಲೇ ಇದ್ದವು. ಕೆಲವೆಡೆ ಶತ್ರು ಆಸ್ತಿಗಳ ಮೇಲೆ ವಾರಸುದಾರರ ಹಕ್ಕು ಎಂಬ ಹೆಸರಿನಲ್ಲಿ ಹೊಸ ವಿವಾದಗಳು ಹುಟ್ಟಿಕೊಂಡವು. ಈ ಕಾರಣದಿಂದ ಶತ್ರು ಆಸ್ತಿ ಎಂಬ ಪ್ರಶ್ನೆ ದೇಶದ ಆಡಳಿತದ ದೊಡ್ಡ ವೈಫಲ್ಯಗಳಲ್ಲಿ ಒಂದಾಗಿ ಪರಿಣಮಿಸಿತ್ತು. ರಾಷ್ಟ್ರದ ಸಂಪತ್ತೇ ರಾಷ್ಟ್ರಕ್ಕೆ ಉಪಯೋಗವಾಗದ ಸ್ಥಿತಿ ನಿರ್ಮಾಣವಾಗಿತ್ತು.

ಇದಕ್ಕೆ ಪ್ರಮುಖ ತಿರುವು ಬಂದದ್ದು 2014ರ ನಂತರ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಈ ವಿಷಯವನ್ನು ಕೇವಲ ಕಾನೂನು ಪ್ರಕ್ರಿಯೆಯಾಗಿ ಅಲ್ಲ, ರಾಷ್ಟ್ರೀಯ ಸಂಪತ್ತಿನ ಪ್ರಶ್ನೆಯಾಗಿ ನೋಡಲು ಆರಂಭಿಸಿತು. ಹಲವು ವರ್ಷಗಳಿಂದ ಬಾಕಿಯಾಗಿದ್ದ ಸಮಸ್ಯೆಯನ್ನು ಪರಿಹರಿಸಲು ಕಾನೂನು ತಿದ್ದುಪಡಿ ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಯಿತು. 2017ರಲ್ಲಿ 'ಎನಿಮಿ ಪ್ರಾಪರ್ಟಿ(ತಿದ್ದುಪಡಿ ಮತ್ತು ಊರ್ಜಿತ)ಕಾಯ್ದೆ'' ಜಾರಿಗೆ ಬಂತು. ಈ ತಿದ್ದುಪಡಿಯ ಮೂಲಕ ಶತ್ರು ಆಸ್ತಿಗಳ ಮೇಲೆ ಸರ್ಕಾರದ ಹಕ್ಕುಗಳನ್ನು ಸ್ಪಷ್ಟವಾಗಿ ಬಲಪಡಿಸಲಾಯಿತು. ಮುಖ್ಯವಾಗಿ ಶತ್ರು ಆಸ್ತಿಗಳ ವಾರಸುದಾರರು ಅಥವಾ ಸಂಬಂಧಿಕರು ಆಸ್ತಿಯ ಮೇಲೆ ಹಕ್ಕು ಕೇಳುವ ಅವಕಾಶವನ್ನು ಬಹುತೇಕ ಮುಚ್ಚಲಾಯಿತು. ಇದರಿಂದ ದಶಕಗಳ ಕಾಲ ಮುಂದುವರಿದಿದ್ದ ಕಾನೂನು ವಿವಾದಗಳಿಗೆ ದೊಡ್ಡ ಮಟ್ಟದಲ್ಲಿ ತೆರೆ ಬಿದ್ದಿತು. ಇದಾದ ನಂತರ ಶತ್ರು ಆಸ್ತಿಗಳ ನಿಖರ ಪಟ್ಟಿಯನ್ನು ಸಿದ್ಧಪಡಿಸುವ ಕಾರ್ಯ ಪ್ರಾರಂಭವಾಯಿತು. ದೇಶಾದ್ಯಂತ ಇರುವ ಆಸ್ತಿಗಳ ಡಿಜಿಟಲ್ ದಾಖಲೆಗಳನ್ನು ಸೃಷ್ಟಿಸುವ ಕಾರ್ಯ ಕೈಗೊಳ್ಳಲಾಯಿತು. ಹಲವು ಆಸ್ತಿಗಳನ್ನು ಅಕ್ರಮ ಕಬಳಿಕೆಯಿಂದ ಮುಕ್ತಗೊಳಿಸಲು ಕ್ರಮ ತೆಗೆದುಕೊಳ್ಳಲಾಯಿತು. ವರ್ಷಗಳ ಕಾಲ ನಿರ್ಲಕ್ಷ್ಯಕ್ಕೊಳಗಾಗಿದ್ದ ಈ ಆಸ್ತಿಗಳನ್ನು ಮರುಪಡೆಯುವ ಕಾರ್ಯಕ್ಕೆ ಸರ್ಕಾರ ಚುರುಕು ನೀಡಿತು.

ಇದರ ಜೊತೆಗೆ ಮತ್ತೊಂದು ಪ್ರಮುಖ ಹೆಜ್ಜೆ ಎಂದರೆ ಶತ್ರು ಆಸ್ತಿಗಳ ನಗದೀಕರಣ. ದಶಕಗಳ ಕಾಲ ಬೀಗ ಹಾಕಿ ಬಿಟ್ಟಿದ್ದ ಆಸ್ತಿಗಳನ್ನು ಕೇವಲ ಸಂರಕ್ಷಿಸುವುದರಿಂದ ಪ್ರಯೋಜನವಿಲ್ಲ ಎಂಬ ಅರಿವಿನಿಂದ ಅವುಗಳನ್ನು ಹರಾಜು ಮೂಲಕ ಮಾರಾಟ ಮಾಡುವ ಯೋಜನೆ ರೂಪಿಸಲಾಯಿತು. ಸರ್ಕಾರದ ಅಂದಾಜಿನ ಪ್ರಕಾರ ದೇಶದಾದ್ಯಂತ ಇರುವ ಶತ್ರು ಆಸ್ತಿಗಳ ಒಟ್ಟು ಮೌಲ್ಯವು ಲಕ್ಷಾಂತರ ಕೋಟಿ ರೂಪಾಯಿಗಳಷ್ಟಿದೆ. ಕೆಲವು ಅಂದಾಜುಗಳ ಪ್ರಕಾರ ಇದು 1 ಲಕ್ಷ ಕೋಟಿ ರೂಪಾಯಿಗೂ ಮೀರಬಹುದು. ಪ್ರಮುಖ ನಗರಗಳಲ್ಲಿ ಇರುವ ಭೂಮಿಗಳ ಮೌಲ್ಯ ಅಪಾರವಾಗಿ ಏರಿಕೆಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಅನೇಕ ಆಸ್ತಿಗಳನ್ನು ಹರಾಜು ಮೂಲಕ ಮಾರಾಟ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಕೆಲವು ಆಸ್ತಿಗಳನ್ನು ಸರ್ಕಾರದ ಯೋಜನೆಗಳಿಗೆ ಬಳಸುವ ವಿಚಾರವೂ ಚರ್ಚೆಯಲ್ಲಿದೆ. ಮೂಲಸೌಕರ್ಯ ಅಭಿವೃದ್ಧಿ, ಸಾರ್ವಜನಿಕ ಯೋಜನೆಗಳು ಅಥವಾ ಸಂಸ್ಥೆಗಳ ಸ್ಥಾಪನೆಗೆ ಈ ಭೂಮಿಗಳನ್ನು ಬಳಸುವ ಸಾಧ್ಯತೆಯನ್ನೂ ಸರ್ಕಾರ ಪರಿಶೀಲಿಸುತ್ತಿದೆ. ಇದರಿಂದ ರಾಷ್ಟ್ರದ ಸಂಪತ್ತು ರಾಷ್ಟ್ರದ ಅಭಿವೃದ್ಧಿಗೆ ಬಳಸುವ ಹೊಸ ದಾರಿ ತೆರೆದುಕೊಳ್ಳುತ್ತಿದೆ. ಉತ್ತರ ಪ್ರದೇಶದ ಲಕ್ನೋ ಘಟಕ ಈ ಕಾರ್ಯದಲ್ಲಿ ವಿಶೇಷ ಪಾತ್ರ ವಹಿಸುತ್ತಿದೆ. ಅಲ್ಲಿನ ಅಧಿಕಾರಿಗಳು ವರ್ಷಗಳ ಕಾಲ ಬಾಕಿಯಾಗಿದ್ದ ದಾಖಲೆಗಳನ್ನು ಪರಿಶೀಲಿಸಿ ಅನೇಕ ಆಸ್ತಿಗಳ ನಿಖರ ವಿವರಗಳನ್ನು ಸಂಗ್ರಹಿಸಿದ್ದಾರೆ. ಅಕ್ರಮ ಕಬಳಿಕೆಯನ್ನು ತೆರವುಗೊಳಿಸುವ ಕಾರ್ಯವೂ ಚುರುಕಾಗಿದೆ. ಈ ಮೂಲಕ ಶತ್ರು ಆಸ್ತಿಗಳ ಮೇಲೆ ಸರ್ಕಾರದ ಹಕ್ಕುಗಳನ್ನು ಪುನಃ ಸ್ಥಾಪಿಸುವ ಪ್ರಯತ್ನಗಳು ಮುಂದುವರಿಯುತ್ತಿವೆ. ಅಷ್ಟೇ ಅಲ್ಲ, ಇತ್ತೀಚೆಗಷ್ಟೇ ನಾವು ಉತ್ತರ ಪ್ರದೇಶ ಪ್ರವಾಸಕ್ಕೆ ಹೋಗಿದ್ದ ವೇಳೆ, ಮುಖ್ಯವಾಗಿ ಶತ್ರು ಆಸ್ತಿ ಕಾಯ್ದೆಯ ಅಡಿ ವಶಪಡಿಸಿಕೊಳ್ಳಲಾದ ಬಟ್ಲರ್ ಪ್ಯಾಲೇಸ್‌ಗೂ ಕರೆದುಕೊಂಡು ಹೋಗಿ ತೋರಿಸಲಾಗಿತ್ತು. ಜತೆಗೆ, ಶೀರಾ ಹಾಳಾಗುವ ಸ್ಥಿತಿಯಲ್ಲಿದ್ದ ಇದನ್ನು ಹೇಗೆ ಅಭಿವೃದ್ಧಿಗೊಳಿಸಲಾಗುತ್ತಿದೆ ಎಂಬುದನ್ನೂ ಪ್ರದರ್ಶಿಸಲಾಯಿತು.

ಇದರಿಂದ ಒಂದು ಮಹತ್ವದ ಸಂದೇಶ ಹೊರಬರುತ್ತಿದೆ. ಹಲವು ದಶಕಗಳ ಕಾಲ ನಿರ್ಲಕ್ಷ್ಯದಿಂದ ಪಾಡಾಗಿದ್ದ ರಾಷ್ಟ್ರದ ಆಸ್ತಿಗಳನ್ನು ಪುನಃ ರಾಷ್ಟ್ರದ ಅಭಿವೃದ್ಧಿಗೆ ಬಳಸುವ ಯತ್ನ ಆರಂಭವಾಗಿದೆ. ಆಡಳಿತದ ದೃಢ ಇಚ್ಛಾಶಕ್ತಿ ಇದ್ದರೆ ವರ್ಷಗಳ ಕಾಲ ಬಾಕಿಯಾಗಿದ್ದ ಸಮಸ್ಯೆಗಳನ್ನೂ ಪರಿಹರಿಸಬಹುದು ಎಂಬುದನ್ನು ಈ ಪ್ರಕ್ರಿಯೆ ತೋರಿಸುತ್ತಿದೆ. ಶತ್ರು ಆಸ್ತಿಗಳ ನಿರ್ವಹಣೆ ಕೇವಲ ಕಾನೂನು ವಿಚಾರವಲ್ಲ; ಅದು ರಾಷ್ಟ್ರದ ಸಂಪತ್ತನ್ನು ಉಳಿಸಿ ಬಳಸುವ ಹೊಣೆಗಾರಿಕೆಯ ಪ್ರಶ್ನೆಯಾಗಿದೆ. ಮುಂದಿನ ದಿನಗಳಲ್ಲಿ ಈ ಆಸ್ತಿಗಳ ಸಂಪೂರ್ಣ ಪಟ್ಟಿ ಸ್ಪಷ್ಟವಾಗಿ ಹೊರಬಂದಂತೆ ಅವುಗಳ ನಗದೀಕರಣವೂ ಇನ್ನಷ್ಟು ವೇಗ ಪಡೆಯುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರ ಈಗಾಗಲೇ ಹಲವಾರು ಆಸ್ತಿಗಳನ್ನು ಹರಾಜು ಮಾಡಲು ಯೋಜನೆ ರೂಪಿಸಿದ್ದು, ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಅಕ್ರಮ ಕಬಳಿಕೆಗಳನ್ನು ತೆರವುಗೊಳಿಸುವ ಕಾರ್ಯವೂ ಮುಂದುವರಿಯುತ್ತಿದೆ. ಒಮ್ಮೆ ರಾಷ್ಟ್ರದ ಭದ್ರತಾ ಕಾರಣದಿಂದ ವಶಕ್ಕೆ ತೆಗೆದುಕೊಳ್ಳಲಾದ ಈ ಆಸ್ತಿಗಳು, ಈಗ ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಶಕ್ತಿ ನೀಡುವ ಸಂಪತ್ತಾಗಿ ರೂಪಾಂತರಗೊಳ್ಳುವ ಹಂತಕ್ಕೆ ಬಂದಿದೆ.

ಒಟ್ಟಿನಲ್ಲಿ ನೋಡಿದರೆ ಶತ್ರು ಆಸ್ತಿ ಎಂಬ ಪ್ರಶ್ನೆ ಭಾರತದ ವಿಭಜನೆಯ ನೆನಪು ಮಾತ್ರವಲ್ಲ, ಅದು ಆಡಳಿತದ ದೃಢತೆ ಮತ್ತು ರಾಷ್ಟ್ರದ ಸಂಪತ್ತಿನ ಬಳಕೆಯ ಪ್ರಶ್ನೆಯೂ ಆಗಿದೆ. ದಶಕಗಳ ಕಾಲ ನಿರ್ಲಕ್ಷ್ಯಗೊಂಡಿದ್ದ ಈ ಆಸ್ತಿಗಳ ಬಗ್ಗೆ ಈಗ ಗಂಭೀರ ಕ್ರಮಗಳು ನಡೆಯುತ್ತಿರುವುದು ಗಮನಾರ್ಹ. ರಾಷ್ಟ್ರದ ಅಮೂಲ್ಯ ಸಂಪತ್ತು ಅನಾಥವಾಗಿದ್ದ ದಿನಗಳು ನಿಧಾನವಾಗಿ ಅಂತ್ಯವಾಗುತ್ತಿವೆ. ರಾಷ್ಟ್ರದ ಸಂಪತ್ತು ಮತ್ತೆ ರಾಷ್ಟ್ರದ ಕೈಗೆ ಮರಳುತ್ತಿದೆ ಎಂಬ ಸಂದೇಶವನ್ನು ಈ ಪ್ರಕ್ರಿಯೆ ನೀಡುತ್ತಿದೆ.

ಸಿದ್ಧ ಮಾದರಿಯನ್ನು ಮುರಿಯುವುದು

ಒಂದು ರೂಢಿಗತವಾದ ಸಂಗತಿಯಲ್ಲಿ ಪುಟ್ಟ ಬದಲಾವಣೆ ಮಾಡಿಕೊಂಡರೆ ಅದರಿಂದ ಉಂಟಾಗುವ ಸಣ್ಣದೊಂದು ಸಂತೋಷ ನಮ್ಮ ಪಾಲಿಗೆ ಪ್ರಾಪ್ತಿಸೀತು. ಒಂದು ಸಣ್ಣ ಹೊಸತನ ನಮ್ಮ ಮನಸ್ಸಿನ ಉಲ್ಲಾಸಕ್ಕೆ ಕಾರಣವಾಗುವುದಾದರೆ ಅದನ್ನೇಕೆ ಕಳೆದುಕೊಳ್ಳಬೇಕು.

ಆ-ಲೋಚನ

ರಾಧಾಕೃಷ್ಣ ಕಲ್ಚಾರ್
rkkalchar@gmail.com



ಸಿದ್ಧ ಮಾದರಿಗಳು ಅಂತ ಕೆಲವು ಇರುತ್ತವೆ. ಹಾಗೆ ನೋಡಿದರೆ ಕೆಲವು ಎಂದೇನಲ್ಲ, ಎಲ್ಲ ಕಡೆಯೂ ಇರುತ್ತವೆ. ಏನೀ ಸಿದ್ಧ ಮಾದರಿಗಳು ಅಂದರೆ? ಯಾವುದೋ ಒಂದು ಸಂಗತಿ ನಡೆಯುವಾಗ ಅದರದೇ ಆದ ಒಂದು ರೀತಿ ಅಥವಾ ವಿಧಾನವನ್ನು ಅನುಸರಿಸಿ ನಡೆಯುತ್ತದೆ. ಅಥವಾ ಅದೇ ಮಾದರಿಯಲ್ಲಿ ಯಾರೋ ನಡೆಸುತ್ತಾರೆ. ಈ ವಿಧಾನವೆಂಬುದು ಪುನರಾವರ್ತನೆಗಳಿಂದ ಸಿದ್ಧಗೊಳ್ಳುತ್ತದೆ. ಅದು ಸಾರ್ವಜನಿಕ ವೇದಿಕೆಗಳಿಂದ ತೊಡಗಿ, ನಮ್ಮ ಮನೆಗಳಲ್ಲಿ ನಡೆಯುವ ನಿತ್ಯ ಜೀವನದ ಸಂದರ್ಭಗಳಿಗೂ ಅನ್ವಯವಾಗುತ್ತದೆ.

ಉದಾಹರಣೆಗೆ ನಾವು ಬೆಳಗ್ಗೆ ಎದ್ದು ಮುಖ ತೊಳೆಯುವಲ್ಲಿಂದ ಪ್ರಾರಂಭವಾಗಿ, ಬೆಳಗಿನ ಉಪಾಹಾರ ಸೇವನೆಯವರೆಗೆ ಒಂದು ವಿಧಾನ ಸಿದ್ಧಗೊಂಡಿರುತ್ತದೆ. ಅದೊಂದು ಪ್ರಕ್ರಿಯೆ ಎಂದು ಭಾವಿಸಿ. ಈ ಪ್ರಕ್ರಿಯೆಯಲ್ಲಿ ಅನೇಕ ಕ್ರಿಯೆಗಳಿವೆ. ಇವುಗಳಲ್ಲಿ ಒಂದು ಕ್ರಿಯೆಯ ಬದಲಾವಣೆಯೂ ಒಟ್ಟು ಪ್ರಕ್ರಿಯೆಯನ್ನು ಪ್ರಭಾವಿಸುತ್ತದೆ. ಅಂದರೆ ಸರಣಿ ಕ್ರಿಯೆಗಳಲ್ಲಿ ಒಂದರ ವ್ಯತ್ಯಾಸವೂ ಸಿದ್ಧ ಮಾದರಿಯನ್ನು ಮುರಿಯುತ್ತದೆ. ವೈಯಕ್ತಿಕ ನೆಲೆಯಲ್ಲಿ ಇದು ಕಷ್ಟವಲ್ಲ. ಯಾಕೆಂದರೆ ಅದರ ಪರಿಣಾಮ ಅಥವಾ ಪರಿಣಾಮಶೂನ್ಯತೆ ನಿಮ್ಮನ್ನಷ್ಟೇ ಮುಟ್ಟುವುದು. ಹಾಗಾಗಿ ನೀವು ಬೆಳಗಿನ ತಿಂಡಿ ತಿಂದು ಸ್ನಾನ ಮಾಡಬಹುದು ಅಥವಾ ಸ್ನಾನಮಾಡಿ ತಿಂಡಿ ತಿನ್ನಬಹುದು. ಅದರಿಂದ ನಿಮ್ಮಲ್ಲಿ ಏನೋ ನೂತನತೆಯ ಭಾವನೆ ಬರಬಹುದು. ಎಲ್ಲ ವಿಷಯಗಳೂ ಹಾಗಿರುವುದಿಲ್ಲ. ನಿಮ್ಮ ವರ್ತನೆಯ ಬದಲಾವಣೆ ಉಳಿದವರಲ್ಲಿ ಪ್ರಶ್ನೆ ಮತ್ತು ಪ್ರತಿಕ್ರಿಯೆಗಳಿಗೆ ಕಾರಣವಾಗುತ್ತದೆ.

ನೀವೊಂದು ಮದುವೆಗೆ ಹೋಗುತ್ತೀರಿ. ಅಲ್ಲಿ ಮೊದಲು ವಧುವರರನ್ನು ಹರಸಿಯೋ, ಮಾತನಾಡಿಸಿಯೋ ಊಟದ ಮನೆಗೆ ನುಗ್ಗುತ್ತೀರಿ. ಅಲ್ಲಿ ಎಲೆಯ ಮುಂದೆ ಕುಳಿತು ಕ್ರಮಾಗತವಾಗಿ ಉಂಡು ಬರುತ್ತೀರಿ. ನಿಮಗೆ ಅದು ಇಷ್ಟವೋ ಅಲ್ಲವೋ, ತಡವಾಗುತ್ತದೆ ಎಂಬ ಚಿಂತೆ ಇದ್ದಾಗಲೂ ಲಾಗಾಯ್ತಿನಿಂದ ಅನುಸರಿಸಿಕೊಂಡು ಬಂದ ಪದ್ಧತಿಯನ್ನು ನೀವು ಬಿಡುವುದಿಲ್ಲ. ಇದೊಂದು ಮಾದರಿ ನಿಮ್ಮ ಮನಸ್ಸಿನಲ್ಲಿ ಸಿದ್ಧವಾಗಿದೆ. ಮದುವೆಯ ಆಮಂತ್ರಣ ಬಂದಾಗಲೇ ಮನಸ್ಸು ಈ ಮಾದರಿಯನ್ನು ಚಿತ್ರಿಸಿಕೊಳ್ಳುತ್ತದೆ. ಅದರಂತೆ ನೀವು ನಡೆದುಕೊಳ್ಳುತ್ತೀರಿ. ದೂರದ ಸ್ಥಳದಲ್ಲಾದರೆ ಕಚೇರಿಗೆ ತಲುಪುವಾಗ ತಡವಾಗಿ ತೊಂದರೆಯಾಗುತ್ತದೆ ಎಂದಿದ್ದಾಗಲೂ ನೀವು ಈ ಮಾದರಿಯನ್ನು ಮುರಿಯುವುದಿಲ್ಲ.

ಇದು ಸಿದ್ಧಮಾದರಿ.

ಒಂದು ಸಲ, ಈ ಮಾದರಿಯನ್ನು ವ್ಯತ್ಯಾಸ ಮಾಡಿದಿರಿ ಎಂದಿಟ್ಟುಕೊಳ್ಳೋಣ. ಹೇಗೆ ಅಂದರೆ, ಮದುವೆಗೆ ಹೋದಿರಿ. ಮದುಮಕ್ಕಳನ್ನೋ, ಅವರ ತಂದೆ ತಾಯಿಯರನ್ನೋ ಮಾತನಾಡಿಸಿ ನೀವು ಬಂದಿರುವುದನ್ನು ಖಚಿತಪಡಿಸಿದಿರಿ. ಅಲ್ಲಿಂದ ಊಟಕ್ಕೆ ಪಂಕ್ತಿಯಲ್ಲಿ ಕುಳಿತುಕೊಳ್ಳದೆ ಬಫೆಯ ಊಟಕ್ಕೆ ಹೋಗುತ್ತೀರಿ. ಆಹಾ! ಅರ್ಧ ಗಂಟೆಗೂ ಹೆಚ್ಚು ಹೊತ್ತು ಸಾಂಗವಾಗಿ ಉಣ್ಣುವ ಪಂಕ್ತಿಯ ಊಟ ಇಂದು ಹತ್ತೇ ನಿಮಿಷದಲ್ಲಿ ಮುಗಿಯಿತು. ಕಚೇರಿಗೂ ತಡವಾಗಲಿಲ್ಲ. ಇದು ಸಾಧ್ಯವಾದುದು ಸಿದ್ಧವಾದ ವಿನ್ಯಾಸದಲ್ಲಿ ಬದಲಾವಣೆ ಮಾಡಿದ್ದರಿಂದ. ಅಥವಾ ಇದಕ್ಕಿಂತ ಭಿನ್ನವಾಗಿ, ನೀವು ಯಾವಾಗಲೂ ಬಫೆಯ ಸಾಲಿನಲ್ಲಿ ಅವಸರ ಅವಸರವಾಗಿ ಉಂಡು ಧಾವಿಸುವವರಾದರೆ ಒಂದು ಸಲ ಪಂಕ್ತಿಯಲ್ಲಿ ಕುಳಿತು, ಸಾವಧಾನವಾಗಿ ಪ್ರತಿಯೊಂದು ವ್ಯಂಜನದ ರುಚಿಯನ್ನೂ ಆಸ್ವಾದಿಸುತ್ತ ಉಂಡು ಬನ್ನಿ. ಜತೆಯಲ್ಲಿ ಕುಳಿತವರ ಜತೆ ಲೋಕಾಭಿರಾಮದ ಮಾತುಗಳನ್ನಾಡಿ. ಈ ಬದಲಾವಣೆ ನೀಡಿದ ರೋಮಾಂಚನವನ್ನು ಅನುಭವಿಸಿ.



ಹಾಗೆಂದು ಇನ್ನು ಪ್ರತಿ ಮದುವೆಯಲ್ಲಿಯೂ ಹೀಗೇ ಮಾಡುತ್ತೇನೆ ಎಂದು ನಿಶ್ಚಯಿಸುತ್ತೀರೋ ಅಂದರೆ ಅದಷ್ಟು ಸುಲಭವಲ್ಲ. ಯಾಕೆಂದರೆ ಬಫೆಯೂಟದ ಸಾಲಿನಲ್ಲಿ ನಿಮ್ಮನ್ನು ನೋಡಿದ ಹತ್ತು ಮಂದಿಯಲ್ಲಿ ಐವರಾದರೂ ಕೇಳುತ್ತಾರೆ, ''ಇದೇನು ನೀವು ಪಂಕ್ತಿಯೂಟವನ್ನು ಬಿಟ್ಟು ಇಲ್ಲಿಗೆ ಬಂದದ್ದು?'' ಅಂತ. ಅವರಿಗೆಲ್ಲ ಉತ್ತರಿಸಬೇಕು. ನನಗೆ ಚೇಂಜ್ ಬೇಕು ಅಂತ ಉತ್ತರಿಸಲಾಗುವುದಿಲ್ಲ. ಅವರಿಗೆ ಸಮ್ಮತವಾಗುವ ಉತ್ತರ ಕೊಡಬೇಕು. ಆದರೂ ಅವರ ಕುತೂಹಲ ಕಡಿಮೆಯಾಗುವುದಿಲ್ಲ. ನಿಮಗೆ ಕೇಳುವ ಹಾಗೆ ಆಚೆಯವರಲ್ಲಿ ಪಿಸುಗುಟ್ಟುತ್ತಾರೆ, ''ಅವರಿಗೆ ಕುಳಿತಲ್ಲಿಂದ ಏಳುವುದು ಕಷ್ಟವಾಗುತ್ತಿರಬೇಕು. ಗಂಟು ನೋವೋ ಏನೋ ಪಾಪ. ಇಲ್ಲದಿದ್ದರೆ ಎಲೆಯ ಮುಂದೆ ಕೂತು ಪಟ್ಟಾಗಿ ಬಾರಿಸುವ ಈ ಜನ ಬಫೆಗೆ ಬರುವುದುಂಟೆ?''

ಆ ಮೇಲೆ ನೋಡಿದವರೆಲ್ಲರ ಮುಖದಲ್ಲಿಯೂ ನಿಮ್ಮ ಕುರಿತು ಅನುಕಂಪವೇ ಕಾಣುತ್ತದೆ, ನಿಮಗೆ. ಥೋ. ಯಾಕಾದರೂ ಈ ಬಫೆಗೆ ಬಂದೆನೋ ಎನಿಸಿಬಿಡುತ್ತದೆ. ಅಲ್ಲಿಗೆ ಮುಗಿಯಿತೆ? ಇಲ್ಲ. ನಿಮ್ಮ ಮನೆಯಾಕೆಯ ಗೆಳತಿ (ಅಲ್ಲಿ ನಿಮ್ಮನ್ನು ಕಂಡವರು) ''ಅವರೀಗ ಬಫೆಯಲ್ಲಿ ಊಟ ಮಾಡುವುದ? ಯಾಕೆ?'' ಅಂತ ನಿಮ್ಮ ಶ್ರೀಮತಿಯಲ್ಲಿ ಕೇಳುತ್ತಾರೆ. ಅಲ್ಲಿಂದ ಮನೆಯವರ ಪ್ರಶ್ನಾವಳಿಗೂ ನೀವು ಉತ್ತರಿಸಬೇಕು. ಸಾಮಾನ್ಯವಾಗಿ ಪಂಕ್ತಿಯೂಟಕ್ಕೆ ನಿಮಗೆ ಜತೆಯಾಗುತ್ತಿದ್ದವರೂ, ''ಅವರೀಗ ನಮ್ಮ ಜತೆ ಊಟಕ್ಕೆ ಬರುವುದಿಲ್ಲ. ಆ ಬಫೆಯ ಕ್ಯೂವಲ್ಲಿ ನಿಂತು, ಎಂಜಲು ತಟ್ಟೆಯಲ್ಲಿ ತಿಂದರೆ ಅವರಿಗೆ ಸಮಾಧಾನ. ಬಾಳೆ ಎಲೆಯ ಮರ್ಯಾದೆಯ ಊಟ ಅವರಿಗೆ ಬೇಡ'' ಎಂದು ನಿಮ್ಮ ಬಗ್ಗೆ ಆಡಿಕೊಳ್ಳುತ್ತಾರೆ. ಬಫೆಯಿಂದ ಪಂಕ್ತಿಯೂಟಕ್ಕೆ ಹೋದಾಗಲೂ ಹೀಗೆಯೇ ಪ್ರತಿಕ್ರಿಯೆ ಇರುತ್ತದೆ.

ಒಂದು ಊಟದ ವಿಷಯದಲ್ಲಿ ಸಿದ್ಧಮಾದರಿಯನ್ನು ಮುರಿಯುವುದು ಇಷ್ಟು ತೊಡಕು ಅಂದರೆ ಉಳಿದ ಸಂಗತಿಗಳಲ್ಲಿ ಹೇಗಿರಬಹುದು ಎಂದು ಕಲ್ಪಿಸಿಕೊಳ್ಳುವುದು ಕಷ್ಟವಲ್ಲ. ಹೊಸ ಮನೆ ಕಟ್ಟಿಸಿದವರಿಗೆ ಇದು ಗೊತ್ತು. ತಮಗೆ ಇಷ್ಟವಾದ ವಿನ್ಯಾಸದಲ್ಲಿ ಕಟ್ಟಿಸೋಣವೆಂದರೆ ಈ ಪೂರ್ವಸಿದ್ಧವಾದ ಮಾದರಿಗಳು ಬಿಡುವುದಿಲ್ಲ. ಮೇಸ್ತ್ರಿಯಿಂದ ತೊಡಗಿ ಇಂಜಿನಿಯರ್‌ವರೆಗೆ ನಿಮಗೆ ಬೇಕಾದ ಹೊಸ ವಿನ್ಯಾಸಕ್ಕೆ ಅವರನ್ನು ಒಪ್ಪಿಸುವುದು ಸುಲಭವಿಲ್ಲ. ಹೇಗೋ ಕಟ್ಟಿಸಿದಿರಿ ಅನ್ನಿ. ಮತ್ತೆ ಬಂದವರ ಪ್ರಶ್ನೆಗಳಿಗೆ ಉತ್ತರಿಸಿ ಸೋತು ಹೋಗುತ್ತೀರಿ. ಹೊಸ ಡಿಸೈನು ಬೇಡವಿತ್ತು ಎಂದು ಅಂದುಕೊಳ್ಳುವ ಹಾಗಾಗುತ್ತದೆ. ಇದು ಕೃಷಿಯಲ್ಲಿ, ಉದ್ಯಮದಲ್ಲಿ, ಕ್ರೀಡೆಯಲ್ಲಿ, ಕಲೆಯಲ್ಲಿ– ಎಲ್ಲ ಕ್ಷೇತ್ರಗಳಲ್ಲೂ ಉಂಟು.

ಆದರೆ? ಮುಂದೊಂದು ದಿನ, ಬಫೆಯ ಊಟದ ಸಾಲಿನಲ್ಲಿ ನಿಮ್ಮನ್ನು ಟೀಕಿಸಿದವರೇ ತಟ್ಟೆ ಹಿಡಿದು ಕ್ಯೂ ನಿಂತಿರುತ್ತಾರೆ. ಯಾರದೋ ಹೊಸಮನೆಯಲ್ಲಿ ನೀವು ಅಳವಡಿಸಿಕೊಂಡ ವಿನ್ಯಾಸ ಇರುತ್ತದೆ. ಅಂದರೇನು? ಇರುವ ಒಂದು ಯಶಸ್ವೀ(?) ಮಾದರಿಯಲ್ಲಿ ಬದಲಾವಣೆಯನ್ನು ತರುವುದು ಸುಲಭವಲ್ಲ. ಯಾರೋ ಒಬ್ಬಾತ ಅಂತಹ ಒಂದು ಬದಲಾವಣೆಯನ್ನು ಸಾಹಸದಿಂದ ಮಾಡಿದನಾದರೆ ಭವಿಷ್ಯದಲ್ಲಿ ಒಂದು ದಿನ, ಸಮಾಜವಾಗಲಿ, ಜಗತ್ತಾಗಲಿ ಅದನ್ನು ಸ್ವೀಕರಿಸಿ ಅಳವಡಿಸಿಕೊಳ್ಳುತ್ತದೆ. ಮೊದಲಿನವನು ಅಳವಡಿಸುವಾಗ ತಾನೇ ಟೀಕಿಸಿದ್ದನ್ನೂ ಮರೆಯುತ್ತದೆ. ಅವನು ಮಾಡಿದ ಬದಲಾವಣೆಯ ಕೀರ್ತಿಯೂ ಅವನಿಗೆ ದಕ್ಕುವುದಿಲ್ಲ.

ಆದುದರಿಂದ ಯಾವ ರಂಗದಲ್ಲೇ ಆದರೂ, ಸಿದ್ಧ ಮಾದರಿಯನ್ನು ಮುರಿದು ಹೊಸತನ್ನು ಕಟ್ಟುವುದು ಸರಳವಾದುದಲ್ಲ. ಸುಲಭವೂ ಅಲ್ಲ. ಅದಕ್ಕೆ ಬರುವ ವಿರೋಧವನ್ನು ಎದುರಿಸಿ, ಅಚಲವಾಗಿ ನಿಂತು ಸಾಧಿಸಿದ ಎಷ್ಟೋ ಕಾಲದ ಬಳಿಕ, ಅದರ ಪ್ರಯೋಜನವನ್ನು ಮನಗಂಡ ಮೇಲೆ ಲೋಕ ಅದನ್ನು ಸ್ವೀಕರಿಸುತ್ತದೆ.

ಇದು ಜಗತ್ತು ಇರುವ ಬಗೆ.

ಇತಿಹಾಸವನ್ನು ಗಮನಿಸಿದರೆ ಕೀರ್ತಿವಂತರಾದ ಮಹಾನ್ ಸಾಧಕರೆಲ್ಲ ಇಂತಹ ಸಿದ್ಧಮಾದರಿಯನ್ನು ಮುರಿದು ಹೊಸತನ್ನು ಕಟ್ಟಿದವರೇ. ಅದಕ್ಕಾಗಿ ಪ್ರಬಲ ವಿರೋಧವನ್ನು ಎದುರಿಸಿದವರೇ. ಆಗ ಬಂದ ಪ್ರತಿಭಟನೆಗೆ ಮಣಿದು ಬದಲಾವಣೆಯನ್ನು ಕೈಬಿಡುತ್ತಿದ್ದರೆ, ಅವರು ಸಾಧಕರಾಗುತ್ತಿರಲಿಲ್ಲ. ಕೀರ್ತಿಶಾಲಿಗಳೂ ಆಗುತ್ತಿರಲಿಲ್ಲ. ಮನುಕುಲವು ಅವರನ್ನು ಸ್ಮರಿಸುತ್ತಲೂ ಇರಲಿಲ್ಲ. ನಾವೇನೂ ಮಹಾಪುರುಷರಾಗುವುದಕ್ಕೆ ಹೊರಟವರಲ್ಲವಾದರೂ, ಒಂದು ರೂಢಿಗತವಾದ ಸಂಗತಿಯಲ್ಲಿ ಪುಟ್ಟ ಬದಲಾವಣೆ ಮಾಡಿಕೊಂಡರೆ ಅದರಿಂದ ಉಂಟಾಗುವ ಸಣ್ಣದೊಂದು ಸಂತೋಷ ನಮ್ಮ ಪಾಲಿಗೆ ಪ್ರಾಪ್ತಿಸೀತು. ನಿತ್ಯ ನಡೆಯುವ ದಾರಿಯನ್ನು ಬಿಟ್ಟು ಹೊಸದಾರಿ ಹಿಡಿಯಬಹುದು. ದಿನವೂ ಕುಳಿತುಕೊಳ್ಳುವ ಜಾಗವನ್ನು ಬದಲಿಸಬಹುದು. ಸಂಜೆಯ ವಾಯು ವಿಹಾರದ ಬದಲು ಬೆಳಗ್ಗಿನ ಹೊತ್ತು ಅದನ್ನು ಮಾಡಬಹುದು. ಸುಮ್ಮನೇ ಒಂದು ಸಣ್ಣ ಹೊಸತನ ನಮ್ಮ ಮನಸ್ಸಿನ ಉಲ್ಲಾಸಕ್ಕೆ ಕಾರಣವಾಗುವುದಾದರೆ ಅದನ್ನೇಕೆ ಕಳೆದುಕೊಳ್ಳಬೇಕು.

ಸ್ವಾವಲಂಬನೆ ಶ್ರೇಷ್ಠವಾದುದು

ಜೀವಿತಂ ರೂಪಯೇದ್ ಧೀಮಾನ್ ಸ್ವಯಂ ನಾನ್ಯಾವಲಂಬನಾತ್ ।
ಆತ್ಮಾವಲಂಬನಂ ಶ್ರೇಷ್ಠಂ ಹೀನಮನ್ಯಾವಲಂಬನಮ್ ॥ –ಸುವಚನಶತಕಂ

ಬುದ್ಧಿಯುಳ್ಳವನು ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕು. ಸ್ವಾವಲಂಬನೆ ಶ್ರೇಷ್ಠ, ಪರಾವಲಂಬನೆ ಹೀನ– ಎಂಬುದು ಶ್ಲೋಕಾರ್ಥ.

ಬದುಕು ಸ್ವಾವಲಂಬಿಯಾಗಿರಬೇಕು. ಅದಕ್ಕೆ ಸಂಪೂರ್ಣವಾಗಿ ನಮ್ಮ ಪ್ರಯತ್ನವೇ ಬೇಕಾಗುತ್ತದೆ. ನಾವು ಬದುಕುವುದಕ್ಕೆ ಇನ್ನೊಬ್ಬರನ್ನು ಆಶ್ರಯಿಸಬಾರದು.

ಸಾಮಾನ್ಯವಾಗಿ ಎರಡು ರೀತಿಯಲ್ಲಿ ಜನರನ್ನು ವರ್ಗೀಕರಿಸಬಹುದು. ಸ್ವಾವಲಂಬಿಗಳು, ಪರಾವಲಂಬಿಗಳು ಎಂಬುದಾಗಿ. ಸ್ವಾವಲಂಬಿಯಾಗಿ ಬದುಕುವುದು ಅತ್ಯಂತ ಶ್ರೇಷ್ಠ. ಯಾವುದಕ್ಕೂ ಯಾರನ್ನೂ ಜೀವನದಲ್ಲಿ ಅವಲಂಬಿಸಬೇಕಾಗಿಲ್ಲ. ತನ್ನ ಬದುಕನ್ನು ತಾನೇ ರೂಪಿಸಿಕೊಳ್ಳಬೇಕು. ಇತರರಿಗೆ ರೂಪಿಸಿಕೊಳ್ಳಲು ಪ್ರೇರಣೆಯನ್ನು ನೀಡಬೇಕು. ನಿಜಾರ್ಥದಲ್ಲಿ ಇಂಥವರೇ ಬುದ್ಧಿವಂತರು. ಇವರೇ ಸ್ವಾವಲಂಬಿಗಳು. ಇಂಥವರ ಸಂಖ್ಯೆ ಜಾಸ್ತಿಯಾದಂತೆ ನಿರುದ್ಯೋಗಿಗಳು ಕಡಿಮೆಯಾಗುತ್ತಾರೆ. ಸ್ವಾಭಿಮಾನದಿಂದ ಬದುಕುವವರ ಸಂಖ್ಯೆ ಹೆಚ್ಚುತ್ತದೆ.ಇಂತಹ ಬದುಕೇ ನಿಜವಾದ ಬದುಕು. ಇಂಥವರ ಬದುಕೇ ಸಾರ್ಥಕ.



ಶ್ಲೋಕ ಸಾಗರ

ಡಾ.ಸೋಂದಾ ಭಾಸ್ಕರ ಭಟ್

ಇದರ ಬದಲಾಗಿ ಪರವಾಲಂಬಿಯಾಗುವುದು, ಎಲ್ಲರ ಮುಂದೆ ಕೈಚಾಚುವುದು, ದೈನ್ಯತೆಗೆ ಈಡಾಗುವುದು ಸರ್ವಥಾ ಸರಿಯಲ್ಲ. ಅಂತಹ ಬದುಕು ನರಕಕ್ಕೆ ಸಮಾನ. ಅಂತಹ ಬದುಕಿನಲ್ಲಿ ಸ್ವಾಭಿಮಾನ ಅರಳುವುದಿಲ್ಲ. ಇನ್ನೊಬ್ಬರ ದಾಸರಾಗಿ, ಅವರು ಹೇಳಿದಂತೆ ಕೇಳಿಕೊಂಡು ದೈನ್ಯದಿಂದ ಬದುಕಬೇಕಾಗುತ್ತದೆ.

ಆದ್ದರಿಂದ ಬುದ್ಧಿವಂತರಾಗಿ ಬದುಕನ್ನು ಸಮರ್ಥವಾಗಿ ಕಟ್ಟಿಕೊಳ್ಳಬೇಕು. ನಾವು ಬದುಕುವುದರ ಜತೆಗೆ ಇನ್ನಷ್ಟು ಜನರಿಗೆ ಬದುಕಲು ಅವಕಾಶ ಕಲ್ಪಿಸಬೇಕು. ಸಂಬಳಕ್ಕಾಗಿ ಇನ್ನೊಬ್ಬರೆದುರು ಕೈ ಚಾಚುವಂತಾಗಬಾರದು. ಬದಲಾಗಿ ಕೈ ಎತ್ತಿ ಇನ್ನೊಬ್ಬರಿಗೆ ಸಂಬಳ ನೀಡುವಂತಾಗಬೇಕು. ನಾವೇ ಧನಿಯಾಗಬೇಕೇ ವಿನಾ ಸೇವಕನಾಗಬಾರದು. ಇದನ್ನೇ ಸ್ವಾವಲಂಬಿ ಬದುಕು ಎನ್ನುವುದು. ಇದೇ ಶ್ರೇಷ್ಠವಾದ ಬದುಕು.

ಸ್ವಾವಲಂಬಿಯಾಗುವುದು ಸುಲಭವಲ್ಲ. ಆಲಸಿಯಾದವಗೆ ಇದು ಒಲಿಯುವುದಿಲ್ಲ. ದುಡುಕು ಸ್ವಭಾವ, ಮೈಗಳ್ಳತನ, ಅವಿವೇಕ ಇತ್ಯಾದಿಯಿರುವವನಿಗೆ ಸ್ವಾವಲಂಬಿ ಬದುಕು ಸಿದ್ಧಿಸುವುದಲ್ಲ. ಜೀವನದಲ್ಲಿ ಏನೇ ಬಂದರೂ ಎದುರಿಸುವ ಶಕ್ತಿ ಇಲ್ಲದಿರುವುದು, ಸೋಲಿಗೆ ಬೆನ್ನು ಹಾಕುವುದು, ಅರ್ಧ ಕೆಲಸ ಮಾಡಿ ನಿಲ್ಲಿಸುವುದು, ಆಗಾಗ ಉದ್ಯಮ ಬದಲಾಯಿಸುವುದು, ವಿಮರ್ಶಿಸದೇ ತೊಡಗುವುದು, ಮಾರ್ಗದರ್ಶನ ಪಡೆಯದಿರುವುದು ಇವೆಲ್ಲವೂ ಸೋಲಿನ ಅಂಚಿಗೆ ತಂದು ನಿಲ್ಲಿಸುತ್ತದೆ. ನಮ್ಮ ಭಾರತೀಯ ಚಿಂತನೆ ಸ್ವಾವಲಂಬಿಯಾಗಿ ಬದುಕನ್ನು ಸಾಗಿಸುವುದೇ ಆಗಿದೆ. ಒಂದು ರಾಷ್ಟ್ರ ಸ್ವಾವಲಂಬಿಯಾದರೆ ಯಾವ ರಾಷ್ಟ್ರಕ್ಕೂ ಅಂಜಬೇಕಿಲ್ಲ. ಯಾರೆದುರೂ ಕೈಚಾಚಬೇಕಿಲ್ಲ. ಎಲ್ಲ ವಿಷಯದಲ್ಲೂ ಸ್ವಾವಲಂಬಿಯಾಗಬೇಕು. ಭಾರತ ಸ್ವಾವಲಂಬಿಯಾಗಿ ಎದ್ದು ನಿಲ್ಲಬೇಕು ಎಂಬ ಯೋಜನೆಯನ್ನು ನಮ್ಮ ಪ್ರಧಾನಿಯವರು ಅನುಷ್ಠಾನಗೊಳಿಸಿದ್ದಾರೆ. ಇದರ ಪ್ರಯೋಜನವನ್ನು ಪಡೆದು ನಾವೆಲ್ಲರೂ ಸ್ವಾವಲಂಬಿಯಾಗಬೇಕಿದೆ. ಯಾವತ್ತಿದ್ದರೂ ಪರಾವಲಂಬನೆ ಹೀನ, ಅಪಾಯಕಾರಿ ಹಾಗೂ ಅಭಿಮಾನ ಪ್ರತಿರೋಧಿ. ನಾವು ಮೊದಲಾಗಿ ನಮ್ಮ ನೈಪುಣ್ಯವನ್ನು ಗುರುತಿಸಿಕೊಂಡು ಬೆಳೆಸಿಕೊಳ್ಳಬೇಕು. ತನ್ಮೂಲಕ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕು.

ನೇಪಾಳದ ಹೊಸ ರಾಜಕೀಯ ದಿಕ್ಕು ಮತ್ತು ದಕ್ಷಿಣ ಏಷ್ಯಾದ ಸಮತೋಲನದ ಸವಾಲು

ಕುಮಾರ್ ಶೇಣಿ

ಚುನಾವಣೆಯ ನಂತರ ನೇಪಾಳದಲ್ಲಿ ಹೊಸ ಸರ್ಕಾರ ರಚನೆಯಾಗುತ್ತಿರುವುದು, ಅದರ ಗಡಿರೇಖೆಗಳನ್ನು ಮೀರಿ ಪರಿಣಾಮಗಳನ್ನು ಉಂಟುಮಾಡುವ ಲಕ್ಷಣಗಳು ಗೋಚರಿಸುತ್ತಿವೆ. ನೇಪಾಳವು ಏಷ್ಯಾದ ಎರಡು ಪ್ರಮುಖ ಶಕ್ತಿಗಳಾದ ಭಾರತ ಮತ್ತು ಚೀನಾ ನಡುವಿನ ಸೂಕ್ಷ್ಮ ಭೂರಾಜಕೀಯ ಸಂಧಿಸ್ಥಳದಲ್ಲಿ ಇದ್ದು, ಅಲ್ಲಿ ರಾಜಕೀಯ ನಾಯಕತ್ವ ಬದಲಾಗುವುದರಿಂದ ದ. ಏಷ್ಯಾದ ಪ್ರಾದೇಶಿಕ ರಾಜತಾಂತ್ರಿಕತೆ, ಆರ್ಥಿಕ ಸಹಕಾರ ಮತ್ತು ಭದ್ರತಾ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಆದ್ದರಿಂದ ನೇಪಾಳದ ಹೊಸ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಗಳು ಅದರ ಒಳನಾಡಿನ ಆಡಳಿತಕ್ಕೆ ಮಾತ್ರವಲ್ಲದೇ, ವಿಶಾಲವಾದ ಪ್ರಾದೇಶಿಕ ಸ್ಥಿರತೆಯಲ್ಲೂ ಮಹತ್ವವನ್ನು ಪಡೆದುಕೊಂಡಿದೆ.

ಇತಿಹಾಸದ ದೃಷ್ಟಿಯಿಂದ ಅವಲೋಕಿಸಿದರೆ, ನೇಪಾಳವು ಭಾರತ ಮತ್ತು ಚೀನಾದ ನಡುವೆ ಸಮತೋಲನ ಕಾಯ್ದುಕೊಳ್ಳುವ ತಂತ್ರವನ್ನು ಅನುಸರಿಸಿದೆ. ತನ್ನ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಎರಡೂ ದೇಶಗಳಿಂದ ಆರ್ಥಿಕ ಸಹಾಯ ಮತ್ತು ರಾಜಕೀಯ ಸಹಕಾರ ಪಡೆಯಲು ಅದು ಪ್ರಯತ್ನಿಸಿದೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಾಗ ನೇಪಾಳ ಒಂದು ನೆರೆ ರಾಷ್ಟ್ರದ ಕಡೆ ಹೆಚ್ಚು ಒಲವು ತೋರುತ್ತದೆಯೇ ಅಥವಾ ತನ್ನ ಸಂಪ್ರದಾಯಬದ್ಧ 'ಸಮಾನ ದೂರ' ನೀತಿಯನ್ನು ಮುಂದುವರಿಸುತ್ತದೆಯೇ ಎಂಬುದು ಸದ್ಯಕ್ಕೆ ಯೋಚಿಸಬೇಕಾದ ವಿಚಾರ. ಉದಾಹರಣೆಗೆ, ಭಾರತ ಮತ್ತು ನೇಪಾಳದ ನಡುವೆ ಗಾಢವಾದ ಇತಿಹಾಸಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧಗಳಿವೆ. ಲಕ್ಷಾಂತರ ನೇಪಾಳಿ ನಾಗರಿಕರು ಭಾರತದಲ್ಲಿ ಕೆಲಸ ಮಾಡುತ್ತಾರೆ ಮತ್ತು ಎರಡೂ ದೇಶಗಳು ಗಡಿಯನ್ನು ಹಂಚಿಕೊಂಡಿವೆ. ಅದೇ ಸಮಯದಲ್ಲಿ ಚೀನಾ ತನ್ನ ಸಂಪರ್ಕವನ್ನು ಮೂಲಸೌಕರ್ಯ ಯೋಜನೆಗಳು ಮತ್ತು ಸಂಪರ್ಕ ಉಪಕ್ರಮಗಳ ಮೂಲಕ ವಿಸ್ತರಿಸಿದೆ. ನೇಪಾಳದ ಹೊಸ ಆಡಳಿತ ಈ ಸಹಕಾರಗಳ ಬಗ್ಗೆ ತೆಗೆದುಕೊಳ್ಳುವ ನಿಲುವು ಪ್ರಾದೇಶಿಕ ವ್ಯಾಪಾರ ಮಾರ್ಗಗಳು, ಹೂಡಿಕೆ ಹರಿವು ಮತ್ತು ತಂತ್ರಾತ್ಮಕ ಹೊಂದಾಣಿಕೆಯನ್ನು ಪ್ರಭಾವಿಸಬಹುದು.

ನೇಪಾಳ ತನ್ನ ವ್ಯಾಪಾರದ ಹೆಚ್ಚಿನ ಭಾಗಕ್ಕಾಗಿ ಭಾರತದ ಮೇಲೆ ಅವಲಂಬಿತವಾಗಿದೆ, ಏಕೆಂದರೆ ಅದರ ಬಹುತೇಕ ಸರಕುಗಳು ಭಾರತೀಯ ಬಂದರುಗಳ ಮೂಲಕ ಸಾಗುತ್ತವೆ. ಆದರೆ ಚೀನಾ ಹಿಮಾಲಯದ ಪರ್ವತ ಪ್ರದೇಶಗಳ ಮೂಲಕ ರಸ್ತೆ ಜಾಲಗಳಲ್ಲಿ ಹೂಡಿಕೆ ಮಾಡಿದ್ದು, ರೈಲು ಸಂಪರ್ಕ ಯೋಜನೆಗಳನ್ನೂ ಪ್ರಸ್ತಾಪಿಸಿದೆ. ಇದರಿಂದ ನೇಪಾಳದ ದಕ್ಷಿಣ ಮಾರ್ಗಗಳ ಮೇಲಿನ ಅವಲಂಬನೆ ಕಡಿಮೆಯಾಗಬಹುದು. ನೇಪಾಳದ ಹೊಸ ಸರ್ಕಾರವು ಚೀನಾ ಬೆಂಬಲಿತ ಯೋಜನೆಗಳಿಗೆ ಆದ್ಯತೆ ನೀಡಿದರೆ, ಭಾರತ ತನ್ನ ನೆರೆಹೊರೆಯಲ್ಲಿನ ಪ್ರಭಾವದ ಬಗ್ಗೆ ಚಿಂತಿಸಬಹುದು. ಮತ್ತೊಂದೆಡೆ, ನೇಪಾಳದ ನೂತನ ಸರ್ಕಾರ



ಭಾರತದ ಜೊತೆ ಇಂಧನ, ಸಾರಿಗೆ ಮತ್ತು ಭದ್ರತಾ ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸಿದರೆ, ಚೀನಾ ತನ್ನ ಹಾಜರಾತಿಯನ್ನು ಉಳಿಸಿಕೊಳ್ಳಲು ಆರ್ಥಿಕ ಸಂಪರ್ಕವನ್ನು ಮತ್ತಷ್ಟು ಗಟ್ಟಿಗೊಳಿಸಲು ಪ್ರಯತ್ನಿಸಬಹುದು. ಈ ರೀತಿಯಾಗಿ ನೇಪಾಳದ ಒಳನಾಡಿನ ರಾಜಕೀಯ ನಿರ್ಧಾರಗಳು ಸದ್ಯಕ್ಕಂತೂ ಸ್ಪರ್ಧಾತ್ಮಕವಾಗಿ ಕಂಡು ಬರುತ್ತಿದೆ.

ಜಲವಿದ್ಯುತ್ ಸಹಕಾರವು ನೇಪಾಳದ ಪ್ರಾದೇಶಿಕ ಮಹತ್ವವನ್ನು ತೋರಿಸುವ ಮತ್ತೊಂದು ಸ್ಪಷ್ಟ ಉದಾಹರಣೆ. ಹಿಮಾಲಯದ ನದಿಗಳ ಕಾರಣದಿಂದ ನೇಪಾಳಕ್ಕೆ ಅಪಾರ ಜಲವಿದ್ಯುತ್ ಸಾಮರ್ಥ್ಯವಿದೆ. ಆದರೆ ಅದನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಅಗತ್ಯವಾದ ಹೂಡಿಕೆ ಮತ್ತು ಮೂಲ ಸೌಕರ್ಯ ಕೊರತೆಯಿದೆ. ಭಾರತ ಮತ್ತು ಚೀನಾ ಎರಡೂ ಜಲವಿದ್ಯುತ್ ಯೋಜನೆಗಳಿಗೆ ಹಣಕಾಸು ಒದಗಿಸಲು ಆಸಕ್ತಿ ತೋರಿವೆ. ನೇಪಾಳದ ಹೊಸ ಸರ್ಕಾರ ಗಡಿ ಮೀರಿ ವಿದ್ಯುತ್ ವ್ಯಾಪಾರವನ್ನು ಯಶಸ್ವಿಯಾಗಿ ಉತ್ತೇಜಿಸಿದರೆ, ವಿಶೇಷವಾಗಿ ಹೆಚ್ಚುವರಿ ವಿದ್ಯುತ್ ಅನ್ನು ಭಾರತಕ್ಕೆ ರಫ್ತು ಮಾಡಿದರೆ, ಇದು ಪ್ರಾದೇಶಿಕ ಇಂಧನ ಭದ್ರತೆ ಮತ್ತು ಆರ್ಥಿಕ ಏಕೀಕರಣವನ್ನು ಬಲಪಡಿಸಬಹುದು. ಇತ್ತೀಚೆಗೆ ಭಾರತ ಮತ್ತು ನೇಪಾಳ ನಡುವೆ ವಿದ್ಯುತ್ ವ್ಯಾಪಾರವನ್ನು ವಿಸ್ತರಿಸಲು ಕೈಗೊಂಡ ಒಪ್ಪಂದಗಳು ರಾಜತಾಂತ್ರಿಕ ಸಮನ್ವಯವು ನೈಸರ್ಗಿಕ ಸಂಪನ್ಮೂಲಗಳನ್ನು ಸ್ಪರ್ಧೆಯ ಬದಲು ಸಹಕಾರದ ಸಾಧನವಾಗಿಸಲು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ತೋರಿಸುತ್ತಿದೆ.

ನೇಪಾಳಿ ಸರ್ಕಾರವು ಹವಾಮಾನ ಬದಲಾವಣೆ, ಪ್ರಕೃತಿ ವಿಪತ್ತು ನಿರ್ವಹಣೆ ಮತ್ತು ಗಡಿ ಮೀರಿ ವ್ಯಾಪಾರದಂತಹ ವಿಷಯಗಳಲ್ಲಿ ಪ್ರಾದೇಶಿಕ ಸಹಕಾರವನ್ನು ಪುನರುಜ್ಜೀವನಗೊಳಿಸಲು ಸಹಾಯ ಮಾಡಬಹುದು. ಉದಾಹರಣೆಗೆ, ಹಿಮಾಲಯ ಪ್ರದೇಶದಲ್ಲಿ ಹಿಮನದಿಗಳ ಕರಗುವುದು, ಪ್ರವಾಹಗಳು ಮತ್ತು ಭೂಕಂಪಗಳು ಮುಂತಾದ ಪರಿಸರ ಸವಾಲುಗಳು ನೇಪಾಳ, ಭಾರತ ಮತ್ತು ಭೂತಾನ್ ದೇಶಗಳ ನಡುವೆ ಸಮನ್ವಯಿತ ಕ್ರಮಗಳನ್ನು ಅಗತ್ಯವನ್ನಾಗಿಸುತ್ತವೆ.

ನೇಪಾಳದ ವಿದೇಶಾಂಗ ನೀತಿಯ ಆಯ್ಕೆಗಳು ಹಿಮಾಲಯದ ಭದ್ರತಾ ಪರಿಸ್ಥಿತಿಯ ಮೇಲೆಯೂ ಪರಿಣಾಮ ಬೀರುತ್ತವೆ. ಈ ದೇಶವು ಚೀನಾದ ಟಿಬೆಟ್ ಪ್ರದೇಶಕ್ಕೂ ಭಾರತದ ಉತ್ತರ ರಾಜ್ಯಗಳಿಗೂ ಗಡಿಯಾಗಿದೆ, ಆದ್ದರಿಂದ ಎರಡೂ ದೇಶಗಳಿಗೂ ಇದು ಮಹತ್ವದ ವಿಷಯವಾಗಿದೆ. ಟಿಬೆಟಿಯನ್ ಗುಂಪುಗಳಿಂದ ಚೀನಾ ವಿರೋಧಿ ರಾಜಕೀಯ ಚಟುವಟಿಕೆಗಳನ್ನು ತಡೆಯುವ ನೇಪಾಳದ ಬದ್ಧತೆ ಬೀಜಿಂಗ್ ಜೊತೆಗಿನ ಸಂಬಂಧಗಳನ್ನು ಉಳಿಸಿಕೊಳ್ಳಲು ಸಹಾಯ ಮಾಡಿದೆ. ಮತ್ತೊಂದೆಡೆ, ಭಾರತ ಜೊತೆಗಿನ ಭದ್ರತಾ ಸಹಕಾರ ಗಡಿ ನಿರ್ವಹಣೆ ಮತ್ತು ಗುಪ್ತಚರ ಮಾಹಿತಿ ಹಂಚಿಕೆಗೆ ಅಗತ್ಯವಾಗಿದೆ. ನೇಪಾಳವು ಪಾರದರ್ಶಕ ಮತ್ತು ಸಮತೋಲನದ ನೀತಿಗಳನ್ನು ಅನುಸರಿಸಿದರೆ ತನ್ನ ಬಲಿಷ್ಠ ನೆರೆ ರಾಷ್ಟ್ರಗಳ ನಡುವಿನ ಅನುಮಾನವನ್ನು ಕಡಿಮೆ ಮಾಡಿ ಪ್ರಾದೇಶಿಕ ಉದ್ವಿಗ್ನತೆ ಹೆಚ್ಚಾಗುವುದನ್ನು ತಡೆಯಲು ಸಹಾಯ ಮಾಡಬಹುದು.

ನೇಪಾಳದ ಹೊಸ ಸರ್ಕಾರವು ದಕ್ಷಿಣ ಏಷ್ಯಾದ ಸ್ಥಿರತೆಯ ಮೇಲೆ ಬೀರುವ ಪರಿಣಾಮವು ಸಮತೋಲನದ ರಾಜತಾಂತ್ರಿಕತೆಯನ್ನು ಅನುಸರಿಸುವ ಸಾಮರ್ಥ್ಯ, ಒಳನಾಡಿನ ರಾಜಕೀಯ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಮತ್ತು ನೆರೆ ರಾಷ್ಟ್ರಗಳೊಂದಿಗೆ ಆರ್ಥಿಕ ಸಹಕಾರವನ್ನು ಉತ್ತೇಜಿಸುವುದರ ಮೇಲೆ ಅವಲಂಬಿತವಾಗಿದೆ. ಈ ಅರ್ಥದಲ್ಲಿ ನೇಪಾಳದ ಹೊಸ ನಾಯಕತ್ವ ಆರಿಸುವ ದಿಕ್ಕು ದೇಶದ ಭವಿಷ್ಯವನ್ನಷ್ಟೇ ಅಲ್ಲ, ದಕ್ಷಿಣ ಏಷ್ಯಾದ ಸಮಗ್ರ ಸ್ಥಿರತೆಯನ್ನೂ ರೂಪಿಸಲಿದೆ

ಕಿರುಸುದ್ದಿ

ಮಾ. 15 : ಮೂಲ್ಕಿ ಶ್ರೀ ವೆಂಕಟರಮಣ ದೇವಳದಲ್ಲಿ ಭಜನೆ

• **ಮೂಲ್ಕಿ:** ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮಾ. 15 ರಂದು ಶ್ರೀ ಕಾಶೀ ಮಠಾಧೀಶ ಶ್ರೀಮದ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಆದೇಶದ ಅನುಸಾರ ದೇವಳದ ಸಮಗ್ರ ಜೀರ್ಣೋದ್ಧಾರದ ಪ್ರಾಯಶ್ಚಿತ್ತ ಮತ್ತು ಪರಿಹಾರ ಕಾರ್ಯಕ್ರಮಗಳ ಅಂಗವಾಗಿ ಶ್ರೀ ದೇವರ ಸನ್ನಿಧಿಯಲ್ಲಿ ಬೆಳಿಗ್ಗೆ 6.30ಕ್ಕೆ ದೀಪ ಪ್ರಜ್ವಲನೆಯ ಮೂಲಕ ಆರಂಭಗೊಂಡು ಸಂಜೆ 6.30ರ ವರೆಗೆ ಭಜನೆ ಕಾರ್ಯಕ್ರಮ ಜರಗಲಿದೆ. ಸಂಜೆ 6.30ರ ನಂತರ ದೇವಳದ ಪ್ರಾಕಾರದಲ್ಲಿ ಸಂಕೀರ್ತನೆ ಸಹಿತ 12 ಪ್ರದಕ್ಷಿಣೆಯನ್ನು ಕೈಗೊಂಡು ಮಂಗಲಾಚರಣೆಯನ್ನು ಆಚರಿಸಲಾಗುವುದೆಂದು ದೇವಳದ ಪ್ರಕಟಣೆ ತಿಳಿಸಿದೆ.

ಮಾ 14 ರಂದು ಸಹಾಯ ಹಸ್ತ ಪ್ರದಾನ ಸಮಾರಂಭ

• **ಮುಲ್ಕಿ:** ಮುಲ್ಕಿ ಸುಂದರ ರಾಮ ಶೆಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸಹಾಯ ಹಸ್ತ ಪ್ರದಾನ ಸಮಾರಂಭ ಮಾ. 14ರಂದು ಬೆಳಗ್ಗೆ 10 ಗಂಟೆಗೆ ಮುಲ್ಕಿ ಸುಂದರ ರಾಮ ಶೆಟ್ಟಿ ಸಭಾ ಭವನದಲ್ಲಿ ನಡೆಯಲಿದೆ. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ಉಮಾನಾಥ್ ಕೋಟ್ಯಾನ್, ಡೈಜಿ ವರ್ಲ್ಡ್ ಸಂಸ್ಥಾಪಕರಾದ ವಾಲ್ಟರ್ ನಂದಳಿಕೆ ಉಪಸ್ಥಿತರಿರುವರು ಎಂದು ಮುಲ್ಕಿ ಸುಂದರ ರಾಮ ಶೆಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಕೆ. ಪ್ರಕಾಶ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರುಡ್‌ಸೆಟ್‌ನಲ್ಲಿ ತರಬೇತಿ ಸಮಾರೋಪ

• **ಬೆಳ್ತಂಗಡಿ:** ಪ್ರಾಮಾಣಿಕತೆ ಮತ್ತು ಹೊಸತನವೇ ಯಶಸ್ಸಿನ ಗುಟ್ಟು ಎಂದು ನಾವೂರು, ಬೆಳ್ತಂಗಡಿಯ ಆರೋಗ್ಯ ಕ್ಲಿನಿಕ್‌ನ ಡಾ. ಪ್ರದೀಪ್ ಹೇಳಿದರು. ಅವರು ಉಜಿರೆಯಲ್ಲಿರುವ ಖಿಈಖಿಉಖಿಐ ಸಂಸ್ಥೆಯಲ್ಲಿ ಹತ್ತು ದಿನಗಳ ಪಿ.ಎಂ.ಇ.ಜಿ.ಪಿ (ಕಖಉಎಕ) ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ಧರ್ಮಾ೯ಕಾರಿ ಡಾ। ವೀರೇಂದ್ರ ಹೆಗ್ಗಡೆ ಅವರು ಅದ್ಭುತ ದೂರದೃಷ್ಟಿ ಮತ್ತು ಯೋಜನೆಯ ಫಲವೇ ರುಡ್ ಸೆಟ್ ಸಂಸ್ಥೆ ಯಾಗಿದೆ. ಈ ಸಂಸ್ಥೆಯ ಮೌಲ್ಯಗಳನ್ನು ಸದಾ ನೆನಪಿನಲ್ಲಿ ಇಟ್ಟುಕೊಂಡು ಅಭಿವೃದ್ಧಿ ಹೊಂದಬೇಕು. "ವ್ಯಕ್ತಿ ಸರಿಯಾದರೆ ವ್ಯಕ್ತಿತ್ವ ಸರಿ ಆಗಿರುತ್ತದೆ, ವ್ಯಕ್ತಿತ್ವ ಸರಿ ಇದ್ದರೆ ಉದ್ಯಮವೂ ಬೆಳೆಯುತ್ತದೆ. ಸಾಧನೆ ಮಾಡಲು ಕಠಿಣ ಪರಿಶ್ರಮ ನಿಮ್ಮದಾಗಲಿ" ಎಂದರು. ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಅಜೇಯ ಅವರು ಬ್ಯಾಂಕ್‌ಗಳೊಂದಿಗೆ ಉತ್ತಮ ಸಂಬಂಧ ಬೆಳೆಸಿ, ಹಣಕಾಸು ಶಿಸ್ತನ್ನು ಪಾಲಿಸಿಕೊಂಡು ಉದ್ಯಮವನ್ನು ಯಶಸ್ವಿಯಾಗಿ ನಡೆಸುವಂತೆ ಸಲಹೆ ನೀಡಿದರು. ಸಂಸ್ಥೆಯ ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಹಿರಿಯ ಉಪನ್ಯಾಸಕ ಕೆ. ಕರಣಾಕರ ಜೈನ್ ವಂದಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಪೂಜಾ ಎ. ಭಂಡಾರಿ, ಡೈಮಂಡ್ ಗಾರ್ಡನ್ ಬಳಿ, ಚೆಂಬೂರು – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
2. ಅಭಿಷೇಕ್ ಕುಲಾಲ್, ಪುತ್ತಿಗೆ ಪದವು, ಯುವಕ ಮಂಡಲದ ಬಳಿ, ಸಂಪಿಗೆ, ಮೂಡುಬಿದ್ರಿ.
3. ರಘು ಎನ್. ಶೆಟ್ಟಿ, ನೋಡಾಜೆ ಹೌಸ್, ಕೂರಿಯಾಳ, ಬಂಟ್ವಾಳ (ತಾ)
4. ರಾಘವ ಚೌಟ, ಕಟೀಲು, 'ಶ್ರೀ ದೇವಿ ಪ್ರಸಾದ್', ಕೊಪ್ಪಲಕಾಡು, ಯೆಯ್ಯಾಡಿ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
5. ಶ್ರೀ ಕ್ಷೇತ್ರ ಯಕ್ಷಗಾನ ಬಯಲಾಟ ಸಮಿತಿ ಮತ್ತು ಊರ ಹತ್ತು ಸಮಸ್ತರು, ಮುಂಡಾಜೆ, ಬೆಳ್ತಂಗಡಿ (ತಾ).
6. ಜೀವರಾಜ್ ಕಂಬಳಿ, ಬಳ್ಕಾಜೆ, ಕುಳವೂರು, ಕುಪ್ಪೆಪದವು.
7. ದೀಪ ಪಾಂಡು ಶೆಟ್ಟಿ, ಕನಕಬೆಟ್ಟು ಹೌಸ್, ಸೂರಿಂಜೆ – ಕಟೀಲು ಶ್ರೀ ಗೋಪಾಲಕೃಷ್ಣ ಆಸ್ರಣ್ಣ ಸಭಾ ಭವನದಲ್ಲಿ.

ಶ್ರೀ ಧರ್ಮಸ್ಥಳ ಮೇಳ
ಬೇಳೂರಿನಲ್ಲಿ
ಶ್ರೀ ಪುಟ್ಟಪ್ಪ S/o ಕೆರಿಯಪ್ಪ ಈಡಿಗ ಮಡಸೂರು ಮನೆ

ಶ್ರೀ ಸಾಲಿಗ್ರಾಮ ಮೇಳ
ಉ.ಕ.ದ ಹೆಚ್‌ಎ. ಸಿದ್ದಾಪುರದಲ್ಲಿ ಬಯಲಾಟ
ಷಣ್ಮುಖಪ್ರಿಯ

ಶ್ರೀ ಪೆರ್ಡೂರು ಮೇಳ
ಕಾನ್ನನೆ ಮಳಲಿಯಲ್ಲಿ- **ಚಂದ್ರಹಾಸ ಚರಿತ್ರೆ, ಶಿವಪಂಚಾಕ್ಷರಿ (ಶ್ವೇತಕುಮಾರ ಚರಿತ್ರೆ)**

ಶ್ರೀ ಹನುಮಗಿರಿ ಮೇಳ
ಬಿಳಿನೆಲೆಯಲ್ಲಿ

ಶ್ರೀ ಪಾವಂಜೆ ಮೇಳ
ಯಕ್ಷಸಿರಿ, ಜಪ್ಪಿನಮೊಗರು, ಮಂಗಳೂರು
ಶ್ರೀ ತುಳಸಿ



ಪಾಣೆಮಂಗಳೂರಿನಲ್ಲಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಕ್ರೀಡಾ ಕ್ಷೇತ್ರದ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ದೇವರಾಜ ಅರಸು ಹಿಂದುಳಿದ ವರ್ಗಗಳ ಬಾಲಕಿಯರ ವಿದ್ಯಾರ್ಥಿ ನಿಲಯ ಮೇಲ್ವಿಚಾರಕಿ ಪುಷ್ಪಲತಾ ಮತ್ತು ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಜಯಶ್ರೀ ಅಶೋಕ್ ಗೀತಗಾಯನ ಹಾಡಿದರು. ಇದೇ ವೇಳೆ ಕ್ರೀಡಾ ಕ್ಷೇತ್ರದ ಸಾಧಕರಾದ ಪ್ರತೀಕ್ಷ ಜೋಗಿ, ನಿಸರ್ಗ ಎಸ್. ಬಿ., ತೇಜಸ್ವಿನಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶ ಸಂಧ್ಯಾ ವೆಂಕಟೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಶೆಟ್ಟಿ, ಕಾರ್ಯದರ್ಶ ಹರ್ಷಿಣಿ, ಪುಷ್ಪಾನಂದ, ಅಕ್ಷಿತಾ ಜಿ. ಆರ್., ರಜನಿ ಚಿಕ್ಕಿಯಮಠ, ಭವಾನಿ ಶೆಟ್ಟಿ ಮತ್ತಿತರರು ಇದ್ದರು.

ಎಲ್‌ಪಿಜಿ ಕೊರತೆಗೆ ಕಾಂಗ್ರೆಸ್ ಪ್ರತಿಭಟನೆ

ಬೇಲಿಯೇ ಎದ್ದು ಹೊಲ ಮೇಯ್ದಂತೆ: ಬಿಜೆಪಿ

• **ಮಂಗಳೂರು:** ಇರಾನ್– ಇಸ್ರೇಲ್ ಯುದ್ಧದ ಹಿನ್ನೆಲೆಯಲ್ಲಿ ಇಂಧನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದ್ದು ನಿಜವಾದರೂ, ರಾಜ್ಯದ ಕಾಂಗ್ರೆಸ್ ಸರಕಾರ ಎಲ್‌ಪಿಜಿ ಹಾಗೂ ಇಂಧನಗಳ ಕಾಳಸಂತೆಕೋರರನ್ನು ಮಟ್ಟಹಾಕುವುದು ಬಿಟ್ಟು ಬೀದಿಗಳಿದು ಪ್ರತಿಭಟನೆ ಮಾಡುವುದು ಅವಿವೇಕತನದ ಪರಮಾವಧಿ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ವಕ್ತಾರ ರಾಜಗೋಪಾಲ್ ರೈ ಟೀಕಿಸಿದ್ದಾರೆ.



ರಾಜ್ಯದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ, ಜನರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡದೆ, ಕೇಂದ್ರ ಸರಕಾರದ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತ ಜನರನ್ನು ತಪ್ಪು ಹಾದಿಗೆಳೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಅವಧಿಯಲ್ಲಿ ದೇಶವು ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸುತ್ತಿರುವುದನ್ನು ಕಾಂಗ್ರೆಸ್ ಪಕ್ಷ ಸಹಿಸಲಾರದೆ ರಾಜಕೀಯ ಲಾಭಕ್ಕಾಗಿ ಇಂತಹ ವಿಚಾರಗಳನ್ನು ಮುಂದಿಟ್ಟುಕೊಳ್ಳುತ್ತಿದೆ ಎಂದು ಅವರು ಆಪಾದಿಸಿದ್ದಾರೆ.

ಭಾರತ ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ಗಲ್ಫ್ ರಾಷ್ಟ್ರಗಳನ್ನು ಬಹುಪಾಲು ಅವಲಂಬಿಸಿಕೊಂಡಿದ್ದರೂ, ಕೇಂದ್ರ ಸರ್ಕಾರವು ಇಂಧನ ಆಮದು ಮೂಲಗಳನ್ನು ವಿಸ್ತರಿಸಿದೆ. ರಷ್ಯಾ ಹಾಗೂ ಆಫ್ರಿಕಾದ ಕೆಲವು ದೇಶಗಳೊಂದಿಗೆ ಇಂಧನ ವ್ಯಾಪಾರ ವಿಸ್ತರಣೆ ಮಾಡಿರುವುದರಿಂದ ಸರಬರಾಜಿನಲ್ಲಿ ದೊಡ್ಡ ಮಟ್ಟದ ವ್ಯತ್ಯಯ ಉಂಟಾಗುವ ಸಾಧ್ಯತೆ ಕಡಿಮೆ ಎಂದು ಅವರು ಹೇಳಿದ್ದಾರೆ.

ಯುದ್ಧದಂತಹ ಸಂದರ್ಭಗಳಲ್ಲಿ ಇಂಧನ ಸರಬರಾಜಿನಲ್ಲಿ ಕೆಲಮಟ್ಟಿನ ವ್ಯತ್ಯಯ ಉಂಟಾಗುವುದು ಸಹಜ. ಇದರ ಪರಿಣಾಮವಾಗಿ ಹೋಟೆಲ್ ಮತ್ತು ಆತಿಥ್ಯ ಕ್ಷೇತ್ರಗಳಿಗೆ ಸ್ವಲ್ಪ ಮಟ್ಟಿನ ತೊಂದರೆಯಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಕೇಂದ್ರ ಹಾಗೂ ಎಲ್‌ಪಿಜಿ ಮಾರಾಟ ಸಂಸ್ಥೆಗಳ ಜತೆ ಸಮನ್ವಯ ಸಾಧಿಸಿಕೊಂಡು ಪೂರೈಕೆಯನ್ನು ಅಬಾಧಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಅದನ್ನು ಬಿಟ್ಟು ಬೀದಿಗಿಳಿದು ಪ್ರತಿಭಟನೆ ನಡೆಸಿದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗುತ್ತದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅಮಾಯಕರ ಸಾವಿಗೆ ಆಕ್ರೋಶ | ಅರಣ್ಯ ಸಚಿವರಿಗೆ ಕೊಡಗು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಒತ್ತಾಯ

ಆನೆ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ನಿರಂತರ ದಾಳಿಯಿಂದ ಅಮಾಯಕ ಜೀವಗಳು ಬಲಿಯಾಗುತ್ತಿರುವುದರಿಂದ ಅರಣ್ಯ ಸಚಿವರು ತುರ್ತು ಸಭೆ ನಡೆಸಿ ಶಾಶ್ವತ ಪರಿಹಾರ ಸೂಚಿಸಬೇಕು. ತಪ್ಪಿದಲ್ಲಿ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಕೊಡಗು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಎಚ್ಚರಿಕೆ ನೀಡಿದೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಅನಿತಾ ಪೂವಯ್ಯ ಅವರು, ಕಳೆದ 10 ದಿನಗಳಲ್ಲಿ ಕಾಡಾನೆ ದಾಳಿಗೆ ಎರಡು ಅಮಾಯಕ ಹೆಣ್ಣು ಜೀವಗಳು ಬಲಿಯಾಗಿದ್ದು, ಇದು ಅತ್ಯಂತ ವಿಷಾದಕರ. ಜಿಲ್ಲೆಯಲ್ಲಿ ಮಾನವ ಜೀವಕ್ಕೆ ಬೆಲೆಯೇ ಇಲ್ಲದಾಗಿದೆ. ವನ್ಯಜೀವಿಗಳ ನಿರಂತರ ದಾಳಿ ಆತಂಕ ಸೃಷ್ಟಿಸಿದೆ. ಮಾನವರು ಮಾತ್ರವಲ್ಲದೆ ಜಾನುವಾರುಗಳು ಕೂಡಾ ಬಲಿಯಾಗುತ್ತಿವೆ, ಬೆಳೆ ನಷ್ಟವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬೆಳವಣಿಗೆಯನ್ನು ಅರಣ್ಯ ಸಚಿವರು ಗಂಭೀರವಾಗಿ ಪರಿಗಣಿಸಬೇಕು. ಕೇವಲ ಯೋಜನೆಯನ್ನು ಘೋಷಿಸಿದರೆ ಸಾಲದು. ಇವುಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ಮೂಲಕ ವನ್ಯಜೀವಿಗಳ ದಾಳಿಯಿಂದ ಜಿಲ್ಲೆಯ ಜನರನ್ನು ಪಾರು ಮಾಡಬೇಕು ಎಂದು ಅನಿತಾ ಒತ್ತಾಯಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ಗಂಭೀರ ಸ್ವರೂಪವನ್ನು ಪಡೆದುಕೊಂಡಿದ್ದರೂ, ಸರಕಾರ ಇಲ್ಲಿಯವರೆಗೆ ಶಾಶ್ವತ ಪರಿಹಾರೋಪಾಯಗಳನ್ನು ಕಂಡುಕೊಂಡಿಲ್ಲ. ಮೃತರ ಕುಟುಂಬಗಳಿಗೆ ಕೇವಲ ಪರಿಹಾರದ ಚೆಕ್ ನೀಡಿ ಕಣ್ಣೊರೆಸುವ ಪ್ರಯತ್ನ ಮಾಡಲಾಗುತ್ತಿದೆಯೇ ಹೊರತು ಅಮಾಯಕ ಜೀವಗಳು ಬಲಿಯಾಗುವುದನ್ನು ತಡೆಯುವಲ್ಲಿ ಆಡಳಿತಗಾರರು ವಿಫಲರಾಗಿದ್ದಾರೆ ಎಂದು ಅನಿತಾ ಪೂವಯ್ಯ ಆರೋಪಿಸಿದ್ದಾರೆ.

ಅರಣ್ಯ ಸಚಿವರು ಶೀಘ್ರ ಕೊಡಗು ಜಿಲ್ಲೆಗೆ ಭೇಟಿ ನೀಡಿ ಅಧಿಕಾರಿಗಳ, ಕೃಷಿಕರ ಹಾಗೂ ಗ್ರಾಮಸ್ಥರ ಸಭೆ ನಡೆಸಿ ಪರಿಹಾರ ಸೂಚಿಸದಿದ್ದರೆ ಅರಣ್ಯ ಭವನದ ಎದುರು ಮಹಿಳಾ ಬಿಜೆಪಿ ಪ್ರತಿಭಟನೆ ನಡೆಸಲಿದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಅರಣ್ಯ ಸಚಿವರು ರಾಜೀನಾಮೆ ನೀಡಲಿ: ವಿರಾಜಪೇಟೆ ಬಿಜೆಪಿ ಒತ್ತಾಯ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ವನ್ಯಜೀವಿ ಹಾಗೂ ಮಾನವನ ನಡುವಿನ ಸಂಘರ್ಷ ಕೈಮೀರಿ ಹೋಗಿದೆ. ಕಳೆದ 10 ದಿನಗಳಲ್ಲಿ ಕಾಡಾನೆ ದಾಳಿಗೆ ಎರಡು ಅಮಾಯಕ ಜೀವಗಳು ಬಲಿಯಾಗಿವೆ. ಆದರೆ ಅರಣ್ಯ ಸಚಿವರು ಮಾತ್ರ ಈ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿಲ್ಲವೆಂದು ಬಿಜೆಪಿ ವಿರಾಜಪೇಟೆ ಮಂಡಲದ ವಕ್ತಾರ ಚೆಪ್ಪುಡಿರ ರಾಕೇಶ್ ದೇವಯ್ಯ ಟೀಕಿಸಿದ್ದಾರೆ.



ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅರಣ್ಯ ಸಚಿವರಿಗೆ ಅರಣ್ಯ ಖಾತೆಯ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಾಗದಿದ್ದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿದ್ದಾರೆ.

ಕೊಡಗು ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ವನ್ಯಜೀವಿಗಳ ದಾಳಿಯ ಆತಂಕ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಎಲ್ಲೆಂದರಲ್ಲಿ ಕಾಡಾನೆಗಳು ಕಾಣಿಸಿಕೊಳ್ಳುತ್ತಿವೆ, ಇದೇ ಫೆ.28 ರಂದು ಕಾಡಾನೆ ದಾಳಿಗೆ ಸಿಲುಕಿ ಪಿಯುಸಿ ವಿದ್ಯಾರ್ಥಿನಿಯೊಬ್ಬಳು ಸಾವಿಗೀಡಾದ ಘಟನೆ ಮಡಿಕೇರಿ ತಾಲ್ಲೂಕಿನ ಬೆಟ್ಟತ್ತೂರು ಗ್ರಾಮದಲ್ಲಿ ನಡೆದಿದೆ. ಇದೀಗ ಕುಶಾಲನಗರ ತಾಲ್ಲೂಕಿನ ಬಾಳೆಗಂಡಿ ಎಂಬಲ್ಲಿ ಜಲಜಾಕ್ಷಿ ಎಂಬವರು ಜೀವ ಕಳೆದುಕೊಂಡಿದ್ದಾರೆ. ಆದರೆ ಅರಣ್ಯ ಸಚಿವರು ಮಾತ್ರ ಈ ಘಟನೆಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ ಎನ್ನುವ ರೀತಿಯಲ್ಲಿ ಮೌನಕ್ಕೆ ಶರಣಾಗಿದ್ದಾರೆ ಎಂದು ಟೀಕಿಸಿದ್ದಾರೆ. ಜನ ವನ್ಯಜೀವಿ ದಾಳಿಯ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿದ್ದರೂ ಮತ್ತು ಸಾವು ನೋವುಗಳು ಸಂಭವಿಸುತ್ತಿದ್ದರೂ ಅರಣ್ಯ ಸಚಿವರು ಕೊಡಗು ಜಿಲ್ಲೆಗೆ ಭೇಟಿ ನೀಡಿ ಅರಣ್ಯ ಅಧಿಕಾರಿಗಳಿಂದ ಮಾಹಿತಿ ಪಡೆಯುವ ಕಾಳಜಿಯನ್ನು ತೋರುತ್ತಿಲ್ಲ. ಕೇವಲ ವಿಧಾನಸೌಧದ ಕಚೇರಿಯಲ್ಲೇ ಉಳಿದುಬಿಟ್ಟರೆ ವನ್ಯಜೀವಿಗಳ ಉಪಟಳದಿಂದ ಜಿಲ್ಲೆಯ ಜನರು ಎದುರಿಸುತ್ತಿರುವ ಕಷ್ಟನಷ್ಟಗಳ ಗಂಭೀರತೆಯ ಅರಿವಾಗುವುದಿಲ್ಲ. ಆದ್ದರಿಂದ ಅರಣ್ಯ ಸಚಿವರು ತಕ್ಷಣ ಕೊಡಗು ಜಿಲ್ಲೆಗೆ ಭೇಟಿ ನೀಡಿ ಸಮಸ್ಯೆಯ ನೈಜತೆಯನ್ನು ಅರಿತುಕೊಳ್ಳಬೇಕು. ಅರಣ್ಯ ಅಧಿಕಾರಿಗಳ ಸಮ್ಮುಖದಲ್ಲಿ ಜನಸಂಪರ್ಕ ಸಭೆ ನಡೆಸಿ ಜನರ ಅಹವಾಲನ್ನು ಸ್ವೀಕರಿಸಬೇಕು. ವನ್ಯಜೀವಿ ದಾಳಿ ತಡೆಗೆ ಇಲ್ಲಿಯವರೆಗೆ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮಗಳ ಕುರಿತು ಖುದ್ದು ಪರಿಶೀಲಿಸಬೇಕು. ಶಾಶ್ವತ ಯೋಜನೆ ರೂಪಿಸಲು ಸಭೆಯಲ್ಲಿ ಅನುಮೋದನೆ ನೀಡಬೇಕು ಎಂದು ರಾಕೇಶ್ ದೇವಯ್ಯ ಒತ್ತಾಯಿಸಿದ್ದಾರೆ.

ತಪ್ಪಿದಲ್ಲಿ ಅರಣ್ಯ ಸಚಿವರ ರಾಜೀನಾಮೆಗಾಗಿ ಆಗ್ರಹಿಸಿ ಬಿಜೆಪಿ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕೂಡಲೇ ಕೊಡಗಿಗೆ ಅರಣ್ಯ ಸಚಿವರು ಭೇಟಿ ನೀಡಲಿ

• **ನಾಪೋಕ್ಲು :** ಕಾಡಾನೆ ದಾಳಿಯಿಂದಾಗಿ ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳಲ್ಲಿ ಸುಮಾರು ನಾಲ್ಕು ಮಂದಿ ಸಾವನ್ನಪ್ಪಿದ್ದು, ಕಾಡಾನೆ ಹಾವಳಿ ನಿಯಂತ್ರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಸಮಾಜ ಸೇವಕ ಎಡಿಕೇರಿ ಪ್ರಸನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಎರಡು ತಿಂಗಳಲ್ಲಿ ನಾಲ್ಕು ಮಂದಿ ಮೃತಪಟ್ಟಿದ್ದರೂ ಕೂಡ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಆರೋಪಿಸಿದರು.



ಕೂಡಲೇ ಸಂಬಂಧಿಸಿದ ಇಲಾಖೆ ಎಚ್ಚೆತ್ತುಕೊಂಡು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ ಅವರು, ಮುಂದೆ ಇಂತಹ ಘಟನೆಗಳು ಮರುಕಳಿಸಿದರೆ ಸಾರ್ವಜನಿಕರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಜನರು ಸಾವನ್ನಪ್ಪುತ್ತಿದ್ದಾರೆ. ಹುಲಿ ದಾಳಿಯಿಂದ ಜಾನುವಾರುಗಳು ಮೃತಪಟ್ಟಿದೆ. ಹೀಗಿದ್ದರೂ ಕೂಡ ಈ ವರೆಗೆ ಕೊಡಗು ಜಿಲ್ಲೆ ಅರಣ್ಯ ಸಚಿವರು ಭೇಟಿ ನೀಡದಿರುವ ಬಗ್ಗೆ ಪ್ರಸನ್ನ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಸಚಿವರು ಆದಷ್ಟು ಬೇಗ ಕೊಡಗಿಗೆ ಭೇಟಿ ನೀಡಿ ಕಾಡಾನೆ ಹಾವಳಿ ನಿಯಂತ್ರಿಸಲು ಯೋಜನೆ ರೂಪಿಸಬೇಕೆಂದು ಆಗ್ರಹಿಸಿದ್ದಾರೆ.

ಮಡಿಕೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವೊಂದೇ ಸಾಲದು: ಕವಯತ್ರಿ ಸ್ಮಿತಾ ಅಮೃತ್‌ರಾಜ್

• **ಮಡಿಕೇರಿ:** ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವೊಂದೇ ಸಾಲದು, ಅದರೊಂದಿಗೆ ಆರ್ಥಿಕ ಜ್ಞಾನ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಬೆಂಬಲ ಅತ್ಯಗತ್ಯ ಎಂದು ಖ್ಯಾತ ಕವಯತ್ರಿ ಸ್ಮಿತಾ ಅಮೃತ್‌ರಾಜ್ ಅವರು ಹೇಳಿದರು.



ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಡಿಕೇರಿ ತಾಲೂಕು ಪಂಚಾಯತ್ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಡಿಕೇರಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಮಂದ್ರಿರ ಮೋಹನ್‌ದಾಸ್ ಅವರು, ಮಹಿಳಾ ದಿನಾಚರಣೆ ಒಂದು ದಿನಕ್ಕೆ ಸಿಮೀತವಾಗಬಾರದು. ಎಲ್ಲಾ ರಂಗದಲ್ಲೂ ತೊಡಗಿಕೊಂಡು ಸಮಾಜದ ಅಭಿವೃದ್ಧಿಗೆ ಮುಂದಾಗಬೇಕು. ಮಹಿಳೆಯರು ಮಗಳಾಗಿ, ಸಹೋದರಿಯಾಗಿ, ಬಾಳ ಸಂಗಾತಿಯಾಗಿ, ತಾಯಿಯಾಗಿ, ಅತ್ತೆ, ಅಜ್ಜಿಯಾಗಿಹಂತಹಂತವಾಗಿಈಎಲ್ಲಾ ಪಾತ್ರಗಳನ್ನು ಸಂತಸದಿಂದ ನಿರ್ವಹಿಸುತ್ತಾರೆ. ಇದರೊಂದಿಗೆ ತಮಗೆ ಎದುರಾಗುವ ಸವಾಲುಗಳನ್ನೂ ಎದುರಿಸಿ ಮುನ್ನುಗ್ಗಿದರೆ ಸಮೃದ್ಧಿ ಹಾಗೂ ಯಶಸ್ಸಿನ ಜೀವನ ನಡೆಸಬಹುದು. ಅಲ್ಲದೇ ಸಮಾಜಕ್ಕೆ ಉತ್ತಮ ದಾರಿದೀಪ ಆಗಬಹುದು ಎಂದು ಸಲಹೆ ನೀಡಿದರು.

ತಾ.ಪಂ.ಇಒ ಶೇಖರ್, ಮಡಿಕೇರಿ ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ರಾಣಿ ಮಾತನಾಡಿದರು.

ಪಂಚಾಯತ್ ರಾಜ್ ಸಹಾಯಕ ನಿರ್ದೇಶಕಿ ಎಂ.ಜಿ.ಸುನಿತಾ, ಎಸ್.ಎಸ್.ಹೇಮಂತ್, ಸಂಜೀವಿನಿ ಒಕ್ಕೂಟದ ಪ್ರಮುಖರು ಹಾಗೂ ಸದಸ್ಯರು ಹಾಜರಿದ್ದರು. ರಮ್ಯ ಮೂರ್ನಾಡು ಪ್ರಾರ್ಥಿಸಿದರೆ, ಚೆಂಬು ಗ್ರಾಮ ಪಂಚಾಯತ್ ಸಂಜೀವಿನಿ ಒಕ್ಕೂಟದ ಸದಸ್ಯೆ ರೇಖಾ ನಿರೂಪಿಸಿದರು, ಹೊದ್ದೂರು ಗ್ರಾ.ಪಂ ಪಿಡಿಒ ವತ್ಸಲಾ ಕುಮಾರಿ ಸ್ವಾಗತಿಸಿದರು. ಮೂಕಾಂಬಿಕ ಸಂಜೀವಿನಿ ಒಕ್ಕೂಟದ ಕನಕಾಂಬಿಕೆ ವಂದಿಸಿದರು. ಕಾರ್ಯಕ್ರಮದಲ್ಲಿ ಸ್ಮಿತಾ ಅಮೃತರಾಜ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಗ್ರಾ.ಪಂ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ 26 ಒಕ್ಕೂಟಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ಸಭಾ ಕಾರ್ಯಕ್ರಮದ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು. ವಿವಿಧ ಒಕ್ಕೂಟದ ಸದಸ್ಯರು ಹತ್ತಕ್ಕೂ ಹೆಚ್ಚು ಮಳಿಗೆಗಳನ್ನು ತೆರೆದಿದ್ದರು.

ಪಂಜ ದೇವಳದ ಜಾತ್ರಾ ಆಯವ್ಯಯ ಮಂಡನಾ ಸಭೆ

• **ಸುಬ್ರಹ್ಮಣ್ಯ:** ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇಗುಲದ ಜಾತ್ರೋತ್ಸವ 2026ರ ಖರ್ಚು ವೆಚ್ಚಗಳ ಆಯವ್ಯಯ ಮಂಡನಾ ಸಭೆಯು ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.

ಉಳಿಕೆ ರೂ.3.18 ಲಕ್ಷ

ಜಾತ್ರೋತ್ಸವದ ವಿವಿಧ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಜಾತ್ರೆಯ ಖರ್ಚು ವೆಚ್ಚಗಳ ಬಗ್ಗೆ ಸವಿವರವಾಗಿ ಸಭೆಗೆ ತಿಳಿಸಲಾಯಿತು. ಜಾತ್ರೋತ್ಸವದ ಒಟ್ಟು ಆದಾಯ ರೂ.28,37,697 ಆಗಿದ್ದು, ಒಟ್ಟು ಖರ್ಚು ರೂ.25,19,186 ಆಗಿದೆ. ಆದುದರಿಂದ ರೂ.3,18,511 ಉಳಿಕೆಯಾಗಿದೆ ಎಂದು ತಿಳಿಸಲಾಯಿತು.

ಊರ ಭಕ್ತಾಭಿಮಾನಿಗಳು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭ ಪರಮೇಶ್ವರ ಗೌಡ ಬಿಳಿಮಲೆ ಮತ್ತು ಲೋಕನಾಥ ಕೆ.ಬಿ. ಅವರು ಕುದ್ವ ನೋಟು ಎಣಿಕೆ ಮಾಡುವ ಮೆಷಿನ್ ಒಂದನ್ನು ದೇಗುಲಕ್ಕೆ ಕೊಡುಗೆಯಾಗಿ ನೀಡಿದರು.

ಡಾ ದೇವಿಪ್ರಸಾದ್ ಕಾನತ್ತೂರ್ ಸ್ವಾಗತಿಸಿದರು. ಗೌರವ ಸಲಹೆಗಾರರಾದ ಮಹೇಶ್ ಕುಮಾರ್ ಕರಿಕಳ, ಪರಮೇಶ್ವರ ಗೌಡ ಬಿಳಿಮಲೆ, ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಸಂತೋಷ್ ಕುಮಾರ್ ರೈ ಪಲ್ಲತ್ತಡ್ಕ, ಮೈಲಪ್ಪ ಗೌಡ ಪಟ್ಟೆ, ಧರ್ಮಣ್ಣ ನಾಯ್ಕ ಗರಡಿ, ಧರ್ಮಪಾಲ ಗೌಡ ಮರಕಡ, ಮಾಲಿನಿ ಕುದ್ವ, ಪವಿತ್ರ ಮಲ್ಲೆಟಿ ಹಾಗೂ ಪೈಂದೋಡಿ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವ ಗೌಡ ಕುದ್ವ ವೇದಿಕೆಯಲ್ಲಿದ್ದರು. ವ್ಯವಸ್ಥಾಪನಾ ಸಮಿತಿ ಮಾಜಿ ಸದಸ್ಯರಾದ ಗಂಗಾಧರ ಗುಂಡಡ್ಕ, ರಜಿತ್ ಭಟ್ ಪಂಜ ಬೀಡು ಮತ್ತಿತರರು ಪಾಲ್ಗೊಂಡಿದ್ದರು.

ಶ್ರೀಕೃಷ್ಣ ಭಜನಾ ಮಂದಿರಕ್ಕೆ ಮೋಹನದಾಸ ಪರಮಹಂಸ ಸ್ವಾಮೀಜಿ ಭೇಟಿ

ಎಲ್ಲರೂ ಒಂದಾಗಿ ಮಂದಿರ ನಿರ್ಮಿಸಿ



• **ಸುಳ್ಯ:** ಜಾಲ್ಸೂರು ಗ್ರಾಮದ ಶ್ರೀಕೃಷ್ಣ ಭಜನಾ ಮಂದಿರದ ನೂತನ ಮಂದಿರ ನಿರ್ಮಾಣ ಹಂತದಲ್ಲಿದ್ದು, ಇದರ ವೀಕ್ಷಣೆಗೆ ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಸೋಮವಾರ ಭೇಟಿ ನೀಡಿದರು.

ಬಳಿಕ ಆಶೀರ್ವಚನ ನೀಡಿದ ಶ್ರೀಗಳು ಗ್ರಾಮ ದೇವಸ್ಥಾನವಾದ ಅಡ್ಕಾರು ಶ್ರೀ ಸುಬ್ರಹ್ಮಣ್ಯ ಸ್ವಾಮೀ ದೇವಸ್ಥಾನಕ್ಕೆ ಪ್ರತಿ ಸೋಮವಾರ ಗ್ರಾಮದ ಪ್ರತಿ ಮನೆಯವರು ಭೇಟಿ ನೀಡಿ ದೇವಾಲಯದಲ್ಲಿ ಸೇವೆ ಮಾಡಿಸಬೇಕು. ಇದರೊಂದಿಗೆ ಭಜನಾ ಮಂದಿರದ ಅಭಿವೃದ್ಧಿಗೆ ಕೊಡಗೆ ನೀಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಹಾಗೆಯೇ ಜಾತಿ ಬೇದ ಭಾವ, ಮೇಳು–ಕೀಳು, ಮದ–ಮತ್ಸರವನ್ನು ಬಿಟ್ಟು ಇನ್ನೊಬ್ಬರ ಒಳಿತಿನಲ್ಲಿ ಮತ್ತು ಸಂತೋಷದಲ್ಲಿ ಖುಷಿ ಕಾಣಬೇಕು ಎಂದು ಹೇಳಿದರು.

ಜೊತೆಗೆ ಇನ್ನೊಬ್ಬರ ಸಂಕಷ್ಟದಲ್ಲಿ ಸಹಾಯ ಹಸ್ತ ಚಾಚಬೇಕು ಎಂದು ಕರೆ ನೀಡಿದ ಅವರು, ಮಾತು ಹಿತ ಮತ್ತು ಮಿತವಾಗಿದ್ದರೆ ಒಳಿತು. ಜಗತ್ತಿಗೆ ಬೇಕಾದವನು ಕೃಷ್ಣ, ಹಾಗಾಗಿ ಸೋಣಂಗೇರಿ ಶ್ರೀಕೃಷ್ಣ ಭಜನಾ ಮಂದಿರ ಭಕ್ತಿ ಮತ್ತು ಶಕ್ತಿಯ ಸಾನಿಧ್ಯವಾಗಿದ್ದು ಎಲ್ಲರೂ ಒಗ್ಗಟ್ಟಿನಿಂದ ಈ ಮಂದಿರಕ್ಕೆ ಶ್ರಮ ವಹಿಸಿ ಕೆಲಸ ಮಾಡಿ ಮೇ ತಿಂಗಳಲ್ಲಿ ನೂತನ ಮಂದಿರದ ಪ್ರತಿಷ್ಠಾ ಕಾರ್ಯಕ್ರಮ ನಡೆಸುವಂತೆ ಸಲಹೆ ನೀಡಿದರು.

ಈ ಸಂದರ್ಭ ಭಜನಾ ಮಂದಿರದ ಅಧ್ಯಕ್ಷ ಗಿರಿಧರ ಗೌಡ ನಾಯರ್ ಹಿತ್ಲು, ಸಂಚಾಲಕ ಸತ್ಯಶಾಂತಿ ತ್ಯಾಗಮೂರ್ತಿ, ಪ್ರಮುಖರಾದ ಸುಪ್ರೀತ್ ಮೋಂಟಡ್ಕ, ಲೀಲಾವತಿ ಕರುಣಾಕರ ನಡುಮನೆ, ರುಕ್ಮಯ್ಯ ಗೌಡ ನಡುಮನೆ ಮತ್ತಿತರರು ಹಾಜರಿದ್ದರು.

ಎಪಿಎಂಸಿ ಪ್ರಾಂಗಣ ಬಳಿಯ ಕಾದಿರಿಸಿದ ಜಾಗವೂ ತಿರಸ್ಕೃತ | ಮೂರು ವರ್ಷಗಳಿಂದ ಅಂತಿಮಗೊಳ್ಳದ ಜಾಗ, ಕಡಬದ ಜನತೆಗೆ ನಿರಾಸೆ

ಬಹು ಬೇಡಿಕೆಯ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಕಡಬ ಪೇಟೆಯಲ್ಲಿ ಲಭ್ಯವಾಗದ ಜಾಗ!

▸ **ತುಳಸಿ ಕಡಬ**

• **ಕಡಬ:** ತಾಲೂಕು ಕೇಂದ್ರ ಕಡಬದಲ್ಲಿ ಬಡ ಜನರಿಗೆ ಅಗ್ಗದ ದರದಲ್ಲಿ ಗುಣಮಟ್ಟದ ಶುಚಿ ರುಚಿಯಾದ ಊಟ ಮತ್ತು ಉಪಹಾರ ದೊರೆಯುವ ಇಂದಿರಾ ಕ್ಯಾಂಟೀನ್ ತೆರೆಯಲಿದೆ ಎನ್ನುವ ಸುದ್ದಿ ಕಳೆದ 3 ವರ್ಷಗಳಿಂದ ಸುದ್ದಿಯಾಗಿಯೇ ಉಳಿದಿದೆ. ಕಡಬದಲ್ಲಿ ಬಹು ನಿರೀಕ್ಷೆಯ ಇಂದಿರಾ ಕ್ಯಾಂಟೀನ್ ತೆರೆದು ಕೊಳ್ಳಲಿದೆ ಎನ್ನುವ ಸಾರ್ವಜನಿಕರ ನಿರೀಕ್ಷೆ ಜಾಗ ಲಭ್ಯವಿಲ್ಲದ ಕಾರಣದಿಂದಾಗಿ ಇನ್ನೂ ಕೈಗೂಡದಿರುವುದು ವಿಪರ್ಯಾಸ.

ಸಿದ್ದರಾಮಯ್ಯನವರು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಪ್ರಾರಂಭವಾದ ಇಂದಿರಾ ಕ್ಯಾಂಟೀನ್ ರಾಜ್ಯದ ನಗರ ಪ್ರದೇಶ ಗಳಲ್ಲಿ ಕಾರ್ಯಾಚರಿಸುತ್ತಿತ್ತು. ಇದೀಗ ತಾಲೂಕು ಮಟ್ಟದಲ್ಲಿ ಮುಖ್ಯ ಪೇಟೆಗಳ ಭಾಗಗಳಿಗೂ ಇಂದಿರಾ ಕ್ಯಾಂಟೀನ್ ವಿಸ್ತರಣೆ ಮಾಡಲಾಗಿದೆ. ರಾಜ್ಯದಲ್ಲಿ ಮತ್ತೆ 188 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯಲು ಮುಖ್ಯಮಂತ್ರಿಗಳು ಹಸಿರು ನಿಶಾನೆ ಕೊಟ್ಟ ಬೆನ್ನಲ್ಲೇ ಕಡಬದಲ್ಲೂ ಇಂದಿರಾ ಕ್ಯಾಂಟೀನ್ ಪ್ರಾರಂಭಿಸುವ ಹಿನ್ನೆಲೆಯಲ್ಲಿ ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಜಾಗ ಗುರುತಿಸಲಾಗಿತ್ತು. ಮಹಾನಗರಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಕೆಲವೆಡೆ ಇಂದಿರಾ ಕ್ಯಾಂಟೀನ್ ಕಾರ್ಯಾರಂಭ ಮಾಡುತ್ತಿರುವಾಗ ಕಡಬದಲ್ಲಿಯೂ ಕ್ಯಾಂಟೀನ್ ಆರಂಭಗೊಳ್ಳಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅ೯ಕಾರಿಗಳು ಇಂದಿರಾ ಕ್ಯಾಂಟೀನ್‌ಗೆ ಜಾಗ ಹುಡುಕುವುದರಲ್ಲೇ 3 ವರ್ಷಗಳು ಕಳೆದು ಹೋಗಿರುವುದು ಕಡಬ ಪರಿಸರದ ಜನರ ನಿರಾಶೆಗೆ ಕಾರಣವಾಗಿದೆ.



ಬೇಕಾಗಿದೆ ಸೂಕ್ತ ಜಾಗ

ಕಡಬದಲ್ಲಿ ನಡೆದ ಜನತಾ ದರ್ಶನದಲ್ಲಿ ಇಂದಿರಾ ಕ್ಯಾಂಟಿನ್ ಪ್ರಾರಂಭಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಮಾಡಲಾಗಿತ್ತು. ಈ ಹಿಂದೆ ಇಂದಿರಾ ಕ್ಯಾಂಟೀನ್ ತೆರೆಯಲು ಈಗಾಗಲೇ ನಿಗದಿ ಪಡಿಸಿದ ಜಾಗ ತಿರಸ್ಕೃತಗೊಂಡಿದೆ. ಸಮುದಾಯ ಆರೋಗ್ಯ ಕೇಂದ್ರ ಬಳಿ ಪ್ರವಾಸಿ ಮಂದಿರದ ಬಳಿಯಿರುವ ಜಾಗ ತೋರಿಸಲಾಗಿತ್ತು. ಅದಕ್ಕೂ ಆಕ್ಷೇಪವಿದೆ ಎನ್ನುವ ಕಾರಣದಿಂದಾಗಿ ಅದೂ ಅಂತಿಮಗೊಂಡಿಲ್ಲ. ಸೂಕ್ತ ಜಾಗ ನೀಡುವಂತೆ ಕಡಬ ತಹಶೀಲ್ದಾರ್‌ಗೆ ಮನವಿ ಮಾಡಲಾಗಿದೆ. ತಾಲೂಕು ಇಂದಿರಾ ಕ್ಯಾಂಟೀನ್ ತೆರೆಯಬೇಕೆಂಬುದು ನಮ್ಮ ಇರಾದೆಯಾಗಿದೆ.

■ ಲೀಲಾವತಿ ಇ., ಮುಖ್ಯಾಧಿಕಾರಿ, ಕಡಬ

ಗುರುತಿಸಿದ್ದ ಜಾಗವೂ ತಿರಸ್ಕೃತ

ಕಡಬದಲ್ಲಿ ಇಂದಿರಾ ಕ್ಯಾಂಟೀನ್ ಪ್ರಾರಂಭಿಸುವುದಕ್ಕಾಗಿ ಕಡಬದ ಎಪಿಎಂಸಿ ಪ್ರಾಂಗಣದ ಬಳಿ ಸ್ಥಳ ನಿಗದಿಪಡಿಸಿ ಪಹಣಿ ಕೂಡಾ ಮಾಡಲಾಗಿತ್ತು. ಗುರುತಿಸಲಾಗಿರುವ ಜಾಗ ಕಡಬದ ತಾಲೂಕು ಆಡಳಿತ ಸೌಧದ ಮುಂಭಾಗದಲ್ಲಿದ್ದು, ಮುಂದೆ ನ್ಯಾಯಾಲಯ, ಉಪ ನೋಂದಣಾಧಿಕಾರಿಗಳ ಕಚೇರಿಗಳೂ ಕೂಡ ಅದೇ ಪರಿಸರದಲ್ಲಿ ಆರಂಭಗೊಳ್ಳಲಿರು ವುದರಿಂದ ಸಾರ್ವಜನಿಕರಿಗೆ ಅನುಕೂಲಕರವಾಗಿತ್ತು. ಆದರೆ, ಆ ಸ್ಥಳ ಸೂಕ್ತವಲ್ಲ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಇಂಜಿನಿಯರ್ ವರದಿ ನೀಡಿರುವುದರಿಂದ ಗುರುತಿಸಲಾಗಿದ್ದ ಜಾಗವೂ ತಿರಸ್ಕೃತಗೊಂಡಿದೆ. ಆ ಜಾಗವನ್ನು ಈಗ ಗ್ರಂಥಾಲಯ ನಿರ್ಮಾಣಕ್ಕಾಗಿ ನೀಡಲು ನಿರ್ಧರಿಸಲಾಗಿದೆ. ಅದರಿಂದಾಗಿ ಕಡಬದಲ್ಲಿ ಇಂದಿರಾ ಕ್ಯಾಂಟೀನ್ ಆರಂಭಕ್ಕೆ ಹಿನ್ನಡೆಯಾಗಿದೆ. ಕಡಬ ಸಮುದಾಯ ಆರೋಗ್ಯ ಕೇಂದ್ರದ ಬಳಿಯಿದ್ದ ಪ್ರವಾಸಿ ಮಂದಿರದ ಸ್ಥಳವನ್ನು ಗುರುತಿಸಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ವರದಿ ನೀಡಲಾಗಿದ್ದರೂ ಅದಕ್ಕೂ ಆಕ್ಷೇಪವಿದ್ದು, ಅದೂ ಕೈಗೂಡುವಂತೆ ಕಾಣುತ್ತಿಲ್ಲ. ಕ್ಯಾಂಟೀನ್‌ಗೆ ಬದಲಿ ಜಾಗ ಇದುವರೆಗೆ ಗುರುತಿಸಲು ಸಾಧ್ಯವಾಗಿಲ್ಲ. ಹಾಗಾಗಿ ಇಂದಿರಾ ಕ್ಯಾಂಟೀನ್ ಪ್ರಾರಂಭವಾಗುತ್ತದೆ ಎಂದು ಬಹು ನಿರೀಕ್ಷೆಯಲ್ಲಿದ್ದ ಕಡಬದ ಜನತೆಗೆ ತೀವ್ರ ನಿರಾಸೆಯಾಗಿದೆ.

ಹಿಂದೂ ಜನಜಾಗೃತಿ ಸಮಿತಿಯಿಂದ ಸಂತರ ವಿಶೇಷ ಸತ್ಸಂಗ ಸಂಪನ್ನ

ಮಂಗಳೂರು: ಧರ್ಮವೇ ರಾಷ್ಟ್ರದ ಅಧಿಷ್ಠಾನವಾಗಿದೆ. ಪ್ರಸ್ತುತ ಕಲಿಯುಗದಲ್ಲಿ ಮನುಷ್ಯನು ಲೌಕಿಕ ಸುಖವನ್ನೇ ಸತ್ಯವೆಂದು ನಂಬಿ 'ನಾನು ಮತ್ತು ನನ್ನದು' ಎಂಬ ಭ್ರಮೆಯಲ್ಲಿದ್ದಾನೆ. ಈ ಭ್ರಮೆಯಿಂದ ಹೊರಬಂದು ಧರ್ಮದ ಜ್ಞಾನವನ್ನು ಪಡೆದು, ಸಾಧನೆಯ ಮೂಲಕ ಆಧ್ಯಾತ್ಮಿಕ ಬಲವನ್ನು ಹೆಚ್ಚಿಸಿಕೊಂಡರೆ ಮಾತ್ರ ಹಿಂದೂ ರಾಷ್ಟ್ರದ ಸ್ಥಾಪನೆ ಸಾಧ್ಯ ಎಂದು ಸನಾತನ ಸಂಸ್ಥೆಯ ಧರ್ಮಪ್ರಚಾರಕರಾದ ಪೂಜ್ಯ ರಮಾನಂದ ಗೌಡ ಹೇಳಿದರು.

ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಮಂಗಳೂರಿನ ಕುದ್ರೋಳಿ ಶ್ರೀ ಭಗವತಿ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಸಂತರ ವಿಶೇಷ ಸತ್ಸಂಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಭ್ರಷ್ಟ ಮತ್ತು ಅನೀತಿವಂತ ರಾಜಕಾರಣಿಗಳಿಂದ ರಾಷ್ಟ್ರದ ಅವನತಿಯಾಗುತ್ತಿದೆ.



ಕೇವಲ ಹಿಂದೂ ದೇವಸ್ಥಾನಗಳ ಮೇಲೆ ಸರ್ಕಾರಿ ಹಸ್ತಕ್ಷೇಪವಾಗುತ್ತಿರುವುದು ಧರ್ಮದ ಮೇಲಿನ ಆಘಾತವಾಗಿದೆ. ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರು ಹಾಗೂ ಅನೇಕ ಸಂತರು 'ಮುಂದೆ ಕಾಲಮಹಿಮೆಯಂತೆ ಹಿಂದೂ ರಾಷ್ಟ್ರದ ಸ್ಥಾಪನೆಯಾಗಲಿದೆ ಈ ದೈವೀಕಾರ್ಯದಲ್ಲಿ ನಾವೆಲ್ಲರೂ ಧರ್ಮದ ಆಚರಣೆಯೊಂದಿಗೆ ರಾಷ್ಟ್ರ ನಿರ್ಮಾಣದ ಕಾರ್ಯ ಮಾಡಬೇಕಿದೆ' ಎಂದು ಹೇಳಿದ್ದರು ಎಂದು ತಿಳಿಸಿದರು.

> **ಮತಾಂತರ ಮತ್ತು ಲವ್ ಜಿಹಾದ್‌ನಂತಹ ಆಪತ್ತುಗಳನ್ನು ಎದುರಿಸಲು ಪ್ರತಿಯೊಬ್ಬ ಹಿಂದೂವಿಗೂ ಧರ್ಮಶಿಕ್ಷಣದ ಆವಶ್ಯಕತೆಯಿದೆ ಎಂದರು. ಸನಾತನ ಸಂಸ್ಥೆ ಮತ್ತು ಹಿಂದೂ ಜನಜಾಗೃತಿ ಸಮಿತಿಯು ಉಚಿತವಾಗಿ ನೀಡುತ್ತಿರುವ ಧರ್ಮಶಿಕ್ಷಣದ ಲಾಭವನ್ನು ಪಡೆಯಲು ಆಸಕ್ತರು 7204082652 ಸಂಖ್ಯೆಯನ್ನು ಸಂಪರ್ಕಿಸಬೇಕು.**
> ■ **ಡಾ. ಪ್ರಣವ್ ಮಲ್ಯ,** ಹಿಂದೂ ಜನಜಾಗೃತಿ ಸಮಿತಿಯ ಜಿಲ್ಲಾ ಸಮನ್ವಯಕ

ಪುರಸಭೆ ಕಾರ್ಯಾಲಯ, ಕಾಪು

ತುರ್ತು ಕೊಟೇಶನ್ ಪ್ರಕಟಣೆ

ಕ್ರ.ಸಂ:ಪುಸಕಾ/ತಾಂತ್ರಿಕ/ಸಿ.ಆರ್/31/2025-26 ದಿನಾಂಕ : 09-03-2026

ಕಾಪು ಪುರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಹೊಸದಾಗಿ ಸಿ.ಸಿ.ಕ್ಯಾಮೆರಾ ಒದಗಿಸಿ ಅಳವಡಿಸಲು ಹಾಗೂ ಇತರೆ ಸಿ.ಸಿ.ಕ್ಯಾಮೆರಾಗಳನ್ನು ದುರಸ್ತಿ ಹಾಗೂ ನಿರ್ವಹಿಸಲು ದರ ಸೂಚಿಸಲು ತುರ್ತು ಕೊಟೇಶನ್ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು **ದಿನಾಂಕ:16-03-2026 ರಂದು ಸಂಜೆ 4:00** ಗಂಟೆಯೊಳಗೆ ಅರ್ಜಿಯೊಂದಿಗೆ ಮೊಹರು ಮಾಡಲ್ಪಟ್ಟ ಕೊಟೇಶನನ್ನು ಕಛೇರಿಗೆ ಸಲ್ಲಿಸತಕ್ಕದ್ದು. ನಂತರ ಬಂದಿರುವ ಕೊಟೇಶನ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಬಂದಿರುವ ಕೊಟೇಶನ್‌ಗಳನ್ನು ಅದೇ ದಿನ **ಸಂಜೆ 5:15ಕ್ಕೆ** ಹಾಜರಿರುವ ಕೊಟೇಶನ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಕೊಟೇಶನ್ ಷರತ್ತುಗಳು ಹಾಗೂ ಇನ್ನಿತರೇ ಹೆಚ್ಚಿನ ಮಾಹಿತಿಗಳನ್ನು www.kauptown.mrc.gov.in ವೆಬ್‌ಸೈಟ್‌ನಲ್ಲಿ ಅಥವಾ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/- ಮುಖ್ಯಾಧಿಕಾರಿ, ಪುರಸಭೆ, ಕಾಪು, ಉಡುಪಿ ಜಿಲ್ಲೆ.

ಕರ್ನಾಟಕ ಸರ್ಕಾರ

ಜಿಲ್ಲಾ ತರಬೇತಿ ಕೇಂದ್ರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಡಿಕೇರಿ- 571201

E-mail-dtcprincipalmadikeri@gmail.com

ಸಂಖ್ಯೆ/ಡಿಟಿಸಿ/148/2025-26 ದಿನಾಂಕ : 09/03/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿ ವೇದಿಕೆ ಮೂಲಕ)

ವಿಷಯ: ಕೊಡಗು ಜಿಲ್ಲೆಯ ಜಿಲ್ಲಾ ತರಬೇತಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಖೆ ಮಡಿಕೇರಿ ಇಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಕ್ಕೆ ಆಹಾರವನ್ನು ಸರಬರಾಜು ಮಾಡಲು ಟೆಂಡರ್ ಕರೆಯುವ ಬಗ್ಗೆ.

ಕೊಡಗು ಜಿಲ್ಲೆಯ ಜಿಲ್ಲಾ ತರಬೇತಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಡಿಕೇರಿ ಇಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಕ್ಕೆ ಅಹಾರವನ್ನು ಸರಬರಾಜು ಮಾಡಲು 2026-27ನೇ ಸಾಲಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999-2000 ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಿರುವ ಷರತ್ತುಗಳ ಅನ್ವಯ ಟೆಂಡರುಗಳನ್ನು ನೋಂದಾಯಿತ ಸಂಸ್ಥೆಗಳಿಂದ ದ್ವಿ ಲಕೋಟೆಯ ಪದ್ಧತಿಯಲ್ಲಿ **KPP PORTAL** ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರಿನ ಸಂಪೂರ್ಣ ವಿವರವನ್ನು www.https://KPP PORTAL.gov.inನಲ್ಲಿ ದಿನಾಂಕ:10/03/2026ರ ನಂತರ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 23/03/2026 ಅಪರಾಹ್ನ 4-30 ಗಂಟೆ ಆಗಿರುತ್ತದೆ. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ 25/03/2026 ಸಂಜೆ 4.30 ಹಾಗೂ ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 27/03/2026 ಸಂಜೆ 4.30 ಗಂಟೆ ಆಗಿರುತ್ತದೆ.

ಹೆಚ್ಚಿನ ವಿವರಗಳನ್ನು ಪ್ರಾಂಶುಪಾಲರು ಜಿಲ್ಲಾ ತರಬೇತಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಖೆ ಸುದರ್ಶನ್ ಸರ್ಕಲ್ ಮಡಿಕೇರಿ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಪ್ರಾಂಶುಪಾಲರು, ಜಿಲ್ಲಾ ತರಬೇತಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಡಿಕೇರಿ, ಕೊಡಗು ಜಿಲ್ಲೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಘಟಕಾನಿ ವಿಭಾಗ ನಂ. 2, ಹಿಡಕಲ್‌ಡ್ಯಾಂ

ಕಚೇರಿ ದೂರವಾಣಿ ಸಂ:08333-2200119/ಫ್ಯಾಕ್ಸ ಸಂ:08333-263405/ ಇ-ಮೇಲ್: eegrbc2@gmail.com

ಸಂ: ಕನೀನಿನಿ/ಜಿಆರ್‌ಬಿಸಿಸಿ-2/ಡಿಬಿ/ಟೆಂಡರ್/2025-26/2545 ದಿನಾಂಕ: 10.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ 01 ಸಂಖ್ಯೆ ಡ್ಯಾಮ್ ಸಂಬಂಧಿಸಿದ ಕಾಮಗಾರಿಗಳು ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. (ಅಂದಾಜು ಮೊತ್ತ ರೂ. 70.94 ಲಕ್ಷಗಳು) ಒಡೆಂಟ ನಂ.2955 2ನೇ ಕರೆ 2) ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ: 11-03-2026 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 3)ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ:20-03-2026 ವೇಳೆ :17.30 ಗಂಟೆಯೊಳಗೆ ಸಲ್ಲಿಸುವುದು 4) ತಾಂತ್ರಿಕ ಬಿಡ್‌ನ್ನು (ಲಕೋಟೆ-1) ತೆರೆಯುವ ದಿನಾಂಕ:23-03-2026 ವೇಳೆ : 10.30 ಗಂಟೆ 5) ತಾಂತ್ರಿಕ ಬಿಡ್‌ನಲ್ಲಿ (ಲಕೋಟೆ-1) ಪೂರ್ವಾಹತೆ ಹೊಂದಿದ ಅರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು (ಲಕೋಟೆ-2) ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

Note:Here after any change with reference to this Notification will be Notified in https://kppp.karnataka.gov.in Portl Only.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ, ಜಿಆರ್‌ಬಿಸಿಸಿ ವಿಭಾಗ ನಂ.2 ಹಿಡಕಲ್ ಡ್ಯಾಂ

DIPR/BGM/RO-NO-2050/KSMCA/2025-26

ಕರ್ನಾಟಕ ಸರಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಗದಗ ವಿಭಾಗ, ಗದಗ. ಬಿಂಕದಕಟ್ಟಿ-582103

ದೂರವಾಣಿ ಸಂಖ್ಯೆ: 08372-200978

ಇ-ಮೇಲ್: dyconservatorgadag@gmail.com

GADAG FOREST DIVISION

ಕ್ರ.ಸಂ:ಎ2/ಬಿಜಿಟಿ/ಟೆಂಡರ್/ಸಿಆರ್-1/2026-27, ದಿನಾಂಕ: 06-03-2026

ಕೆಪಿಪಿ ತಂತ್ರಾಂಶದಲ್ಲಿ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27ನೇ ಸಾಲಿಗೆ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳಡಿ ಗದಗ ಅರಣ್ಯ ವಿಭಾಗದ ಗದಗ, ಮುಂಡರಗಿ ಮತ್ತು ಶಿರಹಟ್ಟಿ ವಲಯಗಳಲ್ಲಿ ನೆಡುತೋಪು ನಿರ್ಮಾಣ, ನೆಡುತೋಪು ನಿರ್ಮಾಣಕ್ಕೆ ಸಂಬಂಧಿಸಿದಂತೆ ಗುಂಡಿ ತೆಗೆಯುವುದು, ಮಾನ್ಸೂನ್ ನೆಡುತೋಪು ನಿರ್ಮಾಣ, 1 ರಿಂದ 10 ವರ್ಷಗಳ ವರೆಗೆ ನೆಡುತೋಪು ನಿರ್ವಹಣೆ ಹಾಗೂ ಕೃಷಿಕರಿಗೆ/ಸಾರ್ವಜನಿಕರಿಗೆ ಸಸಿಗಳನ್ನು ವಿತರಿಸುವ ಕುರಿತು ಸಸಿಗಳ ನಿರ್ವಹಣೆ, ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ ಮತ್ತು ಕಾಯಿದೆಯಡಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ತಿಳುವಳಿಕೆಗೋಸ್ಕರ ಇ-ಪೋರ್ಟಲ್ **https://kppp.karnataka.gov.in** ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ	ವಿವರ	ದಿನಾಂಕ
1	ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ	ರೂ. 40,36,230.00
2	ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ	ರೂ. 8,910.00
3	ಕೆಲಸಗಳ ಇಂಡೆಂಟ್‌ಗಳ ಸಂಖ್ಯೆ	100
4	ಇ-ಟೆಂಡರ್ ಪ್ರಕಟಣೆ ದಿನಾಂಕ	06-03-2026
5	ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ. (ತಾಂತ್ರಿಕ)	23-03-2026 ಅಪರಾಹ್ನ 4.00 ಗಂಟೆವರೆಗೆ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಮಯ	25-03-2026 ಬೆಳಗ್ಗೆ 11.00 ಗಂಟೆವರೆಗೆ
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಮಯ	27-03-2026 ಬೆಳಗ್ಗೆ 11.00 ಗಂಟೆಗೆ

ಒಂದೊಮ್ಮೆ ಸದರಿ ದಿನಾಂಕದಂದು ಸದರಿ ಟೆಂಡರ್ ಯಶಸ್ವಿಯಾಗದಿದ್ದಲ್ಲಿ ಮರು ಟೆಂಡರ್ ಕರೆಯಲಾಗುವುದು.

(ಮರು ಟೆಂಡರಿಗೆ ಪ್ರತ್ಯೇಕ ನೋಟಿಫಿಕೇಷನ್ ಹೊರಡಿಸಲಾಗುವುದಿಲ್ಲ.)

ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಇ-ಪೋರ್ಟಲ್ (**https://kppp.karnataka.gov.in**) ಮೂಲಕ ಪರಿಶೀಲಿಸತಕ್ಕದ್ದು, ಹಾಗೂ ಹೆಚ್ಚಿನ ಮಾಹಿತಿ ವಿವರಗಳಿಗಾಗಿ ಈ ಕೆಳಸಹಿದಾರರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಗದಗ ಉಪ ವಿಭಾಗ, ಗದಗ

ವಾ.ಸಾ.ಇ./ಗದಗ/704/2023-24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು,

ಮೈಸೂರು ಉಪ ವಿಭಾಗ,

ಅರಣ್ಯ ಭವನ, ಅಶೋಕಪುರಂ ಮೈಸೂರು-570008

ಸಂಖ್ಯೆ:ಸಅಸಂ/ಬಿ1/ಬಿಯುಡಿ/ಟೆಂಡರ್/ಸಿಆರ್-19/2025-26 ದಿ: 07.03.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ವೇದಿಕೆ)

2026-27ನೇ ಸಾಲಿಗೆ ಮೈಸೂರು ವಿಭಾಗದ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ನೌಕರರನ್ನು ಒದಗಿಸುವುದಕ್ಕಾಗಿ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಕಾವಲುಗಾರರು, ಕಛೇರಿ ಸೇವಕರು, ಹಾಗೂ ಕಳ್ಳಬೇಟೆ ತಡೆ ಶಿಬಿರಗಳಿಗೆ (ಎಪಿಸಿ) ಕಾವಲುಗಾರರ ಸೇವೆಯನ್ನು ಮಾಡುವುದಕ್ಕಾಗಿ ಈ ವಿಭಾಗದಲ್ಲಿ ನೊಂದಾಯಿಸಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಹಾಗೂ ವಿವಿಧ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲು ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ. **1**) ಗುತ್ತಿಗೆದಾರರು https://kppp.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. **2**) ಒಟ್ಟು ಟೆಂಡರ್‌ಗಿಟ್ಟಿರುವ ಕಾಮಗಾರಿಗಳ ಸಂಖ್ಯೆ-52 **3**) ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿ: 23.03.2026 ಅಪರಾಹ್ನ 11.00 ಘಂಟೆವರೆಗೆ. **4**) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿ: 23.03.2026 ಸಂಜೆ 16.00 ಘಂಟೆವರೆಗೆ. **5**) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 24.03.2026 ಸಂಜೆ 16.00 ಘಂಟೆ ನಂತರ. **6**) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 25.03.2026 ಮಧ್ಯಾಹ್ನ 16.00 ಘಂಟೆ. **7**) ಮೇಲ್ಕಂಡ ದಿನಾಂಕಗಳಂದು ಟೆಂಡರ್ ಬಾರದ ಕಾಮಗಾರಿಗಳಿಗೆ ಸದರಿ ಟೆಂಡರ್ ಪ್ರಕಟಣೆ ಷರತ್ತುಗಳಿಗೆ ಒಳಪಟ್ಟು **8**) ಮರುಟೆಂಡರ್ ಸಲ್ಲಿಸಲು ಕೊನೆಯ ದಿ: 30.03.2026 ಸಂಜೆ 16.00 ಘಂಟೆವರೆಗೆ. **9**) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿ: 01.04.2026 ಸಂಜೆ 16.00 ಘಂಟೆ ನಂತರ. **10**) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿ: 02.04.2026 ಸಂಜೆ 16.00 ಘಂಟೆ. **11**) ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in ಅಂತರ್ಜಾಲ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ: 0821-2483853ನ್ನು ಕೆಲಸದ ದಿನಗಳಲ್ಲಿ ಸಂಪರ್ಕಿಸುವುದು. **12**) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲಾಗುವುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಹಾಯಕರು,
ಮೈಸೂರು ಉಪ ವಿಭಾಗ, ಮೈಸೂರು

DIPR/DDMYS/1817/KSMCA/1023/2025-26

ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮಂದಾರ್ತಿ ಉಡುಪಿ ಜಿಲ್ಲೆ -576223

ದೂ :(0820) 2568333, 2568433, 2568533

Email: eomandarthitemple@yahoo.in, mandarthidurgaparameshwari.com

ಟೆಂಡರ್ ಪ್ರಕಟಣೆ

ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಕಚೇರಿಯ, ಸೇವಾ ಕೌಂಟರ್‌ಗಳ, ಸರ್ವರ್‌ಗಳ ಎಲ್ಲಾ ಸಿಸ್ಟಮ್‌ಗಳಿಗೆ, ಆಡಳಿತ ಕಛೇರಿ ವಿದ್ಯುತ್ ಸಂಪರ್ಕಕ್ಕೆ ಅವಶ್ಯವಾಗಿ ಬೇಕಾದ ಬ್ಯಾಕ್‌ಅಪ್ ಯುಪಿಎಸ್ ಬ್ಯಾಟರಿಗಳ ಜೋಡಣೆಗಾಗಿ ಅರ್ಹ ತೆರಿಗೆ ನೋಂದಾಯಿತ ಸರಬರಾಜು ಮತ್ತು ನಿರ್ವಾಹಕರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ನೀಡಲು ಕೊನೆಯ ದಿನಾಂಕ :16.03.2026 ರ ಅಪರಾಹ್ನ ಗಂಟೆ 04.00ರ ವರೆಗೆ, ಸ್ವೀಕೃತಗೊಂಡ ಟೆಂಡರ್‌ಗಳನ್ನು ದಿನಾಂಕ : 17.03.2026ರ ಪೂರ್ವಾಹ್ನ ಗಂಟೆ 11.00ಕ್ಕೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು. ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುವುದು.

DESCRIPTION	QTY
Legrand Numeric 10KVA 1:1 Online UPS with Isolation Transformer for 20 mins backup with 16 nos. of 26AH SMF batteries, Rack and Links	01

ಸಹಿ/-ಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ಸರ್ಕಾರ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಂಟಿ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ಶಿರವಾಡ, ಕಾರವಾರ-581306. ಜಿಲ್ಲೆ: ಉತ್ತರ ಕನ್ನಡ

ದೂ: 08382-282302

E-Mail: jd-karwar@karnatakaindustry.gov.in, dic.ukd123@gmail.com

ಸಂಖ್ಯೆ: ಜಿಕೈಕೇ:ಉಕ:ವಾಹನ:ಟೆಂಡರ್:/2025-26 ದಿನಾಂಕ: 10.03.2026

ಗುತ್ತಿಗೆ ಆಧಾರದ ಮೇಲೆ ವಾಹನ ಬೇಕಾಗಿದೆ

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಶಿರವಾಡ, ಕಾರವಾರ ಕಛೇರಿಯ ಕೆಲಸಕ್ಕೆ ವಾಹನದ ಅವಶ್ಯಕತೆ ಇದ್ದು, ವಾಹನ ಪೂರೈಸುವ ಏಜೆನ್ಸಿ ಅಥವಾ ಮಾಲಕರಿಂದ ಮೊಹರ ಬಂದ ಲಕೋಟೆಗಳಲ್ಲಿ ಟೆಂಡರನ್ನು ಆಹ್ವಾನಿಸಲಾಗಿದ್ದು, ವಾಹನದ ಮೊಡೆಲ್ 2023 ಅಥವಾ ಅದರ ನಂತರದ ಅರ್ಟಿಗಾ/ಇನೋವಾ ಆಗಿರಬೇಕು, ವಾಹನವು ಬಿಳಿ ಬಣ್ಣದ್ದಾಗಿದ್ದು, ವಾಹನದ ಇಂಧನದ ವೆಚ್ಚ ಹಾಗೂ ಇನ್ನಿತರ ವೆಚ್ಚಗಳು ಒಳಗೊಂಡಂತೆ ಚಾಲಕ ಸಹಿತ ಟೆಂಡರ್ ದರಗಳನ್ನು ಸಲ್ಲಿಸಲು ಕೋರಲಾಗಿದೆ. ಟೆಂಡರ್ ಫಾರ್ಮುಗಳನ್ನು ಪಡೆಯಲು ಕೊನೆಯ ದಿನಾಂಕ: 25.03.2026 ಹೆಚ್ಚಿನ ವಿವರಗಳನ್ನು ಹಾಗೂ ಷರತ್ತುಗಳನ್ನು ಈ ಕಛೇರಿಯ ಕೆಲಸದ ದಿವಸಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 26.03.2026, ಸಮಯ: ಮ. 2.00 ಗಂಟೆಯ ಒಳಗೆ ಆಗಿರುತ್ತದೆ.

ಸಹಿ/-, ಜಂಟಿ ನಿರ್ದೇಶಕರು,
ಜಿಲ್ಲಾ ಕೈಗಾರಿಕಾ ಕೇಂದ್ರ, ಕಾರವಾರ

DIPR/KWR/KSMCA/1197/25-26 Dt.11.03.26

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ

Tel No. 08377-244236 e-mail : knnlestablishment@gmail.com

ಸಂಃಕನೀನಿನಿಃಮಬದ1ಃಪಿಬಿಃಟೆಂಡರಃ2025-26ಃ1739 ದಿನಾಂಕಃ 09-03-2026

ಟೆಂಡರ ಪ್ರಕಟಣೆ -ಆರನೇಯ ಕರೆ (ಕೆಪಿಪಿಪಿ-ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿ ಮಾಡಿದವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ಸೂಕ್ತ ದರ್ಜೆ ನೊಂದಾಯಿತರಾಗಿರುವ ಅರ್ಹಗುತ್ತಿಗೆದಾರರಿಂದ, KW-4 ಪ್ರಕಾರ Turnkey ಆಧಾರದ ಮೇಲೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ (Two-Cover System) ಟೆಂಡರ ಕರೆಯಲಾಗಿದೆ.

(1) Indent No.1574-ಕಾಮಗಾರಿಯ ಒಟ್ಟು ಅಂದಾಜು ಮೊತ್ತ **ರೂ.45.75** ಕೋಟಿಗಳು ಮತ್ತು ಇ.ಎಂ.ಡಿ ಮೊತ್ತ **ರೂ.38.40** ಲಕ್ಷಗಳು. (2) Indent No.1575- ಕಾಮಗಾರಿಯ ಒಟ್ಟು ಅಂದಾಜು ಮೊತ್ತ **ರೂ.41.30** ಕೋಟಿಗಳು ಮತ್ತು ಇ.ಎಂ.ಡಿ ಮೊತ್ತ **ರೂ. 34.71** ಲಕ್ಷಗಳು. (3) ಟೆಂಡರ್ ಆಕ್ಷೇಪಣೆಗಳಿಗೆ/ಸ್ಪಷ್ಟೀಕರಣಕ್ಕಾಗಿ ನಿಗದಿಪಡಿಸಿದ ದಿನಾಂಕ : **18-03-2026** ರಂದು ಬೆಳಿಗ್ಗೆ 11-00 ಗಂಟೆಯಿಂದ 5.30 ರವರೆಗೆ (4) ಪ್ರೀ-ಬಿಡ್ ಸಭೆ ದಿನಾಂಕ : **18-03-2026** ಸ್ಥಳ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, 4ನೇ ಮಹಡಿ, ಕಾಫೀ ಬೋರ್ಡ ಬಿಲ್ಡಿಂಗ್ ನಂ.1 ಡಾ॥ ಬಿ.ಆರ್.ಅಂಬೇಡ್ಕರ ವೀದಿ ಬೆಂಗಳೂರು ಇವರ ಕಛೇರಿಯಲ್ಲಿ ಪೂರ್ವಾಹ್ನ 11.00 ಘಂಟೆಗೆ. (5) ಭರ್ತಿ ಮಾಡಿದ ಇ-ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : **08-04-2026** ಅಪರಾಹ್ನ 4-00 ಗಂಟೆ ವರೆಗೆ. (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **10-04-2026** ರಂದು ಪೂರ್ವಾಹ್ನ 11-00 ಗಂಟೆಗೆ. ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವದು.

ಇತರೆ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ ಮುಖೇನ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ:**08377-244236** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/702/2025-26

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ.ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ದಾವಣಗೆರೆ-06

ನಂ.ದಾಹನಪ್ರಾ/ಯೋವಿ/2025-26/3703 ದಿನಾಂಕ: 06.03.2026

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ:03:ಟಿಟಿಪಿ:2026 ದಿನಾಂಕ:18-02-2026ರಂತೆ ದಾವಣಗೆರೆ -ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ವಿನ್ಯಾಸ ಅನುಮೋದನೆಗಳಿಗೆ ಭೂ ಪರಿವರ್ತನಾ ಆದೇಶದ ಅವಶ್ಯಕತೆ ಇರುವುದಿಲ್ಲವೆಂದು ಆದೇಶವಾಗಿರುತ್ತದೆ. ಹಾಗಾಗಿ ಅರ್ಜಿದಾರರು/ಭೂ ಮಾಲೀಕರು ನೇರವಾಗಿ ಪ್ರಾಧಿಕಾರದ ಕಛೇರಿಯಲ್ಲಿ ಅರ್ಜಿ ನಮೂನೆ, ನಮೂನೆ-21(ಬಿ) ಮತ್ತು ಜಮೀನಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳೊಂದಿಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ-1961ರ ಕಲಂ-17 ರಂತೆ ವಿನ್ಯಾಸ ಅನುಮೋದನೆಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ ಎಂದು ಈ ಮೂಲಕ ಮಾಹಿತಿ ನೀಡಲಾಗಿದೆ.

ಸಹಿ/- **ಆಯುಕ್ತರು, ದಾ-ಹ** ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಸಹಿ/- **ಅಧ್ಯಕ್ಷರು, ದಾ-ಹ** ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ವಾಸಾಇ/ದಾವಣಗೆರೆ/814/ಕೆಎಸ್‌ಎಂಸಿಎ/2025-26

TO WHOMSOEVER IT MAY CONCERN

I, **B Hareesh Shetty** S/o. Mahabala Shetty (Adhar No.561291098145), Aged about 74 years, now R/at #2-11B Barinje, House, Ammunje Village and Post Bantwal Taluk, is the nominee to SB account No.212 at SajipaNadu Branch of Panemangalore Raitara Seva Sahakari Sangha, Panemangalore, which was opened by my Uncle D.V Bhandary (DHARMA VASANTHA BHANDARY), who is no more now. Anybody having any claim of whatsoever nature over the same may submit the same to the undersigned counsel, within 15 days of this notice, failing which the amount standing in the Account will be dispersed, as per procedure.

Sd/- (Satheesh Kumar Shivagiri)
Advocate

Place: Bantwal
Date:-11-03-2026

IN THE COURT OF THE I ADDL. DISTRICT AND SESSIONS JUDGE AT MADIKERI

R.A. NO. 4/2025

Appellant:
Kum. Geetha Bharathi H G VS
Respondent:
Smt. Kaveramma & others

NOTICE TO RESPONDENTS No.1, 9,11,12,14,15, AND 16

Respondents:

1. Kaveramma, 80 years, W/o. KG Shivaram, R/o Nariyandane Village, Cheyandane Post, South Kodagu.

9. Ravichandra, Aged about 39 years, S/o Sadashiva, R/o Kukke Mane Nariyandada Village, Cheyandane Post, South Kodagu.

11. Krishnamoorty, Aged about 69 years, S/o Ramayya, R/o Kukke Mane Nariyandada Village, Cheyandane Post, Kodagu District.

12. Venkatramana, Aged about 59 years, S/o Ramayya, R/o Kukke Mane Nariyandada Village, Cheyandane Post, Kodagu District.

14. Smt. Jayalakshmi, Aged about 66 years, W/o Ramamurthy S.N. R/o Saya House, Ammathnadu Village, Virajpet Taluk.

15. Smt. Nalinakshi, Aged about 61 years, D/o Ramayya, R/o Kukke Mane Nariyandada Village, Cheyandane Post, Kodagu District.

16. Smt. Honnamma, Aged about 56 years, D/o Ramayya, R/o Kukke Mane Nariyandada Village, Cheyandane Post, Kodagu District

WHEREAS, the above appeal filed by the appellant for challenging the order in O.S. No.4/2024 on the file Hon'ble Senior Civil Judge, Madikeri. Now the above case stands posted to **18-04-2026.** for your appearance. Therefore, you are hereby required to appear before the above Court on the said hearing date at **11 A.M.** in person or through an advocate, failing which the case will be heard and decided exprate.

Dated this 06th day of March 2026 at Madikeri.

(By order of the Court)
Sd/- Chief Ministerial Officer
Ist Addl. District and Session Judge at Madikeri.
Sd/- P. Pundarika,
Advocate for Respondent
Madikeri.
05.03.2026

ಪುತ್ತೂರು ಮಾರುಕಟ್ಟೆ ಧಾರಣೆ

11-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	:	260 - 460
ಚೋಲ್ ಅಡಿಕೆ	:	505 - 530
ಡಬಲ್ ಚೋಲ್	:	505 - 530
ಹೊಸ ಪಟೋರ	:	340 - 390
ಹಳೆ ಪಟೋರ	:	380 - 410
ಹೊಸ ಉಳ್ಳಿ	:	115 - 295
ಹಳೆ ಉಳ್ಳಿ	:	105 - 295
ಹೊಸ ಕೋಕಾ	:	325 - 345
ಹಳೆ ಕೋಕಾ	:	330 - 350
ಹೊಸ ಕರಿಗೋಟು	:	230 - 260
ಹಳೆ ಕರಿಗೋಟು	:	230 - 260
ಹಸಿ ಕೊಕ್ಕೋ	:	75 - 105
ಒಣ ಕೊಕ್ಕೋ	:	290 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	:	465 - 660

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	-	211.00
ಆರ್‌ಎಸ್‌ಎಸ್ 2	-	197.00
ಸ್ಕ್ರಾಪ್ 1	-	130.00
ಸ್ಕ್ರಾಪ್ 2	-	130.00

pnb Housing Finance Limited
Ghar Ki Baat

ಅನುಬಂಧ 4 ಎ ಇ-ಹರಾಜು- ಸ್ಥಿರಾಸ್ತಿ(ಗಳ) ಸಾರ್ವಜನಿಕ ಮಾರಾಟ ನೋಟಿಸ್

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ-2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಾವಳಿ-2002ರ ನಿಯಮ 8(6)ರ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟಕ್ಕೆ ಇ-ಹರಾಜು ಮಾರಾಟ ನೋಟಿಸ್

ನೋಂದಾಯಿತ ಕಚೇರಿ: 9ನೇ ಮಹಡಿ, ಅಂತರಿಕ್ಷ ಭವನ, 22, ಕಸ್ತೂರ್ಬಾ ಗಾಂಧಿ, ನವದೆಹಲಿ- 110001 ದೂರವಾಣಿ: 011-23357171, 23357172, 23705414, ವೆಬ್‌ಸೈಟ್: www.pnbhousing.com

ಮಾರತ್‌ಹಳ್ಳಿ ಶಾಖಾ ಕಚೇರಿ: 3ನೇ ಮಹಡಿ, ನಂ. 78, ಎಲ್‌ಆರ್‌ಡಿಇಲೇಟಿಟ್, ಕಥಿಕ್ ನಗರ, ಸರ್ವೀಸ್ ರಸ್ತೆ, ಹೊರವರ್ತುಲ ರಸ್ತೆ, ದೊಡ್ಡನೆಕ್ಕುಂದಿ, ಬೆಂಗಳೂರು, ಕರ್ನಾಟಕ- 560037. ಶಾಖಾ ಕಚೇರಿ: ಜಯನಗರ, ನಂ.40, ಜೋಧ್ ಟವರ್, 1ನೇ ಮಹಡಿ, 27ನೇ ಕ್ರಾಸ್, 5ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಂಗಳೂರು- 560011. ಮಂಗಳೂರು ಶಾಖಾ ಕಚೇರಿ: 2ನೇ ಮಹಡಿ, ಕ್ಯಾಬಿನ್ 7 & 8, ಕುತೆ ಸದನ್, ಕೆ.ಆರ್.ರಾವ್ ರಸ್ತೆ, ಪಿವಿಪಿಎಸ್ ಸರ್ಕಲ್ ಬಳಿ, ಕೊಡಿಯಾಲ್‌ಬೈಲ್, ಮಂಗಳೂರು- 575003.

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕಲಂ ಸಂಖ್ಯೆ - ಎ ರಲ್ಲಿ ಸೂಚಿಸಿದ ಸಾಲಗಾರ(ರು) ಮತ್ತು ಜಾಮೀನುದಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಲಂ ಸಂಖ್ಯೆ-ಡಿ ನಲ್ಲಿ ವಿವರಿಸಲಾದ ಸ್ಥಿರ ಆಸ್ತಿ(ಗಳು) ಭದ್ರತಾ ಸಾಲದಾರರಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ, ಅದರ ರಚನಾತ್ಮಕ/ಭೌತಿಕ ಸ್ವಾಧೀನವನ್ನು ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಪಿಎನ್‌ಬಿ ಎಚ್‌ಎಫ್‌ಎಲ್)/ ಭದ್ರತಾ ಸಾಲದಾರರ ಅಧಿಕೃತ ಅಧಿಕಾರಿ (ಕಾಲಮ್ ಸಂಖ್ಯೆ - ಸಿ ನಲ್ಲಿ ವಿವರಿಸಿದಂತೆ) ತೆಗೆದುಕೊಂಡಿದ್ದಾರೆ. ಇವುಗಳನ್ನು ಕೆಳಗೆ ನಮೂದಿಸಿದ ವಿವರಗಳ ಪ್ರಕಾರ "ಎಲ್ಲಿ ಇದೆಯೋ, ಏನಿದೆಯೋ ಮತ್ತು ಏನೇನು ಇದೆಯೋ ಅದು ಆಧಾರದಲ್ಲಿ" ಮಾರಾಟ ಮಾಡಲಾಗುತ್ತದೆ. ಈ ಮೂಲಕ ಸಾಲಗಾರ(ರು)/ಅಡಮಾನದಾರ(ರು)/ಕಾನೂನು ಉತ್ತರಾಧಿಕಾರಿಗಳು, ಕಾನೂನು ಪ್ರತಿನಿಧಿ, (ತಿಳಿದ ಅಥವಾ ತಿಳಿಯದ), ನಿರ್ವಾಹಕರು(ರು), ಆಡಳಿತದಾರ(ರು), ಉತ್ತರಾಧಿಕಾರಿ(ರು), ಆಯಾ ಸಾಲಗಾರರು/ಅಡಮಾನದಾರರ ನಿಯೋಜಿತ(ರು), (ಮರಣ ಹೊಂದಿದ ಹಿನ್ನೆಲೆಯಲ್ಲಿ) ಪ್ರಕರಣದಂತೆ ಕಾಲಂ ಸಂಖ್ಯೆ - ಎ ಯಲ್ಲಿ ಸೂಚಿಸಿದಂತೆ ಸೆಕ್ಯುರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ರೂಲ್ಸ್, 2002ರ ನಿಯಮ 8(6) ಮತ್ತು 9(1)ರ ಅಡಿಯಲ್ಲಿ ಮತ್ತು ಆ ಬಳಿಕ ಆಗಿರುವ ತಿದ್ದುಪಡಿಗಳ ಅನ್ವಯ ಮಾರಾಟ ಮಾಡಲಾಗುತ್ತದೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಪಿಎನ್‌ಬಿ ಎಚ್‌ಎಫ್‌ಎಲ್), ಭದ್ರತಾ ಸಾಲಗಾರರ ವೆಬ್‌ಸೈಟ್ ಅಂದರೆ www.pnbhousing.com, ನೋಡಿ

ಸಾಲ ಸಂಖ್ಯೆ/ ಸಾಲಗಾರರು/ ಸಹ ಸಾಲಗಾರರು/ ಜಾಮೀನುದಾರರು/ ಕಾನೂನಾತ್ಮಕ ಉತ್ತರಾಧಿಕಾರಿಗಳ ಹೆಸರು (ಎ)	ಡಿಮ್ಯಾಂಡ್ ನೋಟಿಸ್ ಮೊತ್ತ & ದಿನಾಂಕ (ಬಿ)	ಸ್ವಾಧೀನ ಸ್ವರೂಪ (ಸಿ)	ಅಡಮಾನ ಮಾಡಲಾದ ಆಸ್ತಿಗಳ ವಿವರ (ಡಿ)	ಮೀಸಲು ಬೆಲೆ (ಆರ್‌ಪಿ) (ಇ)	ಇಎಂಡಿ (ಆರ್‌ಪಿಯ ಶೇಕಡ 10) (ಎಫ್)	ಬಿಡ್ ಸಲ್ಲಿಕೆ ಕೊನೆಯ ದಿನಾಂಕ (ಜಿ)	ಬಿಡ್ ಏರಿಕೆ ದರ (ಎಚ್)	ವೀಕ್ಷಣೆ ದಿನಾಂಕ ಹಾಗೂ ಸಮಯ (ಐ)	ಹರಾಜು ದಿನಾಂಕ ಮತ್ತು ಸಮಯ (ಜೆ)	ಗೊತ್ತಿರುವ ಋಣಭಾರಗಳು/ ನ್ಯಾಯಾಲಯದ ಪ್ರಕರಣಗಳು ಇದ್ದಲ್ಲಿ (ಕೆ)
ಎಚ್‌ಓಯು/ಎಂಆರ್‌ಎಚ್/0817/417702 ಪ್ರಭಾಕರ ಬಂಗ್ಗಾಳ, ಹೇಮಾವತಿ ಪಿ ಶಾಖಾ ಕಚೇರಿ: ಮಾರತ್‌ಹಳ್ಳಿ	ರೂ. 3788119.97 & 09-05-2022	ಭೌತಿಕ ಸ್ವಾಧೀನ	ಸರ್ವೆ ನಂ.36/1ಪಿ, 107/1, ತೆಂಕ ಎಡಪದವು, ಎಡಪದವು ಗ್ರಾಮ, ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ, ಭಾರತ- 574150	ರೂ. 4,63,000	ರೂ. 46,300	28-03-2026	ರೂ. 10,000	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎಚ್‌ಓಯು/ಎಂಎನ್‌ಎಲ್‌ಆರ್/1123/1185721 ಭರತ್ ಬಾಲಕೃಷ್ಣ ಕಂಚುಗಾರ, ವಿಜಯಲಕ್ಷ್ಮಿ ಬಿ ಕಂಚುಗಾರ ಶಾಖಾ ಕಚೇರಿ: ಮಂಗಳೂರು	ರೂ. 5751835 & 04-09-2025	ಭೌತಿಕ ಸ್ವಾಧೀನ	ಫ್ಲಾಟ್ ನಂ. 503, ಸರ್ವೆ ನಂ 97 7ಎ, ಡೋರ್ ನಂ. 2 214/532, ಹೆಲೇನಾ ಹೈಟ್, ಕಂಜಾರ್ ಗ್ರಾಮ, ಆರ್‌ಟಿಸಿ ಅನ್ವಯ ಸರ್ವೆ ನಂಬರ್‌ಗಳು 97/7ಎಪಿ9, 97/7ಎಪಿ10, 97/7ಎಪಿ5 ಪಿ2, 97/7ಎಪಿ7, 97/7ಎಪಿ4, ಮಂಗಳೂರು, ಕರ್ನಾಟಕ- 574142. ದಕ್ಷಿಣ ಕನ್ನಡ, ಭಾರತ.	ರೂ. 31,06,000	ರೂ. 310600	28-03-2026	ರೂ. 10,000	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎಚ್‌ಓಯು/ಎಂಎನ್‌ಎಲ್‌ಆರ್/1123/1185642 ಭರತ್ ಬಾಲಕೃಷ್ಣ ಕಂಚುಗಾರ, ವಿಜಯಲಕ್ಷ್ಮಿ ಬಿ ಕಂಚುಗಾರ ಶಾಖಾ ಕಚೇರಿ: ಮಂಗಳೂರು	ರೂ. 5751835 & 04-09-2025	ಭೌತಿಕ ಸ್ವಾಧೀನ	ಫ್ಲಾಟ್ ನಂ. 502, ಸರ್ವೆ ನಂ 97 7ಎ, ಡೋರ್ ನಂ. 2 214/532, ಹೆಲೇನಾ ಹೈಟ್ಸ್, ಕಂಜಾರ್ ಗ್ರಾಮ, ಆರ್‌ಟಿಸಿ ಅನ್ವಯ ಸರ್ವೆ ನಂಬರ್‌ಗಳು 97/7ಎಪಿ9, 97/7ಎಪಿ10, 97/7ಎಪಿ5 ಪಿ2, 97/7ಎಪಿ7, 97/7ಎಪಿ4, ಮಂಗಳೂರು, ಕರ್ನಾಟಕ- 574142. ದಕ್ಷಿಣ ಕನ್ನಡ, ಭಾರತ.	ರೂ. 38,86,000	ರೂ. 388600	28-03-2026	ರೂ. 10,000	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎನ್‌ಎಚ್‌ಎಲ್/ಬಿಎಎನ್/0317/367923 ಕ್ಯಾರೇಜ್ ಕಮೊಡಿಟೀಸ್ ಪ್ರೈವೇಟ್ ಲಿಮಿಟೆಡ್/ ಜೆಸಿಂತಾ ಪ್ರಸಾದ್ ಪಣಿಕ್ಕರ್/ ಸಂಜೀದ್ ಅಲೋಶಿಯಸ್ ಪೆಸ್/ ಕೃಷ್ಣನ್ ಶಿವಪ್ರಸಾದ್ ಶಾಖಾ ಕಚೇರಿ: ಜಯನಗರ	ರೂ. 6,69,77,480.07 & 20-11-2019	ಭೌತಿಕ ಸ್ವಾಧೀನ	ಸರ್ವೆ ನಂ. 66-6ಪಿ2, 66-2, ನಂ. 93 ಆಫ್ ಸರ್ವೆ ನಂ. 66-2, ಸರ್ವೆ ನಂ. 6606ಪಿ2ನಲ್ಲಿ ಉತ್ತರ ಮಧ್ಯ ಭೂಮಿ, ಉಳ್ಳಾಲ ಗ್ರಾಮ, ಮಂಗಳೂರು ತಾಲೂಕು, ಮಂಗಳೂರು, ಕರ್ನಾಟಕ, ಭಾರತ- 575020	ರೂ. 7,33,38,000	ರೂ. 73,33,800	28-03-2026	ರೂ. 5 ಲಕ್ಷಗಳು	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎನ್‌ಎಚ್‌ಎಲ್/ಬಿಎಎನ್/0317/371413 & ಎನ್‌ಎಚ್‌ಎಲ್/ಎಂಎನ್‌ಎಲ್‌ಆರ್/0418/514952 ಕ್ಯಾರೇಜ್ ಕಮೊಡಿಟೀಸ್ ಪ್ರೈವೇಟ್ ಲಿಮಿಟೆಡ್/ ಜೆಸಿಂತಾ ಪ್ರಸಾದ್ ಪಣಿಕ್ಕರ್/ ಸಂಜೀದ್ ಅಲೋಶಿಯಸ್ ಪೆಸ್/ ಕೃಷ್ಣನ್ ಶಿವಪ್ರಸಾದ್ ಶಾಖಾ ಕಚೇರಿ: ಜಯನಗರ	ರೂ. 2,67,06,636.81 & 20-11-2019; ರೂ. 95,57,242.01 & 23-11-2019	ಭೌತಿಕ ಸ್ವಾಧೀನ	ಸರ್ವೆ ನಂ. 72-1ಎ, ಹಾರೆತೋಟ, ಸಂತೋರಿನಿಂದ ಪಂಪ್‌ವೆಲ್ ರಸ್ತೆ, ಮರೋಳಿ ಗ್ರಾಮ, ಮಂಗಳೂರು, ಕರ್ನಾಟಕ, ಭಾರತ- 575005	ರೂ. 2,61,68,000	ರೂ. 26,16,800	28-03-2026	ರೂ. 2 ಲಕ್ಷಗಳು	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎಚ್‌ಓಯು/ಎಂಎನ್‌ಎಲ್‌ಆರ್/0418/513426 ಲೋಕಯ್ಯ ನಾಯ್ಕ, ದಿವ್ಯಾ ಚೆಂಡುಕಳ ಶಾಖಾ ಕಚೇರಿ: ಮಂಗಳೂರು	ರೂ. 649620 & 13-05-2024	ಭೌತಿಕ ಸ್ವಾಧೀನ	ಸರ್ವೆ ನಂ. 125/1ಎಪಿ, ಸಜೀಪ ಮೂಡ ಗ್ರಾಮ, ಬಂಟ್ವಾಳ ತಾಲೂಕು, ಬಂಟ್ವಾಳ, ದಕ್ಷಿಣ ಕನ್ನಡ, ಕರ್ನಾಟಕ, ಭಾರತ- 574231.	ರೂ. 3,87,000	ರೂ. 38,700	28-03-2026	ರೂ. 10,000	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎನ್‌ಎಚ್‌ಎಲ್/ಎಂಎನ್‌ಎಲ್ ಆರ್/0523/1116004 ಸಫ್ವಾಜ್ ನವಾಜ್/ ಮೈಮೂನಾ ಉಳ್ಳಾಲ್ ಎಲಿಯಾಸ್ ಶಾಖಾ ಕಚೇರಿ: ಮಂಗಳೂರು	ರೂ. 1223622.43 & 10-01-2024	ಭೌತಿಕ ಸ್ವಾಧೀನ	ಸರ್ವೆ ನಂ. 98/20ಬಿ2 ಮತ್ತು 98 21ಎ2ಡಿ ನಂ. 511/1, ಮೈಮೂನಾ ಮಂಜಿಲ್, ಉಳ್ಳಾಲ ದರ್ಗಾ ರಸ್ತೆ, ತೊಕ್ಕೊಟ್ಟು, ಮಂಗಳೂರು, ದಕ್ಷಿಣ ಕನ್ನಡ, ಮಂಗಳೂರು- 575020	ರೂ. 1,78,54,000	ರೂ. 17,85,400	28-03-2026	ರೂ. 1 ಲಕ್ಷ	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ
ಎನ್‌ಎಚ್‌ಎಲ್/ಎಂಆರ್‌ಎಚ್/0917/425283 ಪ್ರವೀಣ ಸಿ, ತಾರಾ ಪಿ & ಸಾನಿಧ್ಯ ಮಿಲ್ಕ್ ಪಾರ್ಲರ್ & ಜನರಲ್ ಸ್ಟೋರ್ ಶಾಖಾ ಕಚೇರಿ: ಮಾರತ್‌ಹಳ್ಳಿ	ರೂ. 2382122.40 & 09-05-2022	ಭೌತಿಕ ಸ್ವಾಧೀನ	ಕುಡುಪು ಗ್ರಾಮ, ಮಂಗಳೂರು ತಾಲೂಕು, ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ರಿಜಿಸ್ಟ್ರೇಷನ್ ಉಪಜಿಲ್ಲೆ ಮಂಗಳೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಯೇತರ ಸ್ಥಿರಾಸ್ತಿ ಮತ್ತು ಇದರ ಸರ್ವೆ ನಂಬರ್‌ಗಳು: 28/2ಪಿ3, ಕಿಸಂ: ವಿಸ್ತೀರ್ಣ (ಎಕರೆಗಳಲ್ಲಿ) 0-05 ಮತ್ತು ಎಲ್ಲ ಸುಧಾರಣೆಗಳು ಹಾಗೂ ಜೋಡಣೆಗಳೊಂದಿಗೆ. ರಸ್ತೆ ಮಾರ್ಗದ ಹಕ್ಕು, ನೀರು ಇತ್ಯಾದಿ ಸಮಾನ & ಬಳಕೆಯ ಹಕ್ಕುಗಳು ಇತ್ಯಾದಿ.. ಗಡಿಗಳು- ಉತ್ತರ, ಪೂರ್ವ & ಪಶ್ಚಿಮಕ್ಕೆ: ಇದೇ ಸರ್ವೆ ನಂಬರ್ ಭಾಗಗಳು. ದಕ್ಷಿಣಕ್ಕೆ: ರಸ್ತೆ.	ರೂ. 7,93,000	ರೂ. 79,300	28-03-2026	ರೂ. 10,000	20-03-2026 ಬೆಳಗ್ಗೆ 11.00 ರಿಂದ ಸಂಜೆ 5.00	30-03-2026 ಮಧ್ಯಾಹ್ನ 02.00 ರಿಂದ ಮಧ್ಯಾಹ್ನ 3.00	ತಿಳಿದಿಲ್ಲ

* ಇದರ ಜತೆಗೆ ಪೂರ್ಣ ಮೊತ್ತ ಪಾವತಿ ಮತ್ತು/ ಅಥವಾ ನಗದೀಕರಣಗೊಳ್ಳುವವರೆಗೆ ಅನ್ವಯವಾಗುವ ವಾರ್ಷಿಕ ಶೇಕಡ 18ರ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಖರ್ಚು, ಶುಲ್ಕ ಇತ್ಯಾದಿ. ** ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗೆ ತಿಳಿದಿರುವಂತೆ ಮತ್ತು ಮಾಹಿತಿ ಇರುವಂತೆ ಮೇಲೆ ಹೆಸರಿಸಿದ ಸ್ಥಿರಾಸ್ತಿ/ ಭದ್ರತಾ ಆಸ್ತಿಗಳಿಗೆ ಕಲಂ ನಂ, ಕೆ ಅಡಿಯಲ್ಲಿ ಬಹಿರಂಗೊಡಿಸಿದ ಋಣಭಾರಗಳು ಹೊರತುಪಡಿಸಿ ಯಾವುದೇ ಋಣಭಾರ ಇರುವುದಿಲ್ಲ. ಇದಲ್ಲದೇ ಸ್ಪಷ್ಟಿಸಿದ/ ಪಾವತಿಸಬೇಕಾದ ಇಂಥ ಋಣಭಾರಗಳನ್ನು, ಯಶಸ್ವಿ ಖರೀದಿದಾರರು/ ಬಿಡ್ಡರ್‌ಗಳು ಆತ/ ಆಕೆ ಪಾವತಿಸಬೇಕು. ಸಂಭಾವ್ಯ ಖರೀದಿದಾರರು/ಬಿಡ್ಡರ್‌ಗಳು ಸ್ವತಂತ್ರವಾಗಿ ಹೆಸರಿಸಿದ ಋಣಭಾರಗಳನ್ನು ದೃಢೀಕರಿಸಿಕೊಳ್ಳಬೇಕು. 1. ಈ ದಿನಾಂಕದವರೆಗೆ, ಮೇಲಿನ ಸ್ಥಿರ ಆಸ್ತಿಗಳು/ಭದ್ರತಾ ಸ್ವತ್ತುಗಳನ್ನು ಮಾರಾಟ ಮಾಡುವುದು, ಅನ್ಯಗೊಳಿಸುವುದು ಮತ್ತು/ ಅಥವಾ ವಿಲೇವಾರಿ ಮಾಡುವುದಕ್ಕೆ ಪಿಎನ್‌ಬಿಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿಯನ್ನು ನಿರ್ಬಂಧಿಸುವ ಮತ್ತು/ಅಥವಾ ನ್ಯಾಯಾಲಯದ ತಡೆಯಾಜ್ಞೆ ಇಲ್ಲ. 2. ನಿರೀಕ್ಷಿತ ಖರೀದಿದಾರರು/ಬಿಡ್‌ದಾರರು ಮತ್ತು ಆಸಕ್ತರು ಕಾಲಂ ನಂ.-ಕೆ ಯಲ್ಲಿ ತಿಳಿಸಲಾದ ಪ್ರಕ್ರಿಯೆಗಳು/ಆದೇಶಗಳು ಇತ್ಯಾದಿಗಳಲ್ಲಿ ಯಾವುದಾದರೂ ಇದ್ದರೆ ಸ್ವತಂತ್ರವಾಗಿ ಮನವಿಯ ಪರಿಶೀಲನೆಯನ್ನು ಮಾಡಬಹುದು. ಲಭ್ಯವಿರುವ ಶೀರ್ಷಿಕೆಯ ದಾಖಲೆಗಳ ಶೀರ್ಷಿಕೆ ಸೇರಿದಂತೆ ಆದರೆ ಅಷ್ಟಕ್ಕೇ ಸೀಮಿತವಾಗದೇ ಪಿಎನ್‌ಬಿಎಚ್‌ಎಫ್‌ಎಲ್ ಬಳಿ ಮತ್ತು ಟೆಂಡರ್/ಬಿಡ್ ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು ಅಥವಾ ಆಫರ್(ಗಳನ್ನು) ಮಾಡುವ ಮೊದಲು ಎಲ್ಲಾ ರೀತಿಯಲ್ಲೂ ತಮ್ಮನ್ನು ತೃಪ್ತಿಪಡಿಸಿಕೊಳ್ಳಿ, ಬಿಡ್ ಫಾರ್ಮ್‌ನೊಂದಿಗೆ ಈ ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಬಿಡ್ಡುದಾರರು ಸಹಿ ಹಾಕಬೇಕು. 3. ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 9(3) ರ ಪ್ರಕಾರ, ಬಿಡ್ಡುದಾರರು/ಖರೀದಿದಾರರು ಮಾರಾಟದ ಬೆಲೆಯ 25% ಮೊತ್ತವನ್ನು (ಇಎಂಡಿ ಮೊತ್ತವನ್ನು ಪಾವತಿಸಿದ್ದಲ್ಲಿ ಅದನ್ನು ಹೊರತುಪಡಿಸಿ) ಅದೇ ದಿನ ಅಥವಾ ಮುಂದಿನ ಕೆಲಸದ ದಿನಕ್ಕಿಂತ ಮೊದಲು ಠೇವಣಿ ಮಾಡಲು ಕಾನೂನುಬದ್ಧವಾಗಿ ಬದ್ಧರಾಗಿದ್ದಾರೆ, ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್ ರೂಲ್ಸ್- 2002ರ ನಿಯಮ 9(2) ರ ಅನುಸಾರವಾಗಿ ಭದ್ರತಾ ಸಾಲದಾರರು ಮಾರಾಟದ ಬೆಲೆಯ 25% ರ ಸ್ವೀಕೃತಿಯ ನಂತರ ಮಾತ್ರವೇ (ಬಿಡ್ಡರ್(ಗಳು) ಪರವಾಗಿ ಮಾರಾಟವನ್ನು ದೃಢೀಕರಿಸುತ್ತಾರೆ. ಉಳಿದ 75% ಮಾರಾಟದ ದೃಢೀಕರಣ ಪತ್ರದ ಸ್ವೀಕೃತಿಯ ದಿನಾಂಕದಿಂದ 15 ದಿನಗಳ ಒಳಗೆ ಖರೀದಿದಾರರಿಂದ ಮಾರಾಟದ ಪರಿಗಣನೆಯ ಮೊತ್ತವನ್ನು ಠೇವಣಿ ಮಾಡಬೇಕು ಮತ್ತು ಅಂತಹ ಠೇವಣಿಯ ಪೂರ್ವನಿಯೋಜಿತವಾಗಿ, ಆಸ್ತಿ/ಭದ್ರಪಡಿಸಿದ ಆಸ್ತಿಯನ್ನು ಮರುಮಾರಾಟ ಮಾಡಲಾಗುತ್ತದೆ. 4. ತನ್ನ ಕಾರ್ಪೊರೇಟ್ ಕಚೇರಿಯನ್ನು, 605ಎ, 6ನೇ ಮಹಡಿ, ಮೈತ್ರಿವನಂ, ಅಮೀರ್‌ಪೇಟೆ, ಹೈದರಾಬಾದ್- 500038, ವೆಬ್‌ಸೈಟ್: info@bankauctions.in ವಿಳಾಸದಲ್ಲಿ ಹೊಂದಿರುವ ಮೆಸರ್ಸ್ ಫೋರ್‌ಕ್ಲೋಶರ್‌ಇಂಡಿಯಾ.ಕಾಮ್, ಅಧಿಕೃತ ಅಧಿಕಾರಿಗೆ ಇ-ಹರಾಜು ಮಾರಾಟ ಮಾಡಲು ನೆರವಾಗುತ್ತದೆ. ಆಸ್ತಿಯ ಪರಿಶೀಲನೆಗೆ ಅಥವಾ ಬಿಡ್ ದಾಖಲೆಗಳನ್ನು ಪಡೆಯಲು ಮತ್ತು ಯಾವುದೇ ಇತರ ಪ್ರಶ್ನೆಗೆ ಅಥವಾ ನೋಂದಣಿಗಾಗಿ, ಯಾವುದೇ ಸಹಾಯಕ್ಕಾಗಿ ನೀವು ಪಿಎನ್‌ಬಿಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿ ವಿಜಯ್ ಸುಂದ್ರಿಯಾಲ್/ಸುಂದರ್/ಬಾಲಾಜಿ/ವಿಜಯ್ ಮೊಬೈಲ್ 7428193765/9900296507/7022522855/7676930309, ಟೋಲ್‌ಫ್ರೀ ಸಂಖ್ಯೆ- 18001208800. auction@pnbhousing.com ಇವರನ್ನು ಸಂಪರ್ಕಿಸಹುದು ಅಥವಾ www.auction@pnbhousing.com ವೀಕ್ಷಿಸಬಹುದು.

ಸ್ಥಳ: ಮಂಗಳೂರು, ದಿನಾಂಕ: 12.03.2026.

ಸಹಿ/- ಅಧಿಕೃತ ಅಧಿಕಾರಿ, ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-43) ಡ್ರಾ ಮಾರ್ಚ್ 11ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
DD 543799 (THIRUVANANTHAPURAM)

Consolation Prize Rs.5,000/-
DA 543799 DB 543799 DC 543799 DE 543799
DF 543799 DG 543799 DH 543799 DJ 543799
DK 543799 DL 543799 DM 543799

2nd Prize Rs.30,00,000/- [30 Lakhs]
DC 480465 (KOTTAYAM)

3rd Prize Rs.5,00,000/- [5 Lakhs]
DM 298427 (NEYYATTINKARA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0710 0865 1003 1282 1508 2116 3316 3710 4173 4294
4942 5089 5243 5403 5509 5718 6322 6453 9191

5th Prize Rs.2,000/-
1055 4859 6329 6568 6577 8216

6th Prize Rs.1,000/-
0508 1624 1687 1883 2218 2329 2457 3136 3251 3626
3975 4057 4269 4601 4712 4771 4908 5012 5813 5834
6088 7012 7918 8427 8506

7th Prize Rs.500/-
0033 0092 0113 0116 0248 0359 0576 0721 0800 0808
0965 1361 1554 1599 1633 1694 1941 2028 2046 2052
2197 2364 2383 2486 2780 2797 2990 3022 3595 3612
4051 4080 4139 4349 4383 4586 4713 4730 5147 5510
5590 5677 5701 5909 6051 6089 6149 6161 6250 6457
6465 6498 6684 6836 6901 7076 7298 7570 7617 7619
7913 8052 8297 8442 8779 8846 8963 9013 9063 9076
9326 9359 9428 9469 9724 9913

8th Prize Rs.200/-
0061 0160 0216 0239 0529 0571 0578 0706 0740 0837
1063 1082 1273 1278 1338 1487 1530 1558 1594 1648
1887 1952 2012 2038 2042 2137 2237 2327 2539 2551
2752 2939 3016 3101 3107 3142 3333 3349 3355 3449
3484 3636 3709 3851 3857 4242 4362 4414 4572 4662
4756 4921 5003 5008 5025 5119 5158 5270 5420 5484
6072 6139 6377 6428 6648 6651 6774 6807 7049 7424
7886 7905 7916 7938 7983 8015 8111 8196 8214 8235
8327 8346 8586 8714 8751 8883 9257 9499 9503 9725
9744 9747 9796 9806 9827 9909

9th Prize Rs.100/-
0220 0247 0297 0423 0432 0609 0614 0617 0657 0796
0842 0987 1048 1104 1136 1140 1158 1263 1376 1380
1549 1559 1592 1666 1706 1761 1799 1857 2181 2282
2350 2480 2541 2696 2794 2851 2856 2866 2885 2940
2978 3011 3027 3234 3260 3294 3300 3507 3594 3895
3923 3966 3991 4054 4138 4229 4275 4386 4395 4411
4458 4459 4542 4668 4817 5021 5065 5097 5130 5154
5170 5263 5306 5341 5390 5398 5544 5564 5621 5643
5693 5748 5767 5782 5787 5790 5839 5968 6110 6111
6137 6208 6219 6299 6336 6386 6427 6430 6452 6654
6679 6711 6760 6828 7116 7122 7136 7143 7159 7259
7293 7343 7376 7387 7552 7591 7621 7645 7837 7973
7987 8447 8453 8510 8532 8564 8574 8769 8807 8860
8906 8926 9019 9148 9294 9473 9859 9886

ಯುದ್ಧದ 'ಬಿಸಿ' ಹೊಟೇಲ್‌ಗಳಿಗೂ ತಟ್ಟಿತು!

ಹರೀಶ್ ಕೆ. ಆದೂರು

ಮೂಡುಬಿದಿರೆ : ಮಧ್ಯಪ್ರಾಚ್ಯ ಸಂಘರ್ಷದ ಹಿನ್ನಲೆಯಲ್ಲಿ ಕರಾವಳಿ ಭಾಗದಲ್ಲೂ ತೀವ್ರ ತೊಂದರೆಗಳು ಎದುರಾಗಿವೆ. ಅನಿಲ ಹಂಚಿಕೆಯಲ್ಲಿ ತೊಂದರೆ ಉಂಟಾಗಿದ್ದು, ಜನತೆ ಆತಂಕದ ಪರಿಸ್ಥಿತಿಗೆ ತುತ್ತಾಗಿದ್ದಾರೆ.

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚಾಗುತ್ತಿದ್ದು, ಮೂಡುಬಿದಿರೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳ ಹೊಟೇಲ್, ಕ್ಯಾಂಟೀನ್, ಪಿಜಿ ಮತ್ತು ಹಾಸ್ಟೆಲ್ ಮಾಲೀಕರು ಸಂಕಷ್ಟ ಎದುರಿಸುತ್ತಿದ್ದಾರೆ. ಕೆಲವು ಹೊಟೇಲ್‌ಗಳಲ್ಲಿ ಊಟ ನೀಡುವುದನ್ನೇ ನಿಲ್ಲಿಸಲಾಗಿದೆ. ಕೇವಲ ಟೀ ಮತ್ತು ಕಾಫಿ ನೀಡುವುದಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ.

ಮೂಡುಬಿದಿರೆ ಪಟ್ಟಣದಲ್ಲಿರುವ ಹಲವಾರು ಹೊಟೇಲ್‌ಗಳಲ್ಲಿ ದಿನವೊಂದಕ್ಕೆ ಕನಿಷ್ಠ 5-6 ವಾಣಿಜ್ಯ ಸಿಲಿಂಡರ್‌ಗಳು ಖರ್ಚಾಗುತ್ತಿದ್ದವು. ಇದೀಗ ಈ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾದ ಹಿನ್ನಲೆಯಲ್ಲಿ ಪರ್ಯಾಯ ವ್ಯವಸ್ಥೆಗೆ ಮೊರೆ ಹೋಗುವಂತಾಗಿದೆ.

ತಿಂಡಿಗಳಿಗೂ ಬ್ರೇಕ್

ತಿಂಡಿ ತಿನಿಸುಗಳ ತಯಾರಿಕೆಗೆ ಹೆಚ್ಚಿನ ಇಂಧನ ಖರ್ಚಾಗುವ ಕಾರಣದಿಂದ ಹಲವು ತಿಂಡಿಗಳಿಗೆ ಬ್ರೇಕ್ ಬಿದ್ದಿದೆ. ಸುಲಭವಾಗಿ ಕಡಿಮೆ ಇಂಧನ ಬಳಸಿ ತಯಾರಿಸಬಹುದಾದ ತಿನಿಸುಗಳಿಗೆ ಮಾತ್ರ ಆದ್ಯತೆ ನೀಡಲಾಗುತ್ತಿದೆ.

ಗ್ಯಾಸ್ ಸಿಲಿಂಡರ್‌ಗಳನ್ನೇ ನಂಬಿಕೊಂಡು ಕ್ಯಾಂಟೀನ್ ನಡೆಸುತ್ತಿರುವವರು ಅಕ್ಷರಶಃ ಸಂಕಷ್ಟಕ್ಕೀಡಾಗಿದ್ದಾರೆ. ಕೆಲವರು ತಮ್ಮ ಕ್ಯಾಂಟೀನ್ ಮತ್ತು ಹೊಟೇಲ್‌ಗಳನ್ನು ತಾತ್ಕಾಲಿಕವಾಗಿ ಮುಚ್ಚಿ ಕೂತಿದ್ದು, ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಮತ್ತೆ ಹಳೆಯ ಪದ್ಧತಿಗೆ ಶಿಫ್ಟ್

ಮೂಡುಬಿದಿರೆಯ ಹಲವು ದೊಡ್ಡ ಹೊಟೇಲ್ ಉದ್ಯಮಿಗಳು ಹಾಗೂ ಕ್ಯಾಟರಿಂಗ್ ಮಾಲೀಕರು ಈಗ ಮತ್ತೆ ಹಳೆಯ ಪದ್ಧತಿಗೆ ಮರಳುತ್ತಿದ್ದಾರೆ. ಕಟ್ಟಿಗೆ ಒಲೆಗೆ ಮತ್ತೆ ಬೆಂಕಿ ಬೀಳತೊಡಗಿದೆ. ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಕಟ್ಟಿಗೆ ಒಲೆ ಬಳಸಿ ಆಹಾರ ತಯಾರಿಸುವ ಕೆಲಸ ನಡೆಯುತ್ತಿದೆ. ಮದುವೆ ಮನೆಗಳು ಹಾಗೂ ಛತ್ರಗಳಲ್ಲೂ ಕಟ್ಟಿಗೆ ಒಲೆ ಬಳಕೆಯು ಮತ್ತೆ ಹೆಚ್ಚಾಗುತ್ತಿದೆ. ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮ ಕರಾವಳಿ ಭಾಗದಲ್ಲೂ ತಟ್ಟಿದಂತಾಗಿದೆ.

ಇದೀಗ ಬೇಸಿಗೆಯ ಸಮಯವಾಗಿದ್ದು, ಪಾನೀಯಗಳ ವ್ಯಾಪಾರ ಉತ್ತುಂಗದಲ್ಲಿದೆ. ಇದೇ ಸಂದರ್ಭದಲ್ಲಿ ಕಚ್ಚಾ ವಸ್ತುಗಳ ಬೆಲೆ ಏಕಾಏಕಿ ಹೆಚ್ಚಿರುವುದರಿಂದ ಬಾಟಲಿ ಉತ್ಪನ್ನಗಳ ತಯಾರಿಕೆಗೆ ದೊಡ್ಡ ಹೊಡೆತ ಬಿದ್ದಿದೆ. ಇದರ ಪರಿಣಾಮವಾಗಿ ಪಾನೀಯಗಳ ಬೆಲೆಯೂ ಸದ್ಯದಲ್ಲೇ ಏರಿಕೆಯಾಗುವ ಸಾಧ್ಯತೆಗಳಿವೆ.

ಪ್ಲಾಸ್ಟಿಕ್ ಉದ್ಯಮಕ್ಕೂ ಕಾಡುತ್ತಿದೆ ಸಂಕಷ್ಟ

ಕೋವಿಡ್ ಸಮಯದಲ್ಲಿ ಉಂಟಾದ ಸಂಕಷ್ಟದಂತೆಯೇ ಈಗ ಮತ್ತೆ ಹಲವಾರು ಉದ್ಯಮಗಳಿಗೆ ತೊಂದರೆ ಎದುರಾಗುತ್ತಿದೆ. ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮವಾಗಿ ಪ್ಲಾಸ್ಟಿಕ್ ಉದ್ಯಮವೂ ತೀವ್ರ ಸಂಕಷ್ಟ ಎದುರಿಸುತ್ತಿದೆ. ಕಚ್ಚಾ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಹಲವು ಸಣ್ಣ ಹಾಗೂ ಅತಿಸಣ್ಣ ಪ್ಲಾಸ್ಟಿಕ್ ಉತ್ಪಾದನಾ ಘಟಕಗಳು ಬಾಗಿಲು ಮುಚ್ಚಿವೆ. ಸುಮಾರು 70 ಶೇಕಡಾ ಬೆಲೆ ಏರಿಕೆಯಾಗಿರುವುದರಿಂದ, ಏಕಾಏಕಿ ಹೆಚ್ಚಾದ ವೆಚ್ಚದಿಂದ ಕಚ್ಚಾ ವಸ್ತುಗಳನ್ನು ಖರೀದಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಸುರತ್ಕಲ್ ಪ್ರದೇಶದಲ್ಲಿ ವಾಣಿಜ್ಯ ಸಿಲಿಂಡರ್ ಇಲ್ಲ!

ಸುರತ್ಕಲ್: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಅನಿಶ್ಚಿತತೆ ಉಂಟಾಗಿದ್ದು, ಸುರತ್ಕಲ್ ಭಾಗದಲ್ಲಿ ಇದೀಗ ವಾಣಿಜ್ಯ ಸಿಲಿಂಡರ್ ಕೊರತೆ ಎದುರಾಗಿದೆ. ಗ್ಯಾಸ್ ಏಜೆನ್ಸಿಗಳಿಗೆ ಕನಿಷ್ಠ ಸಿಲಿಂಡರ್ ಕಳೆದ ವಾರ ಪೂರೈಕೆಯಾಗಿದ್ದು ಬಳಿಕ ಸೋಮವಾರದಿಂದ ಕೊರತೆ ಎದುರಾಗಿದೆ.

ಅಡುಗೆ ಅನಿಲ ಹಾಗೂ ವಾಹನಗಳಿಗೆ ಬಳಸುವ ಸಿ ಎನ್ ಜಿ ಸರಬರಾಜಿನ ಕುರಿತು ಇದೀಗ ಆತಂಕ ವ್ಯಕ್ತವಾಗುತ್ತಿದೆ. ಹೊಟೇಲು ಉದ್ಯಮ, ಕ್ಯಾಟರಿಂಗ್, ಫಾಸ್ಟ್ ಫುಡ್ ಸೆಂಟರ್‌ಗಳಿಗೆ ಹೊಡೆತ ಬಿದ್ದಿದ್ದು ಒಂದೆರಡು ದಿನದಲ್ಲಿ ವಾಣಿಜ್ಯ ಸಿಲಿಂಡರ್ ಪೂರೈಕೆ ಆಗದೆ ಹೋದಲ್ಲಿ ಬಾಗಿಲು ಎಳೆಯುವ ಅನಿವಾರ್ಯತೆಗೆ ಸಿಲುಕಿಕೊಳ್ಳಲಿದ್ದಾರೆ.

ಅತ್ಯಂತ ಪ್ರಮುಖವಾಗಿ ಆಸ್ಪತ್ರೆ, ಶಾಲಾ ಕಾಲೇಜು ಹಾಸ್ಟೆಲ್ ಸಹಿತ ಅನಿವಾರ್ಯತೆ, ಎಮರ್ಜೆನ್ಸಿ ಕ್ಷೇತ್ರಕ್ಕೆ ಮೊದಲು ನೀಡಲು ಪ್ರಮುಖ ಅನಿಲ ಪೂರೈಕೆ ಕಂಪನಿಗಳಾದ ಎಚ್ ಪಿ ಸಿ ಎಲ್, ಇಂಡೇನ್ ಅಧಿಕಾರಿಗಳು ಗ್ಯಾಸ್ ಏಜೆನ್ಸಿಗಳಿಗೆ ಮೌಖಿಕವಾಗಿ ಸೂಚಿಸಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ಅನಿಲದ ಪ್ರಮುಖ ಭಾಗವನ್ನು ವಿದೇಶಗಳಿಂದ, ವಿಶೇಷವಾಗಿ ಮಧ್ಯಪ್ರಾಚ್ಯದ ದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ. ಈ ಸರಬರಾಜು ಮುಖ್ಯವಾಗಿ ಇರಾನ್ ಹಾರ್ಮುಜ್ ಜಲಸಂಧಿ ನಿಯಂತ್ರಣಕ್ಕೆ ತೆಗೆದುಕೊಂಡಿದ್ದು ಅನಿಲ ಕೊರತೆಗೆ ಕಾರಣವಾಗಿದೆ. ಈ ಮಾರ್ಗ ಜಾಗತಿಕ ತೈಲ ಮತ್ತು ಅನಿಲ ಸಾಗಾಟದ ಪ್ರಮುಖ ಕೇಂದ್ರವಾಗಿದ್ದು, ಯುದ್ಧದ ಪರಿಸ್ಥಿತಿ ತೀವ್ರಗೊಂಡರೆ ಸಾಗಾಟಕ್ಕೆ ಅಡಚಣೆ ಉಂಟಾಗುವ ಸಾಧ್ಯತೆ ಇದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ನಾವು ಹೊಟೇಲ್ ಉದ್ಯಮವನ್ನು ಮುಚ್ಚುವ ಸ್ಥಿತಿಗೆ ಬರುತ್ತೇವೆ ಎಂದು ಸುರತ್ಕಲ್ ಹೊಟೇಲ್ ಉದ್ಯಮಿ ವೇಣುಗೋಪಾಲ್ ಪೈ ಅಭಿಪ್ರಾಯ ವ್ಯಕ್ತಪಡಿಸಿದರು.



ಸಾಮಾನ್ಯ ಜನರ ಮೇಲೆ ಪರಿಣಾಮ

ಅಡುಗೆ ಅನಿಲ ದರ ಏರಿಕೆಯ ಸಾಧ್ಯತೆ ಇರುವುದರಿಂದ ಸಾಮಾನ್ಯ ಜನರಲ್ಲಿ ಆತಂಕ ವ್ಯಕ್ತವಾಗುತ್ತಿದೆ. ಎಲ್ ಪಿ ಜಿ ಸಿಲಿಂಡರ್ ಬೆಲೆ ಏರಿದರೆ ಮನೆ ಖರ್ಚಿನ ಮೇಲೆ ಹೆಚ್ಚುವರಿ ಹೊರೆ ಬೀಳಬಹುದು. ಅದೇ ರೀತಿ ಸಿ ಎನ್ ಜಿ ಬೆಲೆಯಲ್ಲಿ ಏರಿಕೆ ಕಂಡುಬಂದರೆ ಆಟೋ, ಟ್ಯಾಕ್ಸಿ ಹಾಗೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನುತ್ತಾರೆ ಬಿಎಂಎಸ್ ಆಟೋರಿಕ್ಷಾ ಚಾಲಕ ಮಾಲಕರ ಸಂಘದ ಉಮೇಶ್ ದೇವಾಡಿಗ ಇಡ್ಯಾ ಅವರು.

ಸುರತ್ಕಲ್ ಭಾಗದಲ್ಲಿ ಬಹಳಷ್ಟು ಕಾರ್ಮಿಕರು, ಅತಿಥಿ ಗೃಹಗಳು ಇದ್ದು ಉಪಹಾರ ಕೇಂದ್ರಗಳು ಮುಚ್ಚುಗಡೆ ಆದಲ್ಲಿ ಸಾವಿರಾರು ಮಂದಿ ಸಂಕಷ್ಟ ಎದುರಿಸಲಿದ್ದಾರೆ.

ಶ್ರೀ ರಾಮಕೃಷ್ಣ ಮಠದಲ್ಲಿ ಯೋಗ ಶಿಬಿರ ಆರಂಭ
ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ

ಮಂಗಳೂರು: ಮಂಗಳಾದೇವಿಯ ಶ್ರೀ ರಾಮಕೃಷ್ಣ ಮಠದಲ್ಲಿ ಮಾರ್ಚ್ ತಿಂಗಳ ಸಂಜೆಯ ಯೋಗ ಶಿಬಿರವನ್ನು ಆಶ್ರಮದ ಅಧ್ಯಕ್ಷ ಶ್ರೀ ಸ್ವಾಮಿಜಿತಕಾಮಾನಂದಜೀ ಮಹಾರಾಜ್ ಉದ್ಘಾಟಿಸಿದರು.

ಈ ವೇಳೆ ಆಶೀರ್ವಚನ ನೀಡಿದ ಅವರು, ಯೋಗವನ್ನು ಅಭ್ಯಾಸ ಮಾಡುವುದರಿಂದ ದೈಹಿಕ ಮತ್ತು ಮಾನಸಿಕ ಸ್ಥಿತಿಯ ನಡುವೆ ಸಮತೋಲನವನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ. ಇದು ಮೂಲತಃ ದೇಹ ಮತ್ತು ಮನಸ್ಸಿನ ಸ್ವಾಸ್ಥ್ಯಕ್ಕೆ ಕಾರಣವಾಗುವ ಅಭ್ಯಾಸವಾಗಿದೆ. ಯೋಗವನ್ನು ಅಭ್ಯಾಸ ಮಾಡುವುದರಿಂದ ದೇಹ,ಆತ್ಮ ಮತ್ತು ಮನಸ್ಸಿನ ನಡುವೆ ಸಮತೋಲನ ಬರುತ್ತದೆ. ಒತ್ತಡ, ದೈಹಿಕ ದೌರ್ಬಲ್ಯ ಮತ್ತು ಇತರ ಹಲವಾರು ಸಮಸ್ಯೆಗಳನ್ನು ಎದುರಿಸಲು ಯೋಗ ನಮಗೆ ಸಹಾಯ ಮಾಡುತ್ತದೆ. ಯೋಗದ ದೈನಂದಿನ ಅಭ್ಯಾಸವು ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳಿಂದ ದೂರವಿರಲು ನಮಗೆ ಸಹಾಯ ಮಾಡುತ್ತದೆ ಎಂದು ತಿಳಿಸಿದರು.

ದೇಲಂಪಾಡಿ ಯೋಗಪ್ರತಿಷ್ಠಾನದ ಯೋಗಗುರು ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿ ಶಿಬಿರಾರ್ಥಿಗಳಿಗೆ ಯೋಗದ ಮಹತ್ವ ಪ್ರಯೋಜನಗಳನ್ನು ತಿಳಿಸಿದರು. ದೇಲಂಪಾಡಿಯವರ ಶಿಷ್ಯರಾದ ಸುಮಾ, ಚಂದ್ರಹಾಸ ಬಾಳ, ಡಾ.ಉಮಾ, ಪ್ರೇಮಾ ಮತ್ತು ಶೈಲಜಾ ಉಪಸ್ಥಿತರಿದ್ದರು. ಆಸಕ್ತರು ಯೋಗ ಶಿಬಿರದಲ್ಲಿ ನೋಂದಾಯಿಸಿಕೊಳ್ಳಲು ಆಶ್ರಮದ ಕಾರ್ಯಾಲಯವನ್ನು (ದೂ. 0824-2414412) ಸಂಪರ್ಕಿಸಬಹುದು.



ಬಾವಿ ತೋಡಲು ಸ್ಫೋಟಕ ಬಳಕೆ : ಡಿವೈಎಸ್ಪಿ ರೋಹಿಣಿ ಸಿ.ಕೆ. ಭೇಟಿ

ಕಡಬ: ಬಾವಿ ತೋಡುವ ಸಂದರ್ಭದಲ್ಲಿ ಸ್ಫೋಟಕ ಸ್ಫೋಟಿಸಿರುವುದರಿಂದ ಮನೆಗಳಿಗೆ ಹಾನಿಯಾಗಿರುವ ರಾಮಕುಂಜ ಗ್ರಾಮದ ಕಂಪಕ್ಕೆ ಬೆಳ್ತಂಗಡಿ ಡಿವೈಎಸ್‌ಪಿ ರೋಹಿಣಿ ಸಿ.ಕೆ.ಅವರು ಮಾ.11ರಂದು ಸಂಜೆ ಭೇಟಿ ನೀಡಿ ಪರಿಶೀಲನೆನಡೆಸಿದ್ದಾರೆ. ರಾಮಕುಂಜ ಗ್ರಾಮದ ಕಂಪ ಎಂಬಲ್ಲಿ ಮೈಸೂರು ನಿವಾಸಿ ಸೋಮಶೇಖರ ಎಂಬವರು ತಮ್ಮ ಜಾಗದಲ್ಲಿ ನೀರಿಗಾಗಿ ಬಾವಿ ತೋಡುವ ಕೆಲಸ ಮಾಡಿಸುತ್ತಿದ್ದು ಈ ವೇಳೆ ಕೋಡಿಂಬಾಳ ನಿವಾಸಿ ಶಿವರಾಮ ಎಂಬವರು ಬಾವಿಯೊಳಗೆ ಕಲ್ಲು ಹುಡಿ ಮಾಡಲು ಸ್ಫೋಟಕ ಸ್ಫೋಟಿಸಿದ ಪರಿಣಾಮ ಪರಿಸರದ ವಾಮನ ಮೂಲ್ಯ ಹಾಗೂ ಕೆ.ಟಿ.ಮೋಹನ ಎಂಬವರ ಮನೆಗೆ ಹಾನಿಯಾಗಿತ್ತು. ಮನೆಯವರು ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

ಈ ಮಧ್ಯೆ ಬಾವಿಯೊಳಗೆ ಸ್ಫೋಟಕವಾಗದೇ ಜೀವಂತವಾಗಿರುವ ಸ್ಫೋಟಕಗಳತೆರವುಗೊಳಿಸುವನಿಟ್ಟಿನಲ್ಲಿ ಮಾ.10ರಂದು ಮಂಗಳೂರಿನಿಂದ ಆಗಮಿಸಿದ್ದ ಬಾಂಬ್ ನಿಷ್ಕ್ರಿಯದಳದ ಸಿಬ್ಬಂದಿಗಳು ಬಾವಿಯೊಳಗೆ ಇಳಿದು ಕಾರ್ಯಾಚರಣೆ ಕೈಗೊಂಡಿದ್ದರು. ಬಾವಿಯೊಳಗಿರುವ 6 ಜೀವಂತ ಸ್ಫೋಟಕಗಳ ಪೈಕಿ ಒಂದನ್ನು ತೆರವುಗೊಳಿಸಿ ಉಳಿದ ಸ್ಫೋಟಕಗಳನ್ನು ಕಂಪ್ರೆಸರ್ ಬಳಸಿ ತೆರವುಗೊಳಿಸಲು ನಿರ್ಧರಿಸಿ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದರು.



ಕೋರ್ಟ್ ಅನುಮತಿ ಪಡೆಯಲು ನಿರ್ಧಾರ

ಮಾ.11ರಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಡಿವೈಎಸ್‌ಪಿ ರೋಹಿಣಿ ಸಿ.ಕೆ.ಅವರು, ಕಂಪ್ರೆಸರ್ ಬಳಸಿ ಬಾವಿಯೊಳಗಿರುವ ಸೋಟಕ ತೆರವುಗೊಳಿಸುವುದು ಅಪಾಯಕಾರಿಯಾಗಿರುವುದರಿಂದ ಕೋರ್ಟ್ ಅನುಮತಿ ಪಡೆದು ಕಾರ್ಯಾಚರಣೆ ಮುಂದುವರಿಸುವಂತೆ ಸೂಚನೆ ನೀಡಿರುವುದಾಗಿ ತಿಳಿದುಬಂದಿದೆ. ಅದರಂತೆ ಕೋರ್ಟ್ ಅನುಮತಿ ದೊರೆತ ಬಳಿಕ ಕಾರ್ಯಾಚರಣೆ ನಡೆಸಲು ಪೊಲೀಸರು ನಿರ್ಧರಿಸಿದ್ದಾರೆ ಎಂದು ತಿಳಿದುಬಂದಿದೆ. ಡಿವೈಎಸ್‌ಪಿ ಭೇಟಿ ವೇಳೆ ಕಡಬ ಎಸ್‌ಐ ಜಂಬೂರಾಜ್ ಮಹಾಜನ್, ಸಿಬ್ಬಂದಿಗಳು ಉಪಸ್ಥಿತರಿದ್ದರು. ಘಟನಾ ಸ್ಥಳಕ್ಕೆ ಮಾ.11ರಂದು ಬೆಳಿಗ್ಗೆ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಗಳೂ ಆಗಮಿಸಿದ್ದರು.

ಗ್ಯಾರಂಟಿ ಯೋಜನೆಗಳ ಸರ್ವೇಕಾರ್ಯ : ಡಾ. ಪುಷ್ಪಾ ಅಮರನಾಥ್

ಮಂಗಳೂರು: ಗ್ಯಾರಂಟಿ ಯೋಜನೆ ಬಡವರ, ಮಧ್ಯಮ ವರ್ಗದವರ ಜೀವನಾಡಿ. ಅವರ ಜೀವನಕ್ಕೆ ಒಂದಷ್ಟು ಆಸರೆಯಾಗಿ ರಾಜ್ಯದಲ್ಲಿ ಅನುಷ್ಠಾನವಾಗಿದೆ ಎಂದು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹೇಳಿದರು.

ಅವರು ಕಡಬ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ಗ್ರಾಮ ಪಂಚಾಯತ್ ಬಿಳಿನೆಲೆ ಸಂಯುಕ್ತ ಆಶ್ರಯದಲ್ಲಿ ಬಿಳಿನೆಲೆ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆದ ನೋಂದಣಿಗೆ ಬಾಕಿ ಇರುವ ಮತ್ತು ತಿರಸ್ಕೃತ ಅರ್ಜಿಗಳ ವಿಲೇವಾರಿ ಶಿಬಿರ ಮತ್ತು ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆ ಮೂಲಕ ಶಿಕ್ಷಣ, ಮನೆಗೆ ಬೆಳಕು, ಮಹಿಳೆಯವರಿಗೆ ಉಚಿತ ಪ್ರಯಾಣ, ಹೊಟ್ಟೆತುಂಬಿಸುವ, ನಿರುದ್ಯೋಗಿಗಳಿಗೆ ಒಂದಿಷ್ಟು ಆಸರೆಯಾಗುವ ಕಾರ್ಯ ಆಗಿದೆ. ಗ್ಯಾರಂಟಿ ಯೋಜನೆಯನ್ನು ಪಡೆಯುತ್ತಿರುವವರ ಬಗ್ಗೆ ಗ್ರಾಮ ಮಟ್ಟದಿಂದ ಮಾಹಿತಿ ಪಡೆಯುವ ಸರ್ವೇಕಾರ್ಯ ಮುಂದಿನ ದಿನಗಳಲ್ಲಿ ನಡೆಯಲಿದೆ. ಅರ್ಹರಿಗೆ ಮಾತ್ರವೇ ಸಿಗಬೇಕಾದ ಗ್ಯಾರಂಟಿ ಯೋಜನೆಯನ್ನು ಉಳ್ಳವರು ಪಡೆಯುತ್ತಿದ್ದಾರೆಯೇ ಎಂಬ ಬಗ್ಗೆಯೂ ಸರ್ವೆಯಲ್ಲಿ ಮಾಹಿತಿ ಸಿಗಲಿದೆ ಎಂದರು.

ಮಹಿಳೆಯರಿಗೂ ಮೀಸಲಾತಿ

ಸಂವಿಧಾನದಿಂದ ಮಹಿಳೆಯರಿಗೂ ಅಧಿಕಾರ ಸಿಕ್ಕಿದೆ. ವಿಧಾನ ಸಭೆ, ಸಂಸತ್‌ಗೂ ಮಹಿಳೆಯರ ಪ್ರವೇಶ ಆಗಬೇಕಾಗಿದ್ದು, ಕೇಂದ್ರದ ಮಹಿಳಾ ಮೀಸಲಾತಿ ಕೇವಲ ಪತ್ರಕ್ಕೆ ಸೀಮಿತವಾಗಿದ್ದು, ಇದು ಆದಷ್ಟು ಬೇಗ ಅನುಷ್ಠಾನ ಆಗಬೇಕಿದ್ದು, ಮಹಿಳೆಯರಿಗೂ ಮೀಸಲಾತಿ ಸಿಗುತ್ತದೆ ಎಂಬ ಆಶಯ ಇದೆ ಎಂದರು.

ದಕ್ಷಿಣ ಕನ್ನಡ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಭರತ್ ಮುಂಡೋಡಿ ಅಧ್ಯಕ್ಷತೆ ವಹಿಸಿದ್ದು, ಗ್ಯಾರಂಟಿ ಯೋಜನೆಯಿಂದ ನಮಗೆ ಜನರ ಸೇವೆ ಮಾಡುವ ಸೌಭಾಗ್ಯ ದೊರೆತಿದೆ. ಪ್ರಾಮಾಣಿಕವಾಗಿ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಲುಪಿಸಿದ್ದೇವೆ ಎಂದು ಹೇಳಿದರು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾಗಟ್ಟಿ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ಇಂದು ಸಶಕ್ತರಾಗಿದ್ದಾರೆ ಎಂದರು.

ಪುತ್ತೂರು ಗ್ಯಾರಂಟಿ ಸಮಿತಿ ಅಧ್ಯಕ್ಷ ಉಮಾನಾಥ್ ಶೆಟ್ಟಿ, ಸುಳ್ಯ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಹುಲ್ ಹಮೀದ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಪಿ.ಪಿ.ವರ್ಗೀಸ್, ಕುಕ್ಕೆ ಸುಬ್ರಹ್ಮಣ್ಯದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ, ಪ್ರಶಸ್ತಿ ಪುರಸ್ಕೃತ ಶಿಕ್ಷಕ ಸತೀಶ್ ಭಟ್, ಬಿಳಿನೆಲೆ ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷೆ ಶಾರದಾ ದಿನೇಶ್, ಕಡಬ ಪಟ್ಟಣ ಪಂಚಾಯತ್ ಅಧ್ಯಕ್ಷೆ ತಮನ್ನಾಜಬೀನ್, ಗ್ರಾಮ ಪಂಚಾಯತ್ ಆಡಳಿತಾಧಿಕಾರಿ ಚೆಲುವ ರಂಗಪ್ಪ, ಅಭಿಲಾಷ್ ಪಿ.ಕೆ. ಅನುಷ್ಠಾನ ಸಮಿತಿ ಸದಸ್ಯರಾದ ಸತೀಶ್ ಪಿ. ದೀಕ್ಷಿತ್ ಡಿ.ಜಿ, ಉಷಾಅಂಚನ್, ಕೆ. ಮಾಧವ ಪೂಜಾರಿ, ಭವಾನಿಶಂಕರ್ ಬಿ., ಜಗದೀಶ್ ಕೆ, ಸೈಮನ್ ಸಿ.ಜೆ, ಎ.ಕೆ.ಬಶೀರ್, ಮಹಮ್ಮದ್ ಹನೀಫ್, ಹರಿಣಾಕ್ಷಿ, ಟಿ.ರಾಘವೇಂದ್ರ, ಗಂಗಾಧರ ಶೆಟ್ಟಿ, ಅವಿನಾಶ್ ಬಿ.ಎಸ್. ಗೌರಿ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕಡಬ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಸುಧೀರ್‌ಕುಮಾರ್ ಪ್ರಾಸ್ತಾವಿಕ ಮಾತನಾಡಿದರು. ಕಡಬ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ನವೀನ್‌ಕುಮಾರ್ ಭಂಡಾರಿ ಸ್ವಾಗತಿಸಿದರು. ಪಿ.ಡಿ.ಒ.ಚಂದ್ರಾವತಿ ವಂದಿಸಿದರು. ಶಿಕ್ಷಕ ಲೋಕನಾಥ್ ಕಾರ್ಯಕ್ರಮ ನಿರೂಪಿಸಿದರು.

ಅರ್ಜಿಗಳ ವಿಲೇವಾರಿ

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಯ ನೋಂದಾವಣೆಗೆ ಬಾಕಿ ಇರುವ ಮತ್ತು ತಿರಸ್ಕೃತ ಅರ್ಜಿಗಳ ವಿಲೇವಾರಿ ಮಾಡಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು, ಅಂಗನವಾಡಿ, ಆಶಾ ಕಾರ್ಯಕರ್ತೆಯರನ್ನು ಹಾಗೂ ಗ್ಯಾರಂಟಿ ಸಮಿತಿಯ ತಾಲೂಕು ಅಧ್ಯಕ್ಷ ಸುಧೀರ್‌ಕುಮಾರ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.



ರಾಜ್ಯ ಬಜೆಟ್‌ನಲ್ಲಿ ಕರಾವಳಿ ಮೀನುಗಾರಿಕೆ ಬಗ್ಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯ : ಯಶ್‌ಪಾಲ್ ಸುವರ್ಣ

ಉಡುಪಿ: ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರ ಕರಾವಳಿ ಭಾಗದ ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಮೀನುಗಾರಿಕೆ ಅಭಿವೃದ್ಧಿಗೆ ಈ ಬಾರಿಯ ಬಜೆಟ್‌ನಲ್ಲಿ ಯಾವುದೇ ಅನುದಾನ, ಯೋಜನೆಗಳನ್ನು ಘೋಷಣೆ ಮಾಡದೇ ತನ್ನ ನಿರ್ಲಕ್ಷ್ಯವನ್ನು ಮುಂದುವರೆಸಿದೆ ಎಂದು ಶಾಸಕ ಯಶ್ ಪಾಲ್ ಸುವರ್ಣ ಆರೋಪಿಸಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಕರಾವಳಿ ಭಾಗದ ಮೀನುಗಾರಿಕಾ ಬಂದರಿನ ಅಭಿವೃದ್ಧಿ ಕಾಮಗಾರಿಗಳಿಗೆ ಯಾವುದೇ ಅನುದಾನ ಮಂಜೂರು ಮಾಡಿಲ್ಲ, ಮೀನುಗಾರಿಕೆ ಮೂಲಕ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ಕಲ್ಪಿಸಿ ಮೀನುಗಾರಿಕೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮೀನುಗಾರರ ಬೇಡಿಕೆಯಾದ ಡೀಸೆಲ್ ಸಬ್ಸಿಡಿ ಮಿತಿ ಹೆಚ್ಚಳ, ಮೀನುಗಾರಿಕೆ ಸಂಬಂಧಿತ ಕೈಗಾರಿಕೆಗಳಿಗೆ ಪ್ರೋತ್ಸಾಹ, ಬಂದರುಗಳ ಹೂಳು ತೆರವು, ಮೀನುಗಾರಿಕಾ ಚಟುವಟಿಕೆಗೆ ಶೂನ್ಯ ಬಡ್ಡಿದರದ ಸಾಲ ಯೋಜನೆ, ಮಹಿಳಾ ಮೀನುಗಾರರ ಸಾಲ ಮನ್ನಾ, ಕಡಲ್ಕೊರೆತ ಶಾಶ್ವತ ಪರಿಹಾರ,.ಮೀನುಗಾರಿಕೆ ರಸ್ತೆಗಳ ಅಭಿವೃದ್ಧಿ, ಮತ್ಸ್ಯಾಶ್ರಯ ವಸತಿ ಯೋಜನೆಯ ಸಹಾಯಧನ ರೂ. 5 ಲಕ್ಷಕ್ಕೆ ಹೆಚ್ಚಳದಂತಹ ಯಾವುದೇ ಬೇಡಿಕೆಗಳಿಗೆ ಈ ಬಾರಿಯ ಬಜೆಟ್‌ನಲ್ಲಿ ಕ್ರಮ ವಹಿಸಿಲ್ಲ ಎಂದರು.



ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಹಾಗೂ ಸಾಗರಮಾಲಾ ಯೋಜನೆ ಮೂಲಕ ರಾಜ್ಯದ ಮೀನುಗಾರಿಕಾ ಬಂದರು ಹಾಗೂ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿಗೆ ವಿಪುಲ ಅವಕಾಶಗಳಿದ್ದರೂ ರಾಜ್ಯ ಸರ್ಕಾರ ಪೂರಕ ಸ್ಪಂದನೆ ನೀಡದೆ ಮೀನುಗಾರರ ಬಗ್ಗೆ ಅಸಡ್ಡೆ ಮುಂದುವರೆಸಿದೆ.

ಕರಾವಳಿ ಮೀನುಗಾರರ ಬೇಡಿಕೆಯನ್ನು ಕಡೆಗಣಿಸಿ ತಾಳ್ಮೆ ಪರೀಕ್ಷಿಸುವ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ಶಾಸಕ ಯಶ್ ಪಾಲ್ ಸುವರ್ಣ ಪ್ರಕಟಣೆಯಲ್ಲಿ ಹೇಳಿದ್ದಾರೆ.

ವಿದ್ಯುತ್ ಅವಘಡ: ಕಾರ್ಮಿಕ ಸಾವು

ಮಡಿಕೇರಿ: ವಿದ್ಯುತ್ ಅವಘಡಕ್ಕೆ ಸಿಲುಕಿ ಬಿಹಾರ ಮೂಲದ ಕಾರ್ಮಿಕನೊಬ್ಬ ಮೃತಪಟ್ಟಿರುವ ಘಟನೆ ಮಡಿಕೇರಿ ಸಮೀಪದ ಕಗ್ಗೋಡ್ಲು ಗ್ರಾಮದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಪಾರೆರ ಜಯಂತ್ ಎಂಬವರು ಹೊಸ ಮನೆ ನಿರ್ಮಾಣ ಮಾಡುತ್ತಿದ್ದು, ಇದರ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭ ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿ ಬಿಹಾರ ಮೂಲದ ವಿಕಾಸ್ (45) ಎಂಬವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಕಳೆದ ಒಂದೂವರೆ ತಿಂಗಳ ಹಿಂದೆ ಇವರು ಕೆಲಸಕ್ಕೆಂದು ಕೊಡಗಿಗೆ ಆಗಮಿಸಿದ್ದರು. ಘಟನೆ ಬಗ್ಗೆ ವಿಕಾಸ್ ಅವರ ಪತ್ನಿ ನೀಡಿದ ದೂರಿನಂತೆ ಮಡಿಕೇರಿ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಿರು ಸುದ್ದಿ

ರಾಣಿ ಅಬ್ಬಕ್ಕಳಿಂದ ಪೂಜಿತ ಸಾನಿಧ್ಯ ಪುನರುತ್ಥಾನಕ್ಕಾಗಿ ಅಷ್ಟ ಮಂಗಳ ಪ್ರಶ್ನೆ

ಮಂಗಳೂರು: ಉಳ್ಳಾಲದ ರಾಣಿ ಅಬ್ಬಕ್ಕ ದೇವಿ ಆರಾಧನೆ ಮಾಡುತ್ತಿದ್ದ ದೈವ ದೇವರ ಸಾನಿಧ್ಯಗಳ ಬಗೆಗೆ ಅರಿತುಕೊಳ್ಳಲು, ಪ್ರಸ್ತುತ ಶಿಥಿಲಾವಸ್ಥೆಯಲ್ಲಿರುವ ಸಾನಿಧ್ಯಗಳ ಪುನರುತ್ಥಾನ ಮಾಡುವುದರೊಂದಿಗೆ ಉಳ್ಳಾಲದ ನೆಲದಲ್ಲಿ ಹೊಸ ಚೈತನ್ಯವನ್ನು ತುಂಬುವ ಮಹತ್ವಾಕಾಂಕ್ಷೆಯೊಂದಿಗೆ ಕೊಂಡೆವೂರಿನ ಶ್ರೀ ನಿತ್ಯಾನಂದ ಯೋಗಾಶ್ರಮದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರ ಮಾರ್ಗದರ್ಶನದೊಂದಿಗೆ ಮಾ. 16, 17, 18ರಂದು 'ಅಷ್ಟ ಮಂಗಳ' ಪ್ರಶ್ನೆ ಇರಿಸಲಾಗುವುದು. ರಾಣಿ ಅಬ್ಬಕ್ಕ ಕಟ್ಟಿಸಿದ್ದ ಮನೆಯಲ್ಲಿ ವಾಸಿಸುವ ಉಳ್ಳಾಲ ಕಿಣಿ ಮನೆತನದ ನೇತೃತ್ವದಲ್ಲಿ, ರಾಣಿ ಅಬ್ಬಕ್ಕ ದೇವಿಯ ಕುಟುಂಬಸ್ಥರ ಸಹಕಾರದೊಂದಿಗೆ ಉಳ್ಳಾಲದ ಬಸ್ತಿಪಡ್ಪು ಕಿಣಿ ಮನೆತನದ ಮನೆಯಲ್ಲಿ ಇರಿಸಲಾಗುವ 'ಅಷ್ಟ ಮಂಗಳ ಪ್ರಶ್ನೆ'ಯಲ್ಲಿ ಪಾಲ್ಗೊಳ್ಳುವಂತೆ ರಾಣಿ ಅಬ್ಬಕ್ಕ ಕಾರ್ಯದಳದ ಸಂಚಾಲಕ ಶ್ರೀಕರ ಕಿಣಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ನಿಧನ ಸುದ್ದಿ

ತಿರುಮಲೆ ಗೋವಿಂದ ಭಟ್

ಪೆರ್ಲ: ಇಲ್ಲಿಗೆ ಸಮೀಪದ ತಿರುಮಲೆ ನಿವಾಸಿ ನಿವೃತ್ತ ಅಧ್ಯಾಪಕ ಹಾಗೂ ಖ್ಯಾತ ಜ್ಯೋತಿಷಿಯೂ ಆಗಿದ್ದ ತಿರುಮಲೆ ಗೋವಿಂದ ಭಟ್ (84) ಅವರು ಬುಧವಾರ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿಯನ್ನು ಅಗಲಿದ್ದಾರೆ. ಪೆರ್ಲ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಅವರು ನಿವೃತ್ತಿಯ ಬಳಿಕ ಜ್ಯೋತಿಷಿಯಾಗಿ ಹೆಸರು ಮಾಡಿದ್ದರು.

ಜಯಂತಿ ಶೆಟ್ಟಿಗಾರ್



ಮುಲ್ಕಿ: ಕೆರೆಕಾಡು ನಿವಾಸಿ ಜಯಂತಿ ಶೆಟ್ಟಿಗಾರ್ (65) ಅವರು ಸ್ವಗೃಹದಲ್ಲಿ ಹೃದಯಾಘಾತದಿಂದ ಮಾ.11ರಂದು ನಿಧನರಾದರು. ಅವರು ಪತಿ, ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಪ್ರಸೂತಿ ತಜ್ಞರಾಗಿ, ಕೃಷಿಕೆಯಾಗಿ, ಕೆರೆಕಾಡಿನ ಶ್ರೀ ದುರ್ಗಾಪರಮೇಶ್ವರಿ ಭಜನಾ ಮಂದಿರ, ಸಾರ್ವಜನಿಕ ಗಣೇಶೋತ್ಸವ ಸಮಿತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಎಮ್. ಸುರೇಂದ್ರ ಆಚಾರ್ಯ



ಮಂಗಳೂರು: ರಥಬೀದಿಯ ಪುರಾತನ ಆಚಾರ್ಯ ಮಠದ ಹಿರಿಯರಾದ ಪಂಡಿತ್ ಎಮ್. ಸುರೇಂದ್ರ ಆಚಾರ್ಯ (76) ವಯೋಸಹಜ ಅಲ್ಪಕಾಲದ ಅಸ್ವಾಸ್ಥ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮಂಗಳೂರು ಪಂಚಾಂಗದ ಕರ್ತೃರಾಗಿದ್ದು ವೀರವೆಂಕಟೇಶ ದೇವಸ್ಥಾನದ ವೈದಿಕ ತಂತ್ರಿಗಳಾಗಿ, ಪುರಾಣ ವಾಚಕರಾಗಿ ಸೇವೆ ಸಲ್ಲಿಸಿದ್ದಾರೆ. ಶಿಕ್ಷಣ ಪ್ರಿಯರೂ, ಕೊಡುಗೈ ದಾನಿಗಳಾಗಿದ್ದ ಅವರು ನಲಂದಾ ಶಾಲೆ, ಶ್ರೀನಿವಾಸ ನಿಗಮಾಗಮ ಶಾಲೆ, ಜಿಎಸ್‌ಬಿ ಯುವಕ ವೃಂದ, ಜಿಎಸ್‌ಬಿ ಸೇವಾ ಸಂಘ, ಮಂಗಳೂರು ಸಾರ್ವಜನಿಕ ಶಾರದಾ ಮಹೋತ್ಸವ ಸಮಿತಿ, ಮುಂತಾದ ಸಂಸ್ಥೆಗಳಲ್ಲಿ, ಸದಸ್ಯ, ಕಾರ್ಯದರ್ಶಿ, ಹಾಗೂ ಅಧ್ಯಕ್ಷ ರಾಗಿ ಹಲವು ದಶಕಗಳಿಂದ ಸೇವೆ ಸಲ್ಲಿಸಿದ್ದಾರೆ. ದಿವಂಗತರು ಪತ್ನಿ, ಆಚಾರ್ಯ ಕುಟುಂಬಸ್ಥರು, ಅಪಾರ ಶಿಷ್ಯರನ್ನು, ಅಭಿಮಾನಿಗಳನ್ನು ಅಗಲಿದ್ದಾರೆ.

ಕೇಶವ ಕಾಮತ್



ಉಡುಪಿ: ಹಿರಿಯಡ್ಕ, ಓಂತಿಬೆಟ್ಟು ಗೋಪಾಲ್ ನಿವಾಸದ ಕೇಶವ ಕಾಮತ್ (88) ಅವರು ಮಂಗಳವಾರ ಬೆಳಗ್ಗೆ ಅಲ್ಪ ಕಾಲದ ಅಸೌಖ್ಯದಿಂದ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಇವರು ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಆಗಿದ್ದರು. ಕೆನರಾ ಬ್ಯಾಂಕ್‌ನ ಉಡುಪಿ, ಏರ್ಮಾಲ್, ಕೆದಿಂಜೆ, ಬಾಳೆಹೊನ್ನೂರು ದೆಹಲಿ ಶಾಖೆ ಗಳಲ್ಲಿ ಸೇವೆ ಸಲ್ಲಿಸಿದ್ದರು.

ಎಸ್.ಆರ್. ಬಂಗೇರ



ಪಡುಬಿದ್ರಿ : ಮೂಲತಃ ಸುಳ್ಯ ತಾಲೂಕು ಮಂಚಿಯವರಾದ ಪ್ರಸ್ತುತ ಉಚ್ಚಿಲ ನಿವಾಸಿಯಾಗಿರುವ ನಿವೃತ್ತ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಎಸ್.ಆರ್. ಬಂಗೇರ (83) ಅವರು ಉಚ್ಚಿಲದ ಸ್ವಗೃಹದಲ್ಲಿ ಮಾ.10 ರಂದು ನಿಧನ ಹೊಂದಿದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರನ್ನು ಅಗಲಿರುತ್ತಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ನಿಷ್ಠಾವಂತ ಕಾರ್ಯಕರ್ತರಾಗಿದ್ದು, ಬಿಜೆಪಿ ಉಚ್ಚಿಲ ಸ್ಥಾನೀಯ ಸಮಿತಿಯ ಅಧ್ಯಕ್ಷರಾಗಿ, ಉಚ್ಚಿಲ ಶ್ರೀ ಮಹಾ ಲಿಂಗೇಶ್ವರ ಮಹಾಗಣಪತಿ ಯಕ್ಷಗಾನ ಮಂಡಳಿಯ ಮಾಜಿ ಅಧ್ಯಕ್ಷರಾಗಿ, ಬೆಳಪು ವ್ಯವಸಾಯ ಸಹಕಾರಿ ಸಂಘದ ನಿರ್ದೇಶಕರಾಗಿ, ಉಚ್ಚಿಲ ಸಾರ್ವಜನಿಕ ಗಣೇಶೋತ್ಸವ ಸಮಿತಿ ಸಹಿತ ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿ ಜನಾನುರಾಗಿಯಾಗಿದ್ದರು.

ಕೆ.ಡಿ ಸುವರ್ಣ



ಮೂಲ್ಕಿ: ಕರ್ನಿರೆ ಪಚ್ಚಂಗೇರಿ ಮನೆಯ ಕೆ ದಯಾನಂದ ಸುವರ್ಣ (86) ಅಲ್ಪಕಾಲದ ಅಸೌಖ್ಯದಿಂದ ಮಾ.11 ಬುಧವಾರ ನಡಿಕುದ್ರು ಸಾನದ ಮನೆಯಲ್ಲಿ ನಿಧನರಾದರು. ಅವರು ಮುಂಬೈಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿಯ ಬಳಿಕ ನಡಿಕುದ್ರುವಿನಲ್ಲಿ ವಾಸಿಸುತ್ತಿದ್ದರು. ಅವರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಲಕ್ಷ್ಮೀ

ಕಾಸರಗೋಡು: ಮೊಗ್ರಾಲ್ ಪುತ್ತೂರು ಬಳ್ಳೂರು ಕಲ್ಲಂಗೈ ಹರಿಜಾಲ್ ಶ್ರೀ ಧೂಮಾವತಿ ತರವಾಡು ಮನೆಯ ಹಿರಿಯ ಸದಸ್ಯೆ, ದಿ.ಕೃಷ್ಣಪ್ಪ ಗಟ್ಟಿ ಮಂಗಳೂರು ಅವರ ಪತ್ನಿ ಲಕ್ಷ್ಮೀ (80) ನಿಧನ ಹೊಂದಿದರು. ಮೃತರು ಪುತ್ರ ರಾಜೇಶ್ ಗಟ್ಟಿ ಅವರನ್ನು ಅಗಲಿದ್ದಾರೆ.

ಶಾರದ ಶೆಟ್ಟಿ



ಉಡುಪಿ: ಶಿವಳ್ಳಿ ಗ್ರಾಮದ ಮಂಚಿ ಹೊಸಮನೆ ಶಾರದ ಶೆಟ್ಟಿ (65) ಮಾ. 8 ರಂದು ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನ ಹೊಂದಿದ್ದಾರೆ. ಮೃತರು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.



ಉಡುಪಿ ಸೋದೆ ಮಠದ ಶ್ರೀ ವಿಶ್ವವಲ್ಲಭತೀರ್ಥ ಸ್ವಾಮೀಜಿ ಬುಧವಾರ ಧರ್ಮಸ್ಥಳಕ್ಕೆ ಆಗಮಿಸಿ ದೇವರ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ಹೆಗ್ಗಡೆಯವರ ನಿವಾಸದಲ್ಲಿ (ಬೀಡಿನಲ್ಲಿ) ಸ್ವಾಮೀಜಿಯವರ ಪಾದಪೂಜೆ ನಡೆಸಲಾಯಿತು. ಡಿ. ವೀರೇಂದ್ರ ಹೆಗ್ಗಡೆ, ಸ್ವಾಮೀಜಿಯವರಿಗೆ ಶಾಲು ಹೊದಿಸಿ ಗೌರವಿಸಿದರು. ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್ ಮತ್ತು ಶ್ರೇಯಸ್ ಕುಮಾರ್ ಉಪಸ್ಥಿತರಿದ್ದರು.

ಮಂಜೇಶ್ವರ ಸಿಪಿಎಂ ಅಭ್ಯರ್ಥಿಯಾಗಿ ಕೆ.ಆರ್.ಜಯಾನಂದ ಆಯ್ಕೆ

ವಿವಿಧೆಡೆ ಡಿವೈಎಫ್‌ಐ ಸಮಿತಿಗಳ ತೀವ್ರ ವಿರೋಧ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಎಡರಂಗ ಒಕ್ಕೂಟದ ಸಿಪಿಎಂ ಅಭ್ಯರ್ಥಿಯಾಗಿ ಕೆ.ಆರ್ .ಜಯಾನಂದ ಅವರನ್ನು ಆರಿಸಲಾಗಿದ್ದು, ಈ ನಿಟ್ಟಿನಲ್ಲಿ ಸಿಪಿಎಂ ಪಕ್ಷದೊಳಗೆ ಭಾರೀ ಭಿನ್ನಮತ ಕಂಡುಬಂದಿದೆ. ಮಾತ್ರವಲ್ಲದೆ ಕೆ.ಆರ್.ಜಯಾನಂದ ಅವರನ್ನು ಅಭ್ಯರ್ಥಿಯನ್ನಾಗಿಸಿದ ಸಿಪಿಎಂ ರಾಜ್ಯ ನಾಯಕತ್ವದ ನಿಲುವಿನ ವಿರುದ್ಧ ಸಿಪಿಎಂನ ಯುವ ಸಂಘಟನೆಯಾದ ಡಿವೈಎಫ್‌ಐ ತೀವ್ರ ವಿರೋಧ ವ್ಯಕ್ತಪಡಿಸಿದೆ.



ಕುಂಬಳೆ, ಉಪ್ಪಳ, ಬಂದ್ಯೋಡು, ಪೈವಳಿಕೆ, ಬಾಯಾರು ಮೊದಲಾದ ವಿಲೇಜ್ ಸಮಿತಿಗಳ ಪ್ರತಿಭಟನೆಯ ಬೆನ್ನಲ್ಲೇ ಇನ್ನಷ್ಟು ಘಟಕಗಳು ತಮ್ಮ ಅಸಮಾಧಾನವನ್ನು ಹೊರಹಾಕಿವೆ. ಉಪ್ಪಳ, ಕುಂಬಳೆ ಮತ್ತು ಬಂದ್ಯೋಡು ಡಿವೈಎಫ್‌ಐ ಸಮಿತಿಗಳು ಕೆ.ಆರ್.ಜಯಾನಂದರ ಆಯ್ಕೆಯನ್ನು ಕಟುಶಬ್ದಗಳಲ್ಲಿ ವಿರೋಧಿಸಿದ್ದು, ಇದರಿಂದಾಗಿ ಐಕ್ಯರಂಗದ ಅಭ್ಯರ್ಥಿಗೆ ಸಹಾಯ ಮಾಡಿದಂತಾಗಲಿದೆ ಎಂದು ಆಕ್ರೋಶ ಹೊರಹಾಕಿವೆ.

ಕಾಸರಗೋಡು ಜಿಲ್ಲಾ ಪಂಚಾಯತ್‌ನ ಮಾಜಿ ಉಪಾಧ್ಯಕ್ಷ ಶಾನವಾಸ್ ಪಾದೂರು ಅವರನ್ನು ಮಂಜೇಶ್ವರದಲ್ಲಿ ಎಡರಂಗದ ಸ್ವತಂತ್ರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ಸಿಪಿಎಂ ಮೊದಲು ನಿರ್ಧರಿಸಿತ್ತು. ಆದರೆ ಇದು ಬಿಜೆಪಿಗೆ ಅನುಕೂಲವಾಗಲಿದೆ ಎಂಬ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಬಳಿಕ ಕೆ.ಆರ್.ಜಯಾನಂದರನ್ನು ಅಭ್ಯರ್ಥಿಯನ್ನಾಗಿ ಮಾಡಲಾಯಿತು. ಆದರೆ ಈ ನಿಲುವು ಸಿಪಿಎಂನ ರಾಜ್ಯ ನಾಯಕತ್ವ ಮತ್ತು ಮುಸ್ಲಿಂಲೀಗ್‌ನ ರಾಜ್ಯ ನಾಯಕತ್ವದ ನಡುವಿನ ಒಳ ಒಪ್ಪಂದದ ಭಾಗವಾಗಿದೆ ಹಾಗೂ ಯಾವುದೋ ವ್ಯವಹಾರ ನಡೆದಿದೆ ಎಂದು ಡಿವೈಎಫ್‌ಐನ ಕೆಲವು ಪದಾಧಿಕಾರಿಗಳು ಆರೋಪಿಸಿದ್ದಾರೆ.

ಮಂಜೇಶ್ವರ ಮಂಡಲದಲ್ಲಿ ಸಿಪಿಎಂ ಪಕ್ಷವನ್ನು ಇಲ್ಲವಾಗಿಸಲು ಪಕ್ಷದ ರಾಜ್ಯ ನಾಯಕತ್ವವೇ ನಿರ್ಧರಿಸಿದಂತಿದೆ. ಇಂತಹ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ಮಾರ್ಕ್ಸಿಸ್ಟ್ ಸಿದ್ಧಾಂತದೊಂದಿಗೆ ಮಂಜೇಶ್ವರದಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಸಿಪಿಎಂ ಮತ್ತು ಡಿವೈಎಫ್‌ಐ ಪದಾಧಿಕಾರಿಗಳು ತಮ್ಮ ಆಕ್ರೋಶಭರಿತ ನೋವನ್ನು ಹೊರಹಾಕಿದ್ದಾರೆ.

ಅದಾನಿ ಫೌಂಡೇಶನ್ ಅನುದಾನ | ರೂ. 25.15 ಲಕ್ಷ ವೆಚ್ಚದ ತೆಂಕ ಗ್ರಾಪಂ ಕಟ್ಟಡದ ಮಹಡಿ ಉದ್ಘಾಟನೆ

ಸಾಮಾಜಿಕ ಅಭಿವೃದ್ಧಿಯ ಚಿತ್ತ: ಕಿಶೋರ್

ಪಡುಬಿದ್ರಿ: ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಎಲ್ಲೂರು ಗ್ರಾಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅದಾನಿ ಸಮೂಹದ ಅದಾನಿ ಪವರ್ ಲಿಮಿಟೆಡ್‌ನ ಸಿಎಸ್‌ಆರ್ ಅಂಗವಾದ ಅದಾನಿ ಫೌಂಡೇಶನ್ ಮುಖಾಂತರ, ರೂ. 25.15ಲಕ್ಷ ಸಿಎಸ್‌ಆರ್ ಅನುದಾನದಲ್ಲಿ ತೆಂಕ ಗ್ರಾಮ ಪಂಚಾಯತ್ ಕಚೇರಿಯ ಹೊಸದಾಗಿ ನಿರ್ಮಿಸಲಾದ ಮೊದಲ ಮಹಡಿಯನ್ನು ಅನಾವರಣಗೊಳಿಸಲಾಯಿತು.

ಈ ಹೊಸ ಕಚೇರಿ ಸ್ಥಳವನ್ನು ಅದಾನಿ ಸಮೂಹದ ಕಾರ್ಯ ನಿರ್ವಾಹಕ ನಿರ್ದೇಶಕ ಹಾಗೂ ಅಧ್ಯಕ್ಷ ಕಿಶೋರ್ ಆಳ್ವ ಅವರು ಪಂಚಾಯತ್‌ನ ನಿಕಟಪೂರ್ವ ಅಧ್ಯಕ್ಷರಾದ ಸುರೇಖಾ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಂಜುನಾಥ ಶೆಟ್ಟಿ, ಪಂಚಾಯತ್ನ ಮಾಜಿ ಸದಸ್ಯರು ಹಾಗೂ ಸಿಬ್ಬಂದಿವರ್ಗದ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಿಶೋರ್ ಆಳ್ವ ಅವರು, 2015ರಲ್ಲಿ ಉಡುಪಿ ಉಷ್ಣವಿದ್ಯುತ್ ಸ್ಥಾವರವನ್ನು ಅದಾನಿ ಸಮೂಹದ ತೆಕ್ಕೆಗೆ ಸೇರಿದ ನಂತರ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿವಿಧ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮಗಳು ಮುಖ್ಯವಾಗಿ ಶಿಕ್ಷಣ, ಆರೋಗ್ಯ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ, ಜೀವನೋಪಾಯ ಉತ್ತೇಜನ ಹಾಗೂ ಗ್ರಾಮೀಣ ಕ್ರೀಡೆಗಳ ಪ್ರೋತ್ಸಾಹ ಕ್ಷೇತ್ರಗಳಲ್ಲಿ ಜಾರಿಗೊಳ್ಳುತ್ತಿವೆ ಎಂದು ಹೇಳಿದರು.



ಸುತ್ತಮುತ್ತಲಿನ ಏಳು ಗ್ರಾಮ ಪಂಚಾಯತ್‌ಗಳಿಗೆ ವಿಶೇಷ ಅನುದಾನವನ್ನು ನೀಡಲಾಗಿದೆ ಎಂದ ಅವರು, ಈ ಯೋಜನೆಯಡಿ ಅದಾನಿ ಫೌಂಡೇಶನ್ ಈಗಾಗಲೇ ಸುಮಾರು ರೂ. 12 ಕೋಟಿ ಮೌಲ್ಯದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ತೆಂಕ ಗ್ರಾಮಪಂಚಾಯತ್‌ನಲ್ಲೇ ಸುಮಾರು ರೂ. 2.10 ಕೋಟಿ ಮೌಲ್ಯದ ಕಾಮಗಾರಿಗಳು ಜಾರಿಗೊಂಡಿವೆ. ಪ್ರತಿವರ್ಷ ಪಂಚಾಯತ್‌ಗಳು ಸಲ್ಲಿಸುವ ಕ್ರಿಯಾಯೋಜನೆ ಆಧಾರದ ಮೇಲೆ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಕ್ರಿಯಾಯೋಜನೆಯ ಭಾಗವಾಗಿ ತೆಂಕ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿನ ಜನಸಂಖ್ಯೆ ಮತ್ತು ಆಡಳಿತಾತ್ಮಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಪಂಚಾಯತ್ ಕಚೇರಿಯನ್ನು ವಿಸ್ತರಿಸಲು ಪ್ರಸ್ತಾವನೆ ಸಲ್ಲಿಸಿತ್ತು. ಈ ಮನವಿಗೆ ಸ್ಪಂದಿಸಿ ಅದಾನಿ ಪವರ್ ಲಿಮಿಟೆಡ್ ಮತ್ತು ಅದಾನಿ ಫೌಂಡೇಶನ್ ಸಹಯೋಗದಲ್ಲಿ ಈಗಿರುವ ಪಂಚಾಯತ್ ಕಟ್ಟಡದ ಮೇಲೆ ಮೊದಲ ಮಹಡಿಯನ್ನು ನಿರ್ಮಿಸಲಾಗಿದೆ.

ಸುಧಾರಿತ ಮೂಲಸೌಕರ್ಯದಿಂದ ಪಂಚಾಯತ್ ಕಚೇರಿ ಗ್ರಾಮಸ್ಥರಿಗೆ ಹೆಚ್ಚು ಸುಲಭವಾಗಿ ಲಭ್ಯವಾಗುವ ಆಡಳಿತಾತ್ಮಕ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಇದರಿಂದ ಅರ್ಜಿಗಳ ತ್ವರಿತ ನಿರ್ವಹಣೆ, ಅಧಿಕಾರಿಗಳ ನಡುವಿನ ಉತ್ತಮ ಸಂಯೋಜನೆ ಹಾಗೂ ಪಾರದರ್ಶಕ ಆಡಳಿತ ವ್ಯವಸ್ಥೆ ಬಲಪಡಲಿದೆ. ಜೊತೆಗೆ ಪಂಚಾಯತ್‌ಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಯೋಜಿಸಿ ಜಾರಿಗೆ ತರಲು ಸಹಾಯವಾಗಲಿದೆ ಎಂದು ಆಳ್ವ ತಿಳಿಸಿದರು.

ತೆಂಕಗ್ರಾಮಪಂಚಾಯತ್‌ನ ನಿಕಟ ಪೂರ್ವ ಅಧ್ಯಕ್ಷ ಸುರೇಖಾ ಅದಾನಿ ಸಮೂಹಕ್ಕೆ ಅಭಿನಂದನೆ ಸಲ್ಲಿಸುತ್ತಾ, ಗ್ರಾಮೀಣ ಅಭಿವೃದ್ಧಿಗೆ ನೀಡುತ್ತಿರುವ ನಿರಂತರ ಬೆಂಬಲಕ್ಕಾಗಿ ಅದಾನಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು. ಅದಾನಿ ಫೌಂಡೇಶನ್ ಕೈಗೊಳ್ಳುತ್ತಿರುವ ಸಿಎಸ್‌ಆರ್ ಕಾರ್ಯಕ್ರಮಗಳು ಗ್ರಾಮೀಣ ಸಮುದಾಯಗಳಿಗೆ ನಿಜವಾದ ಪ್ರಯೋಜನಗಳನ್ನು ತಂದು ಕೊಡುತ್ತಿವೆ ಎಂದು ಅವರು ಸಂತೋಷ ವ್ಯಕ್ತಪಡಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಮಂಜುನಾಥ ಶೆಟ್ಟಿ ಈ ಸಂದರ್ಭದಲ್ಲಿ ಮಾತನಾಡಿ ಸಮಾಜದ ಕಲ್ಯಾಣಕ್ಕಾಗಿ ನೀಡುತ್ತಿರುವ ಮಹತ್ವದ ಕೊಡುಗೆಗಾಗಿ ಅದಾನಿ ಸಮೂಹಕ್ಕೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮಲೆಕ್ಕಾಧಿಕಾರಿ ವಿಜಯ್, ಮಾಜಿ ಉಪಾಧ್ಯಕ್ಷರಾದ ಕಸ್ತೂರಿ ಪ್ರವೀಣ್, ಪಂಚಾಯತ್ ಸದಸ್ಯರಾದ ಕಿಶೋರ್ ಕುಮಾರ್, ಬಾಲಚಂದ್ರ, ಅರುಣಾಕುಮಾರಿ, ಅದಾನಿ ಪವರ್ ಲಿಮಿಟೆಡ್‌ನ ಎಜಿಎಂ ರವಿ ಆರ್. ಜೇರೆ, ಅದಾನಿ ಫೌಂಡೇಶನ್ ಸಿಬ್ಬಂದಿ ಅನುದೀಪ್ ಹಾಗೂ ಪಂಚಾಯತ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

> **ಹೊಸದಾಗಿ ನಿರ್ಮಿಸಲಾದ ಈ ಕಚೇರಿ ಸ್ಥಳವು ಪಂಚಾಯತ್ ಆಡಳಿತದ ಕಾರ್ಯಕ್ಷಮತೆ ಮತ್ತು ಸಾರ್ವಜನಿಕ ಸೇವೆಗಳ ವಿತರಣೆಯನ್ನು ಮತ್ತಷ್ಟು ಸುಧಾರಿಸಲು ಸಹಾಯಕವಾಗಲಿದೆ. ವಿಸ್ತರಿಸಲಾದ ಈ ಸೌಲಭ್ಯವು ಪಂಚಾಯತ್ ಸಭೆಗಳನ್ನು ನಡೆಸಲು, ದಾಖಲೆಗಳನ್ನು ಸಂಗ್ರಹಿಸಲು ಹಾಗೂ ಸಿಬ್ಬಂದಿ ಮತ್ತು ಸಾರ್ವಜನಿಕ ಪ್ರತಿನಿಧಿಗಳಿಗೆ ಅಗತ್ಯವಾದ ಕಾರ್ಯಸ್ಥಳವನ್ನು ಒದಗಿಸುತ್ತದೆ. ಜೊತೆಗೆ ಜನರಿಗೆ ವಿವಿಧ ನಾಗರಿಕ ಸೇವೆಗಳನ್ನು ವೇಗವಾಗಿ ಮತ್ತು ಸುಗಮವಾಗಿ ಒದಗಿಸಲು ಸಹಕಾರಿ ಆಗಲಿದೆ.**
>
> ■ ಕಿಶೋರ್ ಆಳ್ವ

ಸಿ.ಎ.ಇಂಟರ್ ಮೀಡಿಯೆಟ್ ಫಲಿತಾಂಶ | ಸಾಧಕರಿಗೆ ಅಭಿನಂದನೆ

ಆಳ್ವಾಸ್ ವಿದ್ಯಾರ್ಥಿಗಳ ಉತ್ತಮ ಸಾಧನೆ

ಮೂಡುಬಿದಿರೆ: ಜನವರಿಯಲ್ಲಿ ನಡೆದ ಸಿ.ಎ. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ.

ಗ್ರೂಪ್-1 ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಶೇಕಡಾ 13.96 ಫಲಿತಾಂಶ ಬಂದಿದ್ದರೆ, ಆಳ್ವಾಸ್ ಪದವಿ ಕಾಲೇಜಿನ ಒಟ್ಟು 8 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡಾ 44.44 ಫಲಿತಾಂಶ ಬಂದಿದ್ದು, ಗ್ರೂಪ್-2 ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಶೇಕಡಾ 15.54 ಫಲಿತಾಂಶ ಬಂದಿದ್ದರೆ, ಆಳ್ವಾಸ್ ಪದವಿ ಕಾಲೇಜಿನ ಒಟ್ಟು 6 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡಾ 60 ಫಲಿತಾಂಶ ಬಂದಿದ್ದು ಹಾಗೂ ಗ್ರೂಪ್-1 ಮತ್ತು ಗ್ರೂಪ್-2 ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಶೇಕಡಾ 9.39 ಫಲಿತಾಂಶ ಬಂದಿದ್ದರೆ, ಆಳ್ವಾಸ್ ಪದವಿ ಕಾಲೇಜಿನ ಒಟ್ಟು 6 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡಾ 22 ಫಲಿತಾಂಶ ದಾಖಲಿಸಿದ್ದಾರೆ.



ಜನವರಿಯಲ್ಲಿ ನಡೆದ ಸಿ.ಎ. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಬಿ.ಕಾಂ. ವಿದ್ಯಾರ್ಥಿಗಳಾದ ತನ್ವಿ ಬಿ. ಪೂಜಾರಿ, ರೆಹನಾಜ್, ಮೇಘನಾ ಪಿ. ದೇವಾಡಿಗ ಹಾಗೂ ವೈಷ್ಣವಿ ಯು.ಕೆ. ಗ್ರೂಪ್-1 ಮತ್ತು ಗ್ರೂಪ್-2 ವಿಭಾಗದಲ್ಲಿ ಮೊದಲ ಪ್ರಯತ್ನದಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ. ಇಂಟರ್ ಮೀಡಿಯಟ್ ಗ್ರೂಪ್-2 ವಿಭಾಗದಲ್ಲಿ ತನುಶ್ರೀ ಯು, ಪ್ರಜ್ಞಾ ಪೂಜಾರಿ, ಸ್ವಾತಿ, ಪನ್ನಗ ಜೈನ್, ಧನ್ಯಾ ಜಿ. ಶೆಟ್ಟಿ ಹಾಗೂ ಗಿರೀಶ್ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.

ಇಂಟರ್ ಮೀಡಿಯಟ್ ಗ್ರೂಪ್-1 ವಿಭಾಗದಲ್ಲಿ ಶ್ರೀನಿಧಿ, ಅಚಿಂತ್ಯ ಭಾರದ್ವಜ್, ಅಮೃತಾ ಪ್ರವೀಣ್ ಕಟ್ವಾ, ವೃಂದಾ ವಿ. ವಿ. ರೈ, ಅನಿಶಾ, ದಿನೇಶ್ ಎನ್., ಝೂನ್ಸಿ ಎಂ. ಹಾಗೂ ಪೂರ್ಣ ಪೂಜಾರಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿದ್ದಾರೆ.

ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಪ್ರಾಂಶುಪಾಲ ಡಾ.ಕುರಿಯನ್, ಡೀನ್ ಪ್ರಶಾಂತ್ ಎಮ್‌ಡಿ ಹಾಗೂ ಸಂಯೋಜಕಿ ಅಪರ್ಣಾ ಅಭಿನಂದಿಸಿದ್ದಾರೆ.

ಪುಣೆಯಿಂದ ಹೊರಟ ಚಿನ್ಮಯ ಅಮೃತ ಯಾತ್ರೆ

ತಲಪಾಡಿಯಲ್ಲಿ ಪೂರ್ಣಕುಂಭ ಸ್ವಾಗತ

ಕಾಸರಗೋಡು: ಚಿನ್ಮಯ ಮಹೋತ್ಸವದ ಅಂಗವಾಗಿ ಕಳೆದ ಡಿಸೆಂಬರ್ 31ರಂದು ಪುಣೆಯಿಂದ ಚಾಲನೆ ಪಡೆದು ಮಹಾರಾಷ್ಟ್ರ, ಗುಜರಾತ್, ಗೋವಾ, ಕರ್ನಾಟಕ ಮಾರ್ಗವಾಗಿ ಮಂಗಳವಾರ ಕೇರಳದ ತಲಪಾಡಿಗೆ ಆಗಮಿಸಿದ ಚಿನ್ಮಯ ರಥಯಾತ್ರೆಗೆ ಗಡಿಪ್ರದೇಶ ತಲಪಾಡಿಯಲ್ಲಿ ಭವ್ಯ ಸ್ವಾಗತ ನೀಡಲಾಯಿತು.

ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ವಾದ್ಯಘೋಷ, ಮುತ್ತುಕೊಡೆಗಳ ಪೂರ್ಣಕುಂಭ ಸ್ವಾಗತದೊಂದಿಗೆ ಜರಗಿದ ಕಾರ್ಯಕ್ರಮದಲ್ಲಿ ಸ್ವಸಹಾಯ ಸಂಘ, ಸ್ತ್ರೀ ಶಕ್ತಿ ಗುಂಪಿನ ಮಹಿಳೆಯರು, ಹಿಂದೂ ಮುಖಂಡರು ಭಾಗವಹಿಸಿದ್ದರು.



ನಂತರ ಸ್ಥಳೀಯ ವಿಶ್ವಾಸ್ ಸಭಾಂಗಣದಲ್ಲಿ ಜರಗಿದ ಸಭಾ ಕಾರ್ಯಕ್ರಮದಲ್ಲಿ ಚಿನ್ಮಯ ಮಿಷನ್ ಕೇರಳ ಮುಖ್ಯಸ್ಥ ಶ್ರೀ ವಿವಿಕ್ತಾನಂದ ಸರಸ್ವತೀ ಸ್ವಾಮೀಜಿಯವರು ಮಾತನಾಡಿ, 1951ರಲ್ಲಿ ಚಿನ್ಮಯಾನಂದ ಸರಸ್ವತೀ ಸ್ವಾಮೀಜಿ ಅವರಿಂದ ಮಹಾರಾಷ್ಟ್ರದಲ್ಲಿ ಸ್ಥಾಪನೆಯಾದ ಚಿನ್ಮಯ ಮಿಷನ್ 75 ವರ್ಷ ತುಂಬುವ ಸಂದರ್ಭದಲ್ಲಿ ಆಧ್ಯಾತ್ಮಿಕ ಸಂದೇಶಗಳೊಂದಿಗೆ ಚಿನ್ಮಯ ಅಮೃತ ರಥಯಾತ್ರೆ ದೇಶ ಪರ್ಯಟನೆ ನಡೆಸುತ್ತಿದೆ. ಒಟ್ಟು 295 ದಿನಗಳಲ್ಲಿ 15,000 ಕಿಲೋ ಮೀಟರ್ ಯಾತ್ರೆ ಮುಗಿಸಿ ಅಮೃತ ರಥಯಾತ್ರೆಯು ಕೇರಳಕ್ಕೆ ಆಗಮಿಸಿದೆ ಎಂದರು.

ರಾಷ್ಟ್ರಪತಿಗೆ ಮನವಿ

ಗೋಸಂರಕ್ಷಣೆಗೆ ಆಗ್ರಹಿಸಿ ಎಪ್ರಿಲ್ 27ರಂದು ಎಲ್ಲಾ ತಾಲೂಕು ಕಚೇರಿಗಳಿಗೆ ತೆರಳಿ ತಹಶೀಲ್ದಾರ್‌ರ ಮೂಲಕ ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲರಿಗೆ, ಮುಖ್ಯಮಂತ್ರಿಯವರಿಗೆ ಮನವಿ ಕಳುಹಿಸುವ ಆಂದೋಲನ ನಡೆಯಲಿದೆ ಎಂದು ಕೊಂಡೆವೂರು ಶ್ರೀಗಳು ಹೇಳಿದರು.

ಯಾತ್ರೆ ನೇತೃತ್ವ ವಹಿಸಿರುವ ಅನುಕೂಲಾನಂದ ಸ್ವಾಮೀಜಿ ಪ್ರಧಾನ ಭಾಷಣ ಮಾಡಿದರು.

ಸಮಾರಂಭದಲ್ಲಿ ಸ್ವಾಮಿ ವಿವಿಕ್ತಾನಂದ ಸರಸ್ವತೀ (ನೀಲೇಶ್ವರ), ಸ್ವಾಮೀ ತತ್ವಾನಂದ ಸರಸ್ವತೀ (ಪೊಯಿನಾಚಿ), ಸುಧೀರ್ ಚೈತನ್ಯ, ತಾರಿಣಿ ಚೈತನ್ಯ, ಸ್ಥಳೀಯ ಉದ್ಯಮಿ ಗೋಪಾಲ ಶೆಟ್ಟಿ ಅರಿಬೈಲು, ಮುಖಂಡರಾದ ಕಮಾಂಡರ್ ವಿಜಯಕುಮಾರ್, ಹರೀಶ್ಚಂದ್ರ ಮಂಜೇಶ್ವರ, ಪದ್ಮನಾಭ ಕಡಪ್ಪರ ಮೊದಲಾದವರು ಉಪಸ್ಥಿತರಿದ್ದರು. ಕೆ.ಬಾಲಚಂದ್ರನ್ ಸ್ವಾಗತಿಸಿ, ಬ್ರಹ್ಮಚಾರಿಣಿ ದಿಶಾಚೈತನ್ಯ ವಂದಿಸಿದರು.

ಕಲಾಪದ ಶೂನ್ಯ ವೇಳೆಯಲ್ಲಿ ಡಿಜಿಟಲ್ ಅರೆಸ್ಟ್, ಸೈಬರ್ ವಂಚನೆ ಪ್ರಕರಣಗಳ ಕರಾಳ ಮುಖ ಬಿಚ್ಚಿಟ್ಟ ಕಿಶೋರ್ ಕುಮಾರ್

ಸೈಬರ್ ಠಾಣೆಗಳಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜನೆಗೆ ಆಗ್ರಹ

ಪುತ್ತೂರು: ವಿಧಾನ ಪರಿಷತ್ ಕಲಾಪದ ಶೂನ್ಯ ವೇಳೆಯಲ್ಲಿ 'ಡಿಜಿಟಲ್ ಅರೆಸ್ಟ್' ಹಾಗೂ ಸೈಬರ್ ವಂಚನೆ ಪ್ರಕರಣಗಳ ಕರಾಳ ಮುಖವನ್ನು ಬಿಚ್ಚಿಟ್ಟ ಉಡುಪಿ-ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ರಾಜ್ಯದಲ್ಲಿ ನಡೆಯುತ್ತಿರುವ ಸೈಬರ್ ಸುಲಿಗೆಯನ್ನು ತಡೆಯಲು ಸರ್ಕಾರ ತಕ್ಷಣವೇ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಸೈಬರ್ ಠಾಣೆಗಳಿಗೆ ಹೆಚ್ಚಿನ ಸಿಬ್ಬಂದಿ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಡಿಜಿಟಲ್ ಅರೆಸ್ಟ್ ಬೆದರಿಕೆ

ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಅಮಾಯಕ ವೃದ್ಧರನ್ನು ಹಾಗೂ ಸಾರ್ವಜನಿಕರನ್ನು ಹೇಗೆ ಬೆದರಿಸಿ ಹಣ ದೋಚಲಾಗುತ್ತಿದೆ ಎಂದು ಪತ್ರಿಕೆಗಳ ಪ್ರಕಟವಾಗಿರುವ ವರದಿಗಳನ್ನು ಸದನದ ಗಮನಕ್ಕೆ ತಂದರು. ವೈಟ್‌ಫೀಲ್ಡ್‌ನ ಅಪಾರ್ಟ್‌ಮೆಂಟ್‌ವೊಂದರ ವೃದ್ಧರೊಬ್ಬರಿಗೆ ಕರೆ ಮಾಡಿದ ವಂಚಕರು, 'ಮುಂಬೈ ಪೊಲೀಸ್' ಎಂದು ಹೆದರಿಸಿ, ಅವರ ಖಾತೆಯಿಂದ ಉಗ್ರಗಾಮಿಗಳಿಗೆ ಹಣ ಸಂದಾಯವಾಗುತ್ತಿದೆ ಎಂದು ಬೆದರಿಸಿ ಆನ್‌ಲೈನ್ ಮೂಲಕ ಬರೋಬ್ಬರಿ ರೂ.16.60 ಲಕ್ಷ ಮೊತ್ತವನ್ನು ಸುಲಿಗೆ ಮಾಡಿರುವ ಆಘಾತಕಾರಿ ಘಟನೆಯನ್ನು ಪ್ರಸ್ತಾಪಿಸಿದರು.



ಅಂಕಿ ಅಂಶಗಳು

ಗೃಹ ಇಲಾಖೆಯ ಅಂಕಿ-ಅಂಶಗಳನ್ನೇ ಮುಂದಿಟ್ಟು ಸರ್ಕಾರದ ಕಣ್ಣು ತೆರೆಸುವ ಪ್ರಯತ್ನ ಮಾಡಿದ ಕಿಶೋರ್ ಕುಮಾರ್, 2023, 2024 ಮತ್ತು 2025ರ ಅವಧಿಯಲ್ಲಿ ರಾಜ್ಯದಲ್ಲಿ ನಡೆದಿರುವ ಸೈಬರ್ ವಂಚನೆಯ ಬೃಹತ್ ಜಾಲದ ಮಾಹಿತಿಯನ್ನು ಹಂಚಿಕೊಂಡರು. ರಾಜ್ಯದಲ್ಲಿ ಈ 3 ವರ್ಷಗಳಲ್ಲಿ ಒಟ್ಟು 59,626 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಬರೋಬ್ಬರಿ ರೂ.8,170 ಕೋಟಿ ವಂಚನೆಯಾಗಿದೆ. ಇದರಲ್ಲಿ ಈವರೆಗೂ 48,173 ಪ್ರಕರಣಗಳು ಪತ್ತೆಯಾಗದೆ ಉಳಿದಿದ್ದು, ರೂ.5,338 ಕೋಟಿ ಮೊತ್ತವನ್ನು ವಶಪಡಿಸಿಕೊಳ್ಳಲಾಗಿಲ್ಲ ಎಂಬ ಆತಂಕಕಾರಿ ವಿಚಾರವನ್ನು ಹೊರ ಹಾಕಿದರು. ಇನ್ನು ಕೇವಲ 'ಡಿಜಿಟಲ್ ಅರೆಸ್ಟ್' ಪ್ರಕರಣಗಳನ್ನೇ ಗಮನಿಸಿದರೆ, ಒಟ್ಟು 1,655 ಪ್ರಕರಣಗಳು ದಾಖಲಾಗಿದ್ದು, ರೂ.372.77 ಕೋಟಿ ವಂಚನೆಯಾಗಿದೆ. ಇದರಲ್ಲಿಯೂ 1,372 ಪ್ರಕರಣಗಳು ಪತ್ತೆಯಾಗದೆ ರೂ.339.14 ಕೋಟಿ ಮೊತ್ತವನ್ನು ಪತ್ತೆ ಹಚ್ಚಲು ಸಾಧ್ಯವಾಗಿಲ್ಲ ಎಂಬುದನ್ನು ಕಳವಳದಿಂದ ಸದನದ ಗಮನಕ್ಕೆ ತಂದರು.

> **ಪತ್ತೆಯಾಗದಿರುವುದು ಆತಂಕಕಾರಿ**
>
> **ಇಷ್ಟೊಂದು ದೊಡ್ಡ ಮಟ್ಟದಲ್ಲಿ ಆರ್ಥಿಕ ವಂಚನೆ ನಡೆಯುತ್ತಿದ್ದರೂ ಬಹುಪಾಲು ಪ್ರಕರಣಗಳು ಪತ್ತೆಯಾಗದಿರುವುದು ಅತ್ಯಂತ ಆತಂಕಕಾರಿ. ರಾಜ್ಯದಾದ್ಯಂತ ನಡೆಯುತ್ತಿರುವ ಇಂತಹ ಆರ್ಥಿಕ ವಂಚನೆಯ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಸೈಬರ್ ಅಪರಾಧ ಠಾಣೆಗಳಲ್ಲಿ ಐಟಿ ಕಾಯ್ದೆ-2000 ಹಾಗೂ ಐಪಿಸಿ/ಬಿಎನ್ಎಸ್ ಅಡಿಯಲ್ಲಿ ದಾಖಲಾಗುವ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಸೈಬರ್ ಠಾಣೆಗಳಿಗೆ ಅಗತ್ಯವಿರುವ ಸಿಬ್ಬಂದಿಯನ್ನು ತಕ್ಷಣವೇ ಒದಗಿಸಬೇಕು. ಆ ಮೂಲಕ ಆನ್‌ಲೈನ್ ವಂಚನೆಗೊಳಗಾದ ಸಂತ್ರಸ್ತರಿಗೆ ಆದಷ್ಟು ಶೀಘ್ರದಲ್ಲಿ ನ್ಯಾಯ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದರು.**

ಕಿರು ಸುದ್ದಿ

ಟಿ20 ರ್‍ಯಾಂಕಿಂಗ್: 18 ಸ್ಥಾನ ಜಿಗಿದ ಸ್ಯಾಮ್ಸನ್



• **ದುಬೈ:** ಪುರುಷರ ಟಿ20 ಕ್ರಿಕೆಟ್ ರ್‍ಯಾಂಕಿಂಗ್ ಅನ್ನು ಬುಧವಾರ ಐಸಿಸಿ ಪ್ರಕಟಿಸಿದ್ದು, ಸತತ 3 ಅರ್ಧಶತಕಗಳೊಂದಿಗೆ ಪಂದ್ಯಾವಳಿಯಲ್ಲಿ 321 ರನ್ ಕಲೆಹಾಕುವ ಮೂಲಕ ಟಿ20 ವಿಶ್ವಕಪ್ ಗೆಲುವಿನ ರೂವಾರಿಯಾಗಿದ್ದ ಸಂಜು ಸ್ಯಾಮ್ಸನ್ 18 ಸ್ಥಾನಗಳ ಜಿಗಿತ ಕಂಡಿದ್ದಾರೆ. 40ನೇ ಸ್ಥಾನದಲ್ಲಿದ್ದ ಸ್ಯಾಮ್ಸನ್ ಹೊಸ ರ್‍ಯಾಂಕಿಂಗ್‌ನಲ್ಲಿ 22ನೇ ಸ್ಥಾನಕ್ಕೇರಿದ್ದಾರೆ. ಉಳಿದಂತೆ ಭಾರತದ ಟಿ20 ವಿಶ್ವಕಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇಶಾನ್ ಕಿಶನ್ ಹಾಗೂ ಜಸ್‌ಪ್ರೀತ್ ಬೂಮ್ರಾ ಅವರೂ ಜಿಗಿತ ಕಂಡಿದ್ದಾರೆ. 317 ರನ್ ಕಲೆಹಾಕಿದ್ದ ಕಿಶನ್ ಎರಡು ಸ್ಥಾನಗಳ ಜಿಗಿತ ಕಂಡಿದ್ದು, ದ್ವಿತೀಯ ಸ್ಥಾನ ತಲುಪಿದ್ದಾರೆ. ಎಡಗೈ ಆರಂಭಿಕ ಅಭಿಷೇಕ್ ಶರ್ಮಾ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. 14 ವಿಕೆಟ್ ಕಬಳಿಸಿದ್ದ ವೇಗಿ ಬೂಮ್ರಾ ಒಂದು ಸ್ಥಾನ ಮೇಲಕ್ಕೇರಿ ಬೌಲಿಂಗ್ ರ್‍ಯಾಂಕಿಂಗ್‌ನಲ್ಲಿ 6ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಬೌಲಿಂಗ್‌ನಲ್ಲಿ ವರುಣ್ ಚಕ್ರವರ್ತಿ ಅಗ್ರಸ್ಥಾನ ಕಳೆದುಕೊಂಡಿದ್ದಾರೆ.

ರ್‍ಯಾಂಕಿಂಗ್: ಅಗ್ರಸ್ಥಾನ ಕಾಯ್ದುಕೊಂಡ ಸ್ಮೃತಿ

• **ದುಬೈ:** ಭಾರತೀಯ ಬ್ಯಾಟರ್ ಸ್ಮೃತಿ ಮಂಧನಾ ಮಹಿಳಾ ಏಕದಿನ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದ್ದಾರೆ. ಅಗ್ರ-10ರಲ್ಲಿ ಮಂಧನಾಗೆ ಅವರ ನಾಯಕಿ ಹರ್ಮನ್‌ಪ್ರೀತ್ ಕೌರ್ ಸಾಥ್ ನೀಡಿದ್ದು, 8ನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ ಎಲ್ಲಾ ಮೂರು ಪಂದ್ಯಗಳನ್ನು ಸೋತರೂ ಮಂಧನಾ ಅಗ್ರಸ್ಥಾನ ಕಾಯ್ದುಕೊಂಡಿದ್ದು, ಈ ಹಿನ್ನೆಲೆ ಜೆಮಿಮಾ ರೋಡ್ರಿಗ್ಸ್ 12ನೇ ಸ್ಥಾನಕ್ಕೆ ಕುಸಿದಿದ್ದಾರೆ. ಅದ್ಭುತ ಎಡಗೈ ಬ್ಯಾಟರ್ ಮಂಧನಾ 790 ಅಂಕಗಳನ್ನು ಹೊಂದಿದ್ದು, ದಕ್ಷಿಣ ಆಫ್ರಿಕಾದ ಲೌರಾ ವೋಲ್ವಾರ್ಡ್ಟ್ ಮತ್ತು ಆಸ್ರೇಲಿಯಾದ ಬೆತ್ ಮೂನಿ ಕ್ರಮವಾಗಿ ನಂತರದ ಸ್ಥಾನಗಳಲ್ಲಿದ್ದಾರೆ.



ಇತ್ತೀಚೆಗಿನ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ತಮ್ಮ ಸ್ಟೈಲಿಶ್ ಹೊಡೆತಗಳು ಹಾಗೂ ಪವರ್‌ಪ್ಲೇ ಓವರ್‌ಗಳಲ್ಲಿನ ಆಕ್ರಮಣಕಾರಿ ಆಟದೊಂದಿಗೆ ಭಾರತ ತಂಡಕ್ಕೆ ಉತ್ತಮ ಕೊಡುಗೆ ನೀಡಿದ್ದ ಉಪನಾಯಕಿ ಮಂಧನಾ ನಂಬಿಕಸ್ಥ ಬ್ಯಾಟರ್ ಆಗಿದ್ದಾರೆ. ತಂಡದ ಮಧ್ಯಮ ಕ್ರಮಾಂಕದಲ್ಲಿ ಸ್ಥಿರ ಪ್ರದರ್ಶನ ನೀಡುತ್ತಿರುವ ನಾಯಕಿ ಹರ್ಮನ್‌ಪ್ರೀತ್ 8ನೇ ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

ಕಿವೀಸ್ ನಾಯಕಿ ಕೆರ್ ಬಡ್ತಿ: ಜಿಂಬಾಬ್ವೆ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ನ್ಯೂಜಿಲೆಂಡ್ ಈಗಾಗಲೇ 2–0 ಮುನ್ನಡೆ ಪಡೆದಿದ್ದು, ಹೊಸ ನಾಯಕಿ ಅಮೇಲಿಯ ಕೆರ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಮುನ್ನಡೆ ಪಡೆದಿದ್ದಾರೆ. ಸರಣಿಯ ಮೊದಲ ಪಂದ್ಯದಲಿ ಕೆರ್ ನಾಲ್ಕು ವಿಕೆಟ್ ಪಡೆದಿದ್ದರು. ಎರಡನೇ ಪಂದ್ಯದಲ್ಲಿ 7 ವಿಕೆಟ್ ಕಬಳಿಸಿದ್ದರು. ಮಹಿಳಾ ಏಕದಿನಗಳಲ್ಲಿ 7 ಅಥವಾ ಅದಕ್ಕಿಂತ ಹೆಚ್ಚು ವಿಕೆಟ್ ಕಬಳಿಸಿದ ಸಾಧನೆಗೈದ 7ನೇ ಆಟಗಾರ್ತಿ ಎಂಬ ದಾಖಲೆ ಬರೆದರು. ಬೌಲಿಂಗ್ ರ್‍ಯಾಂಕಿಂಗ್‌ನಲ್ಲಿ ಕೆರ್ 5ನೇ ಸ್ಥಾನ ಪಡೆದಿದ್ದು, ಒಟ್ಟಾರೆ 11ನೇ ಸ್ಥಾನಕ್ಕೇರಿದ್ದಾರೆ. 25 ವರ್ಷದ ಪ್ರತಿಭಾವಂತೆ ಆಲ್‌ರೌಂಡರ್ ಪಟ್ಟಿಯಲ್ಲಿ ಒಂದು ಸ್ಥಾನ ಮೇಲಕ್ಕೇರಿ 5ನೇ ಸ್ಥಾನಕ್ಕೇರಿದ್ದಾರೆ.


ಸ್ವಿಸ್ ಓಪನ್ ಕ್ವಾರ್ಟರ್‌ಗೆ ಭಾರತೀಯ ಪುರುಷರು

• **ಬೆಸೆಲ್:** ಸ್ವಿಜರ್‌ಲೆಂಡ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರ ವಿಶ್ವ ನಂ.4 ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ನಾಗರದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕೆಳ ಶ್ರೇಯಾಂಕದ ಎಂಗ್ ಕೊಹ್ ಮತ್ತು ಜುನುಸುಕೆ ಕುಬೊ ಅವರ ಸಿಂಗಾಪುರದ ಜೋಡಿಯನ್ನು 21–19, 21–19 ನೇರ ಗೇಮ್‌ಗಳಿಂದ ಸೋಲಿಸಿದ ಭಾರತದ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ. ಇನ್ನೊಂದೆಡೆ ಭಾರತದ ಪುರುಷರ ಡಬಲ್ಸ್ ಜೋಡಿ ಹರಿಹರನ್ ಅಂಸಕರುಣನ್ ಮತ್ತು ಎಂ.ಆರ್. ಅರ್ಜುನ್ ಅವರೂ ನೇರ ಗೇಮ್‌ಗಳ ಗೆಲುವಿನಿಂದ ಶುಭಾರಂಭ ಮಾಡಿದ್ದು, ದ್ವಿತೀಯ ಸುತ್ತನ್ನು ಪ್ರವೇಶಿಸಿದ್ದಾರೆ. ಚೆನ್ ಮತ್ತು ಲಿನ್ ಯು ಅವರ ಚೈನೀಸ್ ತೈಪೆ ಜೋಡಿಯನ್ನು 21–16, 24–22 ನೇರ ಗೇಮ್‌ಗಳಿಂದ ಭಾರತೀಯರು ಮಣಿಸಿದರು.

ಮಾ.28ರಂದು ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಬೆಂಗಳೂರಿಗೆ ಸನ್‌ರೈಸರ್ಸ್ ಸವಾಲು

ಈಗ ಅಧಿಕೃತ: ಬೆಂಗಳೂರಲ್ಲೂ ಐಪಿಎಲ್

• **ಮುಂಬೈ:** 2026ನೇ ಸಾಲಿನ ಐಪಿಎಲ್ ಉದ್ಘಾಟನಾ ಪಂದ್ಯವು ಮಾ.28ರಂದು ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿಯೇ ನಡೆಯಲಿದೆ ಎಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬುಧವಾರ ದೃಢೀಕರಿಸಿದೆ. ಐಪಿಎಲ್ 19ನೇ ಆವೃತ್ತಿಯ ಮೊದಲ 20 ದಿನಗಳ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದ್ದು, ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡಗಳು ಎದುರಾಗಲಿವೆ. ಈ ಅವಧಿಯಲ್ಲಿ ಮೂರು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವುದರಿಂದ, ಚುನಾವಣಾ ದಿನಾಂಕಗಳು ಪ್ರಕಟವಾದ ನಂತರ ಮಾತ್ರ ಟೂರ್ನಿಯ ಸಂಪೂರ್ಣ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಒಟ್ಟು 20 ಪಂದ್ಯಗಳು 10 ಕ್ರೀಡಾಂಗಣಗಳಲ್ಲಿ ನಡೆಯಲಿವೆ. ಬೆಂಗಳೂರು, ಮುಂಬೈ, ಗುವಾಹಟಿ, ಹೊಸ ಚಂಡೀಗಢ, ಲಖನೌ, ಕೋಲ್ಕತ, ಚೆನ್ನೈ, ದಿಲ್ಲಿ, ಅಹಮದಾಬಾದ್ ಮತ್ತು ಹೈದರಾಬಾದ್‌ನಲ್ಲಿ ಮೊದಲ 20 ದಿನ ಪಂದ್ಯಗಳನ್ನು ಆಯೋಜಿಸಲಾಗುತ್ತದೆ. ಮೊದಲ 20 ದಿನಗಳ ವೇಳಾಪಟ್ಟಿಯಲ್ಲಿ ನಾಲ್ಕು ಡಬಲ್–ಹೆಡರ್ ಪಂದ್ಯಗಳು ನಡೆಯಲಿವೆ. ಮಧ್ಯಾಹ್ನದ ಪಂದ್ಯಗಳು ಭಾರತೀಯ ಕಾಲಮಾನ 3:30 (ಐಎಸ್‌ಟಿ) ಮತ್ತು ರಾತ್ರಿಯ ಪಂದ್ಯಗಳು 7:30ರಿಂದ ಆರಂಭವಾಗಲಿವೆ. ಈ ಆವೃತ್ತಿಯ ಮೊದಲ ಡಬಲ್–ಹೆಡರ್ ಪಂದ್ಯವು ಏ.4ರಂದು ನಡೆಯಲಿದೆ. ಆ ದಿನ ದಿಲ್ಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ದಿಲ್ಲಿ ಕ್ಯಾಪಿಟಲ್ಸ್ ಮತ್ತು ಮುಂಬೈ ಆಡಲಿದ್ದು, ರಾತ್ರಿ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ತವರಿನ ಗುಜರಾತ್ ಟೈಟಾನ್ಸ್ ಮತ್ತು ರಾಜಸ್ಥಾನ್ ಮುಖಾಮುಖಿಯಾಗಲಿವೆ. ರಾಜಸ್ಥಾನ್ ರಾಯಲ್ಸ್ ತಮ್ಮ ಹೋಮ್ ಅಭಿಯಾನವನ್ನು ಗುವಾಹಟಿಯಲ್ಲಿ ಆರಂಭಿಸಲಿದ್ದು, ಅಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳಿಗೆ ಆತಿಥ್ಯ ನೀಡಲಿದೆ. ಇನ್ನೊಂದೆಡೆ ಪಂಜಾಬ್ ಕಿಂಗ್ಸ್ ತಮ್ಮ ಆರಂಭಿಕ ತವರಿನ ಪಂದ್ಯಗಳನ್ನು ಪಿಸಿಎ ಕ್ರೀಡಾಂಗಣದಲ್ಲಿ ಆಡಲಿದೆ.



ಹಾಲಿ ಚಾಂಪಿಯನ್ ಆರ್‌ಸಿಬಿ ಅಭಿಮಾನಿಗಳಿಗೆ ಶುಭ ಸುದ್ದಿ ನೀಡಿದ ಬಿಸಿಸಿಐ


ಆರ್‌ಸಿಬಿಗೆ ತವರಿನಲ್ಲಿ 5, ರಾಯ್ಪುರದಲ್ಲಿ 2 ಪಂದ್ಯ

ಈ ಆವೃತ್ತಿಯಲ್ಲಿ ಆರ್‌ಸಿಬಿ ಬೆಂಗಳೂರಿನಲ್ಲಿ ಐದು ತವರಿನ ಪಂದ್ಯಗಳನ್ನು ಹಾಗೂ ರಾಯ್ಪುರದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ. ಪಂಜಾಬ್ ಕಿಂಗ್ಸ್ ನ್ಯೂ ಚಂಡೀಗಢ ಮೈದಾನದಲ್ಲಿ ನಾಲ್ಕು ತವರಿನ ಪಂದ್ಯ ಮತ್ತು ಧರ್ಮಶಾಲಾದಲ್ಲಿ ಮೂರು ಪಂದ್ಯ ಆಡಲಿದೆ. ರಾಜಸ್ಥಾನ್ ಗುವಾಹಟಿಯಲ್ಲಿ ಮೂರು ತವರಿನ ಪಂದ್ಯಗಳನ್ನು ಮತ್ತು ಜೈಪುರದಲ್ಲಿ ನಾಲ್ಕು ತವರಿನ ಪಂದ್ಯಗಳನ್ನು ಆಡಲಿದೆ.

ಮಾ.13ರಂದು ಚಿನ್ನಸ್ವಾಮಿ ಮೈದಾನ ಪರಿಶೀಲನೆ

ಬೆಂಗಳೂರಿನಲ್ಲಿ ನಿಗದಿಪಡಿಸಿರುವ ಪಂದ್ಯಗಳು ಕರ್ನಾಟಕ ಸರ್ಕಾರ ರಚಿಸಿರುವ ತಜ್ಞರ ಸಮಿತಿಯ ಅನುಮೋದನೆಗೆ ಒಳಪಟ್ಟಿರುತ್ತವೆ. ಈ ಸಮಿತಿ ಮಾ.13ರಂದು ಎಂ.ಚಿನ್ನಸ್ವಾಮಿ ಕ್ರೀಡಾಂಗಣವನ್ನು ಪರಿಶೀಲಿಸಿ ಸಭೆ ನಡೆಸಲಿದೆ. ಈ ಸಂದರ್ಭ ಪಂದ್ಯ ನಡೆಯುವ ದಿನದ ವ್ಯವಸ್ಥೆಗಳ ಸಂಪೂರ್ಣ ಅಣಕು ಪ್ರದರ್ಶನವನ್ನು ನಡೆಸಿ, ಐಪಿಎಲ್ ಪಂದ್ಯಗಳನ್ನು ಆಯೋಜಿಸಲು ಕ್ರೀಡಾಂಗಣದ ಸಿದ್ಧತೆಯ ಮೌಲ್ಯಮಾಪನ ಮಾಡಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

ಮೊದಲ 20 ದಿನಗಳ ವೇಳಾಪಟ್ಟಿ



ಉದ್ಘಾಟನಾ ಪಂದ್ಯ: ಆರ್‌ಸಿಬಿ-ಎಸ್‌ಆರ್‌ಎಚ್, ಮಾ.28, ಶನಿವಾರ, ಬೆಂಗಳೂರು.

- ಮುಂಬೈ-ಕೆಕೆಆರ್, ಮಾ.29, ಭಾನುವಾರ, ಮುಂಬೈ.
- ಆರ್‌ಆರ್-ಸಿಎಸ್‌ಕೆ, ಮಾ.30, ಸೋಮವಾರ, ಗುವಾಹಟಿ.
- ಪಂಜಾಬ್-ಜಿಟಿ, ಮಾ.31, ಮಂಗಳವಾರ, ಮುಲ್ಲನ್‌ಪುರ್.
- ಲಖನೌ-ದಿಲ್ಲಿ, ಏ.1, ಬುಧವಾರ, ಲಖನೌ.
- ಕೆಕೆಆರ್-ಎಸ್‌ಆರ್‌ಎಚ್, ಏ.2, ಗುರುವಾರ, ಕೋಲ್ಕತ.
- ಸಿಎಸ್‌ಕೆ-ಪಂಜಾಬ್, ಏ.3, ಶುಕ್ರವಾರ, ಚೆನ್ನೈ.
- ದಿಲ್ಲಿ-ಮುಂಬೈ, ಏ.4, ಶನಿವಾರ, ದಿಲ್ಲಿ.
- ಜಿಟಿ-ಆರ್‌ಆರ್, ಏ.4, ಶನಿವಾರ, ಅಹಮದಾಬಾದ್.
- ಎಸ್‌ಆರ್‌ಎಚ್-ಲಖನೌ, ಏ.5, ಭಾನುವಾರ, ಹೈದರಾಬಾದ್.
- ಆರ್‌ಸಿಬಿ-ಸಿಎಸ್‌ಕೆ, ಏ.5, ಭಾನುವಾರ, ಬೆಂಗಳೂರು.
- ಕೆಕೆಆರ್-ಪಂಜಾಬ್, ಏ.6, ಸೋಮವಾರ, ಕೋಲ್ಕತ.
- ಆರ್‌ಆರ್-ಮುಂಬೈ, ಏ.7, ಮಂಗಳವಾರ, ಗುವಾಹಟಿ.
- ದಿಲ್ಲಿ-ಜಿಟಿ, ಏ.8, ಬುಧವಾರ, ದಿಲ್ಲಿ.
- ಕೆಕೆಆರ್-ಲಖನೌ, ಏ.9, ಗುರುವಾರ, ಕೋಲ್ಕತ.
- ಆರ್‌ಆರ್-ಆರ್‌ಸಿಬಿ, ಏ.10, ಶುಕ್ರವಾರ, ಗುವಾಹಟಿ.
- ಪಂಜಾಬ್-ಎಸ್‌ಆರ್‌ಎಚ್, ಏ.11, ಶನಿವಾರ, ಮುಲ್ಲನ್‌ಪುರ್.
- ಸಿಎಸ್‌ಕೆ-ದಿಲ್ಲಿ, ಏ.11, ಶನಿವಾರ, ಚೆನ್ನೈ.
- ಲಖನೌ-ಜಿಟಿ, ಏ.12, ಭಾನುವಾರ, ಲಖನೌ.
- ಮುಂಬೈ-ಆರ್‌ಸಿಬಿ, ಏ.12, ಭಾನುವಾರ, ಮುಂಬೈ.



ಮಧ್ಯಾಹ್ನದ ಪಂದ್ಯಗಳು ಭಾರತೀಯ ಕಾಲಮಾನ 3:30 (ಐಎಸ್‌ಟಿ) ಮತ್ತು ರಾತ್ರಿಯ ಪಂದ್ಯಗಳು 7:30ರಿಂದ ಆರಂಭವಾಗಲಿವೆ.

ಲೀಡ್ಸ್ ಸೇರಿದ ದೀಪ್ತಿ ಶರ್ಮಾ

• **ಲಂಡನ್:** ದಿ ಹಂಡ್ರೆಡ್ (100 ಎಸೆತಗಳ) ಪಂದ್ಯಾವಳಿಯ 2026ನೇ ಆವೃತ್ತಿಯ ಹರಾಜು ಪ್ರಕ್ರಿಯೆಯಲ್ಲಿ ದೀಪ್ತಿ ಶರ್ಮಾ 27,500 ಪೌಂಡ್(34 ಲಕ್ಷ ರೂ.) ಮೂಲ ಬೆಲೆಗೆ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿ ಪಾಲಾಗಿದ್ದು, 2026ನೇ ಸಾಲಿನ ಹರಾಜಿನಲ್ಲಿ ಮಾರಾಟವಾದ ಮೊದಲ ಭಾರತೀಯ ಆಟಗಾರ್ತಿ ಎನಿಸಿಕೊಂಡಿದ್ದಾರೆ. ಹಿಂದಿನ ಆವೃತ್ತಿಯಲ್ಲಿ ದೀಪ್ತಿ ಲಂಡನ್ ಸ್ಪಿರಿಟ್ ತಂಡವನ್ನು ಪ್ರತಿನಿಧಿಸಿದ್ದರು.

ವಿಕೆಟ್ ಕೀಪರ್ ಹೊಡೆಬಡಿ ಬ್ಯಾಟರ್ ರಿಚ ಘೋಷ್ ಅವರನ್ನು ಮ್ಯಾಂಚೆಸ್ಟರ್ ಸೂಪರ್ ಜೈಂಟ್ಸ್ 50,000 ಪೌಂಡ್(61 ಲಕ್ಷ ರೂ.) ಮೂಲ ಬೆಲೆಗೆ ಖರೀದಿಸಿದೆ. ಭಾರತ ತಂಡದ ಉಪನಾಯಕಿ ಸ್ಮೃತಿ ಮಂಧನಾ (ಮ್ಯಾಂಚೆಸ್ಟರ್ ಸೂಪರ್ ಜೈಂಟ್ಸ್) ಹಾಗೂ ಜೆಮಿಮಾ ರಾಡ್ರಿಗ್ಸ್ (ಸೌಥರ್ನ್ ಬ್ರೇವ್) ಅವರನ್ನು ಹರಾಜಿಗೆ ಮೊದಲೇ ಫ್ರಾಂಚೈಸಿಗಳು ಖರೀದಿಸಿವೆ. ವಿಶ್ವಕಪ್ ವಿಜೇತ ಭಾರತೀಯ ಮಹಿಳಾ ತಂಡದ 6 ಸದಸ್ಯರು ಹರಾಜು ಪ್ರಕ್ರಿಯೆಯನ್ನು ಪ್ರವೇಶಿಸಿದ್ದರು. ಇವರಲ್ಲಿ ಯಸ್ತಿಕಾ ಭಾಟಿಯಾ ಮತ್ತು ಎನ್.ಶ್ರೀ ಚಾರಣಿ ಅನ್‌ಸೋಲ್ಡ್ ಆಗಿದ್ದಾರೆ.





- 61 ಲಕ್ಷ ರೂ. ಮೂಲ ಬೆಲೆಗೆ ಮ್ಯಾಂಚೆಸ್ಟರ್ ಸೇರಿದ ರಿಚ ಘೋಷ್
- 34 ಲಕ್ಷ ರೂ. ಮೂಲ ಬೆಲೆಗೆ ಲೀಡ್ಸ್ ಪಾಲಾದ ದೀಪ್ತಿ

ಐಪಿಎಲ್‌ಗಾಗಿ ಲಂಡನ್‌ನಲ್ಲಿ ಕಿಂಗ್ ಕೊಹ್ಲಿ ಅಭ್ಯಾಸ ಶುರು

• **ಲಂಡನ್:** ಮಾ.28ರಂದು ಆರಂಭವಾಗಲಿರುವ ಐಪಿಎಲ್ 19ನೇ ಆವೃತ್ತಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಖಿಲಾನ್ ಆಟಗಾರ ವಿರಾಟ್ ಕೊಹ್ಲಿ ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸವನ್ನು ಆರಂಭಿಸಿದ್ದಾರೆ. ನೆಟ್ಸ್ ಅಭ್ಯಾಸದ ವಿಡಿಯೋ ತುಣುಕನ್ನು ವಿರಾಟ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಬುಧವಾರ ಹಂಚಿಕೊಂಡಿದ್ದು, ಕೆಲವೇ ಕ್ಷಣಗಳಲ್ಲಿ ವೈರಲ್ ಆಗಿದೆ. ಲಂಡನ್‌ನ ಐತಿಹಾಸಿಕ ಲಾರ್ಡ್ಸ್ ಕ್ರಿಕೆಟ್ ಮೈದಾನದ ಒಳಾಂಗಣ ವ್ಯವಸ್ಥೆಯಲ್ಲಿ ವಿರಾಟ್ ಬ್ಯಾಟಿಂಗ್ ಅಭ್ಯಾಸ ನಡೆಸಿದ್ದಾರೆಂದು ಕೆಲವು ಮೂಲಗಳು ವರದಿ ಮಾಡಿವೆ. 37 ವರ್ಷದ ಕೊಹ್ಲಿ ಕನಸಿನಂತೆಯೇ ಕಳೆದ ಆವೃತ್ತಿಯಲ್ಲಿ ಬೆಂಗಳೂರು ತನ್ನ ಚೊಚ್ಚಲ ಐಪಿಎಲ್ ಕಪ್ ಗೆದ್ದಿತ್ತು. ಈ ಬಾರಿ ಕಪ್ ಉಳಿಸಿಕೊಳ್ಳುವ ಹೆಚ್ಚಿನ ಒತ್ತಡವು ಆರ್‌ಸಿಬಿ ಮೇಲಿದೆ. ನೆಟ್ಸ್‌ನಲ್ಲಿ ಅಭ್ಯಾಸದ ವೇಳೆ ಕೊಹ್ಲಿ ಉತ್ತಮ ಹೊಡೆತಗಳೊಂದಿಗೆ ಲಯದಲ್ಲಿ ಕಾಣಿಸಿದ್ದು, ಕಠಿಣ ಅಭ್ಯಾಸ ನಡೆಸಿದ್ದಾರೆ. ಒಂದು ನಿಮಿಷದ ವಿಡಿಯೋ ಜಾಲತಾಣದಲ್ಲಿ ಭಾರೀ ಸುದ್ದಿ ಮಾಡಿತು.



ತಮಿಳುನಾಡಿಗೆ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ

• **ದಿಂಡಿಗಲ್:** ತಮಿಳುನಾಡು ರಣಜಿ ತಂಡ ತನ್ನ ಚೊಚ್ಚಲ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಗೆದ್ದುಕೊಂಡಿದೆ. ಬುಧವಾರ ಎನ್‌ಪಿಆರ್ ಕಾಲೇಜು ಕ್ರಿಕೆಟ್ ಮೈದಾನದಲ್ಲಿ ನಡೆದ ಫೈನಲ್‌ನಲ್ಲಿ ಮಹಾರಾಷ್ಟ್ರ ತಂಡವನ್ನು 66 ರನ್‌ಗಳ ಅಂತರದಿಂದ ಸೋಲಿಸಿದ ತಮಿಳುನಾಡು ಇದೇ ಮೊದಲ ಬಾರಿಗೆ ಸಿ.ಕೆ.ನಾಯ್ಡು ಟ್ರೋಫಿ ಗೆದ್ದುಕೊಂಡಿದೆ. ಈ ಋತುವಿನಲ್ಲಿ ತಮಿಳುನಾಡು ಸತತ ಎರಡು ಟ್ರೋಫಿಗಳನ್ನು ಗೆದ್ದುಕೊಂಡ ಸಾಧನೆಗೈದಿದೆ.

ಬಾಂಗ್ಲಾದೇಶದ ವಿರುದ್ಧ ಹೀನಾಯ ಸೋಲುಂಡ ಪಾಕಿಸ್ತಾನ

ರಾಣ ಪರಾಕ್ರಮ: ಪಾಕ್ ಪರಾಭವ

• **ಢಾಕಾ:** ಟಿ20 ವಿಶ್ವಕಪ್ ಬಹಿಷ್ಕರಿಸಿದ್ದ ಬಾಂಗ್ಲಾದೇಶ ಮತ್ತು ಭಾರತೀಯರ ವಿರುದ್ಧ ಹೀನಾಯ ಸೋಲುಂಡಿದ್ದ ಪಾಕಿಸ್ತಾನ ನಡುವಿನ ಮೊದಲ ಏಕದಿನ ಪಂದ್ಯದಲ್ಲಿ ಪಾಕ್ ಮುಖಭಂಗ ಅನುಭವಿಸಿದೆ.

ಬಾಂಗ್ಲಾದ ಯುವ ವೇಗದ ಬೌಲರ್ ನಹೀದ್ ರಾಣಾ ಚೊಚ್ಚಲ 5 ವಿಕೆಟ್ ಗೊಂಚಲು ಪಡೆದು ಪಾಕ್ ಪರಾಭವಕ್ಕೆ ಕಾರಣರಾದರು. ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಬಾಂಗ್ಲಾ 1–0 ಮುನ್ನಡೆ ಸಾಧಿಸಿದೆ. ಬಾಂಗ್ಲಾ ತಂಡ ಮೊದಲ ಪಂದ್ಯದಲ್ಲಿ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಪಾಕ್ ವೈಟ್ ಬಾಲ್ ಕ್ರಿಕೆಟ್‌ನಲ್ಲಿ ತನ್ನ ಹೀನಾಯ ಪ್ರದರ್ಶನ ಮುಂದುವರಿಸಿದೆ. ಬುಧವಾರ ಟಾಸ್ ಗೆದ್ದು ಪಾಕ್ ತಂಡವನ್ನು ಬ್ಯಾಟಿಂಗ್‌ಗೆ ಇಳಿಸಿದ ಬಾಂಗ್ಲಾ ಪರ ವೇಗಿ ನಹೀದ್ ರಾಣಾ 24 ರನ್ ನೀಡಿ 5 ವಿಕೆಟ್ ಕಬಳಿಸಿದರು. ನಾಯಕ ಮೆಹದಿ ಹಸನ್ ಆಫ್‌ಸ್ಪಿನ್ ದಾಳಿ ನಡೆಸಿ 29 ರನ್‌ಗಳಿಗೆ 3 ವಿಕೆಟ್ ಕಿತ್ತರು. ಪಾಕ್ ಪರ ಆರಂಭಿಕರಾದ ಸಾಹಿಬ್‌ಜಾದ ಫರ್ಹಾನ್ (27) ಮತ್ತು ಸದಾಕತ್ (18) ಮೊದಲ ವಿಕೆಟ್‌ಗೆ 41 ರನ್ ಪೇರಿಸಿದ್ದರೆ, ಬಳಿಕ ಸಂಪೂರ್ಣ ಕುಸಿತ ಕಂಡ ಪಾಕ್, 30.4 ಓವರ್‌ಗಳಲ್ಲಿ 114 ರನ್‌ಗಳಿಗೆ ಸರ್ವಪತನವನ್ನು ಕಂಡಿತು. ತಸ್ಕಿನ್ ಅಹ್ಮದ್ ಮತ್ತು ಮುಸ್ತಫಿಜುರ್ ರೆಹ್ಮಾನ್ ತಲಾ 1 ವಿಕೆಟ್ ಕಿತ್ತರು. ಬಾಂಗ್ಲಾಗೆ ಸುಲಭ ಜಯ: ಸೌಮ್ಯಾ ಸರ್ಕಾರ್ ಬದಲಿಗೆ ಸ್ಥಾನ ಪಡೆದುಕೊಂಡ ಆರಂಭಿಕ ಬ್ಯಾಟರ್ ತಂಜಿದ್ ಹಸನ್ 42 ಎಸೆತಗಳಿಂದ ಅಜೇಯ 67 ರನ್ ದಾಖಲಿಸಿದ್ದು, ಬಾಂಗ್ಲಾ 15.1 ಓವರ್‌ನಲ್ಲಿಯೇ 2 ವಿಕೆಟ್ ಕಳೆದುಕೊಂಡು 115 ರನ್ ದಾಖಲಿಸಿ ಸುಲಭವಾಗಿ ಗುರಿ ಮುಟ್ಟಿತು.



ಬಾಂಗ್ಲಾ ವಿರುದ್ಧ ಪಾಕ್ ಕನಿಷ್ಠ ಮೊತ್ತ!


ಇದು ಬಾಂಗ್ಲಾದೇಶದ ವಿರುದ್ಧ ಏಕದಿನ ಅಂತಾರಾಷ್ಟ್ರೀಯ ಪಂದ್ಯವೊಂದರಲ್ಲಿ ಪಾಕ್ ತಂಡ ದಾಖಲಿಸಿದ ಕನಿಷ್ಠ ಮೊತ್ತವೆಂಬ ಕಳಪೆ ದಾಖಲೆಯನ್ನು ಪಾಕ್ ಬರೆದುಕೊಂಡಿದೆ. 1999ರ ಏಕದಿನ ವಿಶ್ವಕಪ್‌ನಲ್ಲಿ ಬಾಂಗ್ಲಾದೇಶ ವಿರುದ್ಧ 161 ರನ್ ದಾಖಲಿಸಿದ್ದು ಈವರೆಗಿನ ದಾಖಲೆಯಾಗಿತ್ತು. ಆ ಪಂದ್ಯದಲ್ಲಿ ಪಾಕ್ 62 ರನ್‌ಗಳಿಂದ ಸೋಲುಂಡಿತ್ತು.

ಸಂಕ್ಷಿಪ್ತ ಸ್ಕೋರ್

ಪಾಕಿಸ್ತಾನ 114/10 (30.4)
ಫಾಹಿಮ್ 37, ಫರ್ಹಾನ್ 27, ಸದಾಕತ್ 18
(ರಾಣಾ 24ಕ್ಕೆ 5, ಮೆಹದಿ 29ಕ್ಕೆ 3)
ಬಾಂಗ್ಲಾದೇಶ 115/2 (15.1)
ತಂಜಿದ್ ಅಜೇಯ 67, ನಜ್ಮುಲ್ 27
(ಶಾಹಿನ್ 35ಕ್ಕೆ 1, ವಾಸಿಮ್ 24ಕ್ಕೆ 1)

ಪದಬಂಧ

ರಾಜಾ ಸಂಗಮೇಶ ಹಿರೇಮಠ



5921

ಎಡದಿಂದ ಬಲಕ್ಕೆ
1.ಕೆಲಸದ ನಡುವೆ ವಿಶ್ರಾಂತಿಗಾಗಿ ಸಿಕ್ಕ ಬಿಡುವು (3)
4.ಸಂಡಿಗೆಯೊಂದಿಗೆ ಇರುವ ಕರಿದಖಾದ್ಯ (3)
5.ಕಡದಿಂದ ಪಡೆದ ದೊಡ್ಡ ಖಡ್ಗ (5)
6.ಗಂಟಲಿನ ಗುಡುಗುಟ್ಟುವಿಕೆಯ ಕಡೆಯಲ್ಲಿ ಕರವಿದೆ (3)
7.ಸಲಿಗೆಯಲ್ಲಿ ತಿರುಗಿ ಮೂಡಿದೆ (3)
9.ತಳಹದಿ ಮೊದಲಿರುವ ಸಿಹಿಖಾದ್ಯ (3)
10.ಆನಂದಭಾಷ್ಪವನ್ನು ಹೀಗೂ ಹೇಳುತ್ತೇವೆ (3)
12.ಹುಡುಕುತ್ತಿರುವ ರಾಜ ತಿರುಗಿದ್ದಾನೆ (3)
14.ಈ ಭವದಲ್ಲಿ ನನಗೆ ಕಂಡ ದೊಡ್ಡ ಕಟ್ಟಡ (3)
15.ಪರಿಮಳವನ್ನು ನೀಡುವ ವಸ್ತು (5)
16.ಪರದ ನಡುವೆ ಇರುವ ಅಕ್ಕಸಾಲಿಗ (3)
17.ಜಾಗವನ್ನು ಖಾಲಿ ಮಾಡುವಿಕೆ (3)

ಮೇಲಿನಿಂದ ಕೆಳಕ್ಕೆ
2.ಮರದ ಕಡೆಗೆ ಹೊರಟ ಮೊಸಳೆ (3)
3.ಪತ್ರ ನಡುವೆ ಇರುವ ನಾನಾ ತೊಂದರೆಗಳು (4)
4.ಹರನು ಹೀಗೆ ಸಮೀಪದಲ್ಲಿದ್ದಾನೆ (3)
6.ಏಕಾಗ್ರವಾಗುವಂತೆ ಮಾಡು (5)
8.ಹವನ ಒಳಗೊಂಡ ಕೂಡುಬದುಕು (5)
11.ನೀರನ್ನು ಹೊಂದಿರುವಂಥಾದ್ದು–ಮೋಡ (4)
13. ಈತ ಸುರರ ವೈರಿ–ರಾಕ್ಷಸ (3)
14. ಇದು ವೈಭವದಿಂದ ಕೂಡಿದ್ದು (3)

5920 ಉತ್ತರ

ಎಡದಿಂದ ಬಲಕ್ಕೆ:
1.ಸಬಲ 4.ಹಣ್ಣೆಲೆ
5.ಕಾಮನಬಿಲ್ಲು
6.ಅತಿರಸ 8.ಮನೆತನ
10.ಜನಪದ 12.ಲಕಲಕ
15.ಕಾಗೆಬಂಗಾರ
15.ಬೇಸರ 17.ವತನ


ಮೇಲಿನಿಂದ ಕೆಳಕ್ಕೆ :
2.ರಜಾಕಾಲ 3.ಅನನ್ಯ
4.ಹಲ್ಲುಬೇನೆ 6.ಅನುಜ
7.ದವಸ 8.ಮಸಲ
9.ನರೇಶ 11.ಪರಕಾರ
13.ಕಲರವ 14.ಕುಂಬಳ

ಮಾ.9ರ ತಡರಾತ್ರಿ ಡಿವೈಎಸ್ಪಿ ರೋಹಿಣಿ ಸಿ.ಕೆ. ನೇತೃತ್ವದಲ್ಲಿ ದಾಳಿ

ಅಕ್ರಮ ಡೀಸೆಲ್ ದಾಸ್ತಾನು: 4,175 ಲೀಟರ್ ವಶ

• **ಬೆಳ್ತಂಗಡಿ:** ಯಾವುದೇ ಅನುಮತಿ ಪಡೆಯದೆ ಅಕ್ರಮವಾಗಿ ಡೀಸೆಲ್ ದಾಸ್ತಾನು ಮಾಡಿದ್ದ ಅಡ್ಡೆಯ ಮೇಲೆ ಖಚಿತ ಮಾಹಿತಿ ಮೇರೆಗೆ ಮಾ.9ರಂದು ತಡರಾತ್ರಿ ಬೆಳ್ತಂಗಡಿ ಉಪವಿಭಾಗದ ಡಿವೈಎಸ್ಪಿ ರೋಹಿಣಿ ಸಿ.ಕೆ. ನೇತೃತ್ವದಲ್ಲಿ ಪೊಲೀಸರ ತಂಡ ದಾಳಿ ಮಾಡಿ ಡೀಸೆಲ್ ಅನ್ನು ವಶಪಡಿಸಿಕೊಂಡಿದೆ.

ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿಣಿ ಸಿ.ಕೆ ಮತ್ತು ಸಿಬ್ಬಂದಿ ಪ್ರವೀಣ್ ಮುರುಗೋಳಿ ಚಾಲಕ ಪ್ರವೀಣ್ ಮಾ.9ರಂದು ಮಧ್ಯರಾತ್ರಿ ರೌಂಡ್ಸ್‌ನಲ್ಲಿರುವಾಗ ಮಾಹಿತಿದಾರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಬೆಳ್ತಂಗಡಿ ತಾಲೂಕಿನ ಕಣಿಯೂರು ಗ್ರಾಮದ ಮುದೆಲ್ತಿಯಾರ್ ಎಂಬಲ್ಲಿನ ಬನಶಂಕರಿ ನಿಲಯದ ಜಗದೀಶ್ (35) ಎಂಬವರ ಮನೆಯ ಹಿಂಭಾಗದ ಶೆಡ್ ಮೇಲೆ 1 ಗಂಟೆ ಸುಮಾರಿಗೆ ದಾಳಿ ನಡೆಸಿದಾಗ ಅಕ್ರಮವಾಗಿ 20 ಬ್ಯಾರಲ್ ನಲ್ಲಿ 200 ಲೀಟರ್ ನಂತೆ ಒಟ್ಟು 4,000 ಲೀಟರ್, 5 ಬ್ಯಾರಲ್ ಕ್ಯಾನ್‌ನಲ್ಲಿ 35 ಲೀಟರ್‌ನಂತೆ ಒಟ್ಟು 175 ಲೀಟರ್ ಸೇರಿ ಒಟ್ಟು ಶೇಖರಿಸಿಟ್ಟಿದ್ದ 4,175 ಲೀಟರ್ ಡೀಸೆಲ್ ಹಾಗೂ 5 ಖಾಲಿ ಕ್ಯಾನ್‌ಗಳನ್ನು ವಶಪಡಿಸಿಕೊಂಡಿದ್ದು, ಇದರ ಒಟ್ಟು ಮೌಲ್ಯ 3 ಲಕ್ಷದ 50 ಸಾವಿರ ರೂಪಾಯಿ ಆಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಜಗದೀಶ್ ಮತ್ತು ಹರೀಶ್ ಎಂಬವರ ವಿರುದ್ಧ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಮಾ.10ರಂದು ಡಿವೈಎಸ್ಪಿ ರೋಹಿಣಿ ಸಿ.ಕೆ. ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.




ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್.ಕೆ ಮಾರ್ಗದರ್ಶನದಲ್ಲಿ ಬೆಳ್ತಂಗಡಿ ಉಪವಿಭಾಗ ಡಿವೈಎಸ್ಪಿ ರೋಹಿಣಿ ಸಿ.ಕೆ. ನೇತೃತ್ವದಲ್ಲಿ, ಉಪ್ಪಿನಂಗಡಿ ಪ್ರೊಫೆಷನರಿ ಐಪಿಎಸ್ ಅನ್ನನ ಶ್ರೀವಾಸ್ತವ್, ಉಪ್ಪಿನಂಗಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನಾಗರಾಜ್, ಸಬ್ ಇನ್ಸ್‌ಪೆಕ್ಟರ್ ಸುತೇಶ್ ಕುಮಾರ್, ಡಿವೈಎಸ್ಪಿ ಕಚೇರಿಯ ಸಿಬ್ಬಂದಿ ಪ್ರವೀಣ್ ಮುರುಗೋಳಿ, ಲಾರೆನ್ಸ್ ಪಿ.ಆರ್, ಮನೋಹರ, ಚಾಲಕ ಪ್ರವೀಣ್, ಎಫ್‌ಎಸ್‌ಎಲ್ ವಿಭಾಗದ ಸೋಕೊ ತಂಡದ ಕಾವ್ಯಶ್ರೀ ಹಾಗೂ ಬೆಳ್ತಂಗಡಿ ಆಹಾರ ಇಲಾಖೆಯ ಆಹಾರ ನಿರೀಕ್ಷಕ ವಿಶ್ವ ಕೆ, ಆಹಾರ ಶಿರಸ್ತೇದಾರ ಸಂತೋಷ್ ಜಿ. ಮತ್ತಿತರರು ಕಾರ್ಯಾಚರಣೆಯಲ್ಲಿ ಭಾಗವಹಿಸಿದರು.

ಒಳ ಮೀಸಲಾತಿ ಬಿಟ್ಟು ಸರ್ಕಾರಿ ಹುದ್ದೆ ಭರ್ತಿಗೆ ತೀವ್ರ ವಿರೋಧ

ಪೆಟ್ರೋಲ್ ಸುರಿದು ಆತ್ಮಹತ್ಯೆಗೆ ಯತ್ನ

• **ರಾಯಚೂರು:** ರಾಜ್ಯ ಸರ್ಕಾರ ಒಳ ಮೀಸಲಾತಿ ಸಮರ್ಪಕವಾಗಿ ಕೈಗೊಳ್ಳದೇ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಮುಂದಾಗಿರುವುದನ್ನು ಖಂಡಿಸಿ ನಗರದಲ್ಲಿ ಬುಧವಾರ ನಡೆದ ಬಂದ್ ಸಂದರ್ಭದಲ್ಲಿ ಪ್ರತಿಭಟನಾಕಾರರಿಬ್ಬರು ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ಸ್ಥಳದಲ್ಲಿದ್ದ ಪೊಲೀಸರು ಅನಾಹುತ ತಪ್ಪಿಸಿದರು. ಸಂಜೆ ನಾಲ್ಕರವರೆಗೂ ಬಂದ್ ಜರುಗಿ ಸಂಪೂರ್ಣವಾಗಿ ಯಶಸ್ವಿಯಾಯಿತು. ಇವರಲ್ಲಿ ಓರ್ವ ಪೆಟ್ರೋಲ್ ಕುಡಿದಿದ್ದನು ಹಾಗೂ ಮೈಮೇಲೆ ಸುರಿದುಕೊಂಡಿದ್ದನು. ಇನ್ನೇನು ಬೆಂಕಿ ಹಚ್ಚಿಕೊಳ್ಳಬೇಕು ಎನ್ನುವಷ್ಟರಲ್ಲಿ ಪೊಲೀಸರು ಧಾವಿಸಿ ಅನಾಹುತ ತಡೆದರು. ತಕ್ಷಣ ಆಂಬ್ಯುಲೆನ್ಸ್‌ನಲ್ಲಿ ರಿಮ್ಸ್‌ಗೆ ಕರೆದೊಯ್ಯಲಾಯಿತು. ಈ ಘಟನೆ ಜರುಗಿ ಸ್ವಲ್ಪ ಸಮಯದಲ್ಲಿ ಮತ್ತೋರ್ವ ವ್ಯಕ್ತಿ ಮೈಮೇಲೆ ಪೆಟ್ರೋಲ್ ಸುರಿದುಕೊಳ್ಳುವುದಕ್ಕೆ ಮುಂದಾದ ತಕ್ಷಣ ಓಡೋಡಿ ಬಂದ ಪೊಲೀಸರು ಅವನ ಕೈಯಲ್ಲಿದ್ದ ಪೆಟ್ರೋಲ್ ಬಾಟಲಿ ಕಸಿದುಕೊಂಡು ಅವನನ್ನು ಸುತ್ತುವರೆದು ರಕ್ಷಿಸುವ ಕೆಲಸ ಮಾಡಿದರು.



ರಾಜ್ಯ ಸರ್ಕಾರ ಒಳ ಮೀಸಲಾತಿಯನ್ನು ಸಮರ್ಪಕವಾಗಿ ಕೈಗೊಳ್ಳದೇ ಐವತ್ತಾರು ಸಾವಿರ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಮುಂದಾಗಿರುವುದನ್ನು ಖಂಡಿಸಿ ಒಳ ಮೀಸಲಾತಿ ಐಕ್ಯ ಸಮಿತಿ ಕರೆ ನೀಡಿದ್ದ ರಾಯಚೂರು ನಗರ ಬಂದ್‌ಗೆ ಸಂಪೂರ್ಣವಾಗಿ ಯಶಸ್ವಿಯಾಯಿತು. ಬುಧವಾರ ಬೆಳಗಿನಿಂದಲೇ ನಗರದಲ್ಲಿ ಪ್ರತಿಭಟನೆಯನ್ನು ಪ್ರಾರಂಭಿಸಲಾಯಿತು. ವರ್ತಕರು ಸ್ವಯಂ ಪ್ರೇರಿತರಾಗಿ ಬೆಂಬಲ ಸೂಚಿಸಿ ಅಂಗಡಿಗಳನ್ನು ಬಂದ್ ಮಾಡಿದರು. ಸಿಂಧನೂರು, ಹೈದರಾಬಾದ್, ಮಂತ್ರಾಲಯ ಹಾಗೂ ಗ್ರಾಮೀಣ ಭಾಗಗಳ ಮಾರ್ಗಗಳಲ್ಲಿ ಪ್ರತಿಭಟನಾಕಾರರು ತಂಡಗಳಲ್ಲಿ ನಿಂತು ಪ್ರತಿಭಟನೆಯನ್ನು ಮಾಡುತ್ತಿದ್ದುದರಿಂದ ಸಾರಿಗೆ ಬಸ್‌ಗಳು ನಗರದ ಒಳಗಡೆ ಬಾರದೆ ಬೇರೆ ಮಾರ್ಗವಾಗಿ ಸಂಚರಿಸಿದವು. ರಾಯಚೂರು ನಗರಕ್ಕೆ ಆಗಮಿಸುವ ಪ್ರಯಾಣಿಕರನ್ನು ನಗರದ ಹೊರವಲಯದಲ್ಲಿನೇ ಇಳಿಸುತ್ತಿದ್ದುದರಿಂದ ಪ್ರಯಾಣಿಕರು ಬಹಳ ಸಂಕಷ್ಟವಾಆರ್‌ಟಿಒ ವೃತ್ತದಲ್ಲಿ ಎಸ್.ಜಿ.ಮಹದೇವಪ್ಪ ಅವರ ಪ್ರತಿಕೃತಿಯನ್ನು ಮಾತ್ರ ದಹಿಸಿದರು. ಆಗ ಎಚ್ಚೆತ್ತುಕೊಂಡ ಪೊಲೀಸರು ಯಾವುದೇ ಪ್ರತಿಕೃತಿಯನ್ನು ದಹಿಸುವುದಕ್ಕೆ ಅವಕಾಶವನ್ನು ನೀಡಲಿಲ್ಲ. ಪ್ರತಿಭಟನಾಕಾರರು ಅಂಬೇಡ್ಕರ ವೃತ್ತಕ್ಕೆ ಆಗಮಿಸುವ ಮಾರ್ಗ ಮಧ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರತಿಕೃತಿಯನ್ನು ಶವ ಯಾತ್ರೆ ಮಾಡಿ ದಹಿಸುವುದಕ್ಕೆ ಮುಂದಾದಾಗ ಪೊಲೀಸ್ ಸಿಬ್ಬಂದಿ ಪ್ರತಿಕೃತಿಗೆ ಹಾಕಲಾಗಿದ್ದ ಸಿಎಂ ಸಿದ್ದರಾಮಯ್ಯ ಅವರ ಭಾವ ಚಿತ್ರವನ್ನು ಹರಸಾಹಸ ಮಾಡಿ ಕಿತ್ತುಕೊಂಡರು.

ಕಿರುಸುದ್ದಿ

ಹಿಟ್ ಆಂಡ್ ರನ್ ಪ್ರಕರಣ: ಬೈಕ್ ಧಾವಂತಕ್ಕೆ ಪಾದಚಾರಿ ದಾರುಣ ಸಾವು

ಉಳ್ಳಾಲ: ಬೈಕ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರ ಗಾಯಗೊಂಡಿದ್ದ ಪಾದಚಾರಿ ವ್ಯಕ್ತಿಯೋರ್ವರು ಮೃತಪಟ್ಟ ಘಟನೆ ಕುತ್ತಾರು ಸಮೀಪದ ಮದನಿ ನಗರ ಮುಖ್ಯ ರಸ್ತೆಯಲ್ಲಿ ನಡೆದಿದೆ. ಮುಂಡೋಳಿ ನಿವಾಸಿ ದಿನೇಶ್ ಗಟ್ಟಿ (50) ಮೃತಪಟ್ಟ ವ್ಯಕ್ತಿಯಾಗಿದ್ದಾರೆ. ದಿನೇಶ್ ಗಟ್ಟಿ ಅವರು ಮಂಗಳವಾರ ರಾತ್ರಿ ಮದನಿ ನಗರ ಎಂಬಲ್ಲಿ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಬೈಕೊಂದು ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ಕೂಡ ರಸ್ತೆಗೆಯಲ್ಪಟ್ಟಿದ್ದು ತಕ್ಷಣವೇ ಆತ ಬೈಕ್ ಏರಿ ಸ್ಥಳದಿಂದ ಪರಾರಿಯಾಗಿದ್ದಾನೆ. ಗಂಭೀರ



ಗಾಯಗೊಂಡಿದ್ದ ದಿನೇಶ್ ಗಟ್ಟಿ ಅವರನ್ನ ತಕ್ಷಣ ಆಸ್ಪತ್ರೆಗೆ ದಾಖಲಿಸಿದರೂ ಬುಧವಾರ ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಮೃತರು ಕೃಷಿಕರಾಗಿದ್ದು, ಪತ್ನಿ ಹಾಗೂ ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ಘಟನೆ ಸಂಬಂಧ ಮಂಗಳೂರು ದಕ್ಷಿಣ ಸಂಚಾರಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಸ್ಕೂಟಿಗೆ ಗೂಡ್ಸ್ ಆಟೋ ರಿಕ್ಷಾ ಡಿಕ್ಕಿ : ಸವಾರ ಸಾವು

ಹಿರಿಯಡ್ಕ: ಗೂಡ್ಸ್ ಆಟೋ ರಿಕ್ಷಾವೊಂದು ಸ್ಕೂಟಿಗೆ ಡಿಕ್ಕಿ ಹೊಡೆದ ಪರಿಣಾಮ ಸವಾರರೊಬ್ಬರು ಮೃತಪಟ್ಟ ಘಟನೆ ಹಿರಿಯಡಕ ಕಾಮತ್ ನರ್ಸಿಂಗ್ ಹೋಂ ಬಳಿ ಮಾ.9ರಂದು ಬೆಳಗ್ಗೆ ನಡೆದಿದೆ. ಹಿರಿಯಡಕ ಕಡೆಯಿಂದ ಕೋಟ್ನಕಟ್ಟೆ ಕಡೆಗೆ ಹೋಗುತ್ತಿದ್ದ ಗೂಡ್ಸ್ ಆಟೋ ರಿಕ್ಷಾ, ಎದುರಿನಿಂದ ಬರುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆಯಿತ್ತೆನ್ನಲಾಗಿದೆ. ಇದರಿಂದ ಸ್ಕೂಟರ್ ಸಮೇತ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡ ರಮೇಶ್ ಕಲ್ಕೂರ ಮಣಿಪಾಲ ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ಮೃತಪಟ್ಟರು ಎಂದು ತಿಳಿದುಬಂದಿದೆ. ಈ ಬಗ್ಗೆ ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್-ಬೈಕ್ ಡಿಕ್ಕಿ: ಗಾಯಾಳು ಯುವಕ ಸಾವು

ಉಡುಪಿ: ಸಂತೆಕಟ್ಟೆಯ ಲಕ್ಷ್ಮೀನಗರ ರಸ್ತೆಯಲ್ಲಿ ವಾರದ ಹಿಂದೆ ಸರ್ಕಾರಿ ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಯುವಕನೋರ್ವ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಹೆರ್ಗದ ಶೆಟ್ಟಿಬೆಟ್ಟು ನಿವಾಸಿ ಮೊಹಮ್ಮದ್ ಝುದ್ (19) ಮೃತ ದುರ್ದೈವಿ. ಅಪಘಾತದ ಬಳಿಕ ಅವರನ್ನು ಉಡುಪಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಅವರು ನಿಧನರಾದರು ಎಂದು ತಿಳಿದುಬಂದಿದೆ. ಪಿಯುಸಿ ಶಿಕ್ಷಣ ಪೂರ್ಣಗೊಳಿಸಿದ್ದ ಝುದ್ ಶೀಘ್ರದಲ್ಲೇ ಗಲ್ಫ್ ರಾಷ್ಟ್ರಕ್ಕೆ ಉದ್ಯೋಗಕ್ಕಾಗಿ ತೆರಳಲು ಸಿದ್ಧತೆ ನಡೆಸುತ್ತಿದ್ದರು ಎನ್ನಲಾಗಿದೆ. ಮೃತರು ತಂದೆ-ತಾಯಿ ಹಾಗೂ ಒಬ್ಬ ಸಹೋದರರನ್ನು ಅಗಲಿದ್ದಾರೆ.

ಕುಡಿದ ಮತ್ತಿನಲ್ಲಿ ತಮ್ಮ-ತಂಗಿಯನ್ನು ಕೊಲೆಗೈದ ಅಣ್ಣ?

ಮಡಿಕೇರಿ: ಕುಡಿದ ಮತ್ತಿನಲ್ಲಿ ಸಹೋದರ ಮತ್ತು ಸಹೋದರಿಯನ್ನು ಕಡಿದು ಕೊಲೆ ಮಾಡಿರುವ ಘಟನೆ ಭಾಗಮಂಡಲ ಸಮೀಪದ ಕುಂದಚೇರಿ ಗ್ರಾಮದಲ್ಲಿ ಬುಧವಾರ ಸಂಜೆ ನಡೆದಿದೆ. ಕುಂದಚೇರಿ ಗ್ರಾಮದ ಅಡಿಯರ ಯಶೋದಾ (45), ಕುಂಞರಾಮ (47) ಮೃತಪಟ್ಟವರಾಗಿದ್ದು, ಅಣ್ಣ ಅಡಿಯರ ಚಂದು ಕುಡಿದ ಮತ್ತಿನಲ್ಲಿ ಕಡಿದು ಕೊಲೆ ಮಾಡಿರುವುದಾಗಿ ಹೇಳಲಾಗಿದೆ. ಭಾಗಮಂಡಲ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ಕೊಡಗು ಎಸ್ಪಿ ಬಿಂದುಮಣಿ ಭೇಟಿ ನೀಡಿದ್ದಾರೆ. ಹೆಚ್ಚಿನ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಿದೆ.

ಫ್ಯಾನ್ ದುರಸ್ತಿಯ ವೇಳೆ ವಿದ್ಯುತ್ ಶಾಕ್: ವ್ಯಕ್ತಿ ಸಾವು

ಪೆರ್ಲ : ಪೇಟೆಯಲ್ಲಿ ರಿಕ್ಷಾ ಚಾಲಕರಾಗಿ ದುಡಿಯುತ್ತಿದ್ದ ವ್ಯಕ್ತಿ ಮನೆಯಲ್ಲಿ ಫ್ಯಾನ್ ದುರಸ್ತಿಯ ವೇಳೆ ವಿದ್ಯುತ್ ಶಾಕ್‌ಗೆ ಒಳಗಾಗಿ ಮೃತಪಟ್ಟ ಘಟನೆ ಬುಧವಾರ ಮಧ್ಯಾಹ್ನ ಬಳಿಕ ನಡೆದಿದೆ. ಮೃತರು ಪೆರ್ಲ ಸಮೀಪದ ಶಿವಗಿರಿ ನಿವಾಸಿ ಧನರಾಜ್ (40) ಎಂದು ಗುರುತಿಸಲಾಗಿದೆ. ಬುಧವಾರ ಮಧ್ಯಾಹ್ನ ಮನೆಯಲ್ಲಿ ಫ್ಯಾನ್ ದುರಸ್ತಿಯ ವೇಳೆ ಇವರು ಆಘಾತಕ್ಕೊಳಗಾಗಿದ್ದಾರೆ. ತಕ್ಷಣ ಎಣ್ಮಕಜೆ ಗ್ರಾಮ ಪಂಚಾಯತ್ ಆ್ಯಂಬುಲೆನ್ಸ್‌ನಲ್ಲಿ ಕಾಸರಗೋಡು ಆಸ್ಪತ್ರೆಗೆ ಕೊಂಡೊಯ್ದರೂ ಜೀವ



ಉಳಿಸಲಾಗಿಲ್ಲ. ಶಿವಗಿರಿ ನಿವಾಸಿ ಕೃಷ್ಣ ನಾಯ್ಕ್ - ಗಿರಿಜಾ ದಂಪತಿಯ ಪುತ್ರನಾದ ಮೃತರು ಪತ್ನಿ ದೀಪಾ, ಮಕ್ಕಳಾದ ನಿಶ್ಮಿತಾ, ವಿಜಿತ್, ಸಹೋದರ ಮೋಹನ್, ಸಹೋದರಿ ಕಮಲಾಕ್ಷಿ, ಮೋಹಿನಿ ಎಂಬವರನ್ನಗಲಿದ್ದಾರೆ. ಇವರ ನಿಧನಕ್ಕೆ ಪೆರ್ಲ ಪೇಟೆ ಆಟೋ ಚಾಲಕರು ಸಂತಾಪ ವ್ಯಕ್ತಪಡಿಸಿದ್ದಾರೆ.

ಹೊಟೇಲ್‌ಗಳಿಗೆ ಎಲ್‌ಪಿಜಿ ಅಭಾವದ ಬಿಸಿ | ಧಾರ್ಮಿಕ ಕ್ಷೇತ್ರಗಳಲ್ಲಿ ಅನ್ನದಾಸೋಹ ಅಬಾಧಿತ

ಕರಾವಳಿಗೆ ಕೊಲ್ಲಿ ಯುದ್ಧ ಬಿಸಿತುಪ್ಪ

ಮಂಗಳೂರು: ಇಸ್ರೇಲ್- ಇರಾನ್ ನಡುವೆ ಯುದ್ಧದ ಪರಿಣಾಮವಾಗಿ ಇಂಧನ ಪೂರೈಕೆಯಲ್ಲಿ ಉಂಟಾದ ವ್ಯತ್ಯಯ ಬಿಸಿ ನಗರಕ್ಕೂ ತಟ್ಟಿದೆ.

ಮಂಗಳೂರಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಖರೀದಿಗೆ ಪರದಾಟ ಉಂಟಾಗಿದ್ದು ಕೆಲವು ಹೊಟೇಲ್‌ಗಳಲ್ಲಿ ಗ್ಯಾಸ್ ಸಿಲಿಂಡರ್ ಅಭಾವ ಕಾಣಿಸಿದೆ. ಪ್ರಸಿದ್ಧ ತೀರ್ಥ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯದಲ್ಲಿ ಬೆಳಗ್ಗೆ ಉಪಾಹಾರಕ್ಕೆ ವಿವಿಧ ತಿಂಡಿ ಬದಲು ಅವಲಕ್ಕಿ ಮೊಸರು ನೀಡಲು ನಿರ್ಧರಿಸಲಾಗಿದೆ ಎಂಬ ಸುದ್ದಿ ಹರಡಿತ್ತಾದರೂ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಆಡಳಿತ ಸ್ಪಷ್ಟಪಡಿಸಿದೆ. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ನೇತೃತ್ವದಲ್ಲಿ ಆಯೋಜಿಸಲಾದ ಪುತ್ತೂರು ಫುಡ್ ಫೆಸ್ಟ್ ಮುಂದೂಡಲಾಗಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆ ಇಲ್ಲದ ಕಾರಣ ಡೀಲರ್‌ಗಳ ಗೋದಾಮು ಖಾಲಿಯಾಗಿದೆ. ಮಂಗಳೂರು ಸೇರಿದಂತೆ ಗ್ರಾಮಾಂತರದ ನಗರ ಪ್ರದೇಶಗಳಲ್ಲಿ ಬುಧವಾರವೇ ವಾಣಿಜ್ಯ ಸಿಲಿಂಡರ್‌ಗಳ ಅಭಾವ ತಟ್ಟಿದ್ದು, ಕೆಲವು ಹೊಟೇಲ್‌ಗಳು ಬಾಗಿಲು ಮುಚ್ಚಿವೆ. ಇನ್ನೂ ಕೆಲವು ಹೊಟೇಲ್‌ಗಳು ಹಾಲಿ ಬಳಕೆಯ ಗ್ಯಾಸ್ ಸಿಲಿಂಡರ್ ಖಾಲಿಯಾಗುವ ವರೆಗೆ ಕಾಯುತ್ತಿವೆ. ಮತ್ತೆ ಹೊಸ ಸಿಲಿಂಡರ್ ಸಿಗದೇ ಇದ್ದಲ್ಲಿ ಹೊಟೇಲ್ ಸಂಪೂರ್ಣ ಬಂದ್ ಮಾಡಬೇಕಾದ ಸಂದರ್ಭ ಉಂಟಾಗಲಿದೆ.

ಕಮರ್ಷಿಯಲ್ ಗ್ಯಾಸ್ ಅಭಾವ ಹಿನ್ನೆಲೆಯಲ್ಲಿ ಏಜೆನ್ಸಿಗಳು ಗ್ಯಾಸ್ ಸಿಲಿಂಡರ್ ಸ್ಟಾಕ್ ಇಲ್ಲದೆ ಗೋದಾಮು ಬಂದ್ ಮಾಡಿವೆ.

ಪುತ್ತೂರು ದೇವಳದಲ್ಲಿ ಅನ್ನದಾನಕ್ಕೆ ಕಟ್ಟಿಗೆ ಬಳಕೆ

ಪುತ್ತೂರು: ಗ್ಯಾಸ್ ಸಿಲಿಂಡರ್‌ಗಳ ಅಭಾವದಿಂದಾಗಿ ನಗರದ ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅನ್ನ ಪ್ರಸಾದದ ಮೇಲೆ ಪರಿಣಾಮ ಬೀರಿದೆ. ದಿನ ನಿತ್ಯ ಸಾವಿರಾರು ಮಂದಿಗೆ ಅನ್ನ ಪ್ರಸಾದ ನೀಡಲಾಗುತ್ತಿದ್ದ ದೇವಸ್ಥಾನದಲ್ಲಿ ಇದೀಗ ಗ್ಯಾಸ್ ಬದಲು ಕಟ್ಟಿಗೆಯನ್ನು ಬಳಸಲಾಗುತ್ತಿದೆ. ಈಗಾಗಲೇ ಸುಮಾರು 9 ಕಟ್ಟಿಗೆ ಒಲೆಗಳನ್ನು ನಿರ್ಮಿಸಲಾಗಿದೆ. ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳ ದರ ಹೆಚ್ಚಳವಾಗಿರುವುದರಿಂದ ಕಟ್ಟಿಗೆಯನ್ನೇ ಬಳಸಲು ನಿರ್ಧರಿಸಲಾಗಿದೆ. ಅಡುಗೆಗೆ ಒಟ್ಟು 5 ಸಿಲಿಂಡರ್‌ಗಳ ಅಗತ್ಯವಿದ್ದು, ಇದೀಗ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಅಭಾವದಿಂದಾಗಿ ಕಟ್ಟಿಗೆಯನ್ನು ಬಳಸಲು ನಿರ್ಧರಿಸಲಾಗಿದೆ. ಈಗಾಗಲೇ ಒಂದು ಲೋಡ್ ಕಟ್ಟಿಗೆಯನ್ನು ತರಿಸಿಕೊಳ್ಳಲಾಗಿದೆ. ಭಕ್ತರಿಗೆ ಅನ್ನ ಪ್ರಸಾದ ನೀಡಲು ಯಾವುದೇ ತೊಂದರೆ ಆಗದಂತೆ ಶ್ರೀಮಹಾಲಿಂಗೇಶ್ವರನ ಅನುಗ್ರಹವಿದೆ ಎನ್ನುತ್ತಾರೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಈಶ್ವರ್ ಭಟ್ ಪಂಜಿಗುಡ್ಡೆ.



ಕಟೀಲಿನಲ್ಲಿದೆ ಕಟ್ಟಿಗೆ ಒಲೆ

ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಅನ್ನಪ್ರಸಾದ ವ್ಯವಸ್ಥೆಗೆ ನಾಲ್ಕು ದಿನಗಳ ಮಟ್ಟಿಗೆ ಗ್ಯಾಸ್ ವ್ಯವಸ್ಥೆ ಇದ್ದು, ಮುಂಜಾಗ್ರತ ಕ್ರಮವಾಗಿ ಕಟ್ಟಿಗೆಯನ್ನು ಸಂಗ್ರಹಿಸಲಾಗುತ್ತಿದೆ. ಇಲ್ಲಿ ದಿನಕ್ಕೆ ಹತ್ತು ಸಾವಿರದಷ್ಟು ಮಂದಿ ಊಟ ಮಾಡುತ್ತಾರೆ. ಇಲ್ಲಿನ ಶಾಲೆಗಳ ವಿದ್ಯಾರ್ಥಿಗಳ ಊಟದ ವ್ಯವಸ್ಥೆ ಗ್ಯಾಸನ್ನು ಅವಲಂಬಿಸಿ ಇದೆ. ಯುದ್ಧದ ಪರಿಣಾಮ ಇಂಧನಕ್ಕೂ ಆಗುತ್ತಿರುವುದರಿಂದ ಇದು ದೇಗುಲಗಳ ವ್ಯವಸ್ಥೆಗೂ ಸಮಸ್ಯೆ ಆಗಬಹುದು. ಕಟೀಲಿನ ಭೋಜನಶಾಲೆಯಲ್ಲಿ ಕಟ್ಟಿಗೆಯಲ್ಲಿ ಅಡುಗೆ ಮಾಡುವ ವ್ಯವಸ್ಥೆಗಳಿದ್ದು, ಗ್ಯಾಸ್ ಸಮಸ್ಯೆ ಆದಲ್ಲಿ ಕಟ್ಟಿಗೆಯಿಂದ ಅಡುಗೆ ಮಾಡುವ ನಿಟ್ಟಿನಲ್ಲಿ ದೇವಸ್ಥಾನ ಕಟ್ಟಿಗೆ ಖರೀದಿಗೆ ಮುಂದಾಗಿದೆ.

ಕುಕ್ಕೆ ದೇವಳದಲ್ಲಿ ಯಥಾಪ್ರಕಾರ ಭೋಜನ ಪ್ರಸಾದ, ಉಪಹಾರ

ವಾರಕ್ಕೆ ಬೇಕಾದ ಗ್ಯಾಸ್; ಕಟ್ಟಿಗೆ ದಾಸ್ತಾನು

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಉಪಹಾರ ಮತ್ತು ಭೋಜನ ಪ್ರಸಾದ ವಿತರಣೆಯಲ್ಲಿ ಯಾವುದೇ ಬದಲಾವಣೆಗಳಿಲ್ಲ. ಪ್ರತಿದಿನದಂತೆ ಭೋಜನ ಪ್ರಸಾದ ಮತ್ತು ಉಪಹಾರವನ್ನು ಭಕ್ತರಿಗೆ ವಿತರಿಸಲಾಗುತ್ತದೆ. ಒಂದು ವಾರಕ್ಕೆ ಬೇಕಾದ ಗ್ಯಾಸ್ ಶೇಖರಿಸಲ್ಪಟ್ಟಿದ್ದು ಬುಧವಾರ ಕೂಡಾ ದೇವಳಕ್ಕೆ ಗ್ಯಾಸ್ ಸಿಲಿಂಡರ್ ಬಂದಿದೆ. ಆದುದರಿಂದ ಭಕ್ತರಿಗೆ ಈ ಬಗ್ಗೆ ಯಾವುದೇ ಗೊಂದಲ ಬೇಡ ಎಂದು ದೇವಳದ ಆಡಳಿತ ತಿಳಿಸಿದೆ.

ಗ್ಯಾಸ್ ಉಳಿಕೆಗೆ ಕ್ರಮ

ಯುದ್ಧ ಕಾರಣದಿಂದ ಗ್ಯಾಸ್ ವಿತರಣೆಯಲ್ಲಿ ವ್ಯತ್ಯಯ ಉಂಟಾಗಬಹುದೆಂಬ ಕಾರಣದಿಂದ ಮಿತವಾಗಿ ಗ್ಯಾಸ್ ಬಳಸಲು ದೇವಳದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಹಾಗಾಗಿ ದೇವಳದಲ್ಲಿ ದಿನವಾಹಿ ನೀಡುತ್ತಿದ್ದ ವಿವಿಧ ರೀತಿಯ ಉಪಹಾರ ತಿನಿಸುಗಳಿಗೆ ಬದಲಾಗಿ ಎರಡು ದಿನಕ್ಕೊಮ್ಮೆ ಅವಲಕ್ಕಿ ಮೊಸರು ಹಾಗೂ ಉಳಿದ ದಿನ ಹೆಸರು ಕಾಳು, ಉಪ್ಪಿಟ್ಟು ವಿತರಣೆ ನಡೆಯಲಿದೆ. ಭೋಜನಕ್ಕೆ ಹೆಚ್ಚುವರಿ ತಯಾರಿಸುತ್ತಿದ್ದ ಪಲ್ಯಕ್ಕೆ ಬದಲಾಗಿ ಖಾದ್ಯ ಚಟ್ನಿಯನ್ನು ಮಾತ್ರ ತಯಾರಿಸಿ ವಿತರಿಸಲಾಗುತ್ತದೆ.

2 ಲೋಡ್ ಕಟ್ಟಿಗೆ ರೆಡಿ

ಮುಂದೆ ವಾರಗಳ ಬಳಿಕ ಗ್ಯಾಸ್ ಪೂರೈಕೆ ಆಗದೇ ಇದ್ದಲ್ಲಿ ಭಕ್ತರಿಗೆ ಭೋಜನ ಪ್ರಸಾದ ವಿತರಣೆ ಹಾಗೂ ಉಪಹಾರ ವಿತರಣೆಗೆ ಯಾವುದೇ ತೊಂದರೆ ಆಗದಂತೆ ಯೋಜನೆ ರೂಪಿಸಲಾಗಿದೆ. ಈಗಾಗಲೇ ಎರಡು ಲೋಡು ಕಟ್ಟಿಗೆಯನ್ನು ತರಿಸಿ ದಾಸ್ತಾನು ಇರಿಸಲಾಗಿದೆ. ಗ್ಯಾಸ್ ಪೂರೈಕೆ ಆಗದೆ ಇದ್ದಾಗ ಕಟ್ಟಿಗೆ ಒಲೆಯ ಮೂಲಕ ಭೋಜನ ಮತ್ತು ಉಪಹಾರ ತಯಾರಿಸಿ ಭಕ್ತರಿಗೆ ವಿತರಿಸಲು ಸಂಬಂಧಪಟ್ಟವರು ವ್ಯವಸ್ಥೆ ರೂಪಿಸಿದ್ದಾರೆ.

ಗ್ಯಾಸ್ ಪೂರೈಕೆ

ಗ್ಯಾಸ್ ಪೂರೈಕೆ ಸಂಸ್ಥೆಯವರಿಗೆ ದಿನಕ್ಕೆ 20 ಸಿಲಿಂಡರ್ ಗ್ಯಾಸ್ ಪೂರೈಕೆ ಮಾಡಲು ದೇವಸ್ಥಾನದಿಂದ ಪತ್ರ ಬರೆಯಲಾಗಿದೆ. ಅಲ್ಲದೆ ದೇವಳಕ್ಕೆ ಗ್ಯಾಸ್ ಪೂರೈಕೆ ಸಮರ್ಪಕವಾಗಿ ನೆರವೇರಿಸಲು ಅವರ ಜಿಲ್ಲಾಧಿಕಾರಿಗಳು ಕೂಡಾ ಗ್ಯಾಸ್ ಪೂರೈಕಾ ಸಂಸ್ಥೆಯವರಿಗೆ ಆದೇಶಿಸಿದ್ದಾರೆ.

ಅತೀ ಹೆಚ್ಚು ಕೊಳವೆ ಬಾವಿ ಹೊಂದಿದ ಜಿಲ್ಲೆಗಳಲ್ಲಿ ಕಾಸರಗೋಡಿಗೆ ಅಗ್ರಸ್ಥಾನ!

ಕಾಸರಗೋಡು: ಕೇರಳದಲ್ಲಿ ಅತೀ ಹೆಚ್ಚು ಕೊಳವೆ ಬಾವಿಗಳಿರುವ ಜಿಲ್ಲೆ ಕಾಸರಗೋಡು ಆಗಿದೆ. ಕೇಂದ್ರ ಸರಕಾರದ ಯೋಜನೆಯಾದ ನ್ಯಾಶನಲ್ ಹೈಡ್ರೊಲಜಿ ಪ್ರೊಜೆಕ್ಟ್‌ನ ಸಲುವಾಗಿ ಆರಿಸಲ್ಪಟ್ಟ ಬ್ಲಾಕ್‌ಗಳ ಜಲಸಂಪನ್ಮೂಲಗಳ ಲೆಕ್ಕಾಚಾರ ವರದಿಯಲ್ಲಿ ಈ ಮಾಹಿತಿ ನೀಡಲಾಗಿದೆ.

ಅಂತರ್ಜಲ ಇಲಾಖೆಯು ಕುಟುಂಬಶ್ರೀ ಸಹಾಯದೊಂದಿಗೆ ಈ ಮಾಹಿತಿ ಸಂಗ್ರಹ ನಡೆಸಿದೆ. ಅದರಂತೆ ರಾಜ್ಯದ 93 ಬ್ಲಾಕ್‌ಗಳ 563 ಪಂಚಾಯತ್‌ಗಳಲ್ಲಾಗಿ ಒಟ್ಟಾರೆಯಾಗಿ 5,12,424 ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ. ಅದರಲ್ಲಿ 1,08,388 ಕೊಳವೆ ಬಾವಿಗಳು ಕಾಸರಗೋಡು ಜಿಲ್ಲೆಯಲ್ಲಿದೆ. ಆ ಮೂಲಕ ರಾಜ್ಯದಲ್ಲಿ ಅತೀ ಹೆಚ್ಚು ಕೊಳವೆ ಬಾವಿ ಹೊಂದಿರುವ ಜಿಲ್ಲೆ ಕಾಸರಗೋಡು ಆಗಿದೆ.

ಅಂತರ್ಜಲ ಸ್ಥಿತಿಗತಿಗಳ ಮಾಹಿತಿ ಲೆಕ್ಕಾಚಾರ (ಜೆಇಸಿ 2024)ರ ಪ್ರಕಾರ ಅಂತರ್ಜಲ ಅತೀ ಹೆಚ್ಚು ಗಂಭೀರವಾದ ರೀತಿಯಲ್ಲಿ ಶೋಷಣೆ ನಡೆಯುತ್ತಿರುವ ಮೂರು ಬ್ಲಾಕ್‌ಗಳು ಕೇರಳದಲ್ಲಿದೆ. ಅದರಲ್ಲಿ ಒಂದು ಕಾಸರಗೋಡು ಬ್ಲಾಕ್ ಆಗಿದೆ.



ಅತಿಯಾದ ಅಂತರ್ಜಲ ಶೋಷಣೆಯನ್ನು ತಡೆಗಟ್ಟಲು ರಾಜ್ಯ ಅಂತರ್ಜಲ ಹಾಗೂ ಕೇಂದ್ರ ಜಲಸಂಪನ್ಮೂಲ ಮಂಡಳಿ 2013 ರಿಂದಲೇ ಅಗತ್ಯದ ಕ್ರಮ ಆರಂಭಿಸಿದೆ.

- ರಾಜ್ಯದ 93 ಬ್ಲಾಕ್‌ಗಳ 563 ಪಂಚಾಯತ್‌ಗಳಲ್ಲಾಗಿ 5,12,424 ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ.
- 1,08,388 ಕೊಳವೆ ಬಾವಿಗಳು ಕಾಸರಗೋಡು ಜಿಲ್ಲೆಯಲ್ಲಿದೆ.
- ರಾಜ್ಯದಲ್ಲಿ ಅತೀ ಹೆಚ್ಚು ಕೊಳವೆ ಬಾವಿ ಹೊಂದಿರುವ ಜಿಲ್ಲೆ ಕಾಸರಗೋಡು ಆಗಿದೆ.

ಅತಿ ಹೆಚ್ಚು ಅಂತರ್ಜಲ ಶೋಷಣೆ ನಡೆಯುತ್ತಿರುವ ಬ್ಲಾಕ್‌ಗಳಲ್ಲಿ ಹೊಸದಾಗಿ ಕೊಳವೆಬಾವಿ ನಿರ್ಮಿಸಲು ಅನುಮತಿ ನೀಡದೇಇರುವತೀರ್ಮಾನವನ್ನುಇಲಾಖೆ ಕೈಗೊಂಡಿದ್ದು, ಕಠಿಣ ನಿಯಂತ್ರಣವನ್ನು ಏರ್ಪಡಿಸಲಾಗಿದೆ. ಒಂದು ವೇಳೆ ಇಂತಹ ಬ್ಲಾಕ್‌ಗಳಲ್ಲಿ ಹೊಸ ಕೊಳವೆ ಬಾವಿ ನಿರ್ಮಾಣ ಅನಿವಾರ್ಯವಾಗಿದ್ದಲ್ಲಿ ಪರಿಶೀಲಿಸಲಾಗುವುದು.


ಕಟ್ಟಡದ ಲಿಫ್ಟ್‌ನ ಹೊಂಡದಲ್ಲಿ ಕಾರ್ಮಿಕನ ಮೃತದೇಹ ಪತ್ತೆ

ಕೊಲೆ ಶಂಕೆ: ಪೊಲೀಸರಿಂದ ತನಿಖೆ

ಕಾಸರಗೋಡು: ನಿರ್ಮಾಣ ಹಂತದಲ್ಲಿರುವಬಹುಅಂತಸ್ತಿನಕಟ್ಟಡದಲ್ಲಿ ಲಿಫ್ಟ್ ನಿರ್ಮಿಸಲೆಂದು ತೋಡಲಾದ ನೀರು ತುಂಬಿದ ಹೊಂಡದಲ್ಲಿ ವಲಸೆ ಕಾರ್ಮಿಕ ಶಂಕಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ ಘಟನೆ ನಡೆದಿದೆ.

ಕಾಸರಗೋಡು ನುಳ್ಳಿಪ್ಪಾಡಿ ರಾಷ್ಟ್ರೀಯ ಹೆದ್ದಾರಿ ಸಮೀಪ ನಿರ್ಮಿಸಲಾಗುತ್ತಿರುವ ಬಹು ಅಂತಸ್ತಿನ ಕಟ್ಟಡದ ಗ್ರೌಂಡ್ ಫ್ಲೋರ್‌ನಲ್ಲಿ ಲಿಫ್ಟ್ ನಿರ್ಮಾಣಕ್ಕೆಂದು ತೋಡಲಾದ ಹೊಂಡದಲ್ಲಿ ಮಂಗಳವಾರ ರಾತ್ರಿ 11.30ರ ವೇಳೆ ಮೃತದೇಹ ಕಂಡು ಬಂದಿದೆ. ಈ ಬಗ್ಗೆ ಕಟ್ಟಡದ ಮಾಲಕನ ಪುತ್ರ ನೀಡಿದ ದೂರಿನಂತೆ ಕಾಸರಗೋಡು ನಗರ ಪೊಲೀಸರು ಕೇಸು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೃತ ವ್ಯಕ್ತಿ ಸುಮಾರು 25ರಿಂದ 30 ಮಧ್ಯೆ ಪ್ರಾಯದ ವ್ಯಕ್ತಿ ಎಂದು ಅಂದಾಜಿಸಲಾಗಿದೆ. ಕೂಡಲೇ ಕಾಸರಗೋಡು ಪೊಲೀಸರು ಹಾಗೂ ಕಾಸರಗೋಡು ಅಗ್ನಿಶಾಮಕ ದಳ ಸ್ಥಳಕ್ಕಾಗಮಿಸಿ ಹೊಂಡದಿಂದ ಮೃತದೇಹವನ್ನು ಮೇಲಕ್ಕೆತ್ತಿದರು. ಮೃತದೇಹದಲ್ಲಿ ಹಲವು ಗಾಯಗಳು ಪತ್ತೆಯಾಗಿವೆ. ಯಾರೋ ಹೊಡೆದು ಕೊಲೆಗೈದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಮೃತದೇಹವನ್ನು ಜನರಲ್ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ.



ಆಧಾರ್ ಕಾರ್ಡ್ ಪತ್ತೆ



ಮೃತದೇಹ ಪತ್ತೆಯಾದ ಜಾಗದಲ್ಲಿ ಮಂಜುನಾಥ್ ಕೆ.ಎನ್., ಕೆ.ಎನ್.ನಾಗೇಂದ್ರಪ್ಪರ ಪುತ್ರ, 09 ಶ್ರೀನಿವಾಸ್ ಬಿಲ್ಡಿಂಗ್, ಶಿವಮ್ಮ ಹೊಟೇಲ್ ಸಮೀಪ, ನೆಲಗದರನಹಳ್ಳಿ, ದಾಸರಹಳ್ಳಿ, ಬಿಟಿಸಿ ಬೆಂಗಳೂರು ನೋರ್ತ್ ಎಂಬ ವಿಳಾಸದ ಆಧಾರ್ ಕಾರ್ಡ್ ಪತ್ತೆಯಾಗಿದೆ. ಇದು ಮೃತ ವ್ಯಕ್ತಿಯ ಆಧಾರ್ ಕಾರ್ಡ್ ಆಗಿದೆಯೇ ಅಥವಾ ಬೇರೆ ಯಾರದ್ದಾಗಿರಬಹುದೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೃತದೇಹ ಪತ್ತೆಯಾದ ಸ್ಥಳದಲ್ಲಿ ಮೃತದೇಹವನ್ನು ಎಳೆದುಕೊಂಡು ಹೋಗಿ ಹೊಂಡಕ್ಕೆ ತಳ್ಳಿಹಾಕಿದ ರೀತಿಯ ರಕ್ತದ ಕಲೆಗಳು ಪತ್ತೆಯಾಗಿವೆ.

ಮರಣೋತ್ತರ ಪರೀಕ್ಷೆಯ ಬಳಿಕವಷ್ಟೇ ಕೊಲೆಯೇ ಎಂಬ ಬಗ್ಗೆ ಖಚಿತಪಡಿಸಬಹುದೆಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಕಳದಲ್ಲಿ ಹುಲ್ಲುಗಾವಲಿಗೆ ಬೆಂಕಿ: ಆರು ಗಂಟೆಗಳ ಕಾರ್ಯಾಚರಣೆ ಯಶಸ್ವಿ

ಕಾರ್ಕಳ: ಕಾರ್ಕಳ ತಾಲ್ಲೂಕಿನ ಸಾಣೂರು ಗ್ರಾಮ ವ್ಯಾಪ್ತಿಯ ಇಂದಿರಾನಗರದಲ್ಲಿ ಸುಮಾರು 8 ಎಕರೆ ಪ್ರದೇಶದಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಕಾರ್ಕಳ ಅಗ್ನಿಶಾಮಕ ದಳದ ಸಿಬ್ಬಂದಿ ಸುಮಾರು 6 ಗಂಟೆಗಳ ನಿರಂತರ ಕಾರ್ಯಾಚರಣೆ ನಡೆಸಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇಂದಿರಾನಗರಪ್ರದೇಶದಲ್ಲಿಸುಮಾರು 300 ಮನೆಗಳು ಇದ್ದು, ಸುತ್ತಮುತ್ತಲಿನ ಖಾಲಿ ಜಾಗದಲ್ಲಿ ಆಳೆತ್ತರದ ಹುಲ್ಲುಗಿಡಗಳು ಬೆಳೆಯಿಕೊಂಡಿದ್ದವು. ಆಕಸ್ಮಿಕವಾಗಿ ತಗುಲಿದ ಬೆಂಕಿ ವೇಗವಾಗಿ ವ್ಯಾಪಿಸಿ ಇಡೀ ಪ್ರದೇಶವನ್ನು ಆವರಿಸಿತು.

ಇದರಿಂದ ಸ್ಥಳೀಯರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬೆಳಿಗ್ಗೆ ಸುಮಾರು 10.30ರ ಸುಮಾರಿಗೆ ಅಗ್ನಿಶಾಮಕ ಠಾಣೆಗೆ ಮಾಹಿತಿ ತಲುಪಿದ ತಕ್ಷಣ ಕಾರ್ಕಳ ಅಗ್ನಿಶಾಮಕ ದಳದ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿದರು. ಬಳಿಕ ಹರಸಾಹಸ ಪಟ್ಟು ಸುಮಾರು 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಸಂಜೆ 4.30ರ ವೇಳೆಗೆ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸುವಲ್ಲಿ ಯಶಸ್ವಿಯಾದರು.



ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳದ ಸಹಾಯಕ ಠಾಣಾಧಿಕಾರಿ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಸಿಬ್ಬಂದಿಗಳಾದ ಅಚ್ಚುತ ಕರ್ಕೆರಾ, ಹರಿಪ್ರಸಾದ್ ಶೆಟ್ಟಿಗಾರ ಹಾಗೂ ಚಾಲಕರಾದ ಜಯಮೂಲ್ಯ, ನಿತ್ಯಾನಂದ ಮತ್ತು ಬಸವರಾಜ್ ಭಾಗವಹಿಸಿದ್ದರು.

ಮಾದಕ ವಸ್ತು ದಾಸ್ತಾನು ಅಡ್ಡೆಗೆ ಪೊಲೀಸ್ ತಂಡ ದಾಳಿ

ಎಂಡಿಎಂಎ ಸಹಿತ ನಾಲ್ವರ ಸೆರೆ

ವಿಟ್ಲ: ವಿಟ್ಲ ಪೊಲೀಸ್ ಠಾಣಾ ವ್ಯಾಪ್ತಿ ನೇರಳಕಟ್ಟೆ ಎಂಬಲ್ಲಿರುವ ಮನೆಯೊಂದರಲ್ಲಿ ಅಕ್ರಮವಾಗಿ ಎಂಡಿಎಂಎ ಮಾದಕ ವಸ್ತುವನ್ನು ದಾಸ್ತಾನಿರಿಸಿರುವುದನ್ನು ಪೊಲೀಸರು ಪತ್ತೆಹಚ್ಚಿ ವಶಪಡಿಸಿದ್ದಾರೆ.ಈ ಸಂಬಂಧವಾಗಿ ನಾಲ್ವರನ್ನು ಬಂಧಿಸಿದ್ದಾರೆ.

ನೆಟ್ಟ ಮುಡ್ನೂರು ಗ್ರಾಮದ ಭಗವಂತ ಕೋಡಿ ನಿವಾಸಿ ಅಶ್ರಫ್ ಜಿ., ಹಫೀಝ್ ಯಾನೆ ಅಪ್ಪಿ, ಅಫ್ಘಾನ್ ಮತ್ತು ಅಶ್ರಫ್ ಎನ್ .ಎ. ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತರಿಂದ 1,79,700 ರೂ. ಮೌಲ್ಯದ 17.97 ಗ್ರಾಂ ಎಂಡಿಎಂಎ ಮಾದಕ ವಸ್ತುವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿಯನ್ನಾಧರಿಸಿ ವಿಟ್ಲ ಠಾಣಾ ಪೊಲೀಸರು ನೇರಳಕಟ್ಟೆಯ ಇಂದಿರಾ ನಗರದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸ್ತವ್ಯವಿರುವ ಆರೋಪಿಗಳ ಪೈಕಿ ಅಶ್ರಫ್ ಜಿ ಎಂಬಾತನ ಮನೆಗೆ ದಾಳಿ ನಡೆಸಿ ಶೋಧಿಸಿದಾಗ ಮಾದಕ ವಸ್ತುವಾದ ಎಮ್.ಡಿ.ಎಮ್.ಎ ಮಾದಕವಸ್ತುವನ್ನು ಅಕ್ರಮವಾಗಿ ದಾಸ್ತಾನಿಟ್ಟು ಗಿರಾಕಿಗಳಿಗೆ ಮಾರಾಟ ಮಾಡುತ್ತಿರುವುದು ಬೆಳಕಿಗೆ ಬಂದಿದೆ.



ಆರೋಪಿ ಅಶ್ರಫ್ ಜಿ.ತನ್ನ ಬಾಡಿಗೆ ಮನೆಯಲ್ಲಿ ಹಫೀಝ್ ಯಾನೆ ಅಪ್ಪಿ, ಅಫ್ಘಾನ್ ಮತ್ತು ಅಶ್ರಫ್ ಜತೆ ಸೇರಿಕೊಂಡು ಮಾದಕ ವಸ್ತುಗಳ ಮಾರಾಟ ಮಾಡುತ್ತಿದ್ದ ಎಂಬುದು ಗೊತ್ತಾಗಿದೆ.ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ವಿಟ್ಲ ಪೊಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮಹತ್ವಾಕಾಂಕ್ಷಿ ಮಲೆನಾಡು ಹೆದ್ದಾರಿ ಯೋಜನೆಗೆ ವೇಗ | ತ್ವರಿತಗತಿಯಲ್ಲಿ ಸಾಗಿದೆ ಕಾಮಗಾರಿ | ನಂದರಪದವಿನಿಂದ ಚೆರುಪುಳವರೆಗೆ ಸಮಗ್ರ ಅಭಿವೃದ್ಧಿ

ಈಗ ಅರಣ್ಯ ಭೂಮಿಯ ಮೂಲಕ ರಸ್ತೆ ನಿರ್ಮಾಣ ಕಾರ್ಯವೇ ಸವಾಲು!

ಕಾಸರಗೋಡು: ಕಾಸರಗೋಡು ಜಿಲ್ಲೆಯ ಮಲೆನಾಡು ಪ್ರದೇಶಗಳ ಮುಖಛಾಯೆಯನ್ನೇ ಬದಲಾಯಿಸಿದ 126.30 ಕಿಲೋ ಮೀಟರ್ ಉದ್ದದ ಮಹತ್ವಾಕಾಂಕ್ಷೆಯ ಮಲೆನಾಡು ಹೆದ್ದಾರಿ ಯೋಜನೆಯು ತ್ವರಿತಗತಿಯಲ್ಲಿ ಸಾಗುತ್ತಿದೆ. ಕೇರಳ - ಕರ್ನಾಟಕ ರಾಜ್ಯಗಳ ಗಡಿಭಾಗವಾದ ನಂದರಪದವಿನಿಂದ ಚೆರುಪುಳ ತನಕ ವಿಸ್ತರಿಸಿರುವ ಈ ಕನಸಿನ ಹೆದ್ದಾರಿಯು 3500 ಕೋಟಿ ರೂ. ಮೌಲ್ಯದ ಯೋಜನೆಯಾಗಿದೆ. ಒಟ್ಟು ನಾಲ್ಕು ಪ್ರದೇಶಗಳಲ್ಲಿ ಆಯೋಜಿಸಲಾದ ನಿರ್ಮಾಣ ಕಾರ್ಯಗಳಲ್ಲಿ ನಂದರಪದವು - ಚೇವಾರು ರಸ್ತೆಯ ಮೊದಲ 24 ಕಿಲೋ ಮೀಟರ್ ಈಗಾಗಲೇ ಪೂರ್ಣಗೊಂಡಿದೆ.

ಅರಣ್ಯ ಭೂಮಿಯನ್ನು ಒಳಗೊಂಡಿರದ ಈ ವಿಭಾಗವನ್ನು ಫೆಬ್ರವರಿ 2021ರಲ್ಲಿ ಪೂರ್ಣಗೊಳಿಸಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಯಿತು. ಎರಡನೇ ಹಂತದಲ್ಲಿ ಚೇವಾರಿನಿಂದ ಎಡಪ್ಪರಂ ವರೆಗಿನ 28 ಕಿಲೋ ಮೀಟರ್ ರಸ್ತೆಯ ನಿರ್ಮಾಣ ಕಾರ್ಯ ವೇಗವಾಗಿ ನಡೆಯುತ್ತಿದೆ. ಭೂಸ್ವಾಧೀನ ಅಡಚಣೆಗಳಿಂದಾಗಿ ಎಡಪ್ಪರಂ ಪ್ರದೇಶದ ನಾಲ್ಕು ಕಿಲೋ ಮೀಟರ್ ರಸ್ತೆಯನ್ನು ಕೈ ಬಿಡಲಾಗಿದ್ದರೂ ಮಾರ್ಚ್ ತಿಂಗಳ ಅಂತ್ಯದೊಳಗೆ ಉಳಿದ ಭಾಗಗಳ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸುವುದು ಗುರಿ ಹೊಂದಲಾಗಿದೆ. ಜಿಲ್ಲೆಯ ಒಳಭಾಗದಲ್ಲಿನ ಪ್ರಯಾಣದ ಸಮಸ್ಯೆಗಳಿಗೆ ಈ ಮೂಲಕ ಪರಿಹಾರ ದೊರಕಲಿದೆ.

ಮೂರನೇ ಮತ್ತು ನಾಲ್ಕನೇ ರೀಚ್‌ಗಳಲ್ಲಿ ಅರಣ್ಯ ಭೂಮಿಯ ಮೂಲಕ ರಸ್ತೆ ನಿರ್ಮಾಣವು ಪ್ರಮುಖ ಸವಾಲಾಗಿದೆ. ಕೋಳಿಚ್ಚಾಲ್‌ನಿಂದ ಎಡಪರಂಬ ವರೆಗಿನ ಮೂರನೇ ರೀಚ್‌ನಲ್ಲಿ 3.95 ಕಿಲೋ ಮೀಟರ್ ಅರಣ್ಯ ಭೂಮಿ ಇದೆ. ಇದಕ್ಕೆ ಪ್ರತಿಯಾಗಿ ಅರಣ್ಯ ಇಲಾಖೆಗೆ ನೀಡಬೇಕಾದ 4.33 ಹೆಕ್ಟೇರ್ ಭೂಮಿಯ ಮಾಹಿತಿ ಮತ್ತು ಭೂ



ನಿರ್ದೇಶಾಂಕ ಸಮೀಕ್ಷೆ ರೇಖಾಚಿತ್ರವನ್ನು ಕೇಂದ್ರ ಪರಿವೇಶ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಅರಣ್ಯ ಇಲಾಖೆಯ ಅಂತಿಮ ಅನುಮೋದನೆಯೊಂದಿಗೆ ಈ ವಿಭಾಗದಲ್ಲಿರುವ ಅಡೆತಡೆಗಳನ್ನು ನಿವಾರಿಸಲಾಗುವುದು. ಅರಣ್ಯ ಭೂಮಿಯನ್ನು ಹೊರತುಪಡಿಸಿ ಮೂರನೇ ರೀಚ್‌ನಲ್ಲಿ ನಿರ್ಮಾಣ ಬಹುತೇಕ ಪೂರ್ಣಗೊಂಡಿದೆ.

ಇದೇ ವೇಳೆ ಅರಣ್ಯ ಇಲಾಖೆಯ ಭೂಮಿಯನ್ನು ಹೊರತುಪಡಿಸಿ ನಾಲ್ಕನೇ ರೀಚ್ ಆಗಿರುವ ಕೋಳಿಚ್ಚಾಲ್ - ಚೆರುಪುಳ ರಸ್ತೆಯ ನಿರ್ಮಾಣ ಪೂರ್ತಿಯಾಗಿದೆ. ಅರಣ್ಯ ಪ್ರದೇಶದ ಮೂಲಕ ಹಾದುಹೋಗುವ 3.19 ಕಿಲೋ ಮೀಟರ್ ವಿಭಾಗದಲ್ಲಿ ಗಡಿ ಕಲ್ಲುಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡಿದ್ದು, ನವೀಕರಣ ಕಾರ್ಯಕ್ಕಾಗಿ ವಿವರವಾದ ಯೋಜನಾ ವರದಿ (ಡಿಪಿಆರ್) ಸಲ್ಲಿಸಲಾಗಿದೆ. ಅರಣ್ಯ ಭೂಮಿಗೆ ಸಂಬಂಧಿಸಿದ ತಾಂತ್ರಿಕ ಅಡೆತಡೆಗಳನ್ನು ಪರಿಹರಿಸಲು ಯೋಜನೆ ರೂಪಿಸಲಾಗಿದೆ. ಒಟ್ಟಾರೆಯಾಗಿ ಕಾಸರಗೋಡು ಜಿಲ್ಲೆಯ ಪೂರ್ವ ಭಾಗಗಳನ್ನು ಸಂಪರ್ಕಿಸುವ ಮಲೆನಾಡು ಹೆದ್ದಾರಿ ಯೋಜನೆಯು ಅಂತಿಮ ಹಂತದಲ್ಲಿದೆ. ಇದು ಕೃಷಿಕರಿಗೆ ಮತ್ತು ಪ್ರವಾಸೋದ್ಯಮ ವಲಯಕ್ಕೆ ಬಹುದೊಡ್ಡ ಪ್ರಯೋಜನವಾಗಲಿದೆ.

ಜಿಲ್ಲೆಯ ಕರಾವಳಿ ಹೆದ್ದಾರಿ ನಿರ್ಣಾಯಕ ಹಂತ

ಕರಾವಳಿ ಅಭಿವೃದ್ಧಿಗೆ ಹೊಸ ದಿಶೆ

ಕೇರಳ ಕರಾವಳಿ ಪ್ರದೇಶದ ಬಹುನಿರೀಕ್ಷಿತ ಕನಸಿನ ಯೋಜನೆಯಾದ ಕರಾವಳಿ ಹೆದ್ದಾರಿ ಯು ಕಾಸರಗೋಡು ಜಿಲ್ಲೆಯಲ್ಲಿ ನೂತನ ಹಂತದ ಪ್ರಗತಿಯನ್ನು ಸಾಧಿಸುತ್ತಿದೆ. ಕಣ್ಣೂರು ಜಿಲ್ಲೆಯ ರಾಮಂತಳಿ ಗ್ರಾ.ಪಂ. ಮತ್ತು ಕಾಸರಗೋಡು ಜಿಲ್ಲೆಯ ವಲಿಯಪರಂಬ ಗ್ರಾ. ಪಂ. ನ್ನು ಉದುಮ ಮಂಡಲದ ಪೂಚಕ್ಕಾಡ್‌ಗೆ ಸಂಪರ್ಕಿಸುವ ಪಾಂಡ್ಯಲಕ್ಕಡವು (ವಲಿಯಪರಂಬ) ಸೇತುವೆಯಿಂದ ಸುಮಾರು 37.8 ಕಿಲೋ ಮೀಟರ್ ಉದ್ದದಲ್ಲಿ ಈ ರಸ್ತೆ ನಿರ್ಮಾಣವಾಗಲಿದೆ. ಯೋಜನೆಯ ಪ್ರಮುಖ ಅಂಶವಾದ ವಲಿಯಪರಂಬ ಸೇತುವೆ ನಿರ್ಮಾಣಕ್ಕೆ 59.94 ಕೋಟಿ ರೂ.ಗಳ ಆರ್ಥಿಕ ಅನುಮೋದನೆಯೊಂದಿಗೆ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಕರಾವಳಿ ಪ್ರದೇಶದಲ್ಲಿ ಸಾರಿಗೆ ಸೌಲಭ್ಯಗಳನ್ನು ಸುಧಾರಿಸುವಲ್ಲಿ ಮತ್ತು ಪ್ರದೇಶದ ಒಟ್ಟಾರೆ ಅಭಿವೃದ್ಧಿಯಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿ ಪರಿಗಣಿಸಲಾಗುತ್ತಿದೆ. ರಾಜ್ಯದಲ್ಲಿ 6500 ಕೋ. ರೂ.ಗಳ ಕರಾವಳಿ ಹೆದ್ದಾರಿ ಯೋಜನೆಗೆ ಸರಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ. ಕಾಸರಗೋಡು ಜಿಲ್ಲೆಯ ಪಾಂಡ್ಯಲಕ್ಕಡವಿನಿಂದ ಅಝಿತಾಳ ವರೆಗಿನ 15.5 ಕಿ. ಮೀ. ಉದ್ದದಲ್ಲಿ ಗಡಿ ಕಲ್ಲುಗಳನ್ನು ಅಳವಡಿಸುವ ಕೆಲಸ ಈಗಾಗಲೇ ಪೂರ್ಣಗೊಂಡಿದೆ. ಈ ರೋಡ್ ನಿರ್ಮಾಣದ ಮುಂದಿನ ಹಂತಗಳು ಪ್ರಗತಿಯಲ್ಲಿವೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 36° 23° | ಉಡುಪಿ 32° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಗುರುವಾರ 12, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3
ಬ್ರಹ್ಮರಕೂಟ್ಲು ಟೋಲ್ ಬಳಿಯ ಹಳೆ ಹೆದ್ದಾರಿಯ ದುರಸ್ತಿಗೆ ಆಗ್ರಹ



ಪುಟ 6
ಆಸ್ತಿ ತೆರಿಗೆ ಶೇ.3 ಹೆಚ್ಚಳ ಮಾಡಲು ಉಡುಪಿ ನಗರಸಭೆ ತೀರ್ಮಾನ

ಸುದ್ದಿ ಅಪ್‌ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

‘ಧರ್ಮಯಾನ’ದ ಮೆರುಗು ಹೆಚ್ಚಿಸಿದ ಕುಣಿತ ಭಜನೆ, ಕೇರಳ ಚೆಂಡೆ, ವೇದ ಮಂತ್ರ, ಕೊಂಬು, ವಾದ್ಯ, ಬ್ಯಾಂಡ್!



ಬೆಳ್ತಂಗಡಿ ತಾಲೂಕಿನ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂದರ್ಭ ಬುಧವಾರ ಸಂಜೆ ಉಜಿರೆಯ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಕ್ರೀಡಾಂಗಣದಿಂದ ಶ್ರೀ ಜನಾರ್ದನ ದೇವಸ್ಥಾನದವರೆಗೆ ಐತಿಹಾಸಿಕ ಶೋಭಾಯಾತ್ರೆ, ‘ಧರ್ಮಯಾನ’ ನಡೆಯಿತು. ರಾಜ್ಯ, ಅಂತರ್ ರಾಜ್ಯ ತಂಡಗಳ ಸಾವಿರಕ್ಕಿಂತ ಅಧಿಕ ಕಲಾವಿದರು ಶೋಭಾಯಾತ್ರೆಗೆ ವಿಶೇಷ ಮೆರುಗು ನೀಡಿದರು. (ಸಚಿತ್ರ ವರದಿ: ಪುಟ 2)

ಸುತ್ತಮುತ್ತ

ಕಡಲ ಕಿನಾರೆ ಮಲಿನ: ಕೊಮೆ ಗ್ರಾಮಸ್ಥರು ಗರಂ

ಕೋಟ: ಕೊಮೆ ಸಮುದ್ರ ತೀರದಲ್ಲಿರುವ ರೆಸಾರ್ಟ್‌ಗಳಿಗೆ ಆಗಮಿಸುವ ಪ್ರವಾಸಿಗರಿಂದ ತೀರ ಮಲಿನಗೊಳ್ಳುತ್ತಿರುವ ಹಿನ್ನಲೆಯಲ್ಲಿ ತೆಕ್ಕಟ್ಟೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಮೆ ಭಾಗದ ಗ್ರಾಮಸ್ಥರು ಕೋಟ ಆರಕ್ಷಕ ಠಾಣೆಗೆ ತೆರಳಿ ಆರಕ್ಷಕ ಠಾಣೆಯ ಪಿಎಸ್‌ಐ ಪ್ರವೀಣ್ ಕುಮಾರ್ ಅವರಿಗೆ ದೂರು ನೀಡಿದರು. ಈ ವೇಳೆ ಗ್ರಾಮಸ್ಥರು ಮಾಧ್ಯಮಕ್ಕೆ ಮಾಹಿತಿ ನೀಡಿ ಸಮುದ್ರ ತೀರದಲ್ಲಿ ಪಾರ್ಟಿಗಳನ್ನು ಮಾಡುವುದರ ಮೂಲಕ ಮದ್ಯದ ಬಾಟಲಿ, ಆಹಾರ ಪದಾರ್ಥ ಸಮುದ್ರ ತೀರದಲ್ಲೇ ಎಸೆದು ಪರಿಸರವನ್ನು ಹಾಳುಗೆಡವುತ್ತಿದ್ದಾರೆ ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ಎಚ್ಚರಿಕೆಯನ್ನು ನೀಡಿದರು.

ಜಾನುವಾರುಗಳ ಅಕ್ರಮ ಸಾಗಾಟ: 4 ಹೋರಿಗಳ ಸಹಿತ ಚಾಲಕನ ಬಂಧನ

ಉಪ್ಪಿನಂಗಡಿ: ಇಲ್ಲಿನ ಠಾಣಾ ವ್ಯಾಪ್ತಿಯ ಗುಂಡ್ಯ ಚೆಕ್ ಪೋಸ್ಟ್ ಬಳಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಜಾನುವಾರುಗಳನ್ನು ಪತ್ತೆ ಹಚ್ಚಿ ನಾಲ್ಕು ಹೋರಿಗಳ ಸಹಿತ ವಾಹನ ಚಾಲಕನನ್ನು ಬಂಧಿಸಿದ ಘಟನೆ ಬುಧವಾರ ನಸುಕಿನ ವೇಳೆ ನಡೆದಿದೆ. ಬಂಧಿತ ಗೂಡ್ಸ್ ಟೆಂಪೋ ಚಾಲಕನನ್ನು ಕುಮಾರ್ ಎಂದು ಗುರುತಿಸಲಾಗಿದೆ. ಈತ ಕಾಸರಗೋಡಿನ ಕಸಾಯಿಖಾನೆಗೆಂದು ಅರಸೀಕೆರೆಯಿಂದ ನಾಲ್ಕು ಹೋರಿಗಳನ್ನು ಹಿಂಸಾತ್ಮಕವಾಗಿ ಸಾಗಿಸುತ್ತಿದ್ದ. ಈ ಬಗ್ಗೆ ಪ್ರೊಬೆಷನರಿ ಎಎಸ್ಪಿ ಅನನ್ಯ ಶ್ರೀವಾಸ್ತವ್ ಅವರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಗುಂಡ್ಯ ಚೆಕ್ ಪೋಸ್ಟ್ ಬಳಿ ಕಾರ್ಯನಿರತ ಪೊಲೀಸರು ತಪಾಸಣೆಯನ್ನು ಕೈಗೊಂಡಾಗ ಈ ಕೃತ್ಯವು ಬೆಳಕಿಗೆ ಬಂದಿದ್ದು, ಅಕ್ರಮ ಸಾಗಾಟಕ್ಕೆ ಬಳಸಿದ ಗೂಡ್ಸ್ ಟೆಂಪೋ ಸಹಿತ ವಾಹನ ಚಾಲಕನನ್ನು ಹಾಗೂ ಹೋರಿ ವಶಕ್ಕೆ ಪಡೆದು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ಬದಿಯಡ್ಕದಲ್ಲಿ ಕರ್ನಾಟಕ ಮದ್ಯ ಸಹಿತ ವ್ಯಕ್ತಿಯ ಸೆರೆ

ಬದಿಯಡ್ಕ: ಕರ್ನಾಟಕ ನಿರ್ಮಿತ ಮದ್ಯ ಕೈವಶವಿರಿಸಿಕೊಂಡಿದ್ದ ವ್ಯಕ್ತಿಯನ್ನು ಬದಿಯಡ್ಕ ಪೊಲೀಸರು ಬಂಧಿಸಿದ್ದಾರೆ. ಪೆರಡಾಲ ಚೆನ್ನಾರಕಟ್ಟೆಯ ಶಿವಾನಂದ್ ಬಂಧಿತ ವ್ಯಕ್ತಿ. ಬದಿಯಡ್ಕ ಪೊಲೀಸ್ ಇನ್‌ಸ್ಪೆಕ್ಟರ್ ಅನೂಪ್‌ಕೃಷ್ಣರ ನೇತೃತ್ವದಲ್ಲಿ ಮಂಗಳವಾರ ಸಂಜೆ ಬದಿಯಡ್ಕದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಆತನನ್ನು ಬಂಧಿಸಲಾಗಿದೆ. ಆತನ ಕೈಯಿಂದ 11 ಟೆಟ್ರಾ ಪ್ಯಾಕೆಟ್ ಕರ್ನಾಟಕ ಮದ್ಯ ಹಾಗೂ 6200 ರೂ.ಗಳನ್ನು ವಶಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

33° | 35° | 34° | 33° | 35° | 36°

ಎರಡು ದಿನ ಇನ್ನಷ್ಟು ಧಗೆ?

ಹಬೆಯುಕ್ತ ವಾತಾವರಣ | ಅಪಾಯಕ್ಕೆ ಆಹ್ವಾನ

ಮಂಗಳೂರು/ ಉಡುಪಿ: ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಸಹಿತ ಕರಾವಳಿ ಭಾಗದ ನೆಲ ಈಗ ಕಾದ ಕಬ್ಬಣದಂತಾಗಿದ್ದು, ಬೇಸಿಗೆಯ ಬಿಸಿಲ ಪ್ರಖರತೆ ದಿನದಿಂದ ದಿನಕ್ಕೆ ಸತತ ವಾಗಿ ಏರಿಕೆಯಾಗುತ್ತಲೇ ಸಾಗಿದೆ. ಈ ನಡುವೆ ಬೇಸಗೆ ಮಳೆ ಬಿದ್ದೀತು ಎಂಬ ಜನತೆಯ ನಿರೀಕ್ಷೆ ಕೂಡಾ ಹುಸಿಯಾಗಿದೆ.

ಸಾರ್ವಜನಿಕರು ತೀವ್ರವಾದ ಬಿಸಿಲ ತಾಪಕ್ಕೆ ತತ್ತರಿಸುತ್ತಿದ್ದು, ಬಿಸಿಲು ಹಲವು ಆರೋಗ್ಯ ಸಮಸ್ಯೆಗೆ ಕಾರಣವಾಗುತ್ತಿದೆ.

ಇನ್ನೆರಡು ದಿನ ಇನ್ನಷ್ಟು ಕಠಿಣ?

ಈ ನಡುವೆ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಉಷ್ಣಾಂಶ ಇನ್ನಷ್ಟು ಏರಿಕೆ ಕಾಣಲಿದ್ದು, ಧಗೆ ಅತ್ಯಂತ ಕಠಿಣವಾಗಿರಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಇಲಾಖೆ ಮುನ್ಸೂಚನೆ ಪ್ರಕಾರ ವಿಶೇಷ ವಾಗಿ ಈ ಭಾಗದಲ್ಲಿ ಅತಿಯಾದ ಬಿಸಿಲು ಮತ್ತು ಗಾಳಿಯಲ್ಲಿನ ತೇವಾಂಶದಿಂದ ಕೂಡಿದ ಹಬೆಯುಕ್ತ ವಾತಾವರಣವು ಇರಲಿದ್ದು, ಇದು ಜನಸಾಮಾನ್ಯರ ದೈನಂದಿನ ಜೀವನದ ಮೇಲೆ ಇದು ಪರಿಣಾಮ ಬೀರಲಿದೆ. ಜಿಲ್ಲೆಯ ಗರಿಷ್ಠ ಕನಿಷ್ಠ ತಾಪಮಾನದಲ್ಲಿ ಮುಂದಿನ ಐದು ದಿನಗಳ ತನಕ ಸೆಕೆ ಅನುಭವ ಎಂದಿಗಿಂತ ಹೆಚ್ಚಾಗಿರಲಿದೆ. ಜನತೆ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು ಎಂದು ಆರೋಗ್ಯ ಕೂಡಾ ಇಲಾಖೆ ಎಚ್ಚರಿಸಿದೆ.



- ಅನಾವಶ್ಯಕ ಬಿಸಿಲಿಗೆ ಓಡಾಟ ತಕ್ಷಣ ನಿಲ್ಲಿಸಿ
- ಕುದಿಸಿ ಆರಿಸಿದ ನೀರು ಆಗಾಗ ಸೇವಿಸುತ್ತಿರಿ
- ಕಾರ್ಬೋನೇಟೆಡ್ ಪಾನೀಯ ಸೇವಿಸಬೇಡಿ
- ಹಣ್ಣು, ತರಕಾರಿಗಳು, ಎಳನೀರಿಗೆ ಒತ್ತು ನೀಡಿ

ಮಾ.15ರಿಂದ ಕೆಲವೆಡೆ ಮಳೆಯಾಗುವ ಸಾಧ್ಯತೆ

ಮಾರ್ಚ್ 15ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರತ್ಯೇಕ ಸ್ಥಳಗಳಲ್ಲಿ ಒಂದೆರಡು ಮಳೆಯಾಗುವ ಸಾಧ್ಯತೆ ಇದೆ. ಉಡುಪಿ ಜಿಲ್ಲೆಯಲ್ಲಿ ಮಾರ್ಚ್ 16ರ ಸುಮಾರಿಗೆ ಅಲ್ಲಲ್ಲಿ ಹಗುರವಾದ ಮಳೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆಯ ವರದಿಗಳು ಮುನ್ಸೂಚನೆ ನೀಡಿವೆ.

ಎಲ್ಲೆಡೆ 40 ಡಿಗ್ರಿ ಸೆ. ದಾಟಿದ ಅನುಭವ!!

ಕಳೆದ ಕೆಲವು ದಿನಗಳಿಂದ ಕರಾವಳಿ ಜಿಲ್ಲೆಗಳ ಗರಿಷ್ಠ ತಾಪಮಾನವು ಸರಾಸರಿ 35 ಡಿಗ್ರಿ ಸೆಲ್ಸಿಯಸ್‌ನಿಂದ 37 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ದಾಖಲಾಗಿದೆ. ಸಮುದ್ರ ತೀರದ ಗಾಳಿಯಲ್ಲಿನ ಆರ್ದ್ರತೆಯ ಕಾರಣದಿಂದಾಗಿ ಸಾರ್ವಜನಿಕರಿಗೆ ಇದರ ತೀವ್ರತೆ 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿರುವ ಅನುಭವವಾಗುತ್ತಿದೆ. ಮುಂದಿನ ಐದು ದಿನಗಳ ಕಾಲ ತಾಪಮಾನವು ಇದೇ ಮಟ್ಟದಲ್ಲಿ ಸ್ಥಿರವಾಗಿರಲಿದ್ದು, ಗರಿಷ್ಠ ತಾಪಮಾನದಲ್ಲಿ ಯಾವುದೇ ದೊಡ್ಡ ಇಳಿಕೆ ಕಂಡುಬರುವ ಸಾಧ್ಯತೆ ಇಲ್ಲದಿರುವುದು ಜನರಲ್ಲಿ ಆತಂಕ ಮೂಡಿದೆ.

ಗರಿಷ್ಠ 37° ದಾಟಿ ಸಾಗಿದ ತಾಪಮಾನ

ನೆತ್ತಿ ಸುಡುವ ಬಿಸಿಲಿಗೆ ಕಂಗಾಲಾದ ಕರಾವಳಿ

ಸಂಕಷ್ಟದಲ್ಲಿ ಶಾಲೆ ಪರೀಕ್ಷಾ ಕೊಠಡಿ

ಮೂಡುಬಿದಿರೆ: ದಿನದಿಂದ ದಿನಕ್ಕೆ ಎಲ್ಲೆಡೆ ತಾಪಮಾನ ಏರಿಕೆಯಾಗುತ್ತಿದ್ದು, ಕರಾವಳಿ ಭಾಗದಲ್ಲಿ ಜನತೆ ಬಿಸಿಗಾಳಿಗೆ ತತ್ತರಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್ ದಾಟುತ್ತಿದ್ದು, ಬೇಸಿಗೆಯ ತೀವ್ರತೆ ಹೆಚ್ಚುತ್ತಿರುವ ಲಕ್ಷಣಗಳು ಕಂಡು ಬರುತ್ತಿವೆ.

ಬೆಳಿಗ್ಗೆಯಿಂದಲೇ ‘ಧಗಧಗ’ ಶುರು

ಬೆಳಿಗ್ಗೆಯಿಂದಲೇ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದ್ದು, ಮಧ್ಯಾಹ್ನ ವೇಳೆಯಲ್ಲಿ ರಸ್ತೆಗಳಲ್ಲಿ ಜನ ಸಂಚಾರ ಕಡಿಮೆಯಾಗುತ್ತಿದೆ. ತೀವ್ರ ಬಿಸಿಲಿನ ಕಾರಣದಿಂದ ಜನರು ಅಗತ್ಯವಿಲ್ಲದ ಹೊರಗಡೆ ಸಂಚಾರವನ್ನು ಕಡಿಮೆ ಮಾಡುತ್ತಿದ್ದಾರೆ. ಶಾಲಾ ಮಕ್ಕಳು, ಹಿರಿಯರು ಮತ್ತು ಹೊರಾಂಗಣದಲ್ಲಿ ಕೆಲಸ ಮಾಡುವ ಕಾರ್ಮಿಕರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ.

ನೀರು, ತಂಪು ಪಾನೀಯಕ್ಕೆ ಬೇಡಿಕೆ

ಎಲ್ಲೆಡೆ ಈಗ ಕುಡಿಯುವ ನೀರು, ತಂಪು ಪಾನೀಯ, ಐಸ್ ಕ್ರೀಮ್ ಬೇಡಿಕೆ ಹೆಚ್ಚಾಗಿದೆ. ವ್ಯಾಪಾರಿಗಳ ಪ್ರಕಾರ ಕಳೆದ ಕೆಲವು ದಿನಗಳಿಂದ ಮಾರಾಟವೂ ಹೆಚ್ಚಾಗಿದೆ. ಸೀಯಾಳಕ್ಕಾಗಿ ಜನ ಬೇಡಿಕೆಯಿಡುತ್ತಿದ್ದರೂ, ಊರ ಸೀಯಾಳ ಲಭಿಸುತ್ತಿಲ್ಲ ಎಂಬ ಕೊರಗು ಗ್ರಾಹಕರದ್ದು.



ಫಲಿತಾಂಶದ ಮೇಲೂ ಬಿದ್ದೀತೇ ಬಿಸಿಲ ಪ್ರಭಾವ?

ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿದ್ದು ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಗಳಲ್ಲಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಧಗೆಯಿಂದಾಗಿ ವಿದ್ಯಾರ್ಥಿಗಳು ಕಂಗೆಡುತ್ತಿದ್ದಾರೆ. ನೆಮ್ಮದಿಯಿಂದ ಪರೀಕ್ಷೆ ಬರೆಯುವಲ್ಲಿ ವಿಫಲರಾಗುತ್ತಿದ್ದಾರೆ. ಇದರಿಂದಾಗಿ ಫಲಿತಾಂಶದಲ್ಲೂ ಸಾಕಷ್ಟು ಹೊಡೆತ ಬೀಳುವ ಲಕ್ಷಣ ಗೋಚರವಾಗುತ್ತಿದೆ.

ಜನರಲ್ ಆಸ್ಪತ್ರೆಯಲ್ಲಿ ಮೂಲೆಗುಂಪಾಗಿದ್ದ ಘಟಕಕ್ಕೆ ಚಿನ್ಮಯ ಮಿಷನ್ ಉಸಿರು

ಅಂತೂ ಆಕ್ಸಿಜನ್ ಪ್ಲಾಂಟ್‌ಗೆ ಮರುಜೀವ!

ಕಾಸರಗೋಡು: ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ತನ್ನ ಕಾರ್ಯ ಚಟುವಟಿಕೆ ಸ್ಥಗಿತಗೊಂಡಿದ್ದ ‘ಆಕ್ಸಿಜನ್ ಪ್ಲಾಂಟ್’ಗೆ ಈಗ ಮರುಜೀವ ಲಭಿಸಿದೆ.

ಕಳೆದ ಮೂರು ವರ್ಷಗಳ ಹಿಂದೆ ಚಿನ್ಮಯ ಮಿಷನ್ ನೇತೃತ್ವದಲ್ಲಿ ಕೊಡುಗೆಯಾಗಿ ಸ್ಥಾಪಿಸಲಾಗಿದ್ದ ಈ ಘಟಕ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಪೂರ್ಣವಾಗಿ ಮೂಲೆ ಗುಂಪಾಗಿ ಬಹುತೇಕ ಹಾನಿಗೀಡಾಗಿತ್ತು. ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅಸಮಾಧಾನವೂ ಕಂಡಿತ್ತು. ಇದೀಗ ಹಾನಿಯಾದ ಭಾಗಗಳನ್ನು ಚಿನ್ಮಯ ಮಿಷನ್‌ನ ಆಶ್ರಯದಲ್ಲಿ ದುರಸ್ತಿ ಮಾಡಲಾಗಿದ್ದು, ಈ ಮೂಲಕ ಆಕ್ಸಿಜನ್ ಘಟಕ ಸಮರ್ಪಕ ಕಾರ್ಯಾಚರಣೆಯನ್ನು ಆರಂಭಿಸಿದೆ.



ಆಸ್ಪತ್ರೆಗೆ ತಜ್ಞರ ತಂಡ ಆಗಮನ

ದುರಸ್ತಿ ಕಾಮಗಾರಿಗೆ ಅಹಮ್ಮದಾಬಾದ್ ನಿಂದ ತಜ್ಞರ ತಂಡ ಮಂಗಳವಾರ ಆಸ್ಪತ್ರೆಗೆ ಆಗಮಿಸಿ ಕ್ರಮ ಕೈಗೊಂಡಿದೆ. ಆಕ್ಸಿಜನ್ ಪ್ಲಾಂಟ್‌ಗಿರುವ ಉಪಕರಣ ಒದಗಿಸಿದ ಅಹಮ್ಮದಾಬಾದ್‌ನ ಅಟ್‌ಮೋಸ್ ಪವರ್ ಹೌಸ್ ಪ್ರೈವೇಟ್ ಸೀನಿಯರ್ ಸರ್ವೀಸ್ ಇಂಜಿನಿಯರ್ ಸತ್ಯಪಾಲ್ ರಾಜ್‌ಪೂತ್ ನೇತೃತ್ವದಲ್ಲಿರುವ ತಂಡ ಸಮಗ್ರ ತಪಾಸಣೆ ನಡೆಸಿತು.

ಯಂತ್ರೋಪಕರಣದ ಸೆನ್ಸರ್ ಹಾನಿಯಾದ ಕಾರಣ ಘಟಕದಲ್ಲಿ ಆಕ್ಸಿಜನ್ ಉತ್ಪಾದಿಸಲು ಅಸಾಧ್ಯವಾಗಿತ್ತು. ಹಾನಿಗೀಡಾದ ಎಲ್ಲಾ ಭಾಗಗಳ ದುರಸ್ತಿಗೊಳಿಸಲಾಗಿದ್ದು, ಇದಕ್ಕೆ 3.50 ಲಕ್ಷ ರೂ. ಖರ್ಚು ತಗಲಿದೆ. ಇಷ್ಟು ದೊಡ್ಡ ಮೊತ್ತ ಮಂಜೂರುಗೊಳಿಸಲು ಕಾಸರಗೋಡು ನಗರಸಭೆ ನೇತೃತ್ವದ ಆಸ್ಪತ್ರೆ ಪರಿಪಾಲನಾ ಸಮಿತಿ ಯಾಗಲಿ, ಆರೋಗ್ಯ ಇಲಾಖೆಯಾಗಲಿ ತಯಾರಿಲಿಲ್ಲ, ಇದರಿಂದ ಚಿನ್ಮಯ ಮಿಷನ್‌ನ ಕೇರಳ ಘಟಕ ಮುಖ್ಯಸ್ಥ ಸ್ವಾಮಿ ವಿವಿಕ್ತಾನಂದ ಸರಸ್ವತೀ, ದುರಸ್ತಿ ಕಾಮಗಾರಿಗಳಿಗೆ ಮೊತ್ತ ಹೊಂದಿಸಿದರು. ಇದರಲ್ಲಿ ಒಂದೂವರೆ ಲಕ್ಷ ರೂಪಾಯಿ ಈಗಾಗಲೇ ಕಂಪೆನಿ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ. ಉಳಿದ ಹಣ ಸದ್ಯ ಪಾವತಿಸಲಾಗುತ್ತಿದೆ.

ಕೃತಜ್ಞತೆ ಸಲ್ಲಿಸಿದ ಜನತೆ

ಸುಮಾರು 35 ಲಕ್ಷ ರೂ. ವೆಚ್ಚದಲ್ಲಿ ಮುಂಬೈ ಸೆಂಟ್ರಲ್ ಚಿನ್ಮಯ ಮಿಷನ್ ನೇತೃತ್ವದಡಿ ಕಾಸರಗೋಡು ಸರಕಾರಿ ಜನರಲ್ ಆಸ್ಪತ್ರೆಯಲ್ಲಿ ಆಮ್ಲಜನಕ ಘಟಕ ಸ್ಥಾಪಿಸಲಾಗಿದೆ. ಚಿನ್ಮಯ ಮಿಷನ್‌ನ ಸಾಮಾಜಿಕ ಬದ್ಧತೆಗೆ ಜನರು ಕೃತಜ್ಞತೆ ಸಲ್ಲಿಸಿದ್ದಾರೆ.

ತೋಟದ ಮನೆಯಲ್ಲಿ ಬೆಂಕಿ ಅವಘಡ



ಬೆಳ್ತಂಗಡಿ ತಾಲೂಕಿನ ನಾವೂರು ಗ್ರಾಮದ ನಿಂರ್ದಿ ಪುಣ್ಯತ್ತಾರು ನಿವಾಸಿ ಮಹೇಂದ್ರ ಮಹಾಬಲಗಿರಿ ರಾವ್ ಎಂಬುವರ ತೋಟದ ಮನೆಗೆ ಸೋಲಾರ್ ಶಾರ್ಟ್‌ಕ್ಯೂಟ್‌ನಿಂದ ಬೆಂಕಿ ತಗುಲಿ ಅಪಾರ ನಷ್ಟ ಉಂಟಾಗಿದೆ.

ಮಾವಿನ ಹಣ್ಣಿನ ಸೀಸನ್ ಆರಂಭಕ್ಕೂ ಮುನ್ನವೇ ‘ಉಪ್ಪಡ್’ ಪ್ರಿಯರನ್ನು ಸೆಳೆಯುತ್ತಿದೆ ರಸ್ತೆ ಬದಿಯಲ್ಲಿನ ಅಪ್ಪೆ, ಜೀರಿಗೆ, ಕಾಡು ಮಾವುಗಳ ರಾಶಿ

ನಡಿ ನಡಿ ಪುತ್ತೂರಿಗೆ ಬಂದಿದೆಯಂತೆ ಉಪ್ಪಿನಕಾಯಿಗೆ ಬೆಸ್ಟ್ ಬೆಸ್ಟ್ ಮಾವಿನ ಮಿಡಿ!

ಸಂಗಮ ವಿಶೇಷ

ಪುತ್ತೂರು: ಈ ಬಾರಿ ಭರ್ಜರಿ ಮಾವಿನ ಫಸಲನ್ನು ನಿರೀಕ್ಷಿಸಲಾಗಿದೆ. ಆದರೆ, ಮಾವಿನ ಹಣ್ಣಿನ ಸೀಸನ್ ಆರಂಭಗೊಳ್ಳುವ ಮೊದಲೇ ಈಗ ಮಾವಿನ ಮಿಡಿಗಳು ಮಾರುಕಟ್ಟೆಗಳಲ್ಲಿ, ರಸ್ತೆ ಬದಿಯಲ್ಲಿ ರಾಶಿ ಹಾಕಿ ಮಾರಾಟ ಮಾಡಲಾಗುತ್ತಿದೆ. ರಾಶಿ ರಾಶಿ ಮಾವಿನ ಮಿಡಿಗಳು ಅದನ್ನು ಖರೀದಿಸುವಂತೆ ಗ್ರಾಹಕರ ಮನ ಸೆಳೆಯುವಂತಿದೆ.

ಈಗ ಸೀಸನ್ ವ್ಯಾಪಾರಿಗಳು

ಉಪ್ಪಿನಕಾಯಿಗೆಂದೇ ವಿಶೇಷವಾಗಿರುವ ಕೆಲ ತಳಿಯ ಮಾವಿನ ಮಿಡಿಗಳಿದ್ದು, ಈ ಮಿಡಿಗಳಿಗೆ ಇದೀಗ ಭಾರೀ ಬೇಡಿಕೆಯೂ ಇದೆ. ಪುತ್ತೂರಿನಲ್ಲಿ ಮಾವಿನ ಉಪ್ಪಿನಕಾಯಿ ಹಾಕಲೆಂದೇ ಇರುವ ವಿವಿಧ ಮಾವಿನ ತಳಿಗಳಿದ್ದು, ಇವುಗಳನ್ನು ಖರೀದಿಸಲು ಮಂಗಳೂರು, ಮಡಿಕೇರಿ, ಮೈಸೂರು ಭಾಗದ ಜನರೂ ಪುತ್ತೂರಿನ ಕೆಲವು ಆಯ್ದ ಮಾರಾಟಗಾರರಲ್ಲಿಗೆ ಬರುತ್ತಾರೆ. ಪುತ್ತೂರಿನ ಸುದಾನ ಶಾಲೆ ಮುಂಭಾಗದಲ್ಲಿ ವಿವಿಧ ರೀತಿಯ ಮಾವಿನ ಮಿಡಿಗಳನ್ನು ಮಾರಾಟ ಮಾಡುವ ತಂಡವೊಂದಿದ್ದು ಕಳೆದ 15 ವರ್ಷಗಳಿಂದ ಇವರು ಈ ಸೀಸನ್‌ನಲ್ಲಿ ಇಲ್ಲಿ ಬಂದು ಮಾವಿನ ಮಿಡಿ ಮಾರಾಟ ಮಾಡುತ್ತಿದ್ದಾರೆ.

ಸ್ವಾದಭರಿತ ಉಪ್ಪಿನಕಾಯಿಗೆ ಅಪ್ಪೆ ಮಿಡಿ

ಅಪ್ಪೆ ಮಿಡಿ ಉಪ್ಪಿನಕಾಯಿ ಹಾಕಲು ಅತ್ಯಂತ ಬೆಸ್ಟ್ ಮಾವಿನ ಕಾಯಿ. ಈ ಅಪ್ಪೆ ಮಿಡಿ ಮಾವಿನಕಾಯಿಗಳು ಸಾಮಾನ್ಯವಾಗಿ ಸಾಗರ, ಶಿವಮೊಗ್ಗ ಭಾಗದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತರಲಾಗುತ್ತದೆ. ಜಿಲ್ಲೆಯಲ್ಲೇ ಬೆಳೆಯುವ ಕೆಲವು ‘ಕಾಟು’ ಮಾವಿನಕಾಯಿಗಳು, ಜೀರಿಗೆ ಮಾವಿನಕಾಯಿ ಹೀಗೆ ಹಲವು ತರಹದ ಮಾವಿನಕಾಯಿ ಜಿಲ್ಲೆಯಲ್ಲಿ ಲಭ್ಯವಿದೆ. ರುಚಿ ಹಾಗೂ ಅದರ ಬಾಳಿಕೆ ಗುಣಮಟ್ಟವನ್ನು ನೋಡಿಕೊಂಡು ಈ ಮಾವಿನ ಮಿಡಿಗಳಿಗೆ ದರ ಫಿಕ್ಸ್ ಮಾಡಲಾಗುತ್ತದೆ.





ಲೋಕೋ ಭಿನ್ನ ರುಚಿಃ

ಜೀರಿಗೆ ಮಾವಿನಕಾಯಿ ಖರೀದಿಸುವ ಒಂದು ವರ್ಗವೇ ಇದ್ದರೆ, ಕಾಡು ಮಾವಿನ ಕಾಯಿ ಅರಸಿ ಬರುವ ಇನ್ನೊಂದು ವರ್ಗ ಇದೆ. ಸ್ಥಳೀಯ ಮರದಿಂದ ಈ ಕಾಯಿಗಳನ್ನು ಕೊಯ್ದು ಮಾರಾಟ ಮಾಡಲಾಗುತ್ತಿದ್ದು, ಗ್ರಾಹಕರ ರುಚಿಗೆ ತಕ್ಕಂತ ಮಾವಿನ ಕಾಯಿಗಳನ್ನು ಪೂರೈಕೆ ಮಾಡಲಾಗುತ್ತಿದೆ.

● ಹಂರ್‍ಝು ಪುತ್ತೂರು, ವ್ಯಾಪಾರಿ

ಹೇಗಿದೆ ಈಗ ರೇಟು?

ಕಾಡು ಮಾವಿನಕಾಯಿ ಕಿಲೋವೊಂದಕ್ಕೆ 150ರಿಂದ 200 ರೂ.ಗಳಿದ್ದರೆ, ಜೀರಿಗೆ ಮಾವಿನಕಾಯಿಗೆ ರೂ.200ರಿಂದ 250ರ ತನಕ ದರವಿದೆ. ಕೆಲವು ಮಾವಿನ ತಳಿಗಳು ಹಣ್ಣಾದರೆ ರುಚಿಕರವಾಗಿರುವುದಿಲ್ಲ ಎನ್ನುವ ಕಾರಣಕ್ಕೆ ಮಿಡಿಯಲ್ಲೇ ಮಾವಿನಕಾಯಿಗಳನ್ನು ಕೊಯ್ದು ಉಪ್ಪಿನಕಾಯಿ ಹಾಕಲು ಈ ಮಾವಿನಕಾಯಿಗಳನ್ನು ಬಳಸಲಾಗುತ್ತದೆ.

ಪುತ್ತೂರಿನ ರಸ್ತೆಬದಿಯಲ್ಲಿ ಕಾಯಿ ಕೊಯ್ಯುವಂತಿಲ್ಲ!

ಈ ಹಿಂದೆ ಪುತ್ತೂರು ತಾಲೂಕಿನಾದ್ಯಂತ ಆಯಾ ಇಲಾಖೆಗಳ ಅಧೀನದಲ್ಲಿ ಬರುವ ರಸ್ತೆ ಪಕ್ಕದಲ್ಲಿ ಇರುವ ಮಾವಿನ ಮರಗಳ ಕಾಯಿಗಳನ್ನು ಇಲಾಖೆ ಅನುಮತಿ ಮೇರೆಗೆ ಕೀಳುವ ಪ್ರಕ್ರಿಯೆ ಈ ಹಿಂದೆ ಇತ್ತಾದರೂ, ಶಾಸಕ ಅಶೋಕ್ ಕುಮಾರ್ ರೈ ಸೂಚನೆಯ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಸದ್ಯ ನಿಂತಿದ್ದು, ಹೀಗಾಗಿ ಖಾಸಗಿ ಭೂಮಿಗಳಿಂದಲೇ ಕಾಯಿ ಸಂಗ್ರಹಿಸಿ ಮಾವಿನ ಮಿಡಿ ಮಾರಾಟಗಾರರು ತನ್ನ ವ್ಯಾಪಾರದಲ್ಲಿ ತೊಡಗಿಕೊಂಡಿದ್ದಾರೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಗುರುವಾರ 12, ಮಾರ್ಚ್ 2026

ಸುತ್ತಮುತ್ತ

ಉಜಿರೆಗೆ ವೈಭವತೆ ತಂದುಕೊಟ್ಟ ಕಾರ್ಯಕ್ರಮ



ಬೆಳ್ತಂಗಡಿ: ಉಜಿರೆಗೆ ವೈಭವತೆಯನ್ನು ತಂದುಕೊಟ್ಟ ಕಾರ್ಯಕ್ರಮ ಇದಾಗಿದೆ. ಇಲ್ಲಿ ನಡೆದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಇತರ ಕಾರ್ಯಕ್ರಮಗಳು ದೇವರ ನಿರ್ಣಯದಂತೆ ಆಗಿದೆ. ಉಜಿರೆಯಲ್ಲಿ ಹಿಂದೆ ಆದ ಕಾರ್ಯಕ್ರಮಗಳಿಗಿಂತ ದಾಖಲೆಯ ಕಾರ್ಯಕ್ರಮ ಆಗಿದೆ. ದೈವಿಕ ಶಕ್ತಿ, ಆರೋಗ್ಯ, ಸಾತ್ವಿಕತೆ ಉಜಿರೆಗೆ ಬಂದಿದೆ ಎಂದು ಉಜಿರೆ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷರಾದ ಪ್ರತಾಪಸಿಂಹ ನಾಯಕ್ ಅವರು ಕಾರ್ಯಕ್ರಮದ ಯಶಸ್ವಿಯಾದ ಬಳಿಕ ಸಂತಸ ವ್ಯಕ್ತಪಡಿಸಿದ್ದಾರೆ.

ವ್ಯವಸ್ಥಿತವಾಗಿ, ಸಂಯಮದಿಂದ ಉತ್ಸವ ನಡೆದಿದೆ: ಪೂಂಜ



ಬೆಳ್ತಂಗಡಿ: ನಾವೆಲ್ಲ ಹಿಂದುಗಳು, ಜನಾರ್ದನ ಸ್ವಾಮಿಯ ಭಕ್ತರು ಎಂಬ ಧ್ಯೇಯದೊಂದಿಗೆ ಉಜಿರೆಯ ಬ್ರಹ್ಮಕಲಶೋತ್ಸವ ನಡೆದಿದೆ. ಶಿಸ್ತು ಬದ್ಧವಾಗಿ, ವ್ಯವಸ್ಥಿತವಾಗಿ, ಸಂಯಮದಿಂದ ಉತ್ಸವ ನಡೆದಿದೆ. ಉಜಿರೆಯ ನಾಗರಿಕರಿಗೆ ಪ್ರೇರಣೆ, ಶಕ್ತಿ, ತೃಪ್ತಿ ತಂದಿದೆ ಎಂದು ಭಾವಿಸಿದ್ದೇನೆ ಎಂದು ಶಾಸಕ ಹರೀಶ್ ಪೂಂಜ ಅವರು ಕಾರ್ಯಕ್ರಮದ ಬಳಿಕ ಸಂತಸ ವ್ಯಕ್ತಪಡಿಸಿದ್ದಾರೆ.

ಮಾ.21ಕ್ಕೆ ಏಕ ಪವಿತ್ರ ನಾಗಮಂಡಲ ಸೇವೆ

ಮುಲ್ಕಿ: ಸಮೀಪದ ಅತಿಕಾರಿಬೆಟ್ಟು ನಡಿಬೆಟ್ಟು ಶ್ರೀ ಧೂಮಾವತಿ ದೈವಸ್ಥಾನದ ಬಳಿಯ ಮೂಲ ಶ್ರೀ ನಾಗಾಲಯದಲ್ಲಿ ಮಾ.21ಕ್ಕೆ ವೇ.ಮೂ. ಶ್ರೀ ಲಕ್ಷ್ಮೀನಾರಾಯಣ ಭಟ್ ಮುಲ್ಕಿ ನೇತೃತ್ವದಲ್ಲಿ ನಾಗಪಾತ್ರಿ ಕೆ. ವಾಸುದೇವ ನಾಗೇಶ್ ಪೈ ಗುಂಡಿಬೈಲು, ಉಡುಪಿ ಹಾಗೂ ಮದ್ದೂರು ಶ್ರೀ ಕೃಷ್ಣಪ್ರಸಾದ್ ವೈದ್ಯ ಬಳಗದವರಿಂದ ಏಕ ಪವಿತ್ರ ನಾಗಮಂಡಲ ಸೇವೆ ನಡೆಯಲಿದೆ. ಮಾ. 21ಕ್ಕೆ ಬೆಳಗ್ಗೆ 8ರಿಂದ ನಾಗಮಂಡಲ ಚಪ್ಪರದಲ್ಲಿ ಗಣಯಾಗ, ನಾಗಬನದಲ್ಲಿ ಪ್ರಧಾನ ಹೋಮ, ಆಶ್ಲೇಷಾ ಬಲಿ, ಕಲಶಾಭಿಷೇಕ, ಪ್ರಸನ್ನ ಪೂಜೆ, ವಟು ಆರಾಧನೆ, ದಂಪತಿ ಪೂಜೆ, ಕನ್ನಿಕಾಪೂಜೆ, ದರ್ಶನ ಸೇವೆ, ಮಧ್ಯಾಹ್ನ ಪಲ್ಲಪೂಜೆ,ಮಹಾ ಅನ್ನಸಂತರ್ಪಣೆ ರಾತ್ರಿ 8:30ರಿಂದ ನಾಗಬನದಲ್ಲಿ ಹಾಲಿಟ್ಟು ಸೇವೆ, 9:30ರಿಂದ ಏಕಪವಿತ್ರ ನಾಗಮಂಡಲ ಸೇವೆ, ಪ್ರಸಾದ ವಿತರಣೆ ನಡೆಯಲಿದೆ.

ಮಾ.14, 15: ನೇಮ

ಮುಲ್ಕಿ: ಚರಂತಿಪೇಟೆ ಕೋಟೆಕೊಪ್ಲ ಶ್ರೀ ಬಬ್ಬುಸ್ವಾಮಿ ದೈವಸ್ಥಾನದಲ್ಲಿ 23ನೇ ವರ್ಷದ ಬಬ್ಬು ಸ್ವಾಮಿ ಮತ್ತು ಪರಿವಾರ ದೈವಗಳ ನೇಮವು ಮಾ.14ರಿಂದ 15ರವರೆಗೆ ಜರಗಲಿದೆ. ಮಾ. 14ಕ್ಕೆ ಮಧ್ಯಾಹ್ನ ಚಪ್ಪರ ಮಹೂರ್ತ,ರಾತ್ರಿ ಭಂಡಾರ ಇಳಿದು ಶ್ರೀ ಬಬ್ಬುಸ್ವಾಮಿ, ತನ್ನಿಮಾನಿಗ ದೈವಗಳ ನೇಮ, ಮಾ.15ಕ್ಕೆ ಸಂಜೆ ಚಾಮುಂಡಿ, ಗುಳಿಗ, ಧೂಮಾವತಿ, ಮತ್ತು ಬಂಟ ದೈವಗಳ ನೇಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ನಿಡ್ಪಳ್ಳಿ ದೇವಸ್ಥಾನದಲ್ಲಿ ಜಾತ್ರೆ

ನಿಡ್ಪಳ್ಳಿ: ಶ್ರೀ ಶಾಂತದುರ್ಗಾ ದೇವಸ್ಥಾನ ಶ್ರೀ ಕ್ಷೇತ್ರ ನಿಡ್ಪಳ್ಳಿ ಇದರ ಪ್ರತಿಷ್ಠಾ ಉತ್ಸವ ಹಾಗೂ ಜಾತ್ರೆಯು ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಮಾ.13ಕ್ಕೆ ಜರಗಲಿದೆ.



ಧಾರ್ಮಿಕ ಕಾರ್ಯಕ್ರಮಗಳು; ಮಾ.12ರಂದು ಬೆಳಗ್ಗೆ ಗಂಟೆ 10ರಿಂದ ಬಲಿವಾಡು ಶೇಖರಣೆ ಹಾಗೂ ಹಸಿರುವಾಣಿ ಶೇಖರಣೆ, ಮಾ.13ರಂದು ಬೆಳಗ್ಗೆ ಪ್ರಾರ್ಥನೆ, ಗಣಪತಿ ಹೋಮ, ಶ್ರೀ ಶಾಂತದುರ್ಗಾ ಭಕ್ತ ವೃಂದದಿಂದ ಶ್ರೀ ದೇವರಿಗೆ ಪಂಚವಿಂಶತಿ ಕಲಶ, ಮಧ್ಯಾಹ್ನ ಗಂಟೆ 12.30ಕ್ಕೆ ಮಹಾಪೂಜೆ, ಪಲ್ಲಪೂಜೆ, ಪ್ರಸಾದ ವಿತರಣೆ ಅನ್ನ ಸಂತರ್ಪಣೆ. ಸಂಜೆ 6ರಿಂದ ಗಂಗಾಧರ್ ಮಾರಾರ್ ನೀಲೇಶ್ವರ ಬಳಗದವರಿಂದ ತಾಯಾಂಬಕ, ರಾತ್ರಿ 7ರಿಂದ ರಾತ್ರಿ ಪೂಜೆ, ಪ್ರಸಾದ ವಿತರಣೆ ನಂತರ ಶ್ರೀ ಭೂತ ಬಲಿ, ದರ್ಶನ ಬಲಿ, ಬಟ್ಟಲು ಕಾಣಿಕೆ, ರಾಜಾಂಗಣ ಪ್ರಸಾದ, ಶ್ರೀ ದೇವರ ಗರ್ಭಗೃಹ ಪ್ರವೇಶ, ಮಂತ್ರಾಕ್ಷತೆ, ಮಹಾ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಶ್ರೀ ಶಾಂತದುರ್ಗಾ ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.


ವೇದ ಘೋಷ, ಜಯಜಯಕಾರ, ವಾದ್ಯ ಮೇಳದ ಝೇಂಕಾರ | ಪುನೀತರಾದ ಭಕ್ತರು

ಉಜಿರೆ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶಾಭಿಷೇಕ ಸಂಪನ್ನ

ಬೆಳ್ತಂಗಡಿ: ವೇದ ಘೋಷ, ಜಯಜಯಕಾರ ಹಾಗೂ ವಾದ್ಯ ಮೇಳದ ನಿನಾದದೊಂದಿಗೆ ಬೆಳ್ತಂಗಡಿ ತಾಲೂಕಿನ ಇತಿಹಾಸ ಪ್ರಸಿದ್ಧ ಉಜಿರೆ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕಲಶಾಭಿಷೇಕ ಬುಧವಾರ ಬೆಳಿಗ್ಗೆ ಸಹಸ್ರಾರು ಭಕ್ತಬಂಧುಗಳ ಸಮ್ಮುಖದಲ್ಲಿ ಸಂಪನ್ನಗೊಂಡಿತು.

ಬುಧವಾರ ಬೆಳಿಗ್ಗೆ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಮಾಧವನ್ ತಂತ್ರಿಗಳ ಮಾರ್ಗದರ್ಶನದಲ್ಲಿ ಬೆಳಿಗ್ಗೆ ಗಣಪತಿ ಹೋಮ, ಸುಮುಹೂರ್ತದಲ್ಲಿ ಕವಾಟೋದ್ಘಾಟನೆ ನಡೆದು ಅಭಿಷೇಕ, ಪ್ರಾಯಶ್ಚಿತ್ತ ಹೋಮ, ಕಲಶಾಭಿ ಷೇಕ, ತತ್ವಕಲಶಾಭಿಷೇಕ, ಮಹಾಬಲಿಪೀಠ ಪ್ರತಿಷ್ಠೆ, ಸಹಸ್ರ ಪರಿಕಲಶಾಭಿಷೇಕ, ಕುಂಭೇಶ ಕಲಶಾಭಿ ಷೇಕ, 1008 ಕಲಶಗಳ ಬ್ರಹ್ಮಕಲಶಾಭಿಷೇಕ ಸಂಭ್ರಮದಿಂದ ಸಂಪನ್ನಗೊಂಡಿತು. ಬೆಳಿಗ್ಗೆ ಸುಯಜ್ಞ ಯಾಗ ಮಂಟಪದಲ್ಲಿ ಕಿರಣ ರಾವ್ ಮತ್ತು ಮನೆಯವರ ಸೇವಾರ್ಥ ಶ್ರೀ ಹರಿವಾಯುಸ್ತುತಿ ಪುರಶ್ಚರಣ ಹೋಮವನ್ನು ವೇದಮೂರ್ತಿ ಚೆನ್ನೈ





ಪುರೋಹಿತ ಹರೀಶ್ ಹೊಳ್ಳ ನೆರವೇರಿಸಿದರು. ವಿಪ್ರ ಬಾಂಧವರಿಂದ ವೇದ ಪಾರಾಯಣ, ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಠಣ ನಡೆಯಿತು.

ಬ್ರಹ್ಮಕಲಶೋತ್ಸವದ ಸುಮುಹೂರ್ತದಲ್ಲಿ ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರು, ಪವಿತ್ರ ಪಾಣಿ ಶಿವರಾಮ ಪಡುವೆಟ್ನಾಯ, ನಾಳ್ಕಿಯವರಾದ ಅನಂತಮೋಹನ ಮೂಡಣ್ಣಾಯ, ವಿಜಯಗೋಪುರ ನಿರ್ಮಾಣ ಸಮಿತಿ ಅಧ್ಯಕ್ಷ ಶಶಿಧರ ಶೆಟ್ಟಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಪ್ರತಾಪಸಿಂಹ ನಾಯಕ್, ಶಾಸಕ ಹರೀಶ್ ಪೂಂಜ, ಸಮಿತಿ ಸಂಚಾಲಕ ಕೆ. ಮೋಹನ ಕುಮಾರ್, ಕೋಶಾಧಿಕಾರಿ ರಾಜೇಶ್ ಪೈ, ಬೆಂಗಳೂರು ಸಮಿತಿಯ ಮಂಜುನಾಥ ಕನ್ಯಾಡಿ, ವೆಂಕಟ್ರಮಣ ರಾವ್, ಗಾಯಕ ಶಶಿಧರ್ ಕೋಟೆ, ಸಮಿತಿ ಪದಾಧಿಕಾರಿಗಳು ಹಾಗೂ ಸಹಸ್ರಾರು ಭಕ್ತಾದಿ ಗಳು ಉಪಸ್ಥಿತರಿದ್ದು ಭಕ್ತಿಭಾವದ ಪುಣ್ಯ ಕ್ಷಣವನ್ನು ಕಣ್ತುಂಬಿಕೊಂಡರು. ಸುನಾದ ಭಜನಾ ಕುಟೀರದಲ್ಲಿ ಉದಯಾಸ್ತಮಾನ ನಿರಂತರ ಭಜನಾ ಸೇವೆ ನಡೆಯಿತು.

ಮಧ್ಯಾಹ್ನ ಸುಪ್ರಸಾದ ಅನ್ನಛತ್ರದಲ್ಲಿ ಪಲ್ಲಪೂಜೆ ನಡೆದು ಬ್ರಹ್ಮಕಲಶೋತ್ಸವ ಸಮಿತಿ ವತಿಯಿಂದ ನಡೆದ ಸಾರ್ವಜನಿಕ ಅನ್ನಸಂತರ್ಪಣೆ ಯಲ್ಲಿ ಸಹಸ್ರಾರು ಭಕ್ತಾದಿಗಳು ಅನ್ನಪ್ರಸಾದ ಸ್ವೀಕರಿಸಿದರು.

ಕೃಷ್ಣಾನುಗ್ರಹ ಸಭಾಭವನದಲ್ಲಿ ಬೆಳಿಗ್ಗೆ ಉಜಿರೆಯ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಪ್ರಾಯೋಜಕತ್ವದಲ್ಲಿ ಗಾನಗಂಧರ್ವ ಶಶಿಧರ ಕೋಟೆ ಮತ್ತು ತಂಡದವರಿಂದ ಭಕ್ತಿ ಸಂಗೀತ ಸಂಭ್ರಮ ಕಾರ್ಯಕ್ರಮ ನಡೆಯಿತು. ಕಲಾವಿದರನ್ನು ಸಮಿತಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ, ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಶಾಸಕ ಹರೀಶ್ ಪೂಂಜಾ, ಅರ್ಚಕ ಶ್ರೀನಿವಾಸ ಹೊಳ್ಳ, ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷ ಪ್ರಸಾದ್ ಬಿ.ಎಸ್ , ಕಾರ್ಯದರ್ಶಿ ರವೀಂದ್ರ ಶೆಟ್ಟಿ ಮೊದಲಾದವರು ಸನ್ಮಾನಿಸಿದರು.

ಸಾವಿರಾರು ಕಲಾವಿದರಿಂದ ವಿವಿಧ ಕಲೆ, ಸಂಸ್ಕೃತಿಯ ಪ್ರದರ್ಶನ

ಐತಿಹಾಸಿಕ ಶೋಭಾಯಾತ್ರೆ 'ಧರ್ಮಯಾನ'

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸಂದರ್ಭ ಬುಧವಾರ ಸಂಜೆ ಉಜಿರೆಯ ಶ್ರೀ ಡಿ. ರತ್ನವರ್ಮ ಹೆಗ್ಗಡೆ ಕ್ರೀಡಾಂಗಣದಿಂದ ಶ್ರೀ ಜನಾರ್ದನ ದೇವಸ್ಥಾನದವರೆಗೆ ಐತಿಹಾಸಿಕ ಶೋಭಾಯಾತ್ರೆ ಧರ್ಮಯಾನ ನಡೆಯಿತು.

ಬುಧವಾರ ಬ್ರಹ್ಮಕಲಶೋತ್ಸವದ ಕೊನೆಯ ದಿನವಾಗಿದ್ದು ಈ ಶೋಭಾಯಾತ್ರೆ ಇನ್ನಷ್ಟು ಮೆರುಗು ಹೆಚ್ಚಿಸಿತು. ಶೋಭಾಯಾತ್ರೆಯಲ್ಲಿ ಸರ್ವಾಲಂಕೃತ ಮೂರು ರಥಗಳಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರಹೆಗ್ಗಡೆ, ಉಡುಪಿಸೋದೆ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಗಳು, ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಗಳನ್ನು ಮೆರವಣಿಗೆಯಲ್ಲಿ ಬರಮಾಡಿಕೊಳ್ಳಲಾಯಿತು. ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯ ಶೋಭಾಯಾತ್ರೆಯನ್ನು ಕ್ಷೇತ್ರಕ್ಕೆ ಸ್ವಾಗತಿಸಿದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಶೋಭಾಯಾತ್ರೆಗೆ ಚಾಲನೆ ನೀಡಿದರು. ಧರ್ಮಸ್ಥಳದ ಹೇಮಾವತಿ ವೀ.ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಎಸ್‌ಕೆಡಿಆರ್‌ಡಿಪಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್.ಎಸ್., ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಡಾ. ಸತೀಶ್ಚಂದ್ರ ಎಸ್., ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್, ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವರಾಂ, ಸಿರಿ ಗ್ರಾಮೋದ್ಯೋಗ ಸಂಸ್ಥೆಯ ಎಂಡಿ ಕೆ.ಎನ್.ಜನಾರ್ದನ್, ಎಸ್‌ಡಿಎಂ ಐಟಿ ವಿಭಾಗದ ಸಿಇಒ ಪೂರನ್ ವರ್ಮ, ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ, ಧಾರ್ಮಿಕ ಮುಖಂಡ ಕಿರಣ್ ಚಂದ್ರ ಪುಷ್ಪಗಿರಿ ಮೊದಲಾದವರು ಪಾಲ್ಗೊಂಡಿದ್ದರು. ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷಕೆ.ಪ್ರತಾಪಸಿಂಹನಾಯಕ್, ಗೋಪುರ ನಿರ್ಮಾಣ ಸಮಿತಿಯ ಅಧ್ಯಕ್ಷ ಶಶಿಧರ್ ಶೆಟ್ಟಿ ಬರೋಡಾ ನೇತೃತ್ವ ವಹಿಸಿದ್ದರು. ಕೇಸರಿ ಧ್ವಜ ಹಿಡಿದು ಪೇಟ ಧರಿಸಿದ ಸಹಸ್ರಾರು ಭಕ್ತರು ಸಾಥ್ ನೀಡಿದರು.





ಸಾವಿರಾರು ಕಲಾವಿದರು ಭಾಗಿ

ಧರ್ಮಯಾನ ಶೋಭಾಯಾತ್ರೆ ಯಲ್ಲಿ 100 ಜನರ ಕುಣಿತ ಭಜನೆ, ಘಟೋತ್ಕಚ-ಆಂಜನೇಯ, 5 ಕೇರಳದ ದೇವರು,30 ಮಂದಿ ಚಂಡೆ, ವಯಲಿನ್ 5 ಪಿಲಿಕವಾಡಿ, 20 ಮಣಿಪುರಿ,20 ಕರಗಾಟ,25 ಅಸ್ಸಾಂ ಬಿಹು, 20 ಪಂಜಾಬಿ ಬಾಂಗ್ರಾ,25 ರಾಜಸ್ಥಾನಿ ಘೂಮರ್, ಗುಜರಾತ್ ಗಾರ್ಭ,12 ನಗಾರಿ, 15 ವೀರಗಾಸೆ,12 ಪೂಜಾ ಕುಣಿತ, 12 ಡೊಳ್ಳು, ಪೇಟಾಧಾರಿಗಳು, 15 ವೀರಗಾಸೆ, 8 ವೇದ ಮಂತ್ರ, 10ಕೊಂಬು, 12ಡೊಳ್ಳು ತಲಾ 10 ವಾದ್ಯ, ಬ್ಯಾಂಡ್, ಚಂಡೆ ಸಹಿತ ರಾಜ್ಯ, ಅಂತರ್ ರಾಜ್ಯ ತಂಡಗಳ ಸಾವಿರಕ್ಕಿಂತ ಅಧಿಕ ಕಲಾವಿದರು ಶೋಭಾಯಾತ್ರೆಗೆ ವಿಶೇಷ ಮೆರುಗು ನೀಡಿದರು.

ಧಾರ್ಮಿಕ ಸಭೆಯಲ್ಲಿ ಸೋದೆ ಮಠದ ವಿಶ್ವವಲ್ಲಭತೀರ್ಥ ಶ್ರೀ ಸಂದೇಶ

ದೇವಸ್ಥಾನಗಳ ಅಭಿವೃದ್ಧಿಯಿಂದ ಊರು ಸುಭೀಕ್ಷೆ

ಬೆಳ್ತಂಗಡಿ: ದೇವಸ್ಥಾನಗಳು ಸುಸ್ಥಿತಿಯಲ್ಲಿದ್ದರೆ ಊರೂ ಸುಭೀಕ್ಷವಾಗಿರುತ್ತವೆ. ವ್ಯಕ್ತಿ ಪರಿವರ್ತನೆ ದೇವಾಲಯಗಳಿಂದ ಸಾಧ್ಯ ಎಂದು ಉಡುಪಿ ಸೋದೆ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಹೇಳಿದರು.

ಅವರು ಬುಧವಾರ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಕೊನೆ ದಿನವಾದ ಬುಧವಾರ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಹೃದಯದಲ್ಲಿನ ಭಕ್ತಿ ಭಾವದಿಂದಲೇ ದೇಗುಲಗಳ ನಿರ್ಮಾಣವಾಗುವುದು. ಉತ್ತಮ ಮನಸ್ಸುಗಳು ಸೇರುವಲ್ಲಿ ದೈವಿ ಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ ಎಂದರು.

ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ಸನ್ನಿಧಾನವನ್ನು ಸುಂದರವಾಗಿ ಕಾಪಾಡಿ ಕೊಳ್ಳುವ ಜವಾಬ್ದಾರಿ ಭಕ್ತರದ್ದು. ದೇವಾಲಯದಲ್ಲಿನ ವೈಭವಗಳು ಭಕ್ತರನ್ನು ಆನಂದಗೊಳಿಸುತ್ತವೆ. ಉಜಿರೆ ದೇಗುಲ ಸುಂದರವಾಗಿ ನಿರ್ಮಾಣಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಮಾತನಾಡಿ, ಕಾರ್ಯಕ್ರಮ ಆಯೋಜನೆ ಹಾಗೂ ವ್ಯವಸ್ಥೆಗೆ ಮೆಚ್ಚುಗೆ ಸಲ್ಲಿಸಿದರು.

ಅಧ್ಯಕ್ಷತೆಯನ್ನು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕೆ. ಪ್ರತಾಪ ಸಿಂಹ ನಾಯಕ್ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಡಿ. ಹರ್ಷೇಂದ್ರ ಕುಮಾರ್, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ, ಶಾಸಕ ಹರೀಶ್ ಪೂಂಜ, ಮೆಸ್ಕಾಂ ಜಿಲ್ಲಾ ಅಧ್ಯಕ್ಷ ಕೆ. ಹರೀಶ್ ಕುಮಾರ್, ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ, ಅಸ್ಟ್ರೋಪ್ ಸಿಇಒ ಲಂಚುಲಾಲ್ ಕೆ.ಎಸ್., ಬೆಂಗಳೂರು ಉದ್ಯಮಿ ತ್ರಿವಿಕ್ರಮ ಸಫಲ್ಯ, ಕಿರಣ್ ರಾವ್, ಕುಸುಮಾ ಪಡುವೆಟ್ನಾಯ, ವೃಂದಾ ಪಡುವೆಟ್ನಾಯ, ಲೀಲಾವತಿ ರಾಜು ಮೇಸ್ತ್ರಿ ಉಪಸ್ಥಿತರಿದ್ದರು. ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿ, ಪ್ರಧಾನ ಅರ್ಚಕ ಶ್ರೀನಿವಾಸ್ ಹೊಳ್ಳ, ಬ್ರಹ್ಮವಾಹಕ ವೆಂಕಟರಾಜ ಹೆಬ್ಬಾರ್, ನಾಗೇಂದ್ರ ಭಾರದ್ವಜ, ಬೆಂಗಳೂರು ಸಮಿತಿ ಸಂಚಾಲಕ ಮಂಜುನಾಥ ಕನ್ಯಾಡಿ, ಮಹಾದೇವ ಮೂರ್ತಿ ಬೆಂಗಳೂರು, ವೇದಮೂರ್ತಿ ಬಾಲಕೃಷ್ಣ ಹೊಳ್ಳ ಪ್ರವೀಣ್ ಕುಮಾರ್ ಇಂದ್ರ,ಕೆ.ಮೋಹನ್ ಕುಮಾರ್ ಅಮ್ಮಿ ಪೂಜಾರಿ ಪಾರರಿಗೆ ಗೌರವಾರ್ಪಣೆ ನಡೆಯಿತು.



> ಶರತ್ ಕೃಷ್ಣ ಪಡ್ವೆಟ್ನಾಯರ ನೇತೃತ್ವದಲ್ಲಿ ಸ್ಮರಣೀಯ ಕಾರ್ಯಕ್ರಮಗಳು ನಡೆದಿವೆ. ಭಗವಂತ ಸಂತೃಪ್ತನಾಗಿದ್ದಾನೆ ಎಂಬುದಕ್ಕೆ ಇಲ್ಲಿನ ವಿಜೃಂಭಣೆಯೇ ಸಾಕ್ಷಿ.
> ● ಡಾ. ವೀರೇಂದ್ರ ಹೆಗ್ಗಡೆ

ವಿಶೇಷ ಸಂಚಿಕೆ ಬಿಡುಗಡೆ

ಪತ್ರಕರ್ತ ಶ್ರೀನಿವಾಸ ತಂತ್ರಿ ಅವರ ಸಂಪಾದಕತ್ವದ ತುಳಸಿ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಸುಬ್ರಹ್ಮಣ್ಯ ಶ್ರೀಗಳು ಬಿಡುಗಡೆಗೊಳಿಸಿದರು. ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯ ಸ್ವಾಗತಿಸಿದರು. ಉಪನ್ಯಾಸಕ ಡಾ. ಶ್ರೀಧರ ಭಟ್ ನಿರೂಪಿಸಿ, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯದರ್ಶಿ ರವೀಂದ್ರ ಶೆಟ್ಟಿ ವಂದಿಸಿದರು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆ

ಶ್ರದ್ಧೆ ನಂಬಿಕೆ ಭಕ್ತಿಯ ಮೂಲ: ವಜ್ರದೇಹಿ ಶ್ರೀ

ಬೆಳ್ತಂಗಡಿ: ದೇವರಿಗೆ ಭಕ್ತನ ಕರ್ತವ್ಯ ಪ್ರೀತಿಯಾಗುತ್ತದೆ ಹೊರತು ಸಂಪತ್ತಲ್ಲ ಎಂದು ಗುರುಪುರ ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಅವರು ಮಂಗಳವಾರ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಬ್ರಹ್ಮಕಲಶೋತ್ಸವದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು. ಶ್ರದ್ಧೆ ನಂಬಿಕೆ ಭಕ್ತಿಯ ಮೂಲವಾಗಿದ್ದು ಆಸ್ತಿಕತೆ ಎಂಬ ಸಂಪತ್ತನ್ನು ಕಾಪಾಡಿಕೊಳ್ಳಬೇಕು, ದೇವರು ಕೊಟ್ಟ ಸಂಪತ್ತನ್ನು ಪುಣ್ಯಕಾರ್ಯಗಳಿಗೆ ಉಪಯೋಗಿಸಿಕೊಳ್ಳುವುದುರೊಂದಿಗೆ ಹಿರಿಯರ ತ್ಯಾಗ ಪುಣ್ಯವನ್ನು ಸ್ಮರಿಸುತ್ತಾ ತಾಯಿ ನೆಲದ ಬಗ್ಗೆ ಗೌರವ ಇಟ್ಟುಕೊಳ್ಳಬೇಕು. ನಾನು ನನ್ನದು ಎಂಬ ಅಹಂಭಾವದಿಂದ ಹೊರ ಬಂದು ಕಾಲದ ಪ್ರವಾಹವನ್ನು ಎದುರಿಸುತ್ತಾ ಗೌರವಯುತ ಜೀವನವನ್ನು ನಡೆಸಬೇಕು ಎಂದು ಹೇಳಿದರು

ಪುತ್ತೂರು ಜಿ.ಎಲ್. ಆಚಾರ್ಯ ಸಮೂಹ ಸಂಸ್ಥೆಗಳ ಚೇರ್ಮನ್ ಬಲರಾಮ ಆಚಾರ್ಯ ಮಾತನಾಡಿ, ಉಜಿರೆ ಸಾಮಾಜಿಕ, ಸಾಂಸ್ಕೃತಿಕ ಶೈಕ್ಷಣಿಕ ನಗರಿಯಾಗಿ ನ್ಯಾಯಯುತವಾಗಿ ಬೇರೆ ಬೇರೆ ರೀತಿಯಲ್ಲಿ ಗುರುತಿಸಿಕೊಂಡಿದೆ. ಇಲ್ಲಿ ನಡೆಯುತ್ತಿರುವ ಬ್ರಹ್ಮಕಲಶೋತ್ಸವ ಅತ್ಯಂತ ಅಚ್ಚುಕಟ್ಟಿನ ಕಾರ್ಯಕ್ರಮ ಎಂದರು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೇವಸ್ಥಾನದ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯ, ಬ್ರಹ್ಮಕಲಶೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಶಶಿಧರ ಶೆಟ್ಟಿ ಬರೋಡ, ವಿಹಿಂಪ ಬೆಳ್ತಂಗಡಿ ಪ್ರಖಂಡದ ಅಧ್ಯಕ್ಷ ವಿಷ್ಣು ಮರಾಠೆ, ಜಿಲ್ಲಾ ಕಾರ್ಯದರ್ಶಿ ನವೀನ್ ನೆರಿಯ, ಬೆಳ್ತಂಗಡಿ ವಿಜಯ ಕ್ರೆಡಿಟ್ ಕೊ-ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಜಯಂತ ಶೆಟ್ಟಿ, ಗುರುವಾಯನಕೆರೆ ಸನಿಹದ ಶಿಕ್ಷಣೋದ್ಯಮಿ ಸುಮಂತ್ ಕುಮಾರ್ ಜೈನ್, ಜಿಲ್ಲಾ ತುಳು ಶಿವಳ್ಳಿ ಸಭಾ ಅಧ್ಯಕ್ಷ ಡಾ. ಎಂ.ಎಂ. ದಯಾಕರ್ ಬೆಳ್ತಂಗಡಿ ಸಿರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಕೆ. ಎನ್. ಜನಾರ್ದನ, ಉಜಿರೆ ಎಸ್ ಡಿ ಎಂ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ. ಜನಾರ್ದನ, ಉದ್ಯಮಿಗಳಾದ ಪ್ರವೀಣ್ ಕುಮಾರ್, ಇಂದ್ರ, ಜಿ. ಪ್ರಭಾತ್ ಭಟ್, ಕನ್ಯಾಡಿ ಶ್ರೀ ಅಯ್ಯಪ್ಪ ಕ್ಷೇತ್ರದ ಅಧ್ಯಕ್ಷ ಹರೀಶ್ ರಾವ್, ಬೆಳ್ತಂಗಡಿ ಶ್ರೀ ಗುರುನಾರಾಯಣ ಸ್ವಾಮಿ ಸೇವಾ ಸಂಘದ ಅಧ್ಯಕ್ಷ ಜಯವಿಕ್ರಮ್ ಕಲ್ಲಾಪು, ಬೆಳ್ತಂಗಡಿ ಕರಾಡ ಬ್ರಾಹ್ಮಣ ಸಭಾ ಅಧ್ಯಕ್ಷ ವಿಷ್ಣು ಭಟ್, ಬೆಳ್ತಂಗಡಿ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಸಂಪತ್ ಬಿ. ಸುವರ್ಣ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ತುಕಾರಾಮ ಬಿ. ಇದ್ದರು. ಬ್ರಹ್ಮರಕೂಟ್ಲು ಬಿ. ಎಸ್. ಬ್ಯಾಂಡ್ ನ ಬಿ. ಭೋಜ ಮತ್ತು ತಂಡದವರನ್ನು ಸನ್ಮಾನಿಸಲಾಯಿತು. ರಾಜಗೋಪುರ ನಿರ್ಮಾಣ ಸಮಿತಿಯ ಸಹ ಕೋಶಾಧಿಕಾರಿ ಸಂಜೀವ ಶೆಟ್ಟಿ ಸ್ವಾಗತಿಸಿ, ಉಪನ್ಯಾಸಕ



> ಬ್ರಹ್ಮಕಲಶ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಸೇವೆ ನೀಡಿದ್ದಾರೆ. ಅಳಿಲ ಸೇವೆಯು ಅತ್ಯಂತ ಪ್ರಾಮುಖ್ಯವಾಗಿದ್ದು ಇದು ಪ್ರತಿ ಕಾರ್ಯದ ಅಡಿಪಾಯವಾಗಿದೆ. ದೇವರು ಭಕ್ತನಿಂದ ತನ್ನ ಇಚ್ಛೆಯಂತೆ ಸೇವೆ ಮಾಡಿಸಿಕೊಳ್ಳುತ್ತಾನೆ.
> ● ಪ್ರತಾಪಸಿಂಹ ನಾಯಕ್

ಮಾ.2ರಿಂದ ಮಾ.11ರವರೆಗೆ ಭಕ್ತಾದಿಗಳಿಗೆ ರುಚಿಕರವಾದ ಭೋಜನ

2 ಲಕ್ಷಕ್ಕೂ ಅಧಿಕ ಜನರಿಂದ ಅನ್ನಪ್ರಸಾದ ಸ್ವೀಕಾರ

ಉಜಿರೆ: ಉಜಿರೆಯ ಶ್ರೀ ಜನಾರ್ದನ ಸ್ವಾಮಿ ದೇವಾಲಯದಲ್ಲಿ ಅಭೂತಪೂರ್ವ ರೀತಿಯಲ್ಲಿ ನಡೆದ ಬ್ರಹ್ಮಕಲಶೋತ್ಸವ ಕಾರ್ಯಕ್ರಮದಲ್ಲಿ ಮಾ.2ರಿಂದ ಬುಧವಾರದವರೆಗೆ 2ಲಕ್ಷಕ್ಕೂ ಅಧಿಕ ಮಂದಿ ಅನ್ನಪ್ರಸಾದ ಸ್ವೀಕರಿಸಿದ್ದಾರೆ.

ಶುಚಿ-ರುಚಿಯಾದ ಭೋಜನ ಪ್ರಸಾದವನ್ನು ಭಕ್ತರಿಗೆ ನಿರಂತರವಾಗಿ ನೀಡಲಾಗಿದ್ದು, 50-60ಸಾವಿರ ಮಂದಿ ಉಪಾಹಾರ ಸ್ವೀಕರಿಸಿದ್ದಾರೆ.ಬುಧವಾರ ಒಂದೇ ದಿನ ಮಧ್ಯಾಹ್ನವೇ 12ಕ್ವಿಂಟಾಲ್ ಗೂ ಅಧಿಕ ಅಕ್ಕಿಯನ್ನು ಮತ್ತು ಈ ವರೆಗೆ ಒಟ್ಟು 200-300ಕ್ವಿಂಟಾಲ್ ಅಕ್ಕಿಯನ್ನು ಅನ್ನಪ್ರಸಾದಕ್ಕೆ ಬಳಸಲಾಗಿದೆ. ಅನ್ನಪ್ರಸಾದ ವಿತರಣೆಯನ್ನು ಅತ್ಯಂತ ಸುವ್ಯವಸ್ಥಿತವಾಗಿ ವಿತರಿಸಲಾಗಿದೆ . ಅಕ್ಕಿ , ತರಕಾರಿಯನ್ನು ವಿಶೇಷವಾಗಿ ಬೆಂಗಳೂರು ಮತ್ತು ಶ್ರೀಕ್ಷೇತ್ರ ಧರ್ಮಸ್ಥಳದಿಂದ ಒದಗಿಸಲಾಗಿದೆ. ಹಾಗೆಯೇ ಭಕ್ತರು ದೊಡ್ಡ ಪ್ರಮಾಣದಲ್ಲಿ ಅಗತ್ಯ ವಸ್ತುಗಳು, ತರಕಾರಿಗಳನ್ನು ಹೊರೆಕಾಣಿಕೆ ಮೂಲಕ ನೀಡಿರುವ ಬಗ್ಗೆ ಭೋಜನಶಾಲಾ ಉಸ್ತುವಾರಿ ವಹಿಸಿದ್ದ ಹಿರಿಯ ಸಾಮಾಜಿಕ ಕಾರ್ಯಕರ್ತ ರಾಮಚಂದ್ರ ಉಜಿರೆ ಅವರು ತಿಳಿಸಿದ್ದಾರೆ.

ಎಲ್ಲೂ ಕಾಣದ ಪ್ಲಾಸ್ಟಿಕ್ ಬಳಕೆ

ಇಡೀ ಭೋಜನ ಶಾಲೆಯಲ್ಲಿ ಎಲ್ಲೂ ಪ್ಲಾಸ್ಟಿಕ್ ಕಂಡುಬಂದಿಲ್ಲ. ಪ್ಲಾಸ್ಟಿಕ್ ಬಳಕೆಯಾಗದಂತೆ ನೋಡಿಕೊಳ್ಳುವ ಮೂಲಕ ಇಲ್ಲಿನ ಪ್ರಮುಖರು, ಕಾರ್ಯಕರ್ತರು ಮಾದರಿಯಾಗಿದ್ದಾರೆ. ಅಷ್ಟೇ ಅಲ್ಲದೆ ಊಟಕ್ಕೆ ಸಾಧ್ಯವಾದಷ್ಟೂ ಬಟ್ಟಲು ಮತ್ತು ಲೋಟಗಳನ್ನೇ ಬಳಸುವುದಕ್ಕೆ ಒತ್ತು ನೀಡಲಾಗಿದೆ.ಇದರಿಂದ ತ್ಯಾಜ್ಯದ ಪ್ರಮಾಣವನ್ನು ಕನಿಷ್ಠ ಗೊಳಿಸಲಾಗಿರುವಂತೆಯೇ, ಇನ್ನೊಂದೆಡೆ ಭೋಜನ ಶಾಲೆಗಳಲ್ಲಿ ಸ್ವಚ್ಛತೆ ಎದ್ದು ಕಾಣುತ್ತಿತ್ತು. ಇದರ ಜೊತೆ ಜೊತೆಗೇ ಮರುಬಳಕೆಯ ತಟ್ಟೆ ಲೋಟ ಬಳಸುವ ಮೂಲಕ ಸುಮಾರು 10ಲ.ರೂ.ಗಳ ಖರ್ಚನ್ನು ಕಡಿಮೆ ಮಾಡಿರುವುದಾಗಿ ಅವರು ಹೇಳುತ್ತಾರೆ. ರಾಮಚಂದ್ರ ಉಜಿರೆ ಅವರು ಶ್ರೀಕ್ಷೇತ್ರ ಧರ್ಮಸ್ಥಳದ ನಡಾವಳಿ, ತುಳು ಸಮ್ಮೇಳನ, ಕನ್ಯಾಡಿ ಬ್ರಹ್ಮಕಲಶ, ಸಂತ ಸಮ್ಮೇಳನಯೋಗ ಸಮ್ಮೇಳನ, ಕ್ರೀಡಾ ಸಮ್ಮೇಳನಗಳಲ್ಲೂ ಭೋಜನ ವ್ಯವಸ್ಥೆಯ ಉಸ್ತುವಾರಿ ವಹಿಸಿದ ಅನುಭವಿ. ಉಜಿರೆಯಲ್ಲಿ ರುದ್ರಭೂಮಿಯ ಉಸ್ತುವಾರಿ ವಹಿಸುವ ಮೂಲಕ ತಮ್ಮ ಸೇವಾ ತತ್ಪರತೆಯಿಂದ ಗುರುತಿಸಿಕೊಂಡವರು.

ಗಮನ ಸೆಳೆದ ಭಜನೆ

ಉಜಿರೆ ಶ್ರೀ ಜನಾರ್ದನ ಸ್ವಾಮಿ ದೇವಳದ ಬ್ರಹ್ಮಕಲಶೋತ್ಸವದಲ್ಲಿ ನಿರಂತರವಾಗಿ ನಡೆಯುತ್ತಿರುವ ಭಜನೆ , ಕುಣಿತ ಭಜನೆಗಳು ಭಕ್ತರ ಮನ ಸೆಳೆಯುತ್ತಿದೆ.ಭಜನಾ ಕಾರ್ಯಕ್ರಮದ ಉಸ್ತುವಾರಿಯನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂ ಸೇವಕ ಮಂಜುನಾಥ್ ಶೆಟ್ಟಿಗಾರ್ ಮತ್ತು ನಿವೃತ್ತ ಉಪನ್ಯಾಸಕ ಡಾ.ಪ್ರಕಾಶ್ ಪ್ರಭು ಅವರು ವಹಿಸಿಕೊಂಡಿದ್ದು, ವಿಶಿಷ್ಟ ರೀತಿಯಲ್ಲಿ ನಡೆದಿದೆ.173ಗಂಟೆ(74ಗಂಟೆಗಳ ಕಾಲ ಕುಣಿತ ಭಜನೆ ಮತ್ತು 96ಗಂಟೆಗಳ ಕಾಲ ಕುಳಿತು ಭಜನೆ)ಗಳ ಕಾಲ ಭಜನೆ ನಡೆದಿದ್ದು, 2600ಕ್ಕೂ ಅಧಿಕ ಮಂದಿ ಭಜಕರು ಭಜನೆಯಲ್ಲಿ ಪಾಲ್ಗೊಂಡಿದ್ದಾರೆ.ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ , ಸಂಘದ ಕಾರ್ಯಪದ್ಧತಿಯಂತೆ ಅತ್ಯಂತ ನಿಖರ ಸಮಯ ಪಾಲನೆಯೊಂದಿಗೆ ಈ ಭಜನಾ ಕಾರ್ಯಕ್ರಮ ನಡೆದಿದ್ದು, ಭಕ್ತರನ್ನು ಪುಳಕಿತಗೊಳಿಸಿದೆ. ಉಜಿರೆಯಲ್ಲಿ ಈ ಬಾರಿ ನಡೆದಿರುವ ಬ್ರಹ್ಮಕಲಶೋತ್ಸವ ಅನೇಕ ಆಯಾಮಗಳಲ್ಲಿ ಆದರ್ಶಯುತವಾಗಿದೆ.ಇಲ್ಲಿನ ಪ್ರಮುಖರು ಮತ್ತು ಕಾರ್ಯಕರ್ತರು ಅತ್ಯಂತ ಮಾದರಿಯಾಗಿ ಈ ಬ್ರಹ್ಮಕಲಶೋತ್ಸವ ನಡೆಯುವಂತೆ ನೋಡಿಕೊಂಡಿರುವುದು ಹೆಮ್ಮೆಯ ಅಂಶ ಎಂಬುದಾಗಿ ಹಿರಿಯ ಸಾಮಾಜಿಕ ಕಾರ್ಯಕರ್ತ ಹಾಗೂ ಪದ್ಮಶ್ರೀ ಎಂಟರ್‌ಪ್ರೈಸಸ್‌ನ ಮಾಲಕರಾದ ಪದ್ಮನಾಭ ಶೆಟ್ಟಿಗಾರ್ ಅಭಿಪ್ರಾಯಪಟ್ಟಿದ್ದಾರೆ.

ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ಕ್ಷೇತ್ರದ ಮಖೆಕೂಟ

ಉತ್ಸವ, ದರುಶನ ಬಲಿ ಕಣ್ತುಂಬಿಕೊಂಡ ಭಕ್ತರು

ಉಪ್ಪಿನಂಗಡಿ: ಇತಿಹಾಸ ಪ್ರಸಿದ್ಧ ಇಲ್ಲಿನ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಸ್ಥಾನದಲ್ಲಿ ಮಂಗಳವಾರದಂದು ಅಷ್ಟಮಿ 3ನೇ ಮಖೆಕೂಟ ಹಾಗೂ ರಥೋತ್ಸವವು ನಡೆಯಿತು.

ಮಖೆ ಜಾತ್ರೆಯ ಪ್ರಯುಕ್ತ ಮಂಗಳವಾರ ರಾತ್ರಿ ಶ್ರೀ ದೇವರ ಬಲಿ ಹೊರಟು ಉತ್ಸವ ನಡೆದಿತ್ತು. ಬಳಿಕ ರಥಬೀದಿಯಲ್ಲಿ ರಥೋತ್ಸವವು ಜರುಗಿತು. ಬಳಿಕ ಬಲಿಯಾಗಿ ಮಹಾಪೂಜೆ ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಭರತನಾಟ್ಯ, ಹಾಗೂ ತುಳು ನಾಟಕ ಪ್ರದರ್ಶನಗೊಂಡಿತು.

ಬುಧವಾರದಂದು ಪ್ರಾತಃಕಾಲ ನದಿಯಲ್ಲಿ ಪವಿತ್ರ ಮಖೆ ತೀರ್ಥಸ್ನಾನ ನಡೆದು, ಬೆಳಗ್ಗೆ ಬಲಿ ಹೊರಟು ಉತ್ಸವ, ದರ್ಶನಬಲಿ, ಬಟ್ಟಲು ಕಾಣಿಕೆ, ಮಹಾಕಾಳಿ ಅಮ್ಮನವರ ನೇಮಕ್ಕೆ ಪಡಿಯಕ್ಕಿ ಕೊಟ್ಟು ಮಹಾಪೂಜೆ ನಡೆಯಿತು. ಬಳಿಕ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಿತು. ಈ ಸಂದರ್ಭ ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೆ. ರಾಧಾಕೃಷ್ಣ ನ್ಯಾಕ್, ಸಮಿತಿ ಸದಸ್ಯ ಹರೀಶ್ ಉಪಾಧ್ಯಾಯ, ಬಿ. ಗೋಪಾಲಕೃಷ್ಣ ರೈ, ಸೋಮನಾಥ, ಡಾ. ರಮ್ಯ ರಾಜಾರಾಮ್, ಅನಿತಾ ಕೇಶವ ಗೌಡ, ಕೃಷ್ಣ ರಾವ್ ಅರ್ತಿಲ, ದೇವಿದಾಸ್ ರೈ ಬಿ., ಎಂ. ವೆಂಕಪ್ಪ ಪೂಜಾರಿ. ಕಾರ್ಯ ನಿರ್ವಹಣಾಧಿಕಾರಿ ಕವಿತ ಎಂ., ಪ್ರಮುಖರಾದ ವಸಂತ ಕುಮಾರ ತಾಳ್ತಜೆ, ಚಂದಪ್ಪ ಮೂಲ್ಯ, ವೆಂಕಟರಮಣ ರಾವ್, ಡಾ. ರಾಜಾರಾಮ ಕೆ.ಬಿ., ಕರುಣಾಕರ ಸುವರ್ಣ, ಸುಂದರ ಗೌಡ, ಸುದರ್ಶನ ಎಂ., ಯು. ರಾಮ, ಹರಿರಾಮಚಂದ್ರ ಮೊದಲಾದವರು ಇದ್ದರು.



ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಯಶಸ್ವಿ | ಬಾಕಿ ಪೂರ್ಣಕ್ಕೆ ಕ್ರಮ

ಸುಳ್ಯದಲ್ಲಿ ಶೇ.91.99 ಮ್ಯಾಪಿಂಗ್ ಪೂರ್ಣ

ಸುಳ್ಯ: ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು ಇದರ ಭಾಗವಾಗಿ 2025ರ ಮತದಾರರ ಪಟ್ಟಿಯನ್ನು 2002ರ ಮತದಾರರ ಪಟ್ಟಿಯೊಂದಿಗೆ ಮ್ಯಾಪಿಂಗ್ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮ್ಯಾಪಿಂಗ್ ಪ್ರಕ್ರಿಯೆ ಶೇ.91.99 ಪೂರ್ಣಗೊಂಡಿದೆ.

ಮ್ಯಾಪಿಂಗ್ ಪ್ರಕ್ರಿಯೆ ಶೇ.100ರಷ್ಟು ಪೂರ್ತಿ ಮಾಡುವ ಹಿನ್ನಲೆಯಲ್ಲಿ ಮತದಾರರ ನೋಂದಣಾಧಿಕಾರಿ, ಜಿ.ಪಂ. ಉಪ ಕಾರ್ಯದರ್ಶಿ ಜಯಲಕ್ಷ್ಮಿ ರಾಯಕೋಡ ಅವರ ಅಧ್ಯಕ್ಷತೆಯಲ್ಲಿ ಮ್ಯಾಪಿಂಗ್ ಪ್ರಕ್ರಿಯೆಯ ಪ್ರಗತಿ ಪರಿಶೀಲನಾ ಸಭೆಯು ಸುಳ್ಯ ತಾ.ಪಂ. ಸಭಾಂಗಣದಲ್ಲಿ ನಡೆದ ಈ ವಿಶೇಷ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಮತಗಟ್ಟೆ ಅಧಿಕಾರಿಗಳು, ಮತಗಟ್ಟೆ ಮೇಲ್ವಿಚಾರಕರು ಭಾಗವಹಿಸಿದ್ದರು.



ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ, ಮ್ಯಾಪಿಂಗ್ ಕುರಿತು ಚರ್ಚೆ ನಡೆಯಿತು. ಮತದಾರರ ಪಟ್ಟಿಯ ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಸುಳ್ಯ ವಿಧಾನಸಭಾ ಕ್ಷೇತ್ರ ಶೇ.91.99ರಷ್ಟು ಪ್ರಗತಿ ಸಾಧಿಸಿದ್ದು ದ.ಕ. ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಈ ತಿಂಗಳ ಕೊನೆಯ ವೇಳೆಗೆ ಮ್ಯಾಪಿಂಗ್ ಪ್ರಕ್ರಿಯೆ ಪೂರ್ತಿ ಮಾಡಬೇಕಾಗಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದು ಮತದಾರರ ನೋಂದಣಾಧಿಕಾರಿ ಜಯಲಕ್ಷ್ಮಿ ರಾಯಕೋಡ ಹೇಳಿದರು.

ಪ್ರತಿ ಮತಗಟ್ಟೆಯ ಮ್ಯಾಪಿಂಗ್ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಯಿತು. ಹಲವು ಮತಗಟ್ಟೆಗಳಲ್ಲಿ ವಿಧಾನಸಭಾ ಮ್ಯಾಪಿಂಗ್ ಶೇಕಡಾಕ್ಕಿಂತ ಕಡಿಮೆ ಇದೆ. ಕ್ಷೇತ್ರದ 82 ಮತಗಟ್ಟೆಗಳಲ್ಲಿ ಮ್ಯಾಪಿಂಗ್ ಶೇ.70ಕ್ಕಿಂತ ಕಡಿಮೆ ಇದೆ. ಅದನ್ನು ಆದ್ಯತೆಯ ಮೇರೆಗೆ ಪೂರ್ತಿ ಮಾಡಬೇಕು. ಯಾವುದೇ ಅರ್ಹ ಮತದಾರರು ಮತದಾರ ಪಟ್ಟಿಯಿಂದ ಬಿಟ್ಟು ಹೋಗದಂತೆ ಎಚ್ಚರ ವಹಿಸಿ ಎಂದು ಅವರು ಸೂಚಿಸಿದರು. ಸಭೆಯಲ್ಲಿ ವಿವಿಧ ಪಕ್ಷದ ಪ್ರಮುಖರು, ಸಹಾಯಕ ಮತದಾರರ ನೋಂದಣಾಧಿಕಾರಿ ತಹಶೀಲ್ದಾರ್ ಎಂ. ಮಂಜುಳ, ಚುನಾವಣಾ ಶಾಖೆಯ ಉಪ ತಹಶೀಲ್ದಾರ್ ಚಂದ್ರಕಾಂತ್ ಎಂ.ಆರ್. ಉಪಸ್ಥಿತರಿದ್ದರು.

ಸುತ್ತಮುತ್ತ

ಕಲಾವಿದರ ಆಯ್ಕೆಗೆ ಅರ್ಜಿ ಆಹ್ವಾನ

ಉಡುಪಿ: ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಚನ ಕಲ್ಯಾಣ' ಎಂಬ ಅತ್ರಿ (ಒಂಬತ್ತು ಗಂಟೆ) ನಾಟಕವನ್ನು ಸಿದ್ಧಪಡಿಸಿ, ನಾಡಿನಾದ್ಯಂತ ಪ್ರದರ್ಶನ ಮಾಡಲು ಉದ್ದೇಶಿಸಿದ್ದು ಈ ಸಂಬಂಧ ನುರಿತ ಹಾಗೂ ಆಸಕ್ತ ಯುವಕ ಯುವತಿಯರು, ಅನುಭವಿ ರಂಗ ಕಲಾವಿದರು ಹಾಗೂ ನಾಯಕರುಗಳಿಂದ ಇಲಾಖೆಯ ವೆಬ್‌ಸೈಟ್ kannadasiri.karnataka.gov.in ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 40 ವರ್ಷದೊಳಗಿನ ರಂಗಶಿಕ್ಷಣದಲ್ಲಿ ತರಬೇತಿ ಪಡೆದ ಹಾಗೂ ನಾಟಕಗಳಲ್ಲಿ ಅಭಿನಯಿಸಿದ ಕಲಾವಿದರಿಗೆ ಪ್ರಥಮ ಆದ್ಯತೆಯನ್ನು ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಮಾರ್ಚ್ 20 ರ ಒಳಗಾಗಿ ಸದಸ್ಯ ಕಾರ್ಯದರ್ಶಿ, ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ ಇಲ್ಲಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ಅಥವಾ ಇ-ಮೇಲ್ kanakaresearchcentre@gmail.com ಮೂಲಕ ಸಲ್ಲಿಸಬಹುದಾಗಿದೆ.

ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳ ಕಾಲದ ಅವಧಿಯಲ್ಲಿ ಪೂರ್ಣಕಾಲಿಕವಾಗಿ ತರಬೇತಿ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿರುತ್ತದೆ. ಮಾಸಿಕ ಗೌರವಧನ ಮತ್ತು ಊಟ-ವಸತಿ ವ್ಯವಸ್ಥೆಯನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಸಿ. ಬಸವಲಿಂಗಯ್ಯ, ವಚನ ಕಲ್ಯಾಣ ನಾಟಕದ ನಿರ್ದೇಶಕರು, ಮೊ.ನಂ.9448538620 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಮಡಿಕೇರಿ ರೋಟರಿ ಮಕ್ಕಳ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ: ಅಪಾಯದ ಸಂದರ್ಭಗಳಲ್ಲಿ ಅಸಾಮಾನ್ಯ ಧೈರ್ಯ, ಸಾಹಸ ಮತ್ತು ಸಮಯಪ್ರಜ್ಞೆ ತೋರಿಸಿ ಇತರರ ಪ್ರಾಣ ರಕ್ಷಿಸಲು ಮುಂದಾದ ಮಕ್ಕಳನ್ನು ಗೌರವಿಸುವ ಉದ್ದೇಶದಿಂದ ರೋಟರಿ ಮಡಿಕೇರಿ ವತಿಯಿಂದ ಮಕ್ಕಳ ಶೌರ್ಯ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

2025ರ ಜನವರಿ 1ರಿಂದ 2026ರ ಫೆಬ್ರವರಿ 28ರವರೆಗೆ ಸಂಭವಿಸಿದ ಘಟನೆಗಳಲ್ಲಿ ತಮ್ಮ ಪ್ರಾಣದ ಹಂಗನ್ನು ಲೆಕ್ಕಿಸದೆ ಧೈರ್ಯ ಹಾಗೂ ಸಾಹಸ ಪ್ರದರ್ಶಿಸಿ ಇತರರ ಪ್ರಾಣ ರಕ್ಷಿಸಲು ಮುಂದಾದ 06 ರಿಂದ 14 ವರ್ಷದೊಳಗಿನ ಮಕ್ಕಳು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಅರ್ಹ ಮಕ್ಕಳ ಪರವಾಗಿ ಪೋಷಕರು, ಶಿಕ್ಷಕರು, ಶಾಲೆಗಳು ಅಥವಾ ಸಾರ್ವಜನಿಕರು ನಾಮ ನಿರ್ದೇಶನ ಮಾಡಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 20 ಮಾರ್ಚ್ 2026 ಎಂದು ರೋಟರಿ ಮಡಿಕೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಆಯ್ಕೆಯಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಲಾಗುತ್ತದೆ. ಪ್ರಥಮ ಬಹುಮಾನ ರೂ.5 ಸಾವಿರ, ದ್ವಿತೀಯ ಬಹುಮಾನ ರೂ.3 ಸಾವಿರ ಹಾಗೂ ತೃತೀಯ ಬಹುಮಾನ ರೂ.2 ಸಾವಿರ ನೀಡಲಾಗುವುದು. ನಾಮ ನಿರ್ದೇಶನ ಸಲ್ಲಿಸುವಾಗ ಮಕ್ಕಳ ಹೆಸರು ಮತ್ತು ಪೂರ್ಣ ವಿಳಾಸ, ಓದುತ್ತಿರುವ ಶಾಲೆಯ ವಿವರ, ಕೊಡಗು ಜಿಲ್ಲೆ ವ್ಯಾಪ್ತಿಯಲ್ಲಿ ನಡೆದ ಶೌರ್ಯ ಕಾರ್ಯದ ವಿವರ, ಘಟನೆಯ ದಿನಾಂಕ ಮತ್ತು ಸ್ಥಳ, ಪತ್ರಿಕೆಯಲ್ಲಿ ಪ್ರಕಟವಾದ ವರದಿ (ಇದ್ದಲ್ಲಿ ಅದರ ಪ್ರತಿಗಳು) ಹಾಗೂ ಇತರ ಸಂಬಂಧಿತ ದಾಖಲೆಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಧ್ಯಕ್ಷೆ ಲಲಿತಾ ರಾಘವನ್ (ಮೊ. 94489 76838), ಗೌರವ ಕಾರ್ಯದರ್ಶಿ ಬಿ.ಎಂ.ಸೋಮಣ್ಣ (ಮೊ.7624875595) ಯುವಜನ ಸೇವೆ ಹಾಗೂ ನಿರ್ದೇಶಕರು ಅನಿಲ್ ಕೃಷ್ಣನ್ (9945447895) ಅವರನ್ನು ಸಂಪರ್ಕಿಸಬಹುದು ಎಂದು ರೋಟರಿ ಮಡಿಕೇರಿ ತಿಳಿಸಿದೆ.

ಪೊಮ್ಮಕಡ ಕೂಟದಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಪೊನ್ನಂಪೇಟೆ: ಪೊನ್ನಂಪೇಟೆ ಕೊಡವ ಸಮಾಜದ ಪೊಮ್ಮಕ್ಕಡ ಕೂಟದಿಂದ ಪೊನ್ನಂಪೇಟೆಯ ರಾಮಕೃಷ್ಣ ಆಶ್ರಮದಲ್ಲಿ ಇರುವ ಹಿರಿಯ ನಾಗರಿಕರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಭೇಟಿ ನೀಡಿ ವಿವಿಧ ಕಾರ್ಯಕ್ರಮವನ್ನು ನಡೆಸಿ, ಹಣ್ಣು ಹಂಪಲುಗಳನ್ನು ವಿತರಿಸಿದರು.

ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಪ್ರೊ. ಇಟ್ಟಿರ ಕಮಲಾಕ್ಷಿ ಬಿದ್ದಪ್ಪ ಅವರು ಈ ಸಂದರ್ಭ ಮಾತನಾಡಿ ನಾವೆಲ್ಲರೂ ಒಂದೇ ಕುಟುಂಬ ಎಂಬ ಭಾವನೆ ಇಟ್ಟುಕೊಳ್ಳಬೇಕು ಹಾಗೂ ಸದಾ ಆಶಾ ವಾದಿಗಳಾಗಿರಬೇಕು ಹಾಗಾದರೆ ಮಾತ್ರ ನಾವು ಸಂತೋಷದಲ್ಲಿರಲು ಸಾಧ್ಯ ಎಂದು ಹೇಳಿದರು. ಜೀವನದಲ್ಲಿ ಕಷ್ಟ ಸುಖ ಸಹಜ. ಹಿರಿಯರು ಒಂದು ಶಾಂತ ಜಾಗದ ಆಶ್ರಮದಲ್ಲಿ ನೆಲೆಸಿರುವುದು ಹಾಗೂ ಇದನ್ನು ಸ್ಥಾಪನೆ ಮಾಡಿದವರಿಗೆ ಧನ್ಯವಾದ ಸಲ್ಲಿಸಿದರು. ಈ ಸಂದರ್ಭ ಕೂಟದ ಗೌರವ ಕಾರ್ಯದರ್ಶಿ, ಬಲ್ಲಾಡಿಚಂಡ ಕಸ್ತೂರಿ ಸೋಮಯ್ಯ ಅವರು ಪ್ರಬಂಧ 'ನಂಗಡ ಮಂಡೆಕ್ ನಂಗಡ ಕೈ' ಎಂಬ ವಿಷಯದಲ್ಲಿ ಪ್ರಬಂಧ ಮಂಡನೆಯನ್ನು ಮಾಡಿದರು. ಆಶ್ರಮದ ಹಿರಿಯರು ಮತ್ತು ಪೊಮ್ಮಕ್ಕಡ ಕೂಟದ ಆಡಳಿತ ಮಂಡಳಿ ಮತ್ತು ಸದಸ್ಯರು ನಡುವೆ ಆರೋಗ್ಯಯುತ ವಾದ ಮಾತು, ಚರ್ಚೆ ನಡೆಯಿತು.ಈ ಸಂದರ್ಭ ಹಿರಿಯ ನಾಗರಿಕ ಆಶ್ರಮ ವಾಸಿಗಳು ಇಂತಹ ಕಾರ್ಯಕ್ರಮದಿಂದ ತುಂಬಾ ಸಂತೋಷವಾಗಿದೆ, ಆಶ್ರಮ ವಾಸಿಗಳಿಗೆ ಹೊರಗಿನವರ ಸಂಪರ್ಕ ಈ ಮೂಲಕ ದೊರತಿದೆ ಎಂದು ಸಂತೋಷ ವ್ಯಕ್ತಪಡಿಸಿದರು. ಕಸ್ತೂರಿ ಸೋಮಯ್ಯ ಸ್ವಾಗತಿಸಿ, ಮೂಕಳೆರ ಕಾವ್ಯ ಮಧು ವಂದಿಸಿದರು.

ಈ ಸಂದರ್ಭ ಕೂಟದ ಜಂಟಿ ಕಾರ್ಯದರ್ಶಿ ಮೂಕಳೆರ ಆಶಾ ಪೂಣಚ್ಚ, ಮಾಣಿಪಂಡ ಪಾರ್ವತಿ ಜೋಯಪ್ಪ, ಬಲ್ಯಮೀದೇರಿರ ಆಶಾ ಶಂಕರ್, ಕಾಳಿಮಾಡ ಲತಾ ಮೋಟಯ್ಯ, ಮಂಡೆಚಂಡ ಬೇಬಿ, ಪ್ರೊ. ಇಟ್ಟಿರ ಬಿದ್ದಪ್ಪ ಮತ್ತು ಸದಸ್ಯರುಗಳು ಪಾಲ್ಗೊಂಡಿದ್ದರು.

ಯುಕೆಟಿಎಲ್ ಮುಗಿಯದ ಗೋಳು | ಕೃಷಿ ಭೂಮಿಯಲ್ಲಿ ಟವರ್ ನಿರ್ಮಾಣ, ಕೃಷಿಕರ ಪರದಾಟ

ಬೃಹತ್ ವಿದ್ಯುತ್ ತಂತಿಗಳಿಂದ ಗದ್ದೆಯಲಿದ್ದ ಭತ್ತ ಪೈರು ನಾಶ

ಮೂಡುಬಿದಿರೆ: ಉಡುಪಿ-ಕಾಸರಗೋಡು 400 ಕೆವಿ ವಿದ್ಯುತ್ ಪ್ರಸರಣ ಮಾರ್ಗ ಯೋಜನೆ(ಯುಕೆಟಿಎಲ್) ಕಾಮಗಾರಿ ಎಗ್ಗಿಲ್ಲದೆ ಸಾಗುತ್ತಿದೆ. ನಿಡ್ಡೋಡಿ ಸಮೀಪದ ಮಿತ್ತ ಮಾಣೆಲಿನಲ್ಲಿ ಬೆಳೆದು ನಿಂತ ಭತ್ತದ ಗದ್ದೆ ಪೈರುಗಳು ಬೃಹತ್ ವಿದ್ಯುತ್ ತಂತಿಗಳಿಂದ ಕೃಷಿ ನಾಶವಾಗುತ್ತಿದೆ.

ಬಾಲಕೃಷ್ಣ ಅಂಚನ್ ಅವರಿಗೆ ಸೇರಿದ ಕೃಷಿ ಭೂಮಿಯಲ್ಲಿ ಟವರ್ ನಿರ್ಮಾಣವಾಗಿದ್ದು ಪಕ್ಕದ ಕೃಷಿ ಭೂಮಿಯಲ್ಲಿ ತಂತಿ ಕಾಮಗಾರಿ ನಡೆದಿದೆ. ಅಂಚನ್ ಅವರ ಗದ್ದೆಯಲ್ಲಿ ಬೃಹತ್ ವಯರ್‌ಗಳನ್ನು ತಂದು ಹಾಕಲಾಗಿದೆ. ಈವರೆಗೂ ಪರಿಹಾರದ ಚೆಕ್ ವಿತರಣೆಯಾಗಿಲ್ಲ ಇದು ಕೇವಲ ಒಂದು ಉದಾಹರಣೆಯಲ್ಲ, ಕಲ್ಲಮುಂಡ್ಕೂರು, ತೆಂಕ ಎಡಪದವು, ನಿಡ್ಡೋಡಿ, ಕಲ್ಲಮುಂಡ್ಕೂರು, ಮಂಜನಬೈಲು, ಹೀಗೆ ಹಲವು ಕಡೆಗಳಲ್ಲಿ ಕೃಷಿಕರ ಪಾಡು ಹೇಳತೀರದು ಎಂಬಂತಾಗಿದೆ.

ಬೃಹತ್ ಯಂತ್ರಗಳ ಬಳಕೆ

ವಿದ್ಯುತ್ ಲೈನ್ ಕಾಮಗಾರಿಗಾಗಿ ದೊಡ್ಡ



ದೊಡ್ಡ ಜೆಸಿಬಿ ಯಂತ್ರಗಳು, ಹಿಟಾಚಿಗಳು, ಇತರ ಯಂತ್ರ ಪರಿಕರಗಳು ವೈರುಗಳೊಂದಿಗೆ ಕಂಪೆನಿಯ ಕಾರ್ಮಿಕರು ಆಗಮಿಸುತ್ತಿದ್ದು ಅಪಾರ ಕೃಷಿ ನಾಶವಾಗುತ್ತಿದೆ. ದೊಡ್ಡ ಪ್ರದೇಶಗಲಲ್ಲಿ ಈ ಪರಿಕರಗಳನ್ನು ಸಂಗ್ರಹಿಸುವಾಗ ಅಪಾರ ಪ್ರಮಾಣದಲ್ಲಿ ಮರ, ಗಿಡ ಕೃಷಿಯನ್ನು ನಾಶವಾಗುತ್ತಿದೆ. ಇದರಿಂದಾಗಿ ಕೃಷಿಕರು ತೊಂದರೆ ಅನುಭವಿಸುತ್ತಿದ್ದಾರೆ.

ಗದ್ದೆಯಲ್ಲಿ ರಾಶಿಬಿದ್ದಿದೆ ತಂತಿ

ಅಂಚನ್ ಅವರು ಅವರ ಗದ್ದೆ ಹಾಗೂ ತೋಟದಲ್ಲಿ ಲೈನ್ ಹಾದುಹೋಗಲಿದ್ದು ಅವರ ಜಮೀನಿನ ಮರಗಳನ್ನು ಕಡಿಯಲು ಮುಂದಾಗಿದ್ದಾರೆ. ಆದರೆ ಅವರಿಗೆ ಯಾವುದೇ ಪರಿಹಾರವನ್ನು ನೀಡಿಲ್ಲ ಪಾಲಿ ಹಾಳೆಗೆ ಸಹಿ ಕೇಳುತ್ತಾರೆ ಎಂದು ಆರೋಪಿಸಿದ್ದಾರೆ.

ನಮ್ಮನ್ನು ಸಂಪರ್ಕಿಸಲಿ

ಈಗಾಗಲೇ ಮಂಗಳವಾರ ಸಹಾಯಕ ಆಯುಕ್ತರ ಕಚೇರಿಯಲ್ಲಿ ಸಂತ್ರಸ್ತರ ದೂರು ದಾಖಲಿಸಲಾಗಿದೆ. ಆಯುಕ್ತರು ಪರಿಹಾರದ ಹಣ ಪಾವತಿಸದೇ ಕಾಮಗಾರಿ ಮಾಡುವಂತಿಲ್ಲವೆಂದು ಸ್ಪಷ್ಟವಾಗಿ ಕಂಪೆನಿಯವರಿಗೆ ಆದೇಶಿಸಿದ್ದಾರೆ. ರೈತರು ಈ ವಿಚಾರದಲ್ಲಿ ಏನೇ ಸಮಸ್ಯೆ ಇದ್ದರೂ ಮೂಡುಬಿದಿರೆಯಲ್ಲಿರುವ ಕಿಸಾನ್ ಕಚೇರಿ ಪ್ರಮುಖರಾದ ಪ್ರವೀಣ್ ಭಂಡಾರಿ ಅಥವಾ ಆಲ್ಫೋನ್ಸ್ ಅವರನ್ನು ಸಂಪರ್ಕಿಸಬಹುದು.



● ಶಾಂತಿ ಪ್ರಸಾದ್ ಹೆಗಡೆ, ವಕೀಲ

ಶಿರ್ತಾಡಿ: ಹೈ ಟೆನ್ಶನ್ ವೈರುಗಳಿಂದ ಅಪಾಯ

ಮೂಡುಬಿದಿರೆ: ಶಿರ್ತಾಡಿ ಗ್ರಾಮದಲ್ಲಿ ನಿರ್ಮಾಸಿರುವ ಮೆಸ್ಕಾಂ ಸಬ್‌ಸ್ಟೇಷನ್‌ಗೆ ಕೋಟೆಬಾಗಿಲಿನಿಂದ ಶಿರ್ತಾಡಿವರೆಗೆ ಅಳವಡಿಸಿರುವ ಹೈಟೆನ್ಷನ್ ವೈರುಗಳು ಅಪಾಯ ಉಂಟು ಮಾಡುತ್ತಿರುವುದು ಬೆಳಕಿಗೆ ಬಂದಿದೆ.



ಪರಿಸರದ ಮರ್ವಾಡಿ ಗ್ರಾಮದ ಮರಿಯಾಡಿ ಎಂಬಲ್ಲಿ ತಂತಿಗಳು ಬೃಹತ್ ಸ್ಫೋಟದೊಂದಿಗೆ ಬೆಂಕಿ ಉಂಡೆಗಳು ಚೆಲ್ಲಾಪಿಲ್ಲಿಯಾಗಿ ಉದುರಿ ಬೀಳುತ್ತಿದ್ದು ಭೀತಿಯ ವಾತಾವರಣ ಸೃಷ್ಟಿಸುತ್ತಿದೆ. ಈಗಾಗಲೇ ಸುಮಾರು ಆರು ಬಾರಿ ಇಂತಹ ಸನ್ನಿವೇಶಗಳು ಸೃಷ್ಟಿಯಾಗಿದೆ. ಮಂಗಳವಾರ ಮುಂಜಾನೆಯ ಸಮಯ ಮತ್ತೆ ಹೈ ಟೆನ್ಶನ್ ತಂತಿಗಳಿಂದ ಸ್ಫೋಟದ ಸದ್ದು ಕೇಳಿ ಬೆಂಕಿ ಉಂಡೆಗಳು ಸುತ್ತಮುತ್ತ ಪಸರಿಸಿದ್ದು ಮಾತ್ರವಲ್ಲದೆ ಆಸುಪಾಸಿನ ಕೆಲವು ಮನೆಗಳ ವಿದ್ಯುತ್ ಮೀಟರ್ ಸುಟ್ಟು ಹೋಗಿದೆ. ಅಲ್ಲದೆ ವಿದ್ಯುತ್ ಉಪಕರಣಗಳಿಗೆ ಹಾನಿ ಉಂಟಾಗಿದ್ದು ವಿದ್ಯುತ್ ತಂತಿ ತುಂಡಾಗಿದೆ. ಈ ಬಗ್ಗೆ ಮೆಸ್ಕಾಂ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಸ್ಪಂದಿಸಿದ್ದರೂ ಸ್ಪಂದಿಸಿಲ್ಲ ಎಂದು ಸ್ಥಳೀಯರು ತಿಳಿಸಿದ್ದಾರೆ.

ಭವಿಷ್ಯದಲ್ಲಿ ಯುಕೆಟಿಎಲ್ ಅನಾಹುತ?

ಭವಿಷ್ಯದಲ್ಲಿ ಇಂತಹ ಅನಾಹುತ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎನ್ನುತ್ತಾರೆ ಸ್ಥಳೀಯರು. ಯುಕೆಟಿಎಲ್ ಯೋಜನೆಯಿಂದಾಗಿ ಆ ಭಾಗಗಳಲ್ಲೂ ಇಂತಹುದೇ ಪ್ರಕರಣ ವರದಿಯಾಗುವ ಸಾಧ್ಯತೆ ಇದೆ ಎಂದು ಎಂಬ ಆತಂಕ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್: ವಿಶ್ವ ಮಹಿಳಾ ದಿನಾಚರಣೆ



ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ ನ ಮಹಿಳಾ ಕಾರ್ಯಕಾರಿ ಸಮಿತಿ ಆಶ್ರಯದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಾಧಕ ಹಿರಿಯ ಮಹಿಳೆಯರಿಗೆ ಗೌರವಾರ್ಪಣೆ ನಡೆಯಿತು.

ಸಂಸ್ಥೆಯ ಅಧ್ಯಕ್ಷ ಸುರೇಶ್ ಶೆಟ್ಟಿ ಮಾತನಾಡಿ, ಸಾಮಾನ್ಯ ಮಹಿಳೆಯರು ತಮ್ಮ ಸಂಪೂರ್ಣ ಜೀವನವನ್ನೇ ತಮ್ಮ ಕುಟುಂಬದ ಸುಖ ಸಂತೋಷ ಅಭಿವೃದ್ಧಿಗಾಗಿ ಮುಡಿಪಾಗಿರಿಸಿ, ತೆರೆಮರೆಯ ಕಾಯಿಯಂತೆ ನಿಸ್ವಾರ್ಥವಾಗಿ ಬದುಕು ಸವೆಸುತ್ತಾರೆ. ದೇಶದ ಮುಂದಿನ ಪೀಳಿಗೆಯಾದ ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ನೀಡುತ್ತಾ ಸಮಾಜದ ಒಳ್ಳೆಯ ಮೌಲ್ಯಗಳ ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತಾರೆ. ಅಂತಹ ಹಿರಿಯ ಮಹಿಳೆಯರಿಗೆ ನಾರಿ ನಮನ ಕಾರ್ಯಕ್ರಮದ ಮೂಲಕ ಗೌರವ ಸಲ್ಲಿಸಲಾಗಿದೆ ಎಂದರು.

ಸಂಸ್ಥೆಯ ಗೌರವಾಧ್ಯಕ್ಷ ಯೋಗೀಶ್ ಕೋಟ್ಯಾನ್, ಪಡುಪಣಂಬೂರು ಗ್ರಾ ಪಂ ಮಾಜೀ ಸದಸ್ಯ ಸಂತೋಷ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸಂತೋಷ್ ದೇವಾಡಿಗ, ಸಮಿತಿ ಸದಸ್ಯರಾದ ಪ್ರಶಾಂತ್ ಕುಮಾರ್ ಬೇಕರ್, ಧರ್ಮಾನಂದ ಶೆಟ್ಟಿಗಾರ್, ಗಣೇಶ್ ಪೂಜಾರಿ ಬೆಂಗಳೂರು, ಮಹಿಳಾ ಕಾರ್ಯಾಧ್ಯಕ್ಷೆ ಸುರೇಖಾ ಕಲ್ಲಾಪು, ಪದಾಧಿಕಾರಿಗಳಾದ ಶೈಲಾ ಶೆಟ್ಟಿಗಾರ್, ನೀಮಾ ಸುನಿಲ್ ಇದ್ದರು. ಸಾಧಕರ ನೆಲೆಯಲ್ಲಿ ಹಿರಿಯ ಮಹಿಳೆಯರಾದ ಜಲಜ, ಸುಶೀಲಾ, ಗುಲಾಬಿ ಹಾಗೂ ಶಾಂತಿ ದೇವಾಡಿಗ ಅವರನ್ನು ಗೌರವಿಸಲಾಯಿತು. ಅನಾರೋಗ್ಯ ಪೀಡಿತ ತೋಕೂರಿನ ಸಾಕ್ಷಿಗೆ ಚಿಕಿತ್ಸೆಯ ಸಹಾಯ ನೀಡಲಾಯಿತು.

ಗ್ಯಾರೇಜ್ ಮಾಲಕರ ಸಂಘದಿಂದ ಕಾರ್ಮಿಕ ಕಾರ್ಡ್, ಶ್ರಮಯೋಗಿ ಮನ್ ಧನ್ ನೋಂದಣಿ



ಮಂಗಳೂರು: ದ.ಕ. ಗ್ಯಾರೇಜ್ ಮಾಲಕರ ಸಂಘ ಹಾಗೂ ದ.ಕ.ಗ್ಯಾರೇಜ್ ಮಾಲಕರ ಸೌಹಾರ್ದ ಸಹಕಾರಿ ಸಂಘ ಸಹಯೋಗದೊಂದಿಗೆ ಕಾರ್ಮಿಕ ಕಾರ್ಡ್ ನೋಂದಣಿ, ಪ್ರಧಾನ ಮಂತ್ರಿ ಶ್ರಮಯೋಗಿ ಮನ್ ಧನ್ ನೋಂದಣಿ ಅಭಿಯಾನ ದ.ಕ. ಗ್ಯಾರೇಜ್ ಮಾಲಕರ ಸಂಘದ ಸಭಾಭವನದಲ್ಲಿ ಭಾನುವಾರ ನಡೆಯಿತು.

ನೂರಾರು ಅಸಂಘಟಿತ ಕಾರ್ಮಿಕರಿಗೆ ಕಾರ್ಮಿಕ ಕಾರ್ಡ್ ನೋಂದಣಿ ಮಾಡುವ ಮೂಲಕ ಸಂಘವು ವಿಶೇಷ ದಾಖಲೆ ಮಾಡಿತು. ಅಕಾಲ ಮರಣಕ್ಕೀಡಾದ ಸಂಘದ ಆಜೀವ ಸದಸ್ಯ ಸುನೀಲ್ ಉಳ್ಳಾಲಬೈಲು ಅವರ ಕುಟುಂಬಕ್ಕೆ ಸಂಘದಿಂದ ಸಹಾಯ ಧನ ನೀಡಲಾಯಿತು. ಪತ್ರಕರ್ತೆ ಮಾಲತಿ ಶೆಟ್ಟಿ ಮಾಣೂರು ಅವರನ್ನು ಮಹಿಳಾ ದಿನಾಚರಣೆಯ ಅಂಗವಾಗಿ ಗೌರವಿಸಲಾಯಿತು. ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಎಲ್ಮಾ ಎಲಿಜಬೆತ್ ತಾವ್ರೊ ಮತ್ತು ಕುಮಾರ್ ಬಿ.ಆರ್. ಅವರು ಕಾರ್ಮಿಕರಿಗೆ ಸರಕಾರದಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು.

ಸಂಘದ ಚೇರ್ಮನ್ ಜನಾರ್ದನ್ ಎ., ಸಂಘದ ಅಧ್ಯಕ್ಷ ದಿನಕರ ಕುಲಾಲ್ ಮಾತನಾಡಿದರು. ಸಂಘದ ಉಪಾಧ್ಯಕ್ಷ ಅಬ್ದುಲ್ ಮೊಯ್ದಿನ್ ಕಾರ್ಕಳ, ನಿರ್ದೇಶಕರಾದ ಪುಂಡಲಿಕ ಸುವರ್ಣ, ದಿವಾಕರ್ ಎಂ. ಇದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಕೆ. ಎ. ರಾಜ್ ಗೋಪಾಲ್ ಸ್ವಾಗತಿಸಿ, ಸಲಹೆಗಾರ ಮಾಧವ ಬಂಗೇರ ನಿರೂಪಿಸಿದರು. ಕೋಶಾಧಿಕಾರಿ ಕಿರಣ್ ರಾಜ್ ವಂದಿಸಿದರು.

ಕೋಟೆಕಾರು ಪಟ್ಟಣ ಪಂಚಾಯತ್ ಬಜೆಟ್



ಉಳ್ಳಾಲ: ಕೋಟೆಕಾರು ಪಟ್ಟಣ ಪಂಚಾಯತಿನ 2026-27 ನೇ ಸಾಲಿನ ಆಯವ್ಯಯವನ್ನು ಪಟ್ಟಣ ಪಂಚಾಯತ್ ಅಧ್ಯಕ್ಷರಾದ ದಿವ್ಯಾ ಸತೀಶ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಮಂಡನೆ ಮಾಡಲಾಯಿತು. 2026-27ನೇ ಸಾಲಿನಡಿಯಲ್ಲಿ ಮಾರುಕಟ್ಟೆ ಹಾಗೂ ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡುವ ಕುರಿತು ಯೋಜನೆಯನ್ನು ರೂಪಿಸಲಾಯಿತು.

ಕೋಟೆಕಾರು ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಪ್ರವೀಣ್ ಐ.ಬಗಂಬಿಲ, ಸ್ಥಾಯಿ ಸಮಿತಿ ಅಧ್ಯಕ್ಷ ಧೀರಜ್ ಕುಸಾಲನಗರ, ಪ.ಪಂ ಸದಸ್ಯರಾದ ಅನಿತಾ, ಭವಾನಿ, ಉದಯಕುಮಾರ್ ಶೆಟ್ಟಿ, ರಾಘವ ಗಟ್ಟಿ, ಕಿರಣ್ ಕುಮಾರ್, ನವೀನ್ ಕೊಂಡಾಣ,ಜಗದೀಶ್ ಕೊಂಡಾಣ, ಸುಜಿತ್ ಮಾಡೂರು, ಆಯಿಷಾ, ಅಹ್ಮದ್ ಬಾವ ಅಜ್ಜಿನಡ್ಕ, ಇಸಾಕ್, ಹರೀಶ್ ರಾವ್, ಸೆಲಿಮಾಬಿ, ನಾಮನಿರ್ದೇಶಿತ ಸದಸ್ಯರಾದ ಸಫಿಯಾ ಹಾಗೂ ಮುಖ್ಯಾಧಿಕಾರಿ ಮಾಲಿನಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಮೂಡನಡುಗೋಡು ದೈವಸ್ಥಾನಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ನೆರವು



ಬಂಟ್ವಾಳ: ಮೂಡನಡುಗೋಡು ಶ್ರೀ ಜಗದಂಬಿಕಾ ಮಹಮ್ಮಾಯಿ, ಗುಳಿಗ ಅಣ್ಣಪ್ಪ ಕ್ಷೇತ್ರ ದಡ್ಡಲಕಾಡು ಇದರ ಜೀರ್ಣೋದ್ಧಾರ ಕಾರ್ಯಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ 5 ಲಕ್ಷ ರೂ. ಮಂಜೂರಾದ ಸಹಾಯಧನದ ಡಿ.ಡಿ.ಯನ್ನು ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಡಿ ಸಮಿತಿ ಸದಸ್ಯರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಹರಿಕೃಷ್ಣ ಬಂಟ್ವಾಳ, ರಾಮದಾಸ್ ಬಂಟ್ವಾಳ, ಸುಲೋಚನಾ ಜಿ.ಕೆ. ಭಟ್, ಸಂಜೀವ ಪೂಜಾರಿ, ದರ್ನಪ್ಪ ಪೂಜಾರಿ, ಸದಾನಂದ ನಾವೂರ್, ಪುರುಷೋತ್ತಮ ಪೂಜಾರಿ, ರಾಜೇಶ್ ನಾಯ್ಕ್ ನೆಕ್ಕರೆ, ಭಾಸ್ಕರ್ ಕುಲಾಲ ಅಧ್ಯಕ್ಷರು ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಮೂಡನಡುಗೋಡು, ಜಯಾನಂದ್ ಪಿ. ಯೋಜನಾಧಿಕಾರಿ ಬಂಟ್ವಾಳ ತಾಲೂಕು, ಚಿತ್ರಾಕ್ಷಿ ದಡ್ಡಲಕಾಡು, ಜಯರಾಜ್ ಕರೆಂಕಿ, ವಲಯ ಮೇಲ್ವಿಚಾರಕರು ರಾಜೇಶ್ ನಾಯ್ಕ್, ಸೇವಾಪ್ರತಿನಿಧಿ ಪ್ರಫುಲ್ಲ ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

ಪೆರಾಜೆಗುತ್ತು ಗುಡ್ಡೆಚಾಮುಂಡಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶ



ಬಂಟ್ವಾಳ: ಪೆರಾಜೆಗುತ್ತು ಶ್ರೀ ಗುಡ್ಡೆ ಚಾಮುಂಡಿ ಹಾಗೂ ಪರಿವಾರ ದೈವಗಳ ಭಂಡಾರ ಚಾವಡಿ ಮತ್ತು ಜುಮಾದಿ ಬಂಟ ದೈವಸ್ಥಾನದ ಪುನರ್ ಪ್ರತಿಷ್ಠಾ ಬ್ರಹ್ಮಕಲಶವು ಬ್ರಹ್ಮಶ್ರೀ ವೇ.ಮೂ. ನೀಲೇಶ್ವರ ಉಚ್ಚಿಲತ್ತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ನಡೆಯಿತು. ಬೆಳಿಗ್ಗೆ ಗಣಪತಿ ಹೋಮ, ಬಿಂಬ ಶುದ್ಧಿ, ಅನುಜ್ಞಾ ಕಲಶ ಪೂಜೆ, ಪ್ರಾರ್ಥನೆ ಬಳಿಕ ಸಾನಿಧ್ಯಗಳ ಪ್ರತಿಷ್ಠೆ ಸಾನಿಧ್ಯ ಕಲಶಾಭಿಷೇಕ ನೆರವೇರಿತು.

ಧಾರ್ಮಿಕ ಸಭಾ ಕಾರ್ಯಕ್ರಮವು ಆನುವಂಶೀಯ ಆಡಳಿತ ಮೊಕ್ತೇಸರ ಶ್ರೀಕಾಂತ ಆಳ್ವ ಪೆರಾಜೆಗುತ್ತು ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯ ಅತಿಥಿಗಳಾಗಿದ್ದ ಮುಂಬೈಯ ಉದ್ಯಮಿ ಬಾಲಕೃಷ್ಣ ಎಂ. ರೈ ತಿಪ್ಪಕೋಡಿ, ರಾಜ್ಯ ಧಾರ್ಮಿಕ ಪರಿಷತ್ತು ಸದಸ್ಯ ಮಲ್ಲಿಕಾ ಪಕ್ಕಳ, ಉದ್ಯಮಿ ಉಮೇಶ್ ಮಹಾಬಲ ಶೆಟ್ಟಿ ಮಾಣಿ ಶುಭ ಹಾರೈಸಿ ಮಾತನಾಡಿದರು.

ಮಾಜಿ ಸಚಿವ ಬಿ.ರಮಾನಾಥ ರೈ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪ್ಪಾಡಿಗುತ್ತು, ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಕ್ಷೇತ್ರಕ್ಕೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸಚ್ಚಿದಾನಂದ ರೈ ಪಾಳ್ಯ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕುಶಲ ಎಂ. ಪೆರಾಜೆ, ಅಪ್ಪಾರಾಯ ಪೈ ಬುಡೋಳಿ, ಪದ್ಮಾವತಿ ಜಗನ್ನಾಥ ಆಳ್ವ ಬರೆಂಗರೆ ಜಯರಾಮ ರೈ ಪೆರಾಜೆಗುತ್ತು ಉಪಸ್ಥಿತರಿದ್ದರು. ಪ್ರಮುಖರಾದ ಬಿ.ಟಿ. ನಾರಾಯಣ ಭಟ್, ಪ್ರಹ್ಲಾದ ಶೆಟ್ಟಿ ಜಡ್ತಿಲ, ನರೇಂದ್ರ ರೈ ನೆಲ್ಲೊಟ್ಟು ಸಚಿನ್ ರೈ ಮಾಣಿ, ಶಾಂತಪ್ಪ ಕುಲಾಲ್ ಏನಾಜೆ, ಡಾ. ಶ್ರೀನಾಥ್ ಆಳ್ವ ಹಾಗೂ ಸಮಿತಿಯ ವಿವಿಧ ಪದಾಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಧಾರ್ಮಿಕ ಪರಿಷತ್ತು ಸದಸ್ಯ ಜಗನ್ನಾಥ ಚೌಟ ಬದಿಗುಡ್ಡೆ ಸ್ವಾಗತಿಸಿದರು. ಜೀರ್ಣೋದ್ಧಾರಕ್ಕೆ ಸಹಕರಿಸಿದ ದಾನಿಗಳನ್ನು ಸನ್ಮಾನಿಸಲಾಯಿತು. ಲಕ್ಷ್ಮೀಶ ಪೆರಾಜೆ, ಸಚಿನ್ ಮಂಜೊಟ್ಟಿ ನಿರೂಪಿಸಿ, ವಿಶ್ವನಾಥ ಪೂಜಾರಿ ವಂದಿಸಿದರು. ವಿಷ್ಣುಮೂರ್ತಿ ಭಜನಾ ಮಂಡಳಿ ಪೆರಾಜೆ ಮತ್ತು ಗ್ರಾಮಸ್ಥರಿಂದ ಭಜನೆ ಹಾಗೂ ಸಂಜೆ ದುರ್ಗಾಪೂಜೆ ನೆರವೇರಿತು.

ವಕ್ವಾಡಿಯ ಗುರುಕುಲ ವಿದ್ಯಾ ಸಂಸ್ಥೆಯಲ್ಲಿ ಮಹಿಳಾ ದಿನಾಚರಣೆ

ಕುಂದಾಪುರ: ಮಹಿಳೆ ತನ್ನ ಮನೆ ಮತ್ತು ತನ್ನ ಸುತ್ತಲಿನ ಸಮಾಜವನ್ನು ಕಟ್ಟಲು ಎಚ್ಚರದಿಂದ ಹೆಜ್ಜೆ ಇಡಬೇಕು. ತಮ್ಮ ಮಕ್ಕಳಿಗೆ ಮೊದಲು ಗುರು ತಾಯಿಯೇ ಆದ್ದರಿಂದ ಹೊಣೆಯರಿತು ನಡೆಯಬೇಕು ಎಂದು ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಹೇಳಿದರು.



ವಕ್ವಾಡಿಯ ಗುರುಕುಲ ವಿದ್ಯಾ ಸಂಸ್ಥೆಯಲ್ಲಿ ಸೋಮವಾರ ಜರಗಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಂಡ್ಯ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯ ನಿರ್ವಾಹಕ ಕೆ.ಸುಭಾಶ್ಚಂದ್ರ ಶೆಟ್ಟಿ ಅಂತರಾಷ್ಟ್ರೀಯ ಮಹಿಳಾ ದಿನಚರಣೆಗೆ ಶುಭ ಹಾರೈಸಿ, ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ಪೂಜ್ಯವಾದ ಸ್ಥಾನವಿದೆ. ಮಹಿಳೆಯನ್ನು ಗೌರವಿಸಿ ಆಧರಿಸಿ, ಸಮಾನ ಸ್ಥಾನ ನೀಡಬೇಕೆಂದರು. ಇದೇ ಸಂದರ್ಭದಲ್ಲಿ ಜಂಟಿ ಕಾರ್ಯನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಶಿಕ್ಷಕ ವೆಂಕಟೇಶ್ ಕವಿತೆ ವಾಚಿಸಿದರು. ಪ್ರಾಂಶುಪಾಲೆ ಡಾ. ರೂಪಾ ಶೆಣೈ ಸ್ವಾಗತಿಸಿದರು. ಶಿಕ್ಷಕಿ ಸಂಧ್ಯಾ ಪ್ರಾರ್ಥಿಸಿದರು. ಶಿಕ್ಷಕ ಗುರು ಎಂ. ಪಿ. ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



ಮಂಗಲಾಡಿ ಅಂಬಾರು ಶ್ರೀ ಸದಾಶಿವ ದೇವಸ್ಥಾನದಲ್ಲಿ ಬ್ರಹ್ಮಕಲಶ ದಿನಾಚರಣೆ ಅಂಗವಾಗಿ ನಡೆದ ಕುಣಿತ ಭಜನಾ ಕಾರ್ಯಕ್ರಮವನ್ನು ಕ್ಷೇತ್ರದ ಪ್ರಧಾನ ಅರ್ಚಕರಾದ ವಾಸುದೇವ ಹೊಳ್ಳ ಮತ್ತು ಸಹ ಅರ್ಚಕರಾದ ಗಣೇಶ್ ರಾಯ ಹಾಗೂ ಸಮಿತಿಯ ಸದಸ್ಯರು ದೀಪ ಬೆಳಗಿಸಿ ಭಜನೆಗೆ ಚಾಲನೆ ನೀಡಿದರು.



ಬಲ್ಲಂಗುಡೇಲ್ ಶ್ರೀ ಪಾಡಾಂಗರ ಭಗವತೀ ಕ್ಷೇತ್ರ, ಕಲಿಯಾಟ ಉತ್ಸವ ದಿನ ಶ್ರೀ ಕ್ಷೇತ್ರಕ್ಕೆ ಬಿಜೆಪಿ ಕೇರಳ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಭೇಟಿ ನೀಡಿದರು. ಕ್ಷೇತ್ರದ ಅಧ್ಯಕ್ಷ ಜಯರಾಮ ಬಲ್ಲಂಗುಡೇಲು, ಜಗದೀಶ್ ಮೂಡಂಬೈಲು, ವಿಜಯ್‌ಕುಮಾರ್ ರೈ, ಆದರ್ಶ ಬಿ.ಎಂ. ಹಾಗೂ ಕ್ಷೇತ್ರದ ಅಚ್ಚುಮಾರಾರು ಗುರಿಕಾರರು ಉಪಸ್ಥಿತರಿದ್ದರು.

ಬಾಯಿ ತೆರೆದ ಸ್ಥಿತಿಯಲ್ಲಿದೆ ಮಾರ್ಗದಲ್ಲಿರುವ ಚರಂಡಿ | ಕೆಲವೊಂದು ಕಡೆ ಸಂಪೂರ್ಣ ಕಡಿತಗೊಂಡ ಸ್ಥಿತಿಯಲ್ಲಿದೆ ರಸ್ತೆ

ಬ್ರಹ್ಮರಕೂಟ್ಲು ಟೋಲ್ ಬಳಿಯ ಹಳೆ ಹೆದ್ದಾರಿಯನ್ನು ದುರಸ್ತಿ ಮಾಡಲು ಆಗ್ರಹ

ಬಂಟ್ವಾಳ: ದೇಶದ ಯಾವ ರಾಜ್ಯದಲ್ಲಾಗಲೀ ಅಥವಾ ಯಾವುದೇ ಮೂಲೆಯಲ್ಲಾಗಲಿ ಬಂಟ್ವಾಳ ತಾಲೂಕಿನ ಬ್ರಹ್ಮರಕೂಟ್ಲು ಟೋಲ್ ಗೇಟ್ ಇಲ್ಲ ಎಂಬುದು ಬಹಿರಂಗ ಸತ್ಯ, ಇದನ್ನು ದೇಶ ಸುತ್ತುವ ಲಾರಿ, ಘನವಾಹನ ಚಾಲಕರಲ್ಲೇ ಕೇಳಬೇಕು! ಟೋಲ್ ಪ್ಲಾಜಾಗೆ ಇರಬೇಕಾದ ಯಾವುದೇ ಮೂಲಭೂತ ವ್ಯವಸ್ಥೆಗಳು ವರ್ಷಾನುಗಟ್ಟಲೆ ಕಳೆದರೂ ಇದುವರೆಗೂ ಅಳವಡಿಸಲಾಗಿಲ್ಲ ಎಂಬುದು ಕೂಡ ಅಷ್ಟೇ ಸತ್ಯ!





ಬ್ರಹ್ಮರಕೂಟ್ಲು ಟೋಲ್ ಕೇಂದ್ರದಲ್ಲಿ ತುರ್ತು ವಾಹನ ಸಂಚಾರಕ್ಕೆ ಸಮರ್ಪಕ ರಸ್ತೆಯೇ ಇಲ್ಲ ಎಂಬುದು ಪ್ರಮುಖ ಅಂಶವಾದರೆ, ಆ್ಯಂಬುಲೆನ್ಸ್ ವಾಹನಗಳೇನಾದರೂ ಬಂದರೆ ಇಲ್ಲಿ ನಿತ್ಯವೂ ಚಡಪಡಿಸುತ್ತಿರುವ ದೃಶ್ಯಗಳೇ ಕಣ್ಣಿಗೆ ಬೀಳುತ್ತಿದೆ. ಆ್ಯಂಬುಲೆನ್ಸ್ ವಾಹನ ಸಂಚಾರಕ್ಕೆ ಪ್ರತ್ಯೇಕ ರಸ್ತೆಯೇ ಇಲ್ಲ, ಸಮರ್ಪಕ ಸರ್ವಿಸ್ ರಸ್ತೆ ಎಂಬುದೇ ಇಲ್ಲಿಲ್ಲ, ಹಳೆಯದಾದ ಹೆದ್ದಾರಿಯನ್ನೇ ಸರ್ವಿಸ್ ರಸ್ತೆಯನ್ನಾಗಿ ಒಂದು ಬದಿಯಲ್ಲಿ ಉಳಿಸಿಕೊಳ್ಳಲಾಗಿದೆಯಾದರೂ ಅದಕ್ಕಾದರೂ ಬೇಕಾದ ವ್ಯವಸ್ಥೆಗಳನ್ನು ಮಾಡಲಾಗಿದೆಯೇ ಎಂದರೆ ಅದೂ ಇಲ್ಲ, ಬ್ರಹ್ಮರಕೂಟ್ಲು ಟೋಲ್ ಗೇಟ್ ಹಲವು ವರ್ಷಗಳಿಂದಲೂ ಕಾರ್ಯನಿರ್ವಹಿಸುತ್ತಲೇ ಬರುತ್ತಿದೆ. ಈ ಹಳೆ ಹೆದ್ದಾರಿಯ ಅವ್ಯವಸ್ಥೆ ಮಾತ್ರ ಹೇಳತೀರದಂತಿದೆ. ಕೆಲವೊಂದು ಕಡೆ ರಸ್ತೆ ಸಂಪೂರ್ಣ ಕಡಿತಗೊಂಡ ಸ್ಥಿತಿಯಲ್ಲಿದೆ. ಚೇಂಬರಳು ರಸ್ತೆ ಮಧ್ಯದಲ್ಲೇ ಕಂಡು ಬರುತ್ತಿದೆ. ಚರಂಡಿ ಸ್ಲ್ಯಾಬ್‌ಗಳು ಕೂಡಾ ಬಾಯಿ ತೆರೆದ ಸ್ಥಿತಿಯಲ್ಲಿದೆ. ರಸ್ತೆ ಬದಿಯ ಎಲ್ಲೆಂದರಲ್ಲಿ ಕಸ-ತ್ಯಾಜ್ಯಗಳು ಚೆಲ್ಲಾಪಿಲ್ಲಿಯಾಗಿ ಬಿದ್ದದ್ದು ಇದರ ವಿಲೇವಾರಿಗೂ ಯಾವುದೇ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂಬುದೇ ವಿಪರ್ಯಾಸವಾಗಿದೆ.

ಒಂದೆಡೆ ಕಳೆದ 23 ವರ್ಷಗಳಿಂದ ಕಾರ್ಯಾಚರಿಸುವ ಬ್ರಹ್ಮರಕೂಟ್ಲು ಟೋಲ್ ಗೇಟ್ ಕೇಂದ್ರವನ್ನು ತೆರವುಗೊಳಿಸಬೇಕೆಂಬ ಕೂಗು ಎದ್ದಿದ್ದು, ಸಾಂಕೇತಿಕ ಪ್ರತಿಭಟನೆ ಕೂಡ ನಡೆದಿದೆ. ಇನ್ನೊಂದೆಡೆ ಟೋಲ್ ಸಂಗ್ರಹದ ಕೋಳಿಗೂಡಿನಂತಿದ್ದ ಕಬ್ಬಿಣದ ತಗಡಿನ ಬದಲಾಗಿದೆ. ಕಲ್ಲಿನ ಗೂಡ ನಿರ್ಮಿಸುವ ಸಹಿತ ಕೆಲ ಸಣ್ಣಪುಟ್ಟ ಕೆಲಸಗಳು ಇಲ್ಲಿ ನಡೆಯುತ್ತಿದೆ. ಅದೇ ರೀತಿ ಹಳೇ ಹೆದ್ದಾರಿಯನ್ನು ಸುಸ್ಥಿತಿಗೆ ತರುವ ಕೆಲಸಗಳಾಗಲೆಂಬ ಒತ್ತಾಯವು ಕೇಳಿಬಂದಿದೆ.

ಸಂಚಾರಕ್ಕೆ ಯೋಗ್ಯವಾಗಿಲ್ಲ

ಟೋಲ್ ಶುಲ್ಕ ಪಾವತಿ ತಪ್ಪಿಸುವ ನಿಟ್ಟಿನಲ್ಲಿ ಕೆಲ ವಾಹನಗಳು ಹಳೇ ಹೆದ್ದಾರಿ (ಈಗಿನ ಸರ್ವಿಸ್ ರಸ್ತೆ)ಯನ್ನು ಬಳಸಿಕೊಂಡು ಸಂಚರಿಸುತ್ತಿವೆ.ಆದರೆ ಈ ರಸ್ತೆಯು ಸುಗಮ ಸಂಚಾರಕ್ಕೆ ಯೋಗ್ಯವಾಗಿಲ್ಲವಾದರೂ ವಾಹನ ಸವಾರರು ಎದ್ದೋಬಿದ್ದೋ ಎಂಬಂತೆ ಸಂಚರಿಸುತ್ತಾರೆ. ಕನಿಷ್ಠ ಈ ಸರ್ವಿಸ್ ರಸ್ತೆಯನ್ನು ಕೂಡ ಸುಸ್ಥಿತಿಗೆ ತಾರದಿರುವುದು ದುರ್ದೈವದ ಸಂಗತಿ.

ಸುತ್ತ ಮುತ್ತ

ನರಿಕೊಂಬು ಶಾಲೆಯಲ್ಲಿ ಮಕ್ಕಳ ಪೋಷಕರ ಸಭೆ

ಬಂಟ್ವಾಳ: ತಾಲೂಕಿನ ನರಿಕೊಂಬು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಪೋಷಕರ ವಿಶೇಷ ಸಭೆಯು ನಡೆಯಿತು. ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ರವಿ ಅಂಚನ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯಲ್ಲಿ ಮಕ್ಕಳ ಸಂರಕ್ಷಣೆ ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಪೋಷಕರಿಗೆ ಮಾಹಿತಿ ನೀಡಲಾಯಿತು. ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಬಂಟ್ವಾಳ ನಗರ ಠಾಣೆಯ ಎಎಸ್‌ಐ ರವೀಂದ್ರ ಅವರು ಭಾಗವಹಿಸಿ ಮಕ್ಕಳ ಸುರಕ್ಷತೆ, ಕಾನೂನು ಅರಿವು ಮತ್ತು ಜಾಗೃತಿ ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ನಡೆಸಲಾದ ವಿಜ್ಞಾನ ಪ್ರಯೋಗ ಸ್ಪರ್ಧೆಯ ವಿಜೇತರನ್ನು ಅಭಿನಂದಿಸಲಾಯಿತು. ತಾಯಂದಿರ ಸಮಿತಿಯ ಉಪಾಧ್ಯಕ್ಷೆ ರೇಖಾ, ಶಿಕ್ಷಕಿ ಪ್ರವೀಣ, ದೈಹಿಕ ಶಿಕ್ಷಕಿ ಶೋಭಾ ಉಪಸ್ಥಿತರಿದ್ದರು. ಶಿಕ್ಷಕಿ ಪ್ರವೀಣ ಕುಮಾರಿ ಸ್ವಾಗತಿಸಿ, ಶಿಕ್ಷಕಿ ವಿಲ್ಮಾ ಪ್ರಸಿಲ್ಲ ಪಿಂಟೋ ವಂದಿಸಿದರು. ಶಿಕ್ಷಕಿ ದೀಪಿಕಾ ಶೆಟ್ಟಿ ನಿರೂಪಿಸಿದರು.

ಆಟೋಗ್ಯಾಸ್‌ಗೂ ಹೆಚ್ಚುವರಿ ದರ ವಸೂಲಿ: ರಿಕ್ಷಾ ಚಾಲಕರ ಪ್ರತಿಭಟನೆ

ಬಂಟ್ವಾಳ: ಬಿ.ಸಿ.ರೋಡಿಗೆ ಸಮೀಪದ ತಲಪಾಡಿ ಅಟೋ ಗ್ಯಾಸ್ ಪಂಪ್‌ವೊಂದರಲ್ಲಿ ಕೆ.ಜಿ.ಗೆ ನಿಗದಿತ ದರಕ್ಕಿಂತ 10 ರೂ. ಹೆಚ್ಚುವರಿಯಾಗಿ ವಸೂಲಿ ಮಾಡಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ರಿಕ್ಷಾ ಚಾಲಕರ-ಮಾಲಕರ ಒಕ್ಕೂಟದ ಸದಸ್ಯರು ಪೆಟ್ರೋಲ್ ಪಂಪ್ ಮುಂಭಾಗ ಮಂಗಳವಾರ ಹಠಾತ್ ಪ್ರತಿಭಟನೆ ನಡೆಸಿದರು. ಒಕ್ಕೂಟದ ಅಧ್ಯಕ್ಷ ವಿಶ್ವನಾಥ ಚೆಂಡ್ತಿಮಾರ್ ಅವರ ನೇತೃತ್ವದಲ್ಲಿ ರಿಕ್ಷಾ ಚಾಲಕರು ಪಂಪ್ ನ ಮುಂದೆ ಪ್ರತಿಭಟನೆ ನಡೆಸಿದ್ದು ಈ ಸಂದರ್ಭ ರಿಕ್ಷಾ ಚಾಲಕರು ಹಾಗೂ ಪಂಪ್‌ನ ಸಿಬ್ಬಂದಿಗಳ ನಡುವೆ ವಾಗ್ವಾದವು ನಡೆಯಿತು. ಸುದ್ದಿ ತಿಳಿದ ಬಂಟ್ವಾಳ ನಗರ ಠಾಣೆಯ ಪೊಲೀಸರು ದೌಡಾಯಿಸಿ ಪೆಟ್ರೋಲ್ ಪಂಪ್ ನ ಮುಖ್ಯಸ್ಥರ ಜೊತೆ ಮಾತುಕತೆ ನಡೆಸಿದರು. ಬಳಿಕ ಹಳೆಯ ದರ 67.45 ರಂತೆ ಪಡೆದುಕೊಳ್ಳುವುದಾಗಿ ಒಪ್ಪಿಗೆ ಸೂಚಿಸಿದ ಬಳಿಕವೇ ರಿಕ್ಷಾ ಚಾಲರು ಪ್ರತಿಭಟನೆ ಹಿಂಪಡೆದರು.

ದರ್ಬೆ ವೃತ್ತದ ಬಳಿ ಪ್ರತಿಭಟನೆ

ಪುತ್ತೂರು: ಸೋಶಿಯಲ್ ಡೆಮಾಕ್ರಟಿಕ್ ಟ್ರೇಡ್ ಯೂನಿಯನ್(ಎಸ್‌ಡಿಟಿಯು), ಆಟೋ ಯೂನಿಯನ್ ಪುತ್ತೂರು ತಾಲೂಕು ಸಮಿತಿಯಿಂದ ಅಟೋ ಗ್ಯಾಸ್ ಬೆಲೆಯೇರಿಕೆ ವಿರುದ್ಧ ದರ್ಬೆ ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ಪ್ರತಿಭಟನಾ ಸಭೆಯ ಪ್ರಾರಂಭದಲ್ಲಿ ಗಾಂಧೀ ಕಟ್ಟೆಯ ಬಳಿಯಿಂದ ದರ್ಬೆ ತನಕ ಆಟೋ ರಿಕ್ಷಾವನ್ನು ಹಗ್ಗದಿಂದ ಕಟ್ಟಿ ಎಳೆದುಕೊಂಡು ಹೋಗುವ ಅಣುಕು ರ್‍ಯಾಲಿ ನಡೆಸಿದರು. ಪ್ರತಿಭಟನಾ ಸಭೆಯುಲ್ಲಿ ಮುಖ್ಯ ಭಾಷಣ ಮಾಡಿದ ಎಸ್ ಡಿಟಿಯು ಮಂಗಳೂರು ನಗರ ಜಿಲ್ಲಾಧ್ಯಕ್ಷ ಅಬ್ದುಲ್ ರಹಿಮಾನ್ ಬೋಳಿಯಾರ್, ಭಾಗವಹಿಸಿ, ಮಾತನಾಡಿದರು. ಎಸ್‌ಡಿಟಿಯು ಜಿಲ್ಲಾ ಸಮಿತಿ ಸದಸ್ಯ ಕೆ.ಎಸ್. ಹಮೀದ್ ಮಾತನಾಡಿದರು. ಎಸ್ ಡಿಟಿಯು ಮಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಸಲೀಂ ಗುರುವಾಯನಕೆರೆ ಮಾತನಾಡಿದರು. ಎಸ್ ಡಿಟಿಯು ತಾಲೂಕು ಸಮಿತಿ ಅಧ್ಯಕ್ಷ ಆಸೀಫ್ ಮುಕ್ವೆ, ಪುತ್ತೂರು ಪ್ರಧಾನ ಕಾರ್ಯದರ್ಶಿ ಇಲ್ಯಾಸ್ ಪೋಳ್ಯ, ಸದಸ್ಯರ ಮಹಮ್ಮದ್ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ಪರಿಹಾರ ನಿಧಿಯಿಂದ ನೆರವು

ಪುತ್ತೂರು: ಅನಾರೋಗ್ಯದಿಂದ ಬಳಲುತ್ತಿರುವ ಇಬ್ಬರು ವ್ಯಕ್ತಿಗಳಿಗೆ ಒಟ್ಟು ರೂ.5 ಲಕ್ಷ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ನೆರವು ಬಿಡುಗಡೆಯಾಗಿದೆ. ಪುತ್ತೂರು ಶಾಸಕ ಅಶೋಕ್ ರೈ ಅವರ ಶಿಫಾರಸ್ಸಿನಂತೆ ಪೆರುವಾಯಿ ಗ್ರಾಮದ ಕೆಳಗಿನ ಮನೆ ನಿವಾಸಿ ವಾರಿಜಾರವರಿಗೆ ರೂ.2 ಲಕ್ಷ ಹಾಗೂ ಸರ್ವೆ ಗ್ರಾಮದ ಮಹಮ್ಮದ್ ಅಮೀನ್ ಅವರಿಗೆ ರೂ.3 ಲಕ್ಷ ಪರಿಹಾರ ಧನ ಮಂಜೂರಾಗಿದೆ. ಪರಿಹಾರ ಮೊತ್ತ ಫಲಾನುಭವಿಗಳ ಖಾತೆಗೆ ನೇರ ಜಮಾವಣೆಯಾಗಲಿದೆ. ಬೆಂಕಿ ಆಕಸ್ಮಿಕದಿಂದ ಅಂಗಡಿ ಬೆಂಕಿಗಾಹುತಿಯಾದ ಅಂಗಡಿ ಮಾಲಕರಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ರೂ.5 ಲಕ್ಷ ಪರಿಹಾರ ಮಂಜೂರಾಗಿದೆ. ವಿಟ್ಲ ಗ್ರಾಮದ ಮಂಕುಡೆ ಶಾಲಾ ಬಳಿ ಕುಡ್ತಮುಗೇರು ಕೊಳ್ನಾಡು ಸಂತೋಷ್ ಎಂಬವರ ಎಲೆಕ್ಟ್ರಿಕಲ್ ಬೆಂಕಿ ಅವಘಡದಿಂದ ಸುಮಾರು ರೂ.80 ಲಕ್ಷ ನಷ್ಟ ಸಂಭವಿಸಿತ್ತು. ಪರಿಹಾರಕ್ಕಾಗಿ ಶಾಸಕ ಅಶೋಕ್ ರೈ ಅವರಿಗೆ ಮನವಿ ಮಾಡಿದ್ದರು. ಶಾಸಕರ ಶಿಫಾರಸ್ಸಿನಂತೆ ಅಂಗಡಿ ಮಾಲಕಗೆ ರೂ.5 ಲಕ್ಷ ಪರಿಹಾರ ಮಂಜೂರಾಗಿದೆ.

ಕೇರಳ ವಿಧಾನಸಭಾ ಚುನಾವಣೆ ಹಿನ್ನೆಲೆ ಪತ್ರಕರ್ತರಿಗೆ ತರಬೇತಿ | ಕಾಸರಗೋಡು ಡಿಸಿ ಸೂಚನೆ

ಚುನಾವಣಾ ಆಯೋಗದ ಮಾರ್ಗಸೂಚಿ ಪಾಲನೆ ಕಡ್ಡಾಯ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆ ಅಂಗವಾಗಿ ಕಾಸರಗೋಡು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಮಂಗಳವಾರ ವಿಶೇಷ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ನಕಲಿ, ಸುಳ್ಳು ಸುದ್ದಿ ಹರಡದಿರಿ

ಕಾಸರಗೋಡು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಚುನಾವಣಾ ಸಮಯದಲ್ಲಿ ನಕಲಿ ಸುದ್ದಿ, ದ್ವೇಷ ಭಾಷಣ, ಕೃತಕ ಬುದ್ಧಿಮತ್ತೆ ಬಳಸಿಕೊಂಡು ಸುಳ್ಳು ಸಂದೇಶಗಳು ಮತ್ತು ಪೈಡ್ ಸುದ್ದಿಗಳನ್ನು ಪ್ರಸಾರ ಮಾಡಕೂಡದು. ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಮಾಧ್ಯಮ ಪ್ರತಿನಿಧಿಗಳು ಪಾಲಿಸಬೇಕು ಹಾಗೂ ನಿಯಾಮಾವಳಿಗಳನ್ನು ಪಾಲಿಸುವಂತೆ ಸೂಚಿಸಿದರು. ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಜಿಲ್ಲಾಧಿಕಾರಿಗಳು ಮುಕ್ತ ಸಂವಾದ ನಡೆಸಿದರು.

ಚುನಾವಣೆಗೆ ಸಂಬಂಧಿಸಿದ ಎಲ್ಲಾ ರಾಜಕೀಯ ಪಕ್ಷಗಳು, ಜಿಲ್ಲಾಡಳಿತದ ಸುದ್ದಿಗಳನ್ನು ಸಮಾನವಾಗಿ ಹಾಗೂ ಪರಿಣಾಮಕಾರಿ ಪ್ರಸಾರ ಮಾಡುವಂತೆ ಪತ್ರಕರ್ತರನ್ನು ಜಿಲ್ಲಾಧಿಕಾರಿ ಕೋರಿದರು. ಚುನಾವಣಾ ಸಂದರ್ಭದಲ್ಲಿ ಸುದ್ದಿ ಮತ್ತು ಜಾಹೀರಾತುಗಳ ಮೇಲ್ವಿಚಾರಣೆ ಮತ್ತು ಪ್ರಮಾಣಪತ್ರಗಳನ್ನು ನೀಡುವ ಬಗ್ಗೆ ಚುನಾವಣಾ ಆಯೋಗವು ಮಾಧ್ಯಮಗಳಿಗೆ ಮತ್ತು ಮಾಧ್ಯಮ ಪ್ರಮಾಣೀಕರಣ ಹಾಗೂ ಮೇಲ್ವಿಚಾರಣಾ ಸಮಿತಿ (ಎಂಸಿಎಂಸಿ) ನೀಡಿದ ಮಾರ್ಗಸೂಚಿಗಳ ಕುರಿತು ಪತ್ರಕರ್ತರಲ್ಲಿ ಜಾಗೃತಿ ಮೂಡಿಸಲು ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಚುನಾವಣಾ ಆಯೋಗದ ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಮತದಾನವನ್ನು ಸುಗಮವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ನಿಟ್ಟಿನಲ್ಲಿ ಎಲ್ಲರೂ ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿ ತಿಳಿಸಿದರು. ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿ ಎಂದರೇನು ಮತ್ತು ಚುನಾವಣೆಯ ಸಮಯದಲ್ಲಿ ಪೈಡ್ ಸುದ್ದಿಗಳ ಮೇಲ್ವಿಚಾರಣೆಯಲ್ಲಿ ಈ ಸಮಿತಿಯು ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ವಿವರಿಸಲಾಯಿತು. ಚುನಾವಣಾ ಆಯೋಗದರಾಜ್ಯಮಟ್ಟದಮಾಸ್ಟರ್ ತರಬೇತುದಾರ ಸಜಿತ್ ಪಾಲೇರಿ ತರಗತಿ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಚುನಾವಣಾ ವಿಭಾಗದ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಚುನಾವಣಾ ವೆಚ್ಚ ನೋಡಲ್ ಅಧಿಕಾರಿ ವಿ.ಚಂದ್ರನ್, ಮಾಧ್ಯಮ ಪ್ರತಿನಿಧಿಗಳು, ಚುನಾವಣಾ ಇಲಾಖೆ ಅಧಿಕಾರಿಗಳು ಮುಂತಾದವರು ಇದ್ದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಸ್ವಾಗತಿಸಿ, ಮಾಹಿತಿ ಕಚೇರಿಯ ಸಹಾಯಕ ಸಂಪಾದಕಿ ಎ.ಪಿ. ದಿಲ್ನಾ ವಂದಿಸಿದರು.



ಚುನಾವಣಾ ವೆಚ್ಚ ಮೇಲ್ವಿಚಾರಣೆ: ಮುದ್ರಣ ಸಂಸ್ಥೆ ಮಾಲಕರ ಸಭೆ

ಕೇರಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಮತ್ತು ವಿವಿಧ ರಾಜಕೀಯ ಪಕ್ಷಗಳ ಪ್ರಚಾರ ವೆಚ್ಚಗಳ ಮೇಲ್ವಿಚಾರಣೆಯ ಭಾಗವಾಗಿ ಕಾಸರಗೋಡು ಜಿಲ್ಲೆಯ ಮುದ್ರಣ ಮತ್ತು ಪ್ರಕಾಶನ ಸಂಸ್ಥೆ ಮಾಲಕರ ಸಭೆಯನ್ನು ಏರ್ಪಡಿಸಲಾಯಿತು. ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಸಭೆಯ ಅಧ್ಯಕ್ಷತೆಯನ್ನು ವೆಚ್ಚ ಮೇಲ್ವಿಚಾರಣಾ ನೋಡಲ್ ಅಧಿಕಾರಿ ವಿ.ಚಂದ್ರನ್ ವಹಿಸಿದ್ದರು. 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 127ಎ ಅಡಿಯಲ್ಲಿ ಚುನಾವಣಾ ಆಯೋಗವು ಮುದ್ರಣ ಮತ್ತು ನವ ಮಾಧ್ಯಮಗಳ (ಸಾಮಾಜಿಕ ಜಾಲತಾಣಗಳ) ಮೂಲಕ ಅಭ್ಯರ್ಥಿಗಳು ನಡೆಸುವ ಜಾಹೀರಾತುಗಳ ಮೇಲಿನ ವೆಚ್ಚವನ್ನು ಮೇಲ್ವಿಚಾರಣೆ ಮಾಡಲು ಕಾರ್ಯವಿಧಾನಗಳನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ಮುದ್ರಣ ಸಂಸ್ಥೆಗಳ ಮಾಲಕರು ಅನುಸರಿಸಬೇಕಾದ ಕಾನೂನು ಸೂಚನೆಗಳು ಮತ್ತು ಕಾರ್ಯವಿಧಾನ ಸಭೆಯಲ್ಲಿ ವಿವರಿಸಲಾಯಿತು. ಚುನಾವಣಾ ಆಯೋಗದ ಕಟ್ಟುನಿಟ್ಟಿನ ಸೂಚನೆ ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಮುದ್ರಣ ಸಂಸ್ಥೆಗಳ ಮಾಲಕರು ಸಹಕರಿಸಬೇಕು ಎಂದು ನೋಡಲ್ ಅಧಿಕಾರಿ ತಿಳಿಸಿದರು. ಚುನಾವಣಾ ವಿಭಾಗದ ಉಪ ಕಲೆಕ್ಟರ್ ಎ.ಎನ್. ಗೋಪಕುಮಾರ್ ಉಪಸ್ಥಿತರಿದ್ದರು.

ವಲಸೆ ಕಾರ್ಮಿಕರ ದಾಖಲೆ ಪರಿಶೀಲಿಸಿ: ಕೊಡಗು ಹಿತರಕ್ಷಣಾ ವೇದಿಕೆ ಒತ್ತಾಯ



ಮಡಿಕೇರಿ: ಅಸ್ಸಾಂ ಹಾಗೂ ಇನ್ನಿತರ ಕಡೆಗಳಿಂದ ಕೊಡಗಿಗೆ ಬಂದಿರುವ ವಲಸೆ ಕಾರ್ಮಿಕರ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡುವಂತೆ ಕೊಡಗು ಹಿತರಕ್ಷಣಾ ವೇದಿಕೆ ಜಿಲ್ಲಾಡಳಿತವನ್ನು ಒತ್ತಾಯಿಸಿದೆ. ಈ ಸಂಬಂಧ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿರುವ ವೇದಿಕೆಯ ಪ್ರಮುಖರು, ಇತ್ತೀಚಿನ ದಿನಗಳಲ್ಲಿ ಮಡಿಕೇರಿ ಸೇರಿದಂತೆ ಜಿಲ್ಲೆಯ ಹಲವೆಡೆ ಸ್ಥಳೀಯರ ಮೇಲೆ ವಲಸೆ ಕಾರ್ಮಿಕರಿಂದ ದೌರ್ಜನ್ಯಗಳಾಗುತ್ತಿವೆ. ಮಾರುಕಟ್ಟೆಯಲ್ಲಿ ತಂಬಾಕು ಉತ್ಪನ್ನಗಳ ಹಾಗೂ ಇನ್ನಿತರ ವಸ್ತುಗಳ ಮಾರಾಟ ನಡೆಯುತ್ತಿದೆ. ಹಾಗೂ ಕೆಲವು ಗ್ರಾಮೀಣ ಭಾಗದಲ್ಲಿ ಸಂಜೆಯ ಸಮಯ ಮದ್ಯಪಾನ ಮಾಡಿ ಸ್ಥಳೀಯರಿಗೆ ಕಿರಿ ಕಿರಿ ಉಂಟು ಮಾಡುತ್ತಿರುವುದು ಕಂಡು ಬರುತ್ತಿದೆ ಎಂದು ವೇದಿಕೆಯ ಪ್ರಮುಖರು ದೂರಿದ್ದಾರೆ.

ಜಿಲ್ಲೆಯ ಹಲವು ಮಾರುಕಟ್ಟೆಯಲ್ಲಿ ಇವರುಗಳು ವ್ಯಾಪಾರಕ್ಕೆ ಇಳಿದಿದ್ದು, ಆಹಾರ ಇಲಾಖೆಯ ಪರವಾನಗಿ ಇಲ್ಲದೆ ರಾಜಾರೋಷವಾಗಿ ಅಶುಚಿತ್ವವಾದ ತಿಂಡಿ ತಿನಿಸುಗಳನ್ನು ಮಾರುತ್ತಿದ್ದಾರೆ. ಇದಲ್ಲದೆ ತಂಬಾಕು ಉತ್ಪನ್ನಗಳಾದ ಗುಟ್ಕಾ, ಬೀಡಿ, ಸಿಗರೇಟ್‌ಗಳನ್ನು ಕೂಡಾ ಮಾರುತ್ತಿದ್ದಾರೆ. ಇವುಗಳಲ್ಲಿ ಕೆಲವರು ಅಪರಾಧ ಪ್ರಕರಣಗಳಲ್ಲಿಕೂಡಾ ಭಾಗಿಯಾದವರಿದ್ದು ಇವರುಗಳು ಮುಂದಿನ ದಿನಗಳಲ್ಲಿ ಕೊಡಗಿಗೆ ಮಾರಕವಾಗುವ ಲಕ್ಷಣಗಳು ಕಂಡು ಬರುತ್ತಿವೆ ಎಂದು ಗಮನಸೆಳೆದಿದ್ದಾರೆ. ಕೆಲ ದಿನಗಳ ಹಿಂದೆ ಸ್ಥಳೀಯ ವಾಹನ ಚಾಲಕನ ಮೇಲೆ ಹಲ್ಲೆ ನಡೆದಿರುವುದನ್ನು ವೇದಿಕೆಯ ಪ್ರಮುಖರು ಖಂಡಿಸಿದ್ದಾರೆ.

ಡಿಸಿ ಹಾಗೂ ಕೊಡಗು ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಮನವಿ ಸಲ್ಲಿಸುವ ಸಂದರ್ಭ ವೇದಿಕೆ ಅಧ್ಯಕ್ಷ ರವಿಗೌಡ, ಉಪಾಧ್ಯಕ್ಷ ನಾಗೇಶ್, ಕಾರ್ಯದರ್ಶಿ ಅಕ್ಷಿತ್, ಮಹಿಳಾ ಘಟಕದ ಕಾರ್ಯದರ್ಶಿ ಲಿಲ್ಲಿಗೌಡ, ಎನ್ ಸಿಐಬಿಯ ಜಾನ್ಸನ್ ಪ್ರವೀಣ್, ಸಮಿತಿ ಸದಸ್ಯರುಗಳಾದ ಪುನೀತ್, ಕಿರಣ್ ಹಾಗೂ ಇತರರು ಪಾಲ್ಗೊಂಡಿದ್ದರು.

ತುಳುನಾಡ ಸಂಸ್ಕೃತಿಯು ಮುಂದಿನ ಜನಾಂಗಕ್ಕೂ ತಲುಪಲಿ: ವಿವೇಕ್ ಆಳ್ವ



ಮಂಗಳೂರು: ಜಾಗತೀಕರಣದಿಂದ ಆರಂಭಗೊಂಡು ಪ್ರಸ್ತುತ ಎಐ ವರೆಗೆ ಜಗತ್ತು ಸಾಗಿ ಬಂದರೂ, ತುಳುವರ ನಂಬಿಕೆ, ಆಚರಣೆ, ಸಂಸ್ಕೃತಿಗಳು ಇಂದಿಗೂ ಉಳಿದುಕೊಂಡು ಬಂದಿದೆ. ಇದನ್ನು ಮುಂದಿನ ತಲೆಮಾರುಗಳಿಗೂ ಉಳಿಸಿಕೊಂಡು ಹೋಗುವ ಜವಾಬ್ದಾರಿ ಯುವ ಜನಾಂಗದ ಮೇಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಹಾಗೂ ತುಳು ಪರಿಷತ್ ವತಿಯಿಂದ 3ನೇ ವಿದ್ಯಾರ್ಥಿ ತುಳು ಸಮ್ಮೇಳನದ ಪೂರ್ವಭಾವಿಯಾಗಿ ಆಯೋಜಿಸಲಾದ 'ವಿದ್ಯಾರ್ಥಿ ಕಲಾ ಸಿರಿ' ಕಾರ್ಯಕ್ರಮವನ್ನು ಉರ್ವಸ್ಟೋರ್ ನ ತುಳು ಸಾಹಿತ್ಯ ಅಕಾಡೆಮಿಯ ತುಳು ಚಾವಡಿ ಯಲ್ಲಿ ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

ಈ ಕಾಲದ ನವ ಮಾಧ್ಯಮಗಳನ್ನು ಸರಿಯಾಗಿ ಬಳಸಿಕೊಂಡು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ತುಳು ಭಾಷೆ-ಸಂಸ್ಕೃತಿ ವಿಚಾರಗಳನ್ನು ಎಲ್ಲೆಡೆ ಪಸರಿಸುವ ಅಗತ್ಯವಿದೆ ಎಂದರು.

ಚಲಚಚಿತ್ರ ನಟ ಸ್ವರಾಜ್ ಶೆಟ್ಟಿ ಮಾತನಾಡಿ, ಸಂವಿಧಾನದ 8ನೇ ಪರಿಚ್ಛೇದಕ್ಕೆ ತುಳುವನ್ನು ಸೇರಿಸುವ ಕೆಲಸದಲ್ಲಿ ಪ್ರತಿಯೊಬ್ಬರೂ ಕೈಜೋಡಿಸುವ ಅಗತ್ಯವಿದೆ ಎಂದರು. ನಿರೂಪಕಿ, ನಟಿ ಸೌಜನ್ಯ ಹೆಗ್ಡೆ ಮಾತನಾಡಿ, ತುಳು ಭಾಷೆ ಸಂಸ್ಕೃತಿಯನ್ನು ಎಲ್ಲರಿಗೂ ಪರಿಚಯಿಸುವ ಕೆಲಸ ಮಾಡಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಮಾತನಾಡಿ, ತುಳುವಿನ ವ್ಯಾಪ್ತಿ ವಿಸ್ತಾರವಾಗಿದ್ದು ವಿದ್ಯಾರ್ಥಿಗಳು ತುಳುವಿನ ಬಗ್ಗೆ ಆಸಕ್ತಿ ಹೊಂದಿ ಭಾಷೆ, ಸಂಸ್ಕೃತಿಯ ಬೆಳವಣಿಗೆಗೆ ಕೊಡುಗೆ ನೀಡಬೇಕು ಎಂದರು. ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ, ಮಂಗಳೂರು ವಿವಿ ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಶೇಷಪ್ಪ ಅಮೀನ್, ಮನಪಾ ಮಾಜಿ ಸದಸ್ಯ ಗಣೇಶ್ ಕುಲಾಲ್, ತುಳು ಪರಿಷತ್ ಗೌರವ ಸಲಹೆಗಾರ ಸ್ವರ್ಣ ಸುಂದರ್, ಗೌರವಾಧ್ಯಕ್ಷ ಡಾ. ಪ್ರಭಾಕರ ನೀರುಮಾರ್ಗ, ಕೋಶಾಧಿಕಾರಿ ಸುಮತಿ ಹೆಗ್ಡೆ, ಕಲಾ ಸಿರಿ ಸಂಚಾಲಕ ದುರ್ಗಾ ಪ್ರಸಾದ್, ಸಮ್ಮೇಳನ ಸಂಚಾಲಕಿ ಅಮಿತಾ ಅಶ್ವಿನ್, ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಸಂತೋಷ್ ಶೆಟ್ಟಿ ಹಿರಿಯಡ್ಕ, ಬಾಬು ಕೊರಗ ಉಪಸ್ಥಿತರಿದ್ದರು. ತುಳು ಪರಿಷತ್ ಅಧ್ಯಕ್ಷ ಶುಭೋದಯ ಆಳ್ವ ಸ್ವಾಗತಿಸಿ, ಕಲಾಸಿರಿ ಸಂಚಾಲಕಿ ಚಂದ್ರಕಲಾ ರಾವ್ ವಂದಿಸಿದರು. ಭಾವಗೀತೆ, ಕಿರುನಾಟಕ, ಜಾನಪದ ನೃತ್ಯ, ಚಿತ್ರ ಕಲಾ ಸ್ಪರ್ಧೆ, ಹಾಗೂ ವಿವಿಧ ಸ್ಪರ್ಧೆಗಳಲ್ಲಿ ವಿವಿಧ ಕಾಲೇಜುಗಳು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆಶಾ ಕಾರ್ಯಕರ್ತೆಯರಿಗೆ ಸಾಮಾಜಿಕ ನ್ಯಾಯ ದೊರಕಲಿ: ಪ್ರಕೃತಿ ಕಲ್ಯಾಣಪುರ್



ಪುತ್ತೂರು: ಸಮಾಜದ ತಳಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿರುವ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಸಾಮಾಜಿಕ ನ್ಯಾಯ ದೊರಕಬೇಕು. ಆಗ ಮಹಿಳಾ ಶಕ್ತಿ ಇನ್ನಷ್ಟು ಬಲಿಷ್ಠವಾಗಲು ಸಾಧ್ಯ ಎಂದು ಪುತ್ತೂರುಪ್ರಧಾನಹಿರಿಯವ್ಯವಹಾರಿಕ ನ್ಯಾಯಾಲಯದ ನ್ಯಾಯಾಧೀಶೆ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ ಪ್ರಕೃತಿ ಕಲ್ಯಾಣ್‌ಪುರ್ ಅಭಿಪ್ರಾಯಿಸಿದರು.

ಸಾಂತ್ವನ ಕೇಂದ್ರ ಪುತ್ತೂರು, ಜನ ಶಿಕ್ಷಣ ಟ್ರಸ್ಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಸಂಜೀವಿನಿ ಒಕ್ಕೂಟ, ಕಾನೂನು ಸೇವಾ ಪ್ರಾಧಿಕಾರ ಪುತ್ತೂರು ಇದರ ಸಹಯೋಗದೊಂದಿಗೆ ಪುತ್ತೂರು ತಾ.ಪಂ. ಸಭಾಂಗಣದಲ್ಲಿ ಮಂಗಳವಾರ ನಡೆದ 'ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ' ಸ್ವಚ್ಛತೆ, ಮಹಿಳಾ ದೌರ್ಜನ್ಯ ತಡೆ, ಮಹಿಳಾ ಸಬಲೀಕರಣ ಸಂವಾದ ಸಂಕಲ್ಪ ಕಾರ್ಯಕ್ರಮ ಅವರು ಉದ್ಘಾಟಿಸಿದರು.

ನರೇಗ ಮಾಜಿ ಒಂಬುಡ್ಸ್ ಮೆನ್ ಶೀನ ಶೆಟ್ಟಿ ಸಂವಾದ ನಡೆಸಿದರು. ಪ್ಯಾನಲ್ ವಕೀಲೆ ಭಾರತಿ ಮಾಹಿತಿ ಹಂಚಿಕೊಂಡರು. ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕ ಕೃಷ್ಣ ಮೂಲ್ಯ, ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಾಂತಿ ಟಿ. ಹೆಗ್ಡೆ, ಸಂಜೀವಿನಿ ತಾಲೂಕು ಮಟ್ಟದ ಒಕ್ಕೂಟ ಕಾರ್ಯದರ್ಶಿ ಸ್ವಾತಿ, ನಿವೃತ್ತ ಶಿಕ್ಷಕ, ಸಾಹಿತಿ ನಾರಾಯಣ ರೈ ಕುಕ್ಕುವಳ್ಳಿ, ವಿಟ್ಲ ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್‌ನ ತಾರನಾಥ ಉಪಸ್ಥಿತರಿದ್ದರು.

ಇದೇ ಸಂದರ್ಭ ಅಂಗನವಾಡಿ ಕಾರ್ಯಕರ್ತೆಯರನ್ನು ಸನ್ಮಾನಿಸಲಾಯಿತು. ಬಿಂದು ಸ್ವಾಗತಿಸಿ, ಜನಶಿಕ್ಷಣ ಟ್ರಸ್ಟ್‌ನ ಕಾರ್ಯಕ್ರಮ ಸಂಯೋಜಕ ಚೇತನ್ ಕುಮಾರ್ ವಂದಿಸಿದರು. ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ನಿಶಾ ಪ್ರಿಯ ಕಾರ್ಯಕ್ರಮ ನಿರ್ವಹಿಸಿದರು. ಸಾಂತ್ವನ ಕೇಂದ್ರದ ಸ್ವಾತಿ ಮತ್ತು ನಿತಿನ್ ಕುಮಾರ್ ಸಹಕರಿಸಿದರು.



ಮಹಿಳಾ ದಿನಾಚರಣೆ ಅಂಗವಾಗಿ ಮಂಜೇಶ್ವರ ತಾಲೂಕಿನ ಪಾತೂರು ಬಾಕ್ರಬೈಲು ಎಯುಪಿ ಶಾಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಮೀರಾ ಹಾಗೂ ಆಶಾ ಅವರನ್ನು ಶಾಲಾ ಪ್ರಬಂಧಕಿ ರಮ್ಯ ನಾವಡ ಹಾಗೂ ಅಧ್ಯಾಪಕ ವೃಂದ ಗೌರವಿಸಿದರು.

ಸ್ತ್ರೀಯರು ಪುರುಷರಿಗೆ ಸಮಾನರಾಗಿ ಬದುಕಿ: ಪೂರ್ಣೇಶ್ವರಿ ಭಟ್ ಸಲಹೆ



ಬಂಟ್ವಾಳ: ಮಹಿಳೆಯರು ಸ್ವಾವಲಂಬಿಯಾಗುವುದರೊಂದಿಗೆ ತಮ್ಮ ಮೇಲಾಗುತ್ತಿರುವ ದೌರ್ಜನ್ಯ, ಅಸಮಾನತೆಯನ್ನು ಧೈರ್ಯವಾಗಿ ಎದುರಿಸಿ ಪುರುಷರಿಗೆ ಸಮಾನವಾಗಿ ಬದುಕಬೇಕೆಂದು ಬಿ.ಆರ್. ಎಂ.ಪಿ.ಸಿ. ಶಾಲೆಯ ಪ್ರಾಂಶುಪಾಲ ಪೂರ್ಣೇಶ್ವರಿ ಭಟ್ ಕರೆನೀಡಿದರು.

ಬಂಟ್ವಾಳ ಶ್ರೀ ವೆಂಕಟರಮಣಸ್ವಾಮೀ ಸಮೂಹ ವಿದ್ಯಾಸಂಸ್ಥೆಗಳ ಆಶ್ರಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಎಲ್ಲಾ ರಂಗದಲ್ಲೂ ಪ್ರಗತಿ ಸಾಧಿಸಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಸ್.ವಿ.ಎಸ್.ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಡಿ. ಮಂಚಿ ಮಾತನಾಡಿ, ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಸಮಪಾಲು-ಸಮಬಾಳು ಮಾತಿಗೆ ಬದ್ಧರಾಗಿ ಎಲ್ಲಾ ರಂಗದಲ್ಲೂ ಪ್ರಗತಿಸಾಧಿಸಿ ಸಮಾಜದಲ್ಲಿ ತಮ್ಮ ಸ್ಥಾನಮಾನದ ಅಗತ್ಯತೆಯನ್ನು ಸಾಬೀತುಪಡಿಸಬೇಕಾದ ಅಗತ್ಯವಿದೆ. ಮಹಿಳೆ ಜಾಗೃತಗೊಂಡಾಗ ಸಂಘಟಿತರಾದಾಗ ಆಕೆಯೂ ಪುರುಷನಿಗೆ ಸಮಾನವಾಗಿ ಬೆಳೆಯಬಹುದೆಂದು ಹೇಳಿದರು.

ಎಸ್.ವಿ.ಎಸ್.ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಶಶಿಧರ್ ಕೆ., ಎಸ್.ವಿ.ಎಸ್. ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಚೈತ್ರಾ ಶೆಟ್ಟಿ, ಪೂರ್ವ ಪ್ರಾಥಮಿಕ ಶಾಲೆಯ ವೀಣಾ ದೇವಾಡಿಗ ಸಹಿತ ಮೊದಲಾದವರು ಉಪಸ್ಥಿತರಿದ್ದರು. ಬಿ.ಸಿ.ಎ. ವಿಭಾಗದ ಮುಖ್ಯಸ್ಥರಾದ ಸಹನಾ ಸ್ವಾಗತಿಸಿ, ಎಸ್.ವಿ.ಎಸ್. ಪದವಿ ಪೂರ್ವಕಾಲೇಜಿನ ಉಪನ್ಯಾಸಕಿ ಭವಿತಾ ವಂದಿಸಿದರು. ರಾಲ್ವಿನ್ ಲೋಯ್ಡ್ ರೋಡ್ರಿಗಸ್ ಅನಿಸಿಕೆ ವ್ಯಕ್ತಪಡಿಸಿದರು. ವಿದ್ಯಾರ್ಥಿನಿ ವೀಕ್ಷಿತಾ ಗಟ್ಟಿ ಕಾರ್ಯಕ್ರಮ ರೂಪಿಸಿದರು. ನಿಧಿ ತಂಡದವರು ಪ್ರಾರ್ಥಿಸಿದರು.

ಪಡೀಲ್ ಸರ್ವಶಕ್ತಿ ಮಹಿಳಾ ಮಂಡಳಿ: ಹೊಲಿಗೆ ತರಬೇತಿ ಶಿಬಿರ ಸಮಾರೋಪ



ಮಂಗಳೂರು: ಸರ್ವಶಕ್ತಿ ಮಹಿಳಾ ಮಂಡಳಿ ಪಡೀಲ್ ಇವರ ವತಿಯಿಂದ CCTEK, ಕರ್ನಾಟಕ (ಸರಕಾರಿ) ಪಾಲಿಟೆಕ್ನಿಕ್ (Kpt) ಇವರ ಸಹಯೋಗದಲ್ಲಿ ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಇತ್ತೀಚಿಗೆ ಪಡೀಲ್‌ನ ಶ್ರೀ ಬ್ರಾಹ್ಮರಿ ಸಭಾಂಗಣದಲ್ಲಿ ನಡೆಯಿತು.

Kpt ಮಂಗಳೂರು ಇದರ ಪ್ರಾಂಶುಪಾಲ ಹರೀಶ್ ಶೆಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಳಿಕ ಮಾತನಾಡಿದ ಅವರು, ಕೇಂದ್ರ ಸರಕಾರದ ವಿಶ್ವಕರ್ಮ ಯೋಜನೆಯ ಬಗ್ಗೆ ತಿಳಿಸಿದರು.

ಮುಖ್ಯ ಅತಿಥಿಗಳಾಗಿ CCTEK ಮ್ಯಾನೇಜರ್ ರವೀಂದ್ರ ಎಂ. ಶೆಣೈ, ಅವರು ಭಾಗವಹಿಸಿ, ಮಹಿಳಾ ಮಂಡಳಿಯ ಕಾರ್ಯ ವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇನ್ನೋರ್ವ ಮುಖ್ಯ ಅತಿಥಿಯಾಗಿ ಪಡೀಲ್ ಮಂಗಳ ಹೆಲ್ತ್ ಸೆಂಟರ್‌ನ ನಿರ್ದೇಶಕಿ ಸುಮಂಗಲ ಹರೀಶ್ ಶೆಟ್ಟಿ ಭಾಗವಹಿಸಿದ್ದರು. ಸರ್ವಶಕ್ತಿ ಮಹಿಳಾ ಮಂಡಳಿ ಅಧ್ಯಕ್ಷೆ ತೇಜಾಕ್ಷಿ ಮೋಹನ್, ಉಪಸ್ಥಿತರಿದ್ದರು. ತರಬೇತಿ ಪಡೆದ ಎಲ್ಲಾ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ತೇಜಾಕ್ಷಿ ಮೋಹನ್ ಪ್ರಸ್ತಾವನೆಗೈದರು, ಶಕುಂತಲಾ ಎಸ್ ಗಟ್ಟಿ ನಿರೂಪಿಸಿದರು, ವನಿತಾ ಆಳ್ವ ವಂದಿಸಿದರು.



ಕಲ್ಲಡ್ಕ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ಮಹಿಳಾ ಸಬಲೀಕರಣ ಕೋಶದ ವತಿಯಿಂದ ಐಕ್ಯೂಎಸಿ ಸಹಯೋಗದಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು. 'ಚವಿ ಕ್ರಿಯೇಷನ್' ಗೃಹೋದ್ದಿಮೆಯ ಸ್ಥಾಪಕರ ನಯನಾ ಗಣರಾಜ್ ಹಾಗೂ ಸುಶ್ಮಿತಾ ಅತಿಥಿಗಳಾಗಿ ಭಾಗವಹಿಸಿದರು. ಉಪ ಪ್ರಾಂಶುಪಾಲ ಸುಕನ್ಯಾ ಹಾಗೂ ಮಹಿಳಾ ಸಬಲೀಕರಣ ಕೋಶದ ನಿರ್ದೇಶಕಿ ಶ್ರೀದೇವಿ ಮಾತಾಜಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ನಿಸರ್ಗ ಸ್ವಾಗತಿಸಿ, ವಿದ್ಯಾರ್ಥಿ ತೃಷಾ ವಂದಿಸಿದರು. ವಿದ್ಯಾರ್ಥಿನಿ ತ್ರಿಷಾ ನಿರೂಪಿಸಿದರು.

ಆದಾಯ ಹೆಚ್ಚಳ ನಿಟ್ಟಿನಲ್ಲಿ ವಿವಿಧ ಯೋಜನೆ ಜಾರಿಗೆ ನಿರ್ಧಾರ | ಸರಕಾರಿ ಅನುದಾನಗಳ ನಿರೀಕ್ಷೆ, ತೆರಿಗೆಗಳಲ್ಲಿ ಯಥಾಸ್ಥಿತಿ ಪಾಲನೆ

ಸೋಮೇಶ್ವರ ಪುರಸಭೆ: 2026-27ನೇ ಸಾಲಿನ 15.6 ಕೋ.ರೂ. ಗಾತ್ರದ ಆಯವ್ಯಯ ಮಂಡನೆ

ಉಳ್ಳಾಲ: ಸೋಮೇಶ್ವರ ಪುರಸಭೆಯ 2026-27ನೇ ಸಾಲಿನ ಬಜೆಟ್ ಮಂಡನಾ ಸಭೆ ಬುಧವಾರ ನಡೆಯಿತು. ಈ ಸಾಲಿನ ಬಜೆಟ್ ಗಾತ್ರ 15 ಕೋಟಿ 6 ಲಕ್ಷ 30 ಸಾವಿರ ಆಗಿದ್ದು ಕಳೆದ ಸಾಲಿಗಿಂತ 11ಲಕ್ಷ 5 ಸಾವಿರ ಉಳಿತಾಯ ಆಯವ್ಯಯ ಮಂಡಿಸಲಾಗಿದೆ.

ಆದಾಯ ಹೆಚ್ಚಳ ನಿಟ್ಟಿನಲ್ಲಿ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸ್ವಯಂ ಘೋಷಿತ ಆಸ್ತಿ ತೆರಿಗೆ ಪರಿಷ್ಕರಣೆ ಹಾಗೂ ಸರ್ಕಾರದ ಅನುದಾನದಿಂದ ಆದಾಯ ಹೆಚ್ಚಳ ನಿರೀಕ್ಷೆ ಹೊಂದಲಾಗಿದೆ. ಎಲ್ಲಾ ಮೂಲಗಳಿಂದ ಒಟ್ಟು 523.30ಲಕ್ಷ ಆದಾಯ ನಿರೀಕ್ಷಿಸಲಾಗಿದೆ. ಪುರಸಭೆಯ ಅಧ್ಯಕ್ಷೆಕಮಲ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ರವಿಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ ಗಟ್ಟಿ,ಪೌರಾಯುಕ್ತ ಮತ್ತಡಿ ಉಪಸ್ಥಿತರಿದ್ದರು.ಅಕೌಂಟೆಂಟ್ ಪ್ರೀತಿ ಆಯವ್ಯಯ ವರದಿ ಮಂಡಿಸಿದರು.



ವಿವಿಧ ಯೋಜನೆಗಳು

ಬೀಚ್ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಅಂಗಡಿ ಕೋಣೆಗಳು ಹಾಗೂ ಜಾಹೀರಾತಿನಿಂದ ಮೂರು ಲಕ್ಷ ಆದಾಯ ಸಂಗ್ರಹ, ವಾಣಿಜ್ಯ ಮಳಿಗೆ ಆಸ್ತಿ ತೆರಿಗೆ, ಉದ್ದಿಮೆ ಪರವಾನಗಿ, ಅನಧಿಕೃತ ಕಸ ವಿಲೇವಾರಿ ದಂಡ ಸಹಿತ ಇತರ ಮೂಲಗಳಿಂದ 60.75 ಲಕ್ಷ ಆದಾಯ ನಿರೀಕ್ಷಿಸಲಾಗಿದ್ದು, ಕಳೆದ ಸಾಲಿನಲ್ಲಿ 31.66 ಲಕ್ಷ ವಸೂಲು ಮಾಡಲಾಗಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

ಮ್ಯಾಪಿಂಗ್‌ನಲ್ಲಿ ಪ್ರಗತಿ ಸಾಧಿಸಲು ಸೂಚನೆ

ಎಸ್ಐಆರ್ ಮ್ಯಾಪಿಂಗ್ ಎಲ್ಲಾ ಕಡೆ ನಡೆಯುತ್ತಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮೇಶ್ವರ ಪುರಸಭೆಯು ತೀರಾ ಹಿಂದುಳಿದಿದೆ. ಈ ವಿಚಾರದಲ್ಲಿ ಎಲ್ಲಾ ಪುರಸಭಾ ಸದಸ್ಯರು ಮುತುವರ್ಜಿ ವಹಿಸಿ ಸಹಕಾರ ನೀಡಬೇಕು.

● ರವಿಶಂಕರ್ ಸೋಮೇಶ್ವರ, ಉಪಾಧ್ಯಕ್ಷರು, ಸೋಮೇಶ್ವರ ಪುರಸಭೆ

ಸರ್ಕಾರದಿಂದ ನಿರೀಕ್ಷೆ

ಎಸ್ಎಫ್‌ಸಿ ಮುಕ್ತ ನಿಧಿಯಿಂದ ಒಟ್ಟು 47 ಲಕ್ಷ ಮೀಸಲಿರಿಸಲಾಗಿದ್ದು, ರಾಜ್ಯ ಹಣಕಾಸು ಆಯೋಗದ ಎಸ್ಎಫ್‌ಸಿ ವೇತನ ಅನುದಾನದಿಂದ 135 ಲಕ್ಷ ಹಾಗೂ ಎಸ್ಎಫ್‌ಸಿ ವಿಶೇಷ ಅನುದಾನದಿಂದ 147 ಲಕ್ಷ, ರಾಜ್ಯ ಆಯೋಗದ ವಿದ್ಯುಚ್ಛಕ್ತಿ ಅನುದಾನದಿಂದ 117 ಲಕ್ಷ, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು 205 ಲಕ್ಷ, ಘನತ್ಯಾಜ್ಯ ವಸ್ತು ನಿರ್ವಹಣೆಗೆ 315ಲಕ್ಷ, ಡೇನಲ್ಮ್-ಅಮೃತ್ ಮಿತ್ರ ಯೋಜನೆಯಿಂದ 6 ಲಕ್ಷ, ಜನಗಣತಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 983 ಲಕ್ಷ ಅನುದಾನ ನಿರೀಕ್ಷಿಸಲಾಗಿದೆ.

ವಸೂಲಾದ ವಿವಿಧ ಶುಲ್ಕಗಳು

ಆಸ್ತಿ ತೆರಿಗೆ ಕಳೆದ ಸಾಲಿನಲ್ಲಿ 125.40 ಲಕ್ಷ,ನೀರು ಸರಬರಾಜಿನಲ್ಲಿ 32.39 ಲಕ್ಷ,ಉದ್ದಿಮೆ ಪರವಾನಗಿಯಿಂದ 10.43 ಲಕ್ಷ, ಕಟ್ಟಡ ಮತ್ತು ಅಭಿವೃದ್ಧಿ ಶುಲ್ಕ 10.67ಲಕ್ಷ, ಖಾತಾ ಶುಲ್ಕ ಮತ್ತು ಬದಲಾವಣೆ ಶುಲ್ಕ 5.68ಲಕ್ಷ, ಜಾಹೀರಾತು ಶುಲ್ಕ 18 ಸಾವಿರ, ಘನತ್ಯಾಜ್ಯ ವಸ್ತು ವಿಲೇವಾರಿ ಶುಲ್ಕ 23.31ಲಕ್ಷ, ಒಣಕಸ, ಹಸಿಕಸ ಗೊಬ್ಬರ ಮಾರಾಟದಿಂದ 19 ಸಾವಿರ.

2026-27 ಸಾಲಿನಲ್ಲಿ ನಿರೀಕ್ಷಿತ ಶುಲ್ಕಗಳು

ಆಸ್ತಿ ತೆರಿಗೆ 150 ಲಕ್ಷ, ನೀರು ಸರಬರಾಜಿನಲ್ಲಿ 48 ಲಕ್ಷ, ಉದ್ದಿಮೆ ಪರವಾನಿಗೆಯಿಂದ 14ಲಕ್ಷ, ಕಟ್ಟಡ ಮತ್ತು ಅಭಿವೃದ್ಧಿ ಶುಲ್ಕ 17 ಲಕ್ಷ, ಖಾತಾ ಶುಲ್ಕ ಮತ್ತು ಬದಲಾವಣೆ ಶುಲ್ಕ 6.50 ಲಕ್ಷ, ಜಾಹೀರಾತು ಶುಲ್ಕ 85 ಸಾವಿರ, ಘನತ್ಯಾಜ್ಯ ವಸ್ತು ವಿಲೇವಾರಿ ಶುಲ್ಕ 46ಲಕ್ಷ, ಹಸಿ-ಒಣಕಸ ಗೊಬ್ಬರದಿಂದ 60 ಸಾವಿರ,ಕುಡಿಯುವ ನೀರಿನಿಂದ 3 ಸಾವಿರದಂತೆ 5 ಸಾವಿರ ಮನೆಗಳಿಗೆ 150ಲಕ್ಷ ನಿರೀಕ್ಷಿಸಲಾಗಿದೆ.

ಸುತ್ತ ಮುತ್ತ

ಚೆಗುರುಪಾದೆ ದೇವಳದಲ್ಲಿ ಇಂದು ಬ್ರಹ್ಮಕಲಶದ ವಾರ್ಷಿಕ ದಿನಾಚರಣೆ

ಮಂಜೇಶ್ವರ: ಮೀಯಪದವು ಸಮೀಪದ ಇತಿಹಾಸ ಪ್ರಸಿದ್ಧ ಚಿಗುರುಪಾದೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ವಾರ್ಷಿಕ ದಿನಾಚರಣೆ ಮಾ.12ರಂದು ವಿವಿಧ ವೈದಿಕ, ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಬ್ರಹ್ಮಶ್ರೀ ವರ್ಕಾಡಿ ದಿನೇಶಕೃಷ್ಣ ತಂತ್ರಿಗಳ ಮಾರ್ಗದರ್ಶನದಲ್ಲಿ ವೇದಮೂರ್ತಿ ಬೋಳಂತಕೋಡಿ ರಾಮ ಭಟ್ ನೇತೃತ್ವದಲ್ಲಿ ಜರಗಲಿದೆ. ಬೆಳಿಗ್ಗೆ ಗಣಪತಿ ಹವನ, ಸಾರ್ವಜನಿಕ ಶತರುದ್ರಾಭಿಷೇಕ, ಮಧ್ಯಾಹ್ನ ಬಲಿವಾಡು ಕೂಟ, ರಾತ್ರಿ ಶ್ರೀ ಸತ್ಯನಾರಾಯಣ ದೇವರ ಪೂಜೆ ಮೊದಲಾದ ಕಾರ್ಯಕ್ರಮಗಳು ನಡೆಯಲಿರುವುದಾಗಿ ಶ್ರೀ ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಕಾಸರಗೋಡು ಸರಕಾರಿ ಐಟಿಐ ವಿದ್ಯಾಸಂಸ್ಥೆಯಲ್ಲಿ ಮಲ್ಟಿ ಮೀಡಿಯಾ ಅನಿಮೇಷನ್ ಮತ್ತು ಸ್ಪೆಷಲ್ ಎಫೆಕ್ಟ್ಸ್ (ಸಾಮಾನ್ಯ ವರ್ಗ), ಸ್ಟೆನೋಗ್ರಾಫರ್ ಸೆಕ್ರೆಟೇರಿಯಲ್ ಅಸಿಸ್ಟೆಂಟ್ (ಇಂಗ್ಲಿಷ್ – ಎಸ್‌ಸಿ ಮೀಸಲು ವರ್ಗ) ಮತ್ತು ಸರ್ವೇಯರ್ (ಸಾಮಾನ್ಯ ವರ್ಗ) ಟ್ರೇಡ್‌ಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಲಾಗುವುದು. ಈ ನಿಟ್ಟಿನಲ್ಲಿ ಸಂದರ್ಶನ ಮಾ.13 ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಮೀಸಲು ವರ್ಗದ ಅಭ್ಯರ್ಥಿಗಳ ಅನುಪಸ್ಥಿತಿಯಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನು ಪರಿಗಣಿಸಲು ನಿರ್ಧರಿ ಸಲಾಗಿದೆ. ಮಾಹಿತಿಗೆ 04994 256440 ಕರೆ ಮಾಡಬಹುದು.

ಮಾ.16: ವಿಷ್ಣುಮೂರ್ತಿ ದೈವದ ಬೈಲುಕೋಲ

ಉಪ್ಪಳ: ಆಟ್ಟೆಗೋಳಿ ವಿಷ್ಣುನಗರ ಶ್ರೀ ವಿಷ್ಣುಮೂರ್ತಿ ಸೇವಾ ಸಮಿತಿ ಆಶ್ರಯದಲ್ಲಿ ನಡೆಯುತ್ತಿರುವ 51ನೇ ವರ್ಷದ ಶ್ರೀ ವಿಷ್ಣುಮೂರ್ತಿ ದೈವದ ಬೈಲುಕೋಲ ಮಾ.16ರಂದು ವಿಷ್ಣುಮೂರ್ತಿ ನಗರದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಇದರಂಗ ಮಾ.15ರಂದು ರಾತ್ರಿ 8ಕ್ಕೆ ಗುಳಿಗ ದೈವದ ಕೋಲ, ಮಾ.16ರಂದು ಬೆಳಗ್ಗೆ 8ಕ್ಕೆ ಗಣಪತಿಹೋಮ, 9ರಿಂದ ಶ್ರೀ ಸತ್ಯನಾರಾಯಣ ಪೂಜೆ, ರಾತ್ರಿ 7ಕ್ಕೆ ಆಟ್ಟೆಗೋಳಿ ಶ್ರೀ ವಿಷ್ಣುಮೂರ್ತಿ ದೈವಸ್ಥಾನದಿಂದ ವಾದ್ಯಘೋಷದೊಂದಿಗೆ ಭಂಡಾರ ಉತ್ಸವಾಂಗಣಕ್ಕೆ ಹೊರಡುವುದು, ರಾತ್ರಿ 8ರಿಂದ ಅನ್ನಪ್ರಸಾದ, 8.30ರಿಂದ 9ರ ತನಕ ಕೈಕೊಟ್ಟುಕ್ಕಳಿ, 9ಕ್ಕೆ ಮೇಲೇರಿಗೆ ಅಗ್ನಿಸ್ಪರ್ಶ, 9.30ರಿಂದ ವಿವಿಧ ವಿನೋದಾವಳಿಗಳು, ರಾತ್ರಿ 12ಕ್ಕೆ ಶ್ರೀ ದೈವದ ಕುಳಿಚ್ಚೋಟ್ಟಂ, 1ಗಂಟೆಯಿಂದ ಪೊರಿವುದಪ್ಪೆ ಜಲದುರ್ಗೆ ತುಳು ಪೌರಾಣಿಕ ನಾಟಕ ಪ್ರದರ್ಶನ, ಮುಂಜಾನೆ 4.30ಕ್ಕೆ ಶ್ರೀ ದೈವದ ಅಗ್ನಿಸೇವೆ, 5ಗಂಟೆಗೆ ಪ್ರಸಾದ ವಿತರಣೆ, ಬೆಳಿಗ್ಗೆ 7ಕ್ಕೆ ಭಂಡಾರ ಇಳಿದು ಕಾರ್ಯಕ್ರಮ ಸಮಾಪ್ತಿಗೊಳ್ಳಲಿದೆ.

ಸಂಯೋಜಕರ ನೇಮಕಾತಿ

ಕಾಸರಗೋಡು: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಿಯಡ್ಕ (ಪುಲ್ಲೂರು ಪೆರಿಯ) ವಿಜ್ಞಾನ ವಾಡಿಗಳಲ್ಲಿ ಸಂಯೋಜಕರ ನೇಮಕಾತಿಗೆ ಸಂದರ್ಶನ ಮಾ.13 ರಂದು ಮಧ್ಯಾಹ್ನ 2 ಗಂಟೆಗೆ ಕಾಸರಗೋಡು ಜಿಲ್ಲಾ ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆ ಕಚೇರಿಯಲ್ಲಿ ನಡೆಯಲಿದೆ. ಆಯಾ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಪದವಿ, ಕಂಪ್ಯೂಟರ್ ಜ್ಞಾನ ಹೊಂದಿರುವ ಜಿಲ್ಲೆಯ ಪರಿಶಿಷ್ಟ ಜಾತಿ ವಿಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವಯೋಮಿತಿ 21ರಿಂದ 45ರವರೆಗೆ ಆಗಿದೆ. ಮಾಹಿತಿಗೆ ದೂ.ಸಂ. 04994 256162 ಸಂಪರ್ಕಿಸಬಹುದು.

ಅಪಾರ್ಟ್‌ಮೆಂಟ್‌ಗಳಲ್ಲಿ ತ್ಯಾಜ್ಯ ತಪಾಸಣೆ ಬಿಗು: ಕಟ್ಟುನಿಟ್ಟಿನ ಕ್ರಮ

ಪೆರ್ಲ: ಎಣ್ಮಕಜೆ ಗ್ರಾ.ಪಂ. ವ್ಯಾಪ್ತಿಯಲ್ಲಿ ತ್ಯಾಜ್ಯ ತಪಾಸಣೆಗೆ ಸಂಬಂಧಿಸಿದಂತೆ ಕ್ವಾರ್ಟರ್ಸ್ ಮತ್ತು ಅಪಾರ್ಟ್‌ಮೆಂಟ್‌ಗಳಲ್ಲಿ ತಪಾಸಣೆಗಳ ಬಿಗುಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಎಣ್ಮಕಜೆ ಗ್ರಾ.ಪಂ. ಎಂಫೋರ್ಸ್ ನೇತೃತ್ವ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ. ಈಗಾಗಲೇ ಪಂಚಾಯತ್ ವ್ಯಾಪ್ತಿಯ ಹಲವು ಕಡೆಗಳ ಕ್ವಾರ್ಟರ್ಸ್‌ಗಳಲ್ಲಿ ತ್ಯಾಜ್ಯವನ್ನು ಬೇರ್ಪಡಿಸದಿರುವುದು, ಬಳಕೆದಾರ ಶುಲ್ಕವನ್ನು ಪಾವತಿಸದಿರುವುದು, ಸಾರ್ವಜನಿಕ ತೆರೆದ ಸ್ಥಳಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ತ್ಯಾಜ್ಯವನ್ನು ಸುರಿಯುವುದು ಮತ್ತು ರಾಶಿ ಹಾಕುವುದು ಅಲ್ಲದೆ ಸಾರ್ವಜನಿಕ ಸ್ಥಳಗಳಿಗೆ ಕೊಳಕು ನೀರನ್ನು ಬಿಡುವುದರ ವಿರುದ್ಧ ತಪಾಸಣೆಗಳನ್ನು ಕಟ್ಟುನಿಟ್ಟಾಗಿ ನಡೆಸಲಾಗುತ್ತಿದೆ. ಕಾನೂನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಂಬಂಧಪಟ್ಟವರು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಕೇರಳ ವಿಧಾನಸಭಾ ಚುನಾವಣೆಗೆ ಸಕಲ ಸಿದ್ಧತೆ | ಡೀಸಿ ಅಧ್ಯಕ್ಷತೆಯಲ್ಲಿ ನೋಡಲ್ ಅಧಿಕಾರಿಗಳ ಸಭೆ

ಜಿಲ್ಲೆಯ ಎರಡು ಕಡೆ ಮತ ಎಣಿಕೆ ಕೇಂದ್ರ ಸ್ಥಾಪಿಸಲು ನಿರ್ಧಾರ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ನೋಡಲ್ ಅಧಿಕಾರಿಗಳ ಸಭೆ ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ಜರಗಿತು. ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಭೆಯ ಅಧ್ಯಕ್ಷತೆ ವಹಿಸಿ, ನೋಡಲ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಚುನಾವಣಾ ತಯಾರಿ ಕುರಿತು ಪರಿಶೀಲಿಸಿದರು.
ಜಿಲ್ಲೆಯಲ್ಲಿ ಎಲ್ಲಾ ಚುನಾವಣಾ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಜಿಲ್ಲಾಧಿಕಾರಿ ಹೇಳಿದರು.
ಜಿಲ್ಲೆಯ ಕಾಸರಗೋಡು ಸರಕಾರಿ ಕಾಲೇಜು, ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಮತ ಎಣಿಕೆ ಕೇಂದ್ರಗಳನ್ನು ಸ್ಥಾಪಿಸಲಾ ಗುತ್ತದೆ. ಮಂಜೇಶ್ವರ, ಕಾಸರಗೋಡು ಮತ್ತು ಉದುಮ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕೇಂದ್ರಗಳನ್ನು ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಹಾಗೂ ಕಾಞಂಗಾಡು ಮತ್ತು ತೃಕ್ಕರೀಪ್ಪುರ ವಿಧಾನ ಸಭಾ ಕ್ಷೇತ್ರಗಳ ಮತ ಎಣಿಕೆ ಕೇಂದ್ರಗಳನ್ನು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸ್ಥಾಪಿಸುವ ನಿಟ್ಟಿನಲ್ಲಿ ಸಿದ್ಧತೆ ಪೂರ್ಣಗೊಳಿಸಲಾಗಿದೆ.
ಪ್ರಸ್ತುತ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ವೀಪ್‌ನ ಭಾಗವಾಗಿ ಮತ ವ್ಯಾನ್ ಅಭಿಯಾನಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಮತದಾನವನ್ನು ಕರ್ತವ್ಯದ ಭಾಗವಾಗಿಸಲಾಗುವುದು. ಚುನಾವಣೆಗೆ ಮುಂಚಿತವಾಗಿ ವಿವಿಧ ತರಬೇತಿಗಳನ್ನು ನಡೆಸಲಾಗುವುದು ಎಂದು ಜಿಲ್ಲಾ ಕಲೆಕ್ಟರ್ ಮಾಹಿತಿ ನೀಡಿದರು.



ನ್ಯಾಯಸಮ್ಮತ ಮತದಾನಕ್ಕೆ ವ್ಯವಸ್ಥೆ
ಜಿಲ್ಲೆಯ ಎಲ್ಲಾ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ನ್ಯಾಯಸಮ್ಮತ, ಶಾಂತಿಯುತ ಚುನಾವಣೆಗೆ ಅಗತ್ಯದ ಎಲ್ಲಾ ಸಮರ್ಪಕ ವ್ಯವಸ್ಥೆ ಕೈಗೊಳ್ಳಲಾಗುತ್ತಿದೆ. ಮತದಾನ ಪ್ರತಿಯೋರ್ವ ಮತದಾರನ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಯಲಿದೆ.
● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ

ಮಂಜೇಶ್ವರ ಕ್ಷೇತ್ರ
ಮಂಜೇಶ್ವರ ಕ್ಷೇತ್ರದಲ್ಲಿ ಒಟ್ಟು 2,27,403 ಮಂದಿ ಮತದಾರರಿದ್ದಾರೆ. ಇದರಲ್ಲಿ 1,14,570 ಪುರುಷ ಮತದಾರರು, 1,12,833 ಮಹಿಳಾ ಮತದಾರರು ಒಳಗೊಂಡಿದ್ದಾರೆ. ಕಾಸರಗೋಡು ಕ್ಷೇತ್ರದಲ್ಲಿ ಒಟ್ಟು 2,09,732 ಮಂದಿ ಮತದಾರರಿದ್ದು, ಇದರಲ್ಲಿ 1,04,866 ಪುರುಷರು, 1,04,866 ಮಹಿಳೆಯರು ಸೇರಿದ್ದಾರೆ. ಉದುಮ ಕ್ಷೇತ್ರದಲ್ಲಿ ಒಟ್ಟು 2,27,200 ಮಂದಿ ಮತದಾರರಿದ್ದಾರೆ, ಇದರಲ್ಲಿ 1,11,473 ಪುರುಷ ಮತದಾರರು, 1,15,723 ಮಹಿಳಾ ಮತದಾರರು ಮತ್ತು 4 ಟ್ರಾನ್ಸ್‌ಜೆಂಡರ್ ಮತದಾರರು ಒಳಗೊಂಡಿದ್ದಾರೆ. ಕಾಞಂಗಾಡು ಕ್ಷೇತ್ರದಲ್ಲಿ 1,08,347 ಪುರುಷರು, 1,14,472 ಮಹಿಳೆಯರು, 6 ಟ್ರಾನ್ಸ್‌ಜೆಂಡರ್ ಮತದಾರರು ಸೇರಿ ಒಟ್ಟು 2,22,825 ಮಂದಿ ಮತದಾರರಿದ್ದಾರೆ.

10,96,241 ಮಂದಿ ಮತದಾರರು
ಎಸ್‌ಐಆರ್ ನಂತರ ಪ್ರಕಟವಾದ ಅಂತಿಮ ಮತದಾರರ ಪಟ್ಟಿಯ ಪ್ರಕಾರ ಕಾಸರಗೋಡು ಜಿಲ್ಲೆಯಲ್ಲಿ ಒಟ್ಟು 10,96,241 ಮಂದಿ ಮತದಾ ರರಿದ್ದಾರೆ. ಈ ಪೈಕಿ 5,40,698 ಪುರುಷರು, 5,55,530 ಮಂದಿ ಮಹಿಳಾ ಮತದಾರರು ಮತ್ತು 13 ಟ್ರಾನ್ಸ್‌ಜೆಂಡರ್ ಮತದಾರರು ಸೇರಿದ್ದಾರೆ.

ತೃಕ್ಕರೀಪುರ ಕ್ಷೇತ್ರ
ತೃಕ್ಕರೀಪುರ ಕ್ಷೇತ್ರದಲ್ಲಿ 1,01,442 ಪುರುಷ ಮತದಾರರು, 1,07,636 ಮಹಿಳಾ ಮತದಾರರು ಮತ್ತು 3 ಟ್ರಾನ್ಸ್‌ಜೆಂಡರ್ ಮತದಾರರು ಸೇರಿ ಒಟ್ಟು 2,09,081 ಮಂದಿ ಮತದಾರರಿದ್ದಾರೆ.

ಅಧಿಕಾರಿಗಳಿಗೆ ಸೂಚನೆ
ಹೊಸ ಹೆಸರುಗಳ ಸೇರಿಸಲು, ಅನಗತ್ಯ ಹೆಸರುಗಳ ತೆಗೆದುಹಾಕಲು ಮತ್ತು ಫಾರ್ಮ್‌ಗಳಲ್ಲಿನ ದೋಷಗಳನ್ನು ಸರಿಪಡಿಸಲು ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಸ್ವೀಕರಿಸಿದ ಫಾರ್ಮ್‌ಗಳನ್ನು ತ್ವರಿತವಾಗಿ ಅಂತಿಮಗೊಳಿಸಲು ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಭೆಯಲ್ಲಿ ಚುನಾವಣಾ ವಿಭಾಗದ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್ ವಿವಿಧ ವಿಷಯಗಳ ಕುರಿತು ಸಮಗ್ರವಾಗಿ ಮಾತನಾಡಿದರು. ವಿವಿಧ ನೋಡಲ್ ಅಧಿಕಾರಿಗಳು, ಕ್ಷೇತ್ರ ಮಟ್ಟದ ಚುನಾವಣಾ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ಸಶಕ್ತ -ಸದೃಢ ಸಮಾಜ ನಿರ್ಮಾಣದಲ್ಲಿ ಮಹಿಳೆಯ ಪಾತ್ರ ಹಿರಿದು: ಶ್ರೀಕುಮಾರಿ



ಮಂಜೇಶ್ವರ: ಗುವೇದಪಡ್ಪು ಪ್ರೇರಣಾ ಸಾರ್ವಜನಿಕ ಗ್ರಂಥಾಲಯದ ನೇತೃತ್ವದಲ್ಲಿ ವಿಶ್ವ ಮಹಿಳಾ ದಿನವನ್ನು ಆಚರಿಸಲಾಯಿತು. ಮಂಜೇಶ್ವರ ತಾ.ಲೈಬ್ರರಿ ಕೌನ್ಸಿಲ್ ಅಧ್ಯಕ್ಷೆ ಶ್ರೀಕುಮಾರಿ ಟೀಚರ್ ಉದ್ಘಾಟಿಸಿ ಮಾತನಾಡಿ, ಸಶಕ್ತ , ಸದೃಢ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಹಿರಿದಾಗಿದ್ದು ಇಂದು ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದರು.
ಗ್ರಂಥಾಲಯದ ಸದಸ್ಯೆ ಸರಸ್ವತಿ ಕೋಣಿಬೈಲ್ ಅಧ್ಯಕ್ಷತೆ ವಹಿಸಿದ್ದರು. ಚಂದ್ರಿಕಾ ಟೀಚರ್, ಆಶಾ ಕಾರ್ಯಕರ್ತೆಯರಾದ ಮಮತಾ ಮುಗುಳಿ, ಜಮಿಲ ಗುವೇದಪಡ್ಪು, ಚೈತ್ರಾ ಟೀಚರ್ ಬಗಂಬಿಲ, ಚಿತ್ರಾಕ್ಷಿ ಕತ್ತೇರಿಕೋಡಿ, ಜಬ್ಬಾರ್ ಮಾಸ್ತರ್, ಗ್ರಂಥಾಲಯದ ಉಪಾಧ್ಯಕ್ಷ ಚಂದ್ರಹಾಸ ಕತ್ತೇರಿಕೋಡಿ, ಗ್ರಂಥಾಲಯದ ಕಾರ್ಯದರ್ಶಿ ಅಶೋಕ್ ಕೊಡ್ಲಮೊಗರು ಉಪಸ್ಥಿತರಿದ್ದರು.
ಈ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಾದ ಶ್ರೀಕುಮಾರಿ ಟೀಚರ್ (ಸ್ಕೌಟ್– ಗೈಡ್‌ನಲ್ಲಿ ಮೆಡಲ್ ಆಫ್ ಮೆರಿಟ್ ಪ್ರಶಸ್ತಿ), ಕೀರ್ತನಾ ಕತ್ತೇರಿಕೋಡಿ (ಗೈಡ್‌ನಲ್ಲಿ ರಾಜ್ಯಮಟ್ಟದ ಪ್ರಶಸ್ತಿ), ಜಮ್ಶಿರ (ಕಲಾ ಕ್ಷೇತ್ರ), ಅಂಕಿತಾ ಕೊಡ್ಲಮೊಗರು (ತಮಿಳು ಕಂಠ ಪಾಠ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ), ಪ್ರೀತಮ್ ಕೋಣಿಬೈಲ್ (ಸಾಂಸ್ಕೃತಿಕ ಕ್ಷೇತ್ರ) ಅವರನ್ನು ಗೌರವಿಸಿ ಅಭಿನಂದಿಸಲಾಯಿತು.
ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಲಾದ ರಸಪ್ರಶ್ನೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರ ಫೋಟೋ ಪ್ರದರ್ಶನ ಏರ್ಪಡಿಸಲಾಗಿತ್ತು. ಮಹಿಳಾ ದಿನಾಚರಣೆ ಪ್ರಯುಕ್ತ ಕಾರ್ಯಕ್ರಮ ಪೂರ್ಣ ನೇತೃತ್ವ ಮಹಿಳೆಯರೇ ನಿರ್ವಹಿಸಿದ್ದು ವಿಶೇಷ ವಾಗಿತ್ತು. ಲಾವಣ್ಯ ಗುವೇದಪಡ್ಪು ಸ್ವಾಗತಿಸಿ, ಗ್ರಂಥ ಪಾಲಕಿ ಜಯಶ್ರೀ ಕೊಡ್ಲಮೊಗರು ವಂದಿಸಿ, ರುಕ್ಸಾನ ಗುವೇದಪಡ್ಪು ನಿರೂಪಿಸಿದರು

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಕೀರ್ತಿ ಮೋದಿ ಸರಕಾರಕ್ಕೆ ಸಲ್ಲುತ್ತದೆ: ಅಶ್ವಿನಿ

ಕಾಸರಗೋಡು: ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿ 66ರ ಅಭಿವೃದ್ಧಿ ಯೋಜನೆಯ ಸಂಪೂರ್ಣ ಕೀರ್ತಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರಕ್ಕೆ ಸಲ್ಲುತ್ತದೆ ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಹೇಳಿದ್ದಾರೆ.
ಕೊಚ್ಚಿಯಲ್ಲಿ ಬುಧವಾರ ಜರಗಿದ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರೀಯ ಹೆದ್ದಾರಿಯ ಮೊದಲ ಹಂತದ ಅಭಿವೃದ್ಧಿ ಯೋಜನೆಯನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿರುವುದನ್ನು ಉಲ್ಲೇಖಿಸಿ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಬಿಜೆಪಿಯಿಂದಲೇ ಅಭಿವೃದ್ಧಿ
ಕೇಂದ್ರದಲ್ಲಿ 280ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದ ನಂತರವೇ ಕೇರಳ ಮತ್ತು ಈಶಾನ್ಯ ರಾಜ್ಯಗಳ ಮೂಲಭೂತ ಸೌಕರ್ಯ ಕ್ಷೇತ್ರದಲ್ಲಿ ಪ್ರಮುಖ ಅಭಿವೃದ್ಧಿ ಸಾಧ್ಯವಾಯಿತು. ಕೇರಳದಲ್ಲಿ ಎಡರಂಗ ಮತ್ತು ಐಕ್ಯರಂಗ ಒಕ್ಕೂಟಗಳು ಇಲ್ಲಿಯವರೆಗೆ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿಯನ್ನು ದುರ್ಬಲಗೊಳಿಸಿವೆ.
ಕೊಲ್ಲಂ ಮತ್ತು ಮಾಹೆ ಬೈಪಾಸ್‌ಗಳು 4 ದಶಕಗಳ ನಂತರ ಜಾರಿಗೆ ಬಂದಿವೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆಯು ದಶಕಗಳಿಂದ ವಿಳಂಬವಾಯಿತು ಮತ್ತು ಭೂಮಿಯ ಬೆಲೆ ಹಲವು ಪಟ್ಟು ಹೆಚ್ಚಾಗುವುದಕ್ಕಿಂತ ಮೊದಲೇ ಯೋಜನೆಯನ್ನು ಕಾರ್ಯಗತಗೊಳಿಸಬಹುದಿತ್ತು ಎಂದರು.
ಉದುಮ ಶಾಸಕ ಸಿ.ಎಚ್.ಕುಂಞಂಬು ನೇತೃತ್ವದ ಸಮಾನಾಂತರ ಉದ್ಘಾಟನೆಯನ್ನು ಎಂ.ಎಲ್.ಅಶ್ವಿನಿ ಇದೇ ಸಂದರ್ಭದಲ್ಲಿ ಲೇವಡಿ ಗೈದರು.



ಕ್ರೆಡಿಟ್ ಪಡೆಯುತ್ತಿದೆ
ಕೇಂದ್ರ ಸರಕಾರದ ಅಧೀನದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಸಾಧ್ಯವಾದಾಗ ಪಿಣರಾಯಿ ವಿಜಯನ್ ಸರಕಾರವು ಅದರ ಕ್ರೆಡಿಟ್‌ನ್ನು ತನ್ನದಾಗಿಸಲು ಪ್ರಯತ್ನಿಸುತ್ತಿದೆ. ಎಡರಂಗವು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯನ್ನು ಜಾರಿಗೆ ತರುವುದಿದ್ದರೆ ವಿ.ಎಸ್.ಅಚ್ಯುತಾನಂದನ್ ಮತ್ತು ಇ.ಕೆ.ನಾಯನಾರ್ ಸೇರಿದಂತೆ ಮುಖ್ಯಮಂತ್ರಿಗಳು ಇದಕ್ಕೂ ಮೊದಲು ಆಳ್ವಿಕೆ ನಡೆಸಿದಾಗಲೇ ತರಬಹುದಿತ್ತಲ್ಲವೇ ಎಂದು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅವರು ಪ್ರಶ್ನೆ ಮಾಡಿದರು.

ಮಧೂರಿನಲ್ಲಿ ಬಿಎಂಎಸ್‌ನಿಂದ ಮಹಿಳಾ ದಿನಾಚರಣೆ, ಸನ್ಮಾನ




ಕಾಸರಗೊಡು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಿಎಂಎಸ್ ಕಾಸರಗೋಡು ಜಿಲ್ಲಾ ಸಮಿತಿಯಿಂದ ಮಧೂರು ಗ್ರಾ.ಪಂ. ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. 'ಸಮರ್ಪಿಸುವ – ಬೆಳೆಯುವ – ಸಮಾಜದೊಂದಿಗೆ' ಎಂಬ ಧ್ಯೇಯ ದೊಂದಿಗೆ ಮಹಿಳಾ ದಿನ ಆಚರಿಸಲಾಯಿತು.
ಮಧೂರು ಗ್ರಾ.ಪಂ.ಅಧ್ಯಕ್ಷೆ ಸುಜ್ಞಾನಿ ಶ್ಯಾನುಭಾಗ್ ಉದ್ಘಾಟಿಸಿದರು. ಬಿಎಂಎಸ್ ಜಿಲ್ಲಾ ಜೊತೆ ಕಾರ್ಯದರ್ಶಿ ಯಶವಂತಿ ಬೆಜ್ಜ ಅಧ್ಯಕ್ಷತೆ ವಹಿಸಿದ್ದರು. ವಕೀಲೆ ಆಶಾಮೋಳ್ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದರು.
ಈ ಸಂದರ್ಭ ಅತ್ಯುತ್ತಮ ಗ್ರಾಮಾಧಿಕಾರಿ ಪ್ರಶಸ್ತಿ ಪಡೆದ ಟಿ.ಕೆ.ಜಯಲಕ್ಷ್ಮಿ, ಅತ್ಯುತ್ತಮ ಅಂಗನವಾಡಿ ಶಿಕ್ಷಕಿ ಪ್ರಶಸ್ತಿ ಪಡೆದ ವಿಶಾಲಾಕ್ಷಿ ಅವರನ್ನು ಸನ್ಮಾನಿಸಲಾಯಿತು. ಉಪೇಂದ್ರನ್ ಉಪಸ್ಥಿತರಿದ್ದರು. ಪಿ.ಮುರಳೀಧರನ್ ಸಮಾರೋಪ ಭಾಷಣ ಮಾಡಿದರು. ಗೀತಾ ಬಾಲಕೃಷ್ಣನ್ ಸ್ವಾಗತಿಸಿ, ಮಿನಿ ಶ್ರೀನಿವಾಸನ್ ವಂದಿಸಿದರು. ವೇದಿಕೆಯಲ್ಲಿ ಮಹಿಳೆಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.

ಮಲೆಯಾಳ ಕಡ್ಡಾಯ ಮಸೂದೆ ವಿರುದ್ಧ ಮಾ.28ರಂದು ಧರಣಿ: ಸಭೆಯಲ್ಲಿ ನಿರ್ಧಾರ

ಕಾಸರಗೋಡು: ಮಲೆಯಾಳ ಕಡ್ಡಾಯ ಮಸೂದೆಯಿಂದ ಜಿಲ್ಲೆಯ ಕನ್ನಡ ಮಾಧ್ಯಮ ಶಾಲೆಗಳನ್ನು ಹೊರತುಪಡಿಸಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಗಳನ್ನು ತೀವ್ರಗೊಳಿಸಲು ತೀರ್ಮಾನಿಸಲಾಗಿದೆ. ನ್ಯಾಯಾಂಗ ಹೋರಾಟ ಸಹಿತ ಪ್ರತಿಭಟನೆಗಳನ್ನು ಜಿಲ್ಲೆಯಾದ್ಯಂತ ನಡೆಸಲು ನಗರದ ಬೀರಂತಬೈಲಿನ ಕನ್ನಡ ಅಧ್ಯಾಪಕ ಭವನದಲ್ಲಿ ಮಂಗಳವಾರ ಸಂಜೆ ನಡೆದ ಕನ್ನಡವರ ಸಂಘಟನೆಗಳ ಜಂಟಿ ಸಭೆ ನಿರ್ಧರಿಸಿದೆ. ಸಭೆಯಲ್ಲಿ ಕರ್ನಾಟಕ ಸಮಿತಿ ಅಧ್ಯಕ್ಷ ಕೆ.ಮುರಳೀಧರ ಬಳ್ಳಕ್ಕುರಾಯ ಅಧ್ಯಕ್ಷತೆ ವಹಿಸಿದ್ದರು.
ಈ ಸಂಬಂಧ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗುವುದು. ಈ ನಿಟ್ಟಿನಲ್ಲಿ ಪರಿಣತರ ಸಮಿತಿಯೊಂದನ್ನೂ ರಚಿಸಲಾಗಿದೆ. ಪ್ರತಿಭಟನೆ ಅಂಗವಾಗಿ ಮಾ.28ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಲೂಕು ಕಚೇರಿ ಮುಂದೆ ಧರಣಿ ನಡೆಯಲಿದೆ. ಇದಕ್ಕೆ ಪೂರಕವಾಗಿ ಪಂಚಾಯತ್ ಮಟ್ಟದಲ್ಲಿ ಧರಣಿಗಳು ನಡೆಯಲಿವೆ. ಸಭೆಯಲ್ಲಿ ಹಲವಾರು ಕನ್ನಡವರ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



ಕೇರಳ ಕೇಂದ್ರೀಯ ವಿಶ್ವವಿದ್ಯಾನಿಲಯ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಕಾಸರಗೋಡು: ಪೆರಿಯದಲ್ಲಿರುವ ಕೇರಳ ಕೇಂದ್ರೀಯ ವಿಶ್ವವಿದ್ಯಾಲಯದ ಮಲೆಯಾಳ ವಿಭಾಗದ ನೇತೃತ್ವದಲ್ಲಿ ಮಹಿಳಾ ವೇದಿಕೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಯಿತು.
ಪರಿಯಾರಂ ವೈದ್ಯಕೀಯ ಕಾಲೇಜು ಸಮುದಾಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಿಕೆ ಡಾ.ಎ.ಕೆ. ಜಯಶ್ರೀ ಕಾರ್ಯಕ್ರಮ ದೀಪ ಬೆಳಗಿಸಿ ಉದ್ಘಾಟಿಸಿದರು.
ಪಥಭೇದಂ ನಿಯತಕಾಲಿಕೆಯ ಸಂಪಾದಕಿ ಮತ್ತು ಚಲನಚಿತ್ರ ಗೀತ ರಚನೆಕಾರರಾದ ಎಸ್.ಮೃದುಲಾದೇವಿ ಮಾತನಾಡಿ, ಮಹಿಳಾ ಪರವಾದ ವಿಚಾರಗಳನ್ನು ಕಾನೂನುಬದ್ಧ ನ್ಯಾಯ ಪ್ರಕ್ರಿಯೆಯ ಮೂಲಕ ಕಾರ್ಯಗತಗೊಳಿಸಬೇಕು ಎಂದು ನುಡಿದರು. ಮಹಿಳೆಯರು ಮತ್ತು ಸೃಜನಶೀಲತೆ ಎಂಬ ವಿಷಯದ ಕುರಿತು ಸುನೀತಾ ಕರಿಚೇರಿ ಉಪನ್ಯಾಸ ನೀಡಿದರು. ಮಲೆಯಾಳ ವಿಭಾಗದ ಅಧ್ಯಕ್ಷ ಡಾ.ಆರ್. ಚಂದ್ರಬೋಸ್, ಮಹಿಳಾ ವೇದಿಕೆ ಸಂಯೋಜಕಿ ಪಾರ್ವತಿ ಪಿ.ಚಂದ್ರನ್, ಡಾ.ಎಸ್.ಆಶಾ, ವಕೀಲೆ ಮನಿಷಾ ಮಾಧವನ್, ಆಲಿಯಾ ಫಾತಿಮಾ ಮತ್ತು ದಿನ್‌ಶಾ ಪಿ. ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಹಕ್ಕುಗಳ ಸಾಧಿಸಿದ್ದಾರೆ
ಮಹಿಳೆಯರು ದೀರ್ಘಕಾಲೀನ ಸಮಾಜೀಕರಣ ಪ್ರಕ್ರಿಯೆ ಮೂಲಕ ತಮ್ಮ ಹಕ್ಕುಗಳನ್ನು ಸಾಧಿಸಿದ್ದಾರೆ. ಮಹಿಳಾ ಹಕ್ಕುಗಳಿಗಾಗಿ ಧ್ವನಿ ಎತ್ತುವ ನಿರೂಪಣೆಗಳು ಯಾವಾಗಲೂ ಇರಬೇಕು.
● ಡಾ.ಎ.ಕೆ. ಜಯಶ್ರೀ

ಮಾ.14ರಿಂದ 18ರವರೆಗೆ ಮುಳಿಂಜ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ವಾರ್ಷಿಕ ಜಾತ್ರೆ

ಉಪ್ಪಳ: ಮುಳಿಂಜ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ಮಾ.14ರಿಂದ 18ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಮಾ.14ರಂದು ಬೆಳಿಗ್ಗೆ 7.30ಕ್ಕೆ ನಿತ್ಯಪೂಜೆ, 8.30ರಿಂದ ಗಣಪತಿ ಹವನ, ನವಕ ಕಲಶಾಭಿಷೇಕ, ಸಾಮೂಹಿಕ ಪ್ರಾರ್ಥನೆ, ಪೂರ್ವಾಹ್ನ 11ಕ್ಕೆ ಬಲಿ ಉತ್ಸವ, ಧ್ವಜಾರೋಹಣ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಬಲಿ ಉತ್ಸವ, ಅನ್ನಸಂತರ್ಪಣೆ, ಸಂಜೆ 6.30ರಿಂದ ಭಜನೆ, ರಾತ್ರಿ 7.30ರಿಂದ ಮಹಾಪೂಜೆ, ಬಲಿ ಉತ್ಸವ, ಅನ್ನಸಂತರ್ಪಣೆ, 8.30ರಿಂದ ಜೈ ಬಜರಂಗ ಬಲಿ ತುಳು ನಾಟಕ ಪ್ರದರ್ಶನಗೊಳ್ಳಲಿದೆ.
ಮಾ.15ರಂದು ಬೆಳಗ್ಗೆ 7.30ಕ್ಕೆ ನಿತ್ಯಪೂಜೆ, ಬಲಿ ಉತ್ಸವ, 8ರಿಂದ ಗಣಪತಿ ಹವನ, ನವಕ ಕಲಶಾಭಿಷೇಕ, ಬೆಳಗ್ಗೆ 10ರಿಂದ ಭಜನೆ, ಮಧ್ಯಾಹ್ನ 11ರಿಂದ ತಾಳಮದ್ದಳೆ, 12.30ಕ್ಕೆ ಮಹಾಪೂಜೆ, ಬಲಿ ಉತ್ಸವ, ಅನ್ನಸಂತರ್ಪಣೆ, ಸಂಜೆ 6.30ರಿಂದ ಭಜನೆ, ರಾತ್ರಿ 7.30ಕ್ಕೆ ಮಹಾಪೂಜೆ, 8ರಿಂದ ದರ್ಶನ ಬಲಿ ಉತ್ಸವ, ಅನ್ನಸಂತರ್ಪಣೆ, 8.30ರಿಂದ ಯಕ್ಷಗಾನ ಪ್ರದರ್ಶನಗೊಳ್ಳಲಿದೆ. ಮಾ.16 ರಂದು ಬೆಳಗ್ಗೆ 7.30ಕ್ಕೆ ನಿತ್ಯಪೂಜೆ, ಬಲಿ ಉತ್ಸವ, 8ರಿಂದ ಗಣಪತಿ ಹವನ, ನವಕ ಕಲಶಾಭಿಷೇಕ, ಪೂರ್ವಾಹ್ನ 10.30ರಿಂದ ಭಜನೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ದರ್ಶನ ಬಲಿ ಉತ್ಸವ, ಬಲಿವಾಡು ಕೂಟ ಅನ್ನಸಂತರ್ಪಣೆ, ಸಂಜೆ 6ರಿಂದ ಭಜನೆ, ರಾತ್ರಿ 7.30ಕ್ಕೆ ಮಹಾಪೂಜೆ, 8.30ರಿಂದ ನಡು ದೀಪೋತ್ಸವ, ದರ್ಶನ ಬಲಿ, ಧೂಮಾವತೀ ದೈವದ ಭೇಟಿ, ರಾಜಾಂಗಣ ಪ್ರಸಾದ, ಅನ್ನಸಂತರ್ಪಣೆ ನಡೆಯಲಿದೆ.
ಮಾ.17ರಂದು ಬೆಳಗ್ಗೆ 7.30ಕ್ಕೆ ನಿತ್ಯಪೂಜೆ, ದರ್ಶನ ಬಲಿ ಉತ್ಸವ, 8ರಿಂದ ಗಣಪತಿ ಹವನ, ನವಕ ಕಲಶಾಭಿಷೇಕ, ಪೂರ್ವಾಹ್ನ 10.30ರಿಂದ ಭಜನೆ, ಮಧ್ಯಾಹ್ನ 12.30ರಿಂದ ಮಹಾಪೂಜೆ, ಬಲಿ ಉತ್ಸವ, ರಾತ್ರಿ 7ರಿಂದ ಭಜನೆ, 7.30ಕ್ಕೆ ಮಹಾಪೂಜೆ, 8ರಿಂದ ಶ್ರೀ ಭೂತಬಲಿ, ಶಯನೋತ್ಸವ, ಕವಾಟ ಬಂಧನ, ಅನ್ನಸಂತರ್ಪಣೆ ನಡೆಯಲಿದೆ.
ಮಾ.18ರಂದು ಬೆಳಿಗ್ಗೆ 6.38ಕ್ಕೆ ಕವಾಟೋದ್ಘಾಟನೆ, ಅಭಿಷೇಕ, ಮಹಾಪೂಜೆ, 8ರಿಂದ ಗಣಪತಿ ಹವನ, 10.30ರಿಂದ ಭಜನೆ, 11ರಿಂದ ತುಲಾಭಾರ ಸೇವೆ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ರಾತ್ರಿ 7.30ಕ್ಕೆ ಮಹಾಪೂಜೆ, 8.15ರಿಂದ ದರ್ಶನ ಬಲಿ, ರಾಜಾಂಗಣ ಪ್ರಸಾದ, ಆರಾಟ ಉತ್ಸವ, ಅನ್ನಸಂತರ್ಪಣೆ, 8.45ರಿಂದ ಭಜನೆ, ರಾತ್ರಿ 9.30ರಿಂದ ಧ್ವಜಾವರೋಹಣ, ಮಹಾ ಮಂತ್ರಾಕ್ಷತೆ, ಮಾ.19ರಂದು ಸಂಜೆ 3ರಿಂದ ಮುಳಿಂಜ ಗುತ್ತು ಮನೆಯಿಂದ ಕ್ಷೇತ್ರಕ್ಕೆ ಭಂಡಾರ ಆಗಮನ, 5.30ರಿಂದ ಗುಳಿಗ ದೈವದ ಕೋಲ, ರಾತ್ರಿ ಅನ್ನಸಂತರ್ಪಣೆ ನಡೆಯಲಿದೆ.



ಕೂಡ್ಲು ಗೋಪಾಲಕೃಷ್ಣ ಪ್ರೌಢಶಾಲೆಗೆ ಕರ್ನಾಟಕ ಬ್ಯಾಂಕ್ ನಿಂದ ವಿದ್ಯಾರ್ಥಿಗಳಿಗೆ ಬಸ್ ಕೊಡುಗೆ ನೀಡಲಾಗಿದೆ. ಈ ಸಂಬಂಧ ಕೀಲಿಕೈ ಹಸ್ತಾಂತರ ಕಾರ್ಯಕ್ರಮ ಮಂಗಳವಾರ ಶಾಲಾ ಆವರಣದಲ್ಲಿ ನಡೆಯಿತು. ಬ್ಯಾಂಕ್ ಎಜಿಎಂ ವಿಶ್ವನಾಥ ಅವರು ಶಾಲಾ ಪ್ರಬಂಧಕ ಕೆ.ಜಿ.ಶ್ಯಾನುಭೋಗ್ ಅವರಿಗೆ ಕೀಲಿಕೈ ಹಸ್ತಾಂತರಿಸಿದರು. ಬ್ಯಾಂಕ್ ಕಾಸರಗೋಡು ಶಾಖೆ ಪ್ರಬಂಧಕ ಹರಿಲಾಲ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಜಾ, ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಶ್ರೀಧರ ಕೂಡ್ಲು, ನಿವೃತ್ತ ಶಿಕ್ಷಕ ನರಸಿಂಹ ಮಯ್ಯ, ಎಸ್.ಎನ್.ಶ್ಯಾನುಭೋಗ್ ಮತ್ತಿತರರಿದ್ದರು.

ಎಸ್‌ಎಟಿ ಶಾಲಾ ಮೈದಾನದಲ್ಲಿ ವಿರಾಟ್ ಹಿಂದೂ ಸಂಗಮ | ಶ್ರೀ ರಾಜಶೇಖರಾನಂದ ಸ್ವಾಮೀಜಿ ಆಶೀರ್ವಚನ

ಹಿಂದು ಧರ್ಮ ಸದೃಢವಾಗಲು ಹಿಂದೂ ಸಮಾಜ ಸಂಘಟಿತ ಶಕ್ತಿಯಾಗಬೇಕು

ಮಂಜೇಶ್ವರ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಾಬ್ದಿ ಹಿನ್ನೆಲೆ, ಮಂಜೇಶ್ವರ ಹಿಂದೂ ಸಂಗಮ ಆಯೋಜನಾ ಸಮಿತಿಯ ಆಶ್ರಯದಲ್ಲಿ ಮಂಜೇಶ್ವರ ಎಸ್‌ಎಟಿ ಶಾಲಾ ಮೈದಾನದಲ್ಲಿ ವಿರಾಟ್ ಹಿಂದೂ ಸಂಗಮ ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಿತು.
ದೀಪ ಪ್ರಜ್ವಲನ ಗೈದು ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ, ಹಿಂದುತ್ವ, ಹಿಂದು ಧರ್ಮ ಸದೃಢವಾಗಬೇಕಾದರೆ ಹಿಂದೂ ಸಮಾಜ ಸಂಘಟಿತ ಶಕ್ತಿಯಾಗಬೇಕು ಎಂದರು.

ಧರ್ಮ ರಕ್ಷಣೆ ನಮ್ಮೆಲ್ಲರ ಪ್ರಥಮಾದ್ಯತೆಯಾಗಲಿ
ದಿಕ್ಸೂಚಿ ಭಾಷಣ ಮಾಡಿದ ಹಿಂದುತ್ವದ ಪ್ರಖರ ವಾಗ್ಮಿ ವಕೀಲ ಸಹನಾ ಕುಂದರ್ ಸೂಡ ಮಾತನಾಡಿ, ನಮ್ಮ ಬದುಕು ಈ ರಾಷ್ಟ್ರಕ್ಕೆ ಸಮರ್ಪಿತವಾಗಲಿ. ಈ ರಾಷ್ಟ್ರದ ಅಂತಃಶಕ್ತಿಯಾದ ಸನಾತನ ಪರಂಪರೆ, ಸಂಸ್ಕೃತಿ, ಆಚಾರ – ವಿಚಾರಗಳನ್ನು ಇನ್ನಷ್ಟು ಸಂಪದ್ಭರಿತಗೊಳಿಸೋಣ. ಈ ರಾಷ್ಟ್ರದ, ಸನಾತನ ಹಿಂದು ಧರ್ಮದ ರಕ್ಷಣೆ ನಮ್ಮೆಲ್ಲರ ಪ್ರಥಮಾದ್ಯತೆಯಾಗಿರಲಿ ಎಂದು ಹೇಳಿದರು.
ಮಂಜೇಶ್ವರ ಹಿಂದೂ ಸಂಗಮ ಸಮಿತಿ ಅಧ್ಯಕ್ಷ ಮೋಹನ್ ಶೆಟ್ಟಿ ತೂಮಿನಾಡು ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಹಿಂದೂ ಸಂಗಮ ಸಮಿತಿಯ ಗೌರವಾಧ್ಯಕ್ಷ ನಿವೃತ್ತ ನೌಕಾದಳ ಕಮಾಂಡರ್, ವಿಜಯ ಕುಮಾರ್ ಕಣ್ವತೀರ್ಥ ಮಾತನಾಡಿದರು. ಮಂಜೇಶ್ವರ ಹಿಂದು ಸಂಗಮದ ರಕ್ಷಾಧಿಕಾರಿ ಬ್ರಹ್ಮಶ್ರೀ ಗೋಪಾಲಕೃಷ್ಣ ತಂತ್ರಿ ಬಡಾಜೆಬೂಡು, ಮಾತೃಶಕ್ತಿ ಸಂಚಾಲಕಿ ಶಶಿಕಲಾ ಮಾಡ ಉಪಸ್ಥಿತರಿದ್ದರು.
ಈ ಸಂದರ್ಭ ರಾಷ್ಟ್ರೀಯ ಸ್ವಯಂಸೇವಕ ಸಂಘ ಸಮಾಜದ ಮುಂದಿಟ್ಟಿರುವ ಪಂಚ ಪರಿವರ್ತನೆಗಳ ಮಹತ್ವ , ಹಿಂದೂ ಸಮಾಜಕ್ಕೆ ಎದುರಾಗಿರುವ ಸವಾಲುಗಳು – ಉತ್ತರಗಳನ್ನೊಳಗೊಂಡ ಕರಪತ್ರವನ್ನು ಸ್ವಾಮೀಜಿ ಅನಾವರಣಗೊಳಿಸಿದರು.
ಹಿಂದೂ ಸಂಗಮ ಸಮಿತಿ ಪ್ರಧಾನ ಕಾರ್ಯದರ್ಶಿ ಹರೀಶ್ ಮಾಡ ಸ್ವಾಗತಿಸಿ, ಹಿಂದೂ ಸಂಗಮ ಸಮಿತಿ ಸಂಯೋಜಕ ಮಹಾಬಲೇಶ್ವರ ವಂದಿಸಿದರು. ಈಶ್ವರ್ ಕಿದೂರು, ಶೈಲೇಶ್ ಸೂರ್ತಿನಗರ ನಿರೂಪಿಸಿದರು.





ಒಗ್ಗಟ್ಟಾಗಬೇಕು
ಸುಸಂಘಟಿತ ಹಿಂದೂ ಸಮಾಜದಿಂದ ಮಾತ್ರ ಈ ರಾಷ್ಟ್ರ ಪರಮ ವೈಭವ ಸ್ಥಿತಿಗೆ ತಲುಪಲು ಸಾಧ್ಯ. ಈ ಹಿನ್ನೆಲೆ ಸಮಸ್ತ ಹಿಂದೂ ಸಮಾಜ 'ನಾವೆಲ್ಲರೂ ಹಿಂದು ಗಳು' ಎಂಬ ಏಕತಾಭಾವನೆಯಿಂದ ಒಂದಾಗಬೇಕು.
● ವಜ್ರದೇಹಿ ಶ್ರೀ

ಗಮನ ಸೆಳೆದ ಸಾಮೂಹಿಕ ಕುಣಿತ ಭಜನೆ
ಭಾರತ ಮಾತೆಗೆ ಪುಷ್ಪಾರ್ಚನೆ ಕಾರ್ಯಕ್ರಮ ವೇದಿಕೆಯಲ್ಲಿ ಜರಗಿತು. ವೇದಿಕೆಯಲ್ಲಿ ಅನಾವರಣಗೊಂಡ ಕುಣಿತ ಭಜನಾ ತಂಡಗಳ ಸಾಮೂಹಿಕ ಕುಣಿತ ಪ್ರದರ್ಶನ, ಹುಲಿ ವೇಷಧಾರಿಗಳ ನೃತ್ಯ ಪ್ರದರ್ಶನ, ಆದರ್ಶ ವ್ಯಕ್ತಿತ್ವಗಳ ಅಭಿನಯ ಪ್ರದರ್ಶನ, ವೇದಪಟುಗಳಿಂದ ವೇದ ಮಂತ್ರಗಳ ಉದ್ಘೋಷಗಳು ಗಮನ ಸೆಳೆಯಿತು. ಇದಕ್ಕೂ ಮೊದಲು ಮಂಜೇಶ್ವರ ಶ್ರೀಮದ್ ಅನಂತೇಶ್ವರ ದೇವಳ ವಠಾರದಿಂದ ಹೊರಟ ಬೃಹತ್ ಶೋಭಾಯಾತ್ರೆಗೆ ದೇವಸ್ಥಾನದ ಅಧ್ಯಕ್ಷ ಟಿ.ಗಣಪತಿ ಪೈ ಅ ಸಂಗಮ ಸಮಿತಿ ಅಧ್ಯಕ್ಷ ಮೋಹನ ಶೆಟ್ಟಿ ತೂಮಿನಾಡು ಅವರಿಗೆ ಭಗವಾಧ್ವಜ ಹಸ್ತಾಂತರಿಸುವ ಮೂಲಕ ಚಾಲನೆ ನೀಡಿದರು.

ಶೋಭಾಯಾತ್ರೆ ಮೆರವಣಿಗೆ
ಶೋಭಾಯಾತ್ರೆಯಲ್ಲಿ ವಿವಿಧ ಬಾಲಗೋಕುಲ ಹಾಗೂ ಸಂಘ ಸಂಸ್ಥೆಗಳ ಮಕ್ಕಳಿಂದ ಕುಣಿತ, ಆದರ್ಶ ವ್ಯಕ್ತಿತ್ವಗಳ ವೇಷ –ಭೂಷಣಗಳು, ತುಳುನಾಡಿನ ಸಾಂಪ್ರದಾಯಿಕ ಕಲೆಯಾಗಿರುವ ಹುಲಿ ವೇಷ ನೃತ್ಯಗಳು ವಿಶೇಷ ಆಕರ್ಷಣೆಯಾಗಿದ್ದವು. ಬಳಿಕ ಸನಾತನ ಭಾರತೀಯ ಪರಂಪರೆ, ಸಂಸ್ಕೃತಿ, ಆಚಾರ – ವಿಚಾರಗಳ ಪ್ರತಿಬಿಂಬಿಸುವ ಚಂದ್ರಹಾಸ್ ಮುಗುಳ್ಯ ಸಾರಥ್ಯದ ದತ್ತಾಂಜನೇಯ ಕಲಾಬಳಗ ಕಣ್ವತೀರ್ಥ ಕಲಾವಿದರಿಂದ ಭರತ ವೈಭವ ಎಲ್ಲರ ಮನಸೂರೆಗೊಂಡಿತು.

ಉಡುಪಿ ನಗರವಾಸಿಗಳಿಗೆ ಆಸ್ತಿ ತೆರಿಗೆ ಬಿಸಿ | 2021ರ ಸರ್ಕಾರದ ಸುತ್ತೋಲೆಗೆ ಈಗ ಜೀವ!

ಆಸ್ತಿ ತೆರಿಗೆ ಶೇ. 3 ಹೆಚ್ಚಳ ಮಾಡಲು ನಗರಸಭೆ ತೀರ್ಮಾನ

■ ಸುದೀಪ್ ರಾಜ್ ಸುಳ್ಯ

ಉಡುಪಿ: ಕರಾವಳಿಯ ಸಾಂಸ್ಕೃತಿಕ ನಗರಿ ಉಡುಪಿಯ ನಿವಾಸಿಗಳಿಗೆ ಹೊಸ ಹಣಕಾಸು ವರ್ಷದ ಆರಂಭದಲ್ಲೇ ಆಸ್ತಿ ತೆರಿಗೆಯ ಬಿಸಿ ತಟ್ಟಲಿದೆ. ಕಳೆದ ಮೂರು ವರ್ಷಗಳಿಂದ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡದ ನಗರಸಭೆಯು, ಈ ಬಾರಿ ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯ ಮೇಲೆ ಶೇ. 3 ರಷ್ಟು ಹೆಚ್ಚಳ ಮಾಡಲು ನಿರ್ಧರಿಸಿದೆ.

ಮಾರುಕಟ್ಟೆ ಮಾರ್ಗಸೂಚಿ ದರದಲ್ಲಿ ಯಾವುದೇ ಬದಲಾವಣೆಯಾಗದಿದ್ದರೂ, ಸರ್ಕಾರದ ಹಳೆಯ ಸುತ್ತೋಲೆಯೊಂದನ್ನು ಆಧಾರವಾಗಿಟ್ಟುಕೊಂಡು ಈ ಏರಿಕೆ ಮಾಡಲಾಗುತ್ತಿದೆ.

ಏನಿದು ಸರ್ಕಾರದ ನಿಯಮ?

ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು 2021 ರಲ್ಲಿ ಒಂದು ಮಹತ್ವದ ಸುತ್ತೋಲೆ ಹೊರಡಿಸಿತ್ತು. ಈ ನಿಯಮದ ಪ್ರಕಾರ,



ಪ್ರತಿ ವರ್ಷ ಆಸ್ತಿ ತೆರಿಗೆಯನ್ನು ಕನಿಷ್ಠ ಶೇ. 3ರಿಂದ ಗರಿಷ್ಠ ಶೇ. 5ರಷ್ಟು ಕಡ್ಡಾಯವಾಗಿ ಹೆಚ್ಚಿಸಲು ಪೌರಾಡಳಿತ ಸಂಸ್ಥೆಗಳಿಗೆ ಅಧಿಕಾರ ನೀಡಲಾಗಿತ್ತು. ಉಡುಪಿ ನಗರಸಭೆಯಲ್ಲಿ 2022ರ ನಂತರ ವಿವಿಧ ಕಾರಣಗಳಿಂದಾಗಿ ಈ ವಾರ್ಷಿಕ ಏರಿಕೆಯನ್ನು ಜಾರಿಗೆ ತಂದಿರಲಿಲ್ಲ. ಆದರೆ ಈ ಬಾರಿ ನಗರಸಭೆಯ ಆಡಳಿತಾಧಿಕಾರಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ಬಾಕಿ ಉಳಿದಿದ್ದ ಆ ಗೈಡೆನ್ಸ್ ಆಧಾರದ ಮೇಲೆ ಶೇ. 3 ರಷ್ಟು ತೆರಿಗೆ ಹೆಚ್ಚಳದ ಪ್ರಕ್ರಿಯೆಯನ್ನು ಅಧಿಕೃತಗೊಳಿಸಲಾಗಿದೆ.

ಏಪ್ರಿಲ್ ಒಳಗೆ ಪಾವತಿಸಿದರೆ ವಿನಾಯಿತಿ

ಸರ್ಕಾರದ ಸುತ್ತೋಲೆ ಪ್ರಕಾರ 3 ಶೇ. ತೆರಿಗೆಯನ್ನು ಈ ವರ್ಷ ಹೆಚ್ಚಿಸಲಾಗಿದೆ. ಏಪ್ರಿಲ್ ಒಳಗೆ ತೆರಿಗೆ ಕಟ್ಟಿದರೆ ವಿನಾಯಿತಿ ಪಡೆಯಬಹುದು.

● ಸಂತೋಷ್ ಡಿ. , ಕಂದಾಯ ಅಧಿಕಾರಿ, ನಗರಸಭೆ ಉಡುಪಿ

ಸಾರ್ವಜನಿಕರ ಮೇಲಿನ ಪರಿಣಾಮ

ಸತತ ಬೆಲೆ ಏರಿಕೆಯಿಂದ ತತ್ತರಿಸಿರುವ ನಗರವಾಸಿಗಳಿಗೆ ಈ ತೆರಿಗೆ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಆಸ್ತಿ ಮಾಲೀಕರು ತೆರಿಗೆ ಉಳಿಸುವುದು ಹೇಗೆ?

ಆಸ್ತಿ ಮಾಲೀಕರು ಜಾಗರೂಕರಾಗಿದ್ದರೆ ತೆರಿಗೆ ಏರಿಕೆಯ ಹೊರೆಯಿಂದ ಬಚಾವ್ ಆಗಬಹುದು. ಉದಾಹರಣೆಗೆ, ಒಬ್ಬರ ತೆರಿಗೆ 10,000 ಇದ್ದರೆ, ಶೇ. 3 ಏರಿಕೆಯ ನಂತರ ಅದು 10,300 ಆಗುತ್ತದೆ. ಆದರೆ ನೀವು ಏಪ್ರಿಲ್ ತಿಂಗಳಲ್ಲೇ ತೆರಿಗೆ ಪಾವತಿಸಿದರೆ ಶೇ. 5 ರಿಯಾಯಿತಿಯಂತೆ ಅಂದಾಜು 515 ಉಳಿತಾಯವಾಗುತ್ತದೆ. ಅಂದರೆ ಅಂತಿಮವಾಗಿ ನೀವು ಸುಮಾರು 9,785 ಪಾವತಿಸಿದರೆ ಸಾಕು. ಇದರಿಂದ ಏರಿಕೆಯಾದ ಶೇ. 3 ರ ಬದಲು ಶೇ. 2 ರಷ್ಟು ಹೆಚ್ಚುವರಿ ಹಣ ಉಳಿತಾಯವಾದಂತಾಗುತ್ತದೆ.

ನಗರಸಭೆಯು ರಸ್ತೆ, ಬೀದಿ ದೀಪ ಮತ್ತು ಸ್ವಚ್ಛತೆಯಂತಹ ದೈನಂದಿನ ಸೇವೆ ಗಳ ವೆಚ್ಚ ಹೆಚ್ಚಾಗುತ್ತಿದೆ ಎಂಬ ಕಾರಣ ನೀಡಿ ತೆರಿಗೆ ಏರಿಸುತ್ತಿದ್ದರೂ, ಸಾರ್ವಜನಿಕ ಸೌಲಭ್ಯಗಳಲ್ಲಿ ಕಳೆದ 3 ವರ್ಷಗಳಲ್ಲಿ ನಿರೀಕ್ಷಿತ ಪ್ರಗತಿಯಾಗಿಲ್ಲ ಎಂಬ ಅಪಸ್ವರಗಳು ಕೇಳಿಬರುತ್ತಿವೆ. ಹಳೆಯ ಮಾರುಕಟ್ಟೆ ದರವೇ ಅಸ್ತಿತ್ವದಲ್ಲಿದ್ದರೂ, ಆದಾಯ ಕ್ರೋಢೀಕರಣಕ್ಕಾಗಿ ಶೇ. 3 'ಫ್ಲಾಟ್ ಹೈಕ್' ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಗಳು ಮೂಡಿವೆ.

ರಿಯಾಯಿತಿಯ ಆಮಿಷ

ಹೆಚ್ಚುವರಿ ತೆರಿಗೆ ಹೊರೆಯಿಂದ ತಪ್ಪಿಸಿಕೊಳ್ಳಲು ನಗರಸಭೆ ಶೇ. 5 ರಿಯಾಯಿತಿಯ ಆಮಿಷವನ್ನೂ ಒಡ್ಡಿದೆ. ಏ. 1ರಿಂದ 30ರ ಒಳಗೆ ತೆರಿಗೆ ಪಾವತಿಸುವವರಿಗೆ ಮಾತ್ರ ಈ ರಿಯಾಯಿತಿ ದೊರೆಯಲಿದ್ದು, ಸಕಾಲಕ್ಕೆ ಹಣ ಪಾವತಿಸಿ ದಂಡದಿಂದ ಪಾರಾಗುವಂತೆ ಪೌರಾಯುಕ್ತರ ಕಚೇರಿ ಮನವಿ ಮಾಡಿದೆ. ಜುಲೈ ನಂತರ ಪಾವತಿಸುವವರು ತಿಂಗಳಿಗೆ ಶೇ. 2 ರಷ್ಟು ಭಾರಿ ದಂಡ ತೆರಬೇಕಾಗುತ್ತದೆ. ಒಟ್ಟಾರೆಯಾಗಿ, ಸರ್ಕಾರದ ಸುತ್ತೋಲೆಯನ್ನು ಮುಂದಿಟ್ಟುಕೊಂಡು ನಗರಸಭೆ ಈಗ ತೆರಿಗೆದಾರರ ಜೇಬಿಗೆ ಕೈ ಹಾಕಿದೆ.

ಸುತ್ತಮುತ್ತ

ಐವರು ಸಾಧಕರಿಗೆ ಜಿಲ್ಲಾ ರೆಡ್‌ಕ್ರಾಸ್ ಗೌರವ

ಉಡುಪಿ: ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಉಡುಪಿ ಜಿಲ್ಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ. ಶಿವರಾಮ ಕಾರಂತ ಟ್ರಸ್ಟ್ ಉಡುಪಿ ಸಹಯೋಗದಲ್ಲಿ ಉಡುಪಿ ಜಿಲ್ಲಾ ಲೇಖಕಿಯರ ವಾಚಕಿಯರ ಸಂಘದ ಆಶ್ರಯದಲ್ಲಿ ಮಾ. 14ರಂದು ರೆಡ್‌ಕ್ರಾಸ್ ಭವನದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಮಹಿಳಾ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ರೆಡ್ ಕ್ರಾಸ್ ಘಟಕವು ಉಡುಪಿ ಜಿಲ್ಲೆಯ ಐದು ಮಂದಿ ಸಾಧಕಿಯರನ್ನು ಗೌರವಿಸಲಿದೆ.



ಸಾರ್ವಜನಿಕ ಆಡಳಿತ ಸೇವೆಗಾಗಿ ಶ್ಯಾಮಲಾ ಸಿ.ಕೆ, ಹಿರಿಯ ಲೇಖಕಿ ಮತ್ತು ಭಾಷಾಂತರ ತಜ್ಞೆ ಡಾ. ಪಾರ್ವತಿ ಜಿ. ಐತಾಳ್, ಕಲೆ ಮತ್ತು ಸಮಾಜಸೇವೆಗಾಗಿ ಕುಸುಮ ಕಾಮತ್ ಕರ್ವಾಲು, ಶೈಕ್ಷಣಿಕ ಸೇವೆಗಾಗಿ ಪ್ರೊ. ಸುಜಯ ಕೆ. ಎಸ್, ಹಿಂದಿ, ಸಾಹಿತ್ಯ, ಎನ್.ಎಸ್.ಎಸ್. ಎನ್.ಸಿ.ಸಿ ಮತ್ತು ರೆಡ್ ಕ್ರಾಸ್ ಸೇವೆಗಾಗಿ ಕ್ಯಾಪ್ಟನ್ ಡಾ. ಸುಕನ್ಯ ಮಾರ್ಟಿಸ್ ಇವರನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಪ್ತಾಹದ ಸಮಾರೋಪ ಸಮಾರಂಭದಲ್ಲಿ ಚಲನಚಿತ್ರ ಮತ್ತು ರಂಗನಟಿ ಗೀತಾ ಸುರತ್ಕಲ್‌ರವರು ಸನ್ಮಾನಿಸಿ ಗೌರವಿಸಲಿದ್ದಾರೆ ಎಂದು ರೆಡ್ ಕ್ರಾಸ್ ಪ್ರಕಟಣೆ ತಿಳಿಸಿದೆ.

ಡಿಪ್ಲೋಮಾ ಪ್ರವೇಶಾತಿ : ಅರ್ಜಿ ಆಹ್ವಾನ

ಉಡುಪಿ: ಮೈಸೂರಿನ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರದಲ್ಲಿ 2026-27 ನೇ ಸಾಲಿನ ಉದ್ಯೋಗಾಧಾರಿತ ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (ಡಿ.ಪಿ.ಟಿ) ಹಾಗೂ ಡಿಪ್ಲೋಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (ಡಿ.ಪಿ.ಎಂ.ಟಿ) ? 3 ವರ್ಷಗಳ ಅವಧಿಯ ಕೋರ್ಸ್‌ಗಳ ಪ್ರವೇಶಾತಿಗೆ ಆನ್ ಲೈನ್ ಹಾಗೂ ಆಫ್‌ಲೈನ್ ಮೂಲಕ ನೋಂದಣಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಹಾಗೂ ಹಾಜರಾಗುವವರು ಆನ್‌ಲೈನ್ https://cipet26.onlineregistrationform.org/CIPET/ ಮೂಲಕ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಇದರೊಂದಿಗೆ ಸಿಪೆಟ್ ಸಂಸ್ಥೆಯು ಉಚಿತ 3 ರಿಂದ 6 ತಿಂಗಳುಗಳ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಕೌಶಲ್ಯ ಯೋಜನೆ ಮತ್ತು ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ ಅಡಿ ಆಯೋಜಿಸಲಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತ ಆಹಾರ ಹಾಗೂ ವಸತಿ ಸೌಲಭ್ಯ ಒದಗಿಸಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ.ನಂ: 9480253024, 9791431827 ಅಥವಾ ವೆಬ್‌ಸೈಟ್ ಡಿಡಿಡಿ.ಜಿಟಿಥಿರಿ.ಜಟಡ.ಜ್ಞಿ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥರ ಕಚೇರಿ ಪ್ರಕಟಣೆ ತಿಳಿಸಿದೆ.

ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

ಉಡುಪಿ: ತೋಟಗಾರಿಕೆ ಇಲಾಖೆ ವತಿಯಿಂದ ರೈತರ ಮಕ್ಕಳಿಗೆ 10 ತಿಂಗಳ ತೋಟಗಾರಿಕೆ ತರಬೇತಿ ಕಾರ್ಯಕ್ರಮವನ್ನು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಜಿಲ್ಲೆಗೆ 07 ಅಭ್ಯರ್ಥಿಗಳ ಗುರಿ ನಿಗಧಿಪಡಿಸಿದ್ದು ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾಗಿರುವ, ಕೃಷಿ ಜಮೀನು ಹೊಂದಿರುವ ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಏಪ್ರಿಲ್ 23 ರ ಪೂರ್ವಾಹ್ನ ತೋಟಗಾರಿಕೆ ಜಂಟಿ ನಿರ್ದೇಶಕರು (ಜಿಪಂ), ಉಡುಪಿ ರವರ ಕಛೇರಿಯಲ್ಲಿ ಸಂದರ್ಶನ ನಡೆಯಲಿದ್ದು, ಏ. 27ರಂದು ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಏಪ್ರಿಲ್ 15 ಕೊನೆಯ ದಿನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ https://horticulturedir.karnataka.gov.in ನಲ್ಲಿ ಅಥವಾ ತೋಟಗಾರಿಕೆ ಜಂಟಿ ನಿರ್ದೇಶಕರು (ಜಿಪಂ), ಉಡುಪಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ), ಉಡುಪಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ಜಿಪಂ), ಉಡುಪಿ, ಕುಂದಾಪುರ ಹಾಗೂ ಕಾರ್ಕಳ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಕಚೇರಿ ಪ್ರಕಟಣೆ ತಿಳಿಸಿದೆ.

ಬಂಟಕಲ್ಲು ಕಾಲೇಜಿನಲ್ಲಿ ತಾಂತ್ರಿಕ, ಸಾಂಸ್ಕೃತಿಕ ಹಬ್ಬ 'ವರ್ಣೋತ್ಸವ'ಕ್ಕೆ ಚಾಲನೆ

ಪ್ರತಿಭೆಗೆ ಸೂಕ್ತ ವೇದಿಕೆ: ದೀಪಕ್ ನಾಯಕ್



ಶಿರ್ವ: ವಿದ್ಯಾರ್ಥಿಗಳು ನವೀನತೆ ಸಾಧಿಸುವಾಗ ಸಂಸ್ಕೃತಿಯ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು. ತಾಂತ್ರಿಕ ಪ್ರಗತಿ ಹಾಗೂ ಸೃಜನಶೀಲತೆಯ ಸಮತೋಲನ ಸಾಧಿಸುವುದು ಅಗತ್ಯ. ವರ್ಣೋತ್ಸವದಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಪ್ರತಿಭೆ ಪ್ರದರ್ಶಿಸಲು, ಪರಸ್ಪರ ಸಹಕಾರ ಬೆಳೆಸಲು ಮತ್ತು ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸಲು ಉತ್ತಮ ಅವಕಾಶ ಒದಗಿಸುತ್ತದೆ ಎಂದು ಬೆಂಗಳೂರಿನ ಕ್ಲಿಯರ್ ಫೀಡ್ ಲೀಡ್ ಇಂಜಿನಿಯರ್ ದೀಪಕ್ ನಾಯಕ್ ಅಭಿಪ್ರಾಯ ಪಟ್ಟರು.

ಅವರು ಬುಧವಾರ ಬಂಟಕಲ್ಲು ಶ್ರೀಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ನಾಲ್ಕು ದಿನಗಳ ಪರ್ಯಂತ ಜರುಗುವ ರಾಷ್ಟ್ರ ಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಹಬ್ಬ 'ವರ್ಣೋತ್ಸವ -2026'ರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಶ್ರೀ ಸೋದೆ ವಾದಿರಾಜ ಮಠ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಪಾಡಿಗಾರು ಶ್ರೀನಿವಾಸ ತಂತ್ರಿ ದೀಪ ಪ್ರಜ್ವಲನದ ಮೂಲಕ ಹಾಗೂ ಕೋಣಾರ್ಕ್ ಚಕ್ರ ಅನಾವರಣ ಮಾಡಿ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಉಡುಪಿಯ ಕ್ವಾಂಟಿಟಿ ಸರ್ವೇಯರ್ ಸ್ಕೈಮನ್ಸ್ ಆ್ಯಂಡ್ ಅಸೋಸಿಯೇಟ್ಸ್‌ನ ಸ್ನೇಹಲ್ ವಿ. ರಾವ್ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳು ತಾಂತ್ರಿಕ ಬೆಳವಣಿಗೆ ಮತ್ತು ಸಾಂಸ್ಕೃತಿಕ ಮೌಲ್ಯಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕು. ಕಾಲೇಜಿನಲ್ಲಿ ಕಲಿಯುವುದು ಚಾಲನಾ ಪರವಾನಿಗೆಯಂತೆ ಅದು ನಮಗೆ ಜ್ಞಾನ ನೀಡುತ್ತದೆ. ಇದರಿಂದ ನಮಗೆ ನಿಜವಾದ ಅನುಭವ ಸಿಗುತ್ತದೆ ಎಂದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಡಾ. ರಾಧಾಕೃಷ್ಣ ಎಸ್. ಐತಾಳ್ ಮಾತನಾಡಿ ಸಂಸ್ಥೆಯ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿಗೆ ನೀಡುವ ಆದ್ಯತೆಯನ್ನು ವಿವರಿಸಿದರು. ಮೆಕ್ಯಾನಿಕಲ್ ವಿಭಾಗದ ಲ್ಯಾಬ್ ಸಿಬ್ಬಂದಿ ವಿಘ್ನೇಶ್ ಕಳತ್ತೂರ್ ಅವರು ರೂಪಿಸಿದ ಕೋಣಾರ್ಕ್ ಚಕ್ರದ ಸೃಜನಾತ್ಮಕತೆಯನ್ನು ಪ್ರಶಂಶಿಸಿದರು.

ಸಂಸ್ಥೆಯ ಕಾರ್ಯದರ್ಶಿ ರತ್ನಕುಮಾರ್ ಮಾತನಾಡಿ, ವರ್ಣೋತ್ಸವವು ತಾಂತ್ರಿಕ, ಸಾಂಸ್ಕೃತಿಕ ಮತ್ತು ವ್ಯವಹಾರಿಕ ಚಟುವಟಿಕೆಗಳನ್ನು ಒಗ್ಗೂಡಿಸುವ ಕಾರ್ಯಕ್ರಮವಾಗಿದೆ ಎಂದರು.

ಪ್ರಾಂಶುಪಾಲ ಡಾ. ನಾಗರಾಜ್ ಭಟ್ ಸ್ವಾಗತಿಸಿದರು. ಭೌತಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಸಂಧ್ಯಾ ಮಂಥನ ಇನ್ ಹೌಸ್ ತಾಂತ್ರಿಕ ಸ್ಪರ್ಧೆಯ ವಿಜೇತರ ಪಟ್ಟಿಯನ್ನು ವಾಚಿಸಿದರು. ಸಾಂಸ್ಕೃತಿಕ ಘಟಕದ ಸಂಯೋಜಕರಾದ ಸವಿತಾ ಎ ಶೆಣೈ ವಂದನಾರ್ಪಣೆ ಅಲ್ಲಿಸಿದರು. ಕುಮಾರಿ ಚಿತ್ಕಲಾ ಪ್ರಾರ್ಥಿಸಿದರು. ವಿದ್ಯಾರ್ಥಿಗಳಾದ ಚಿರಶ್ರೀ ಮತ್ತು ಅಭಿಷೇಕ್ ಕಿಣಿ ನಿರೂಪಿಸಿದರು.

ಕಟಪಾಡಿಯಲ್ಲಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಪೂರ್ವಭಾವಿ ಸಭೆ

ಉತ್ಸವದಲ್ಲಿ 15000 ಜನ ಪಾಲ್ಗೊಳ್ಳುವ ನಿರೀಕ್ಷೆ



ಶಿರ್ವ: ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ವತಿಯಿಂದ ತಿರುಪತಿ ತಿರುಮಲ ದೇವಸ್ಥಾನದ ನೇತೃತ್ವದಲ್ಲಿ ಕಟಪಾಡಿಯ ನಾಗರಿಕರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ದೇವಸ್ಥಾನಗಳ ಆಡಳಿತ ಮಂಡಳಿಯವರ ಸಹಕಾರದೊಂದಿಗೆ ಜರಗಲಿರುವ 'ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ'ದ ಪೂರ್ವಭಾವಿ ಸಭೆಯು ಎಸ್‌ವಿಎಸ್ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಜರಗಿತು.

ಅಂದಾಜು 15 ಸಾವಿರ ಮಂದಿ ಭಕ್ತರು ಭಾಗವಹಿಸುನ ನಿರೀಕ್ಷೆ ಇದ್ದು, ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರು, ವಿವಿಧ ಸಂಘ ಸಂಸ್ಥೆಗಳು, ದೇವಸ್ಥಾನಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳು ಸಲಹೆ ಸೂಚನೆ ನೀಡಿ ಸಂಪೂರ್ಣ ಸಹಕಾರದ ಭರವಸೆ ನೀಡಿದರು.

ಕಾರ್ಯಕ್ರಮ ಆಯೋಜನೆಗೆ ಪೂರಕವಾಗಿ ಪ್ರಚಾರ, ಸ್ವಾಗತ, ಅತಿಥಿ ಸತ್ಕಾರ, ಊಟೋಪಚಾರ, ಮೂಲ ಪ್ರಸಾದ ವಿತರಣೆ, ವಾಹನ ನಿಲುಗಡೆ ಹಾಗೂ ನೈರ್ಮಲ್ಯ ಮೊದಲಾದ ಹೊಣೆಗಾರಿಕೆಯನ್ನು ಹಂಚಿಕೆ ಮಾಡಿಕೊಂಡು ಮುಂದುವರಿಯಬೇಕಿದೆ. ಈ ನಿಟ್ಟಿನಲ್ಲಿ ವಿವಿಧ ಸಂಘಸಂಸ್ಥೆಗಳು, ದೇವಸ್ಥಾನ, ದೈವಸ್ಥಾನಗಳು, ಭಜನಾ ಮಂದಿರಗಳನ್ನು ಒಳಗೊಳ್ಳುವ ಬಗ್ಗೆ ಚರ್ಚಿಸಲಾಯಿತು.

ಅಂತಿಮ ಸಿದ್ಧತೆ ಬಾಕಿ

ಸಭೆಯ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಕೆ.ಸತ್ಯೇಂದ್ರ ಪೈ ಮಾತನಾಡಿದರು. ತಿರುಪತಿ ದೇವಸ್ಥಾನದ ನೇತೃತ್ವದಲ್ಲೇ ನಡೆಯುವ ಈ ಕಾರ್ಯಕ್ರಮದ ಅವಕಾಶ ಪಡೆದುಕೊಳ್ಳಲು ಅನೇಕ ಪೂರಕ ಶರತ್ತುಗಳನ್ನು ಪೂರೈಸಬೇಕಿದ್ದು, ಈಗಾಗಲೇ ನಮ್ಮಲ್ಲಿನ ಸೌಕರ್ಯಗಳನ್ನು ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯ ಗಮನಕ್ಕೆ ತಂದಿದ್ದೇವೆ. ಈಗ ಅಂತಿಮ ಹಂತದ ಸಿದ್ಧತೆಗಳು ಬಾಕಿಯಿವೆ. ತಿರುಪತಿಯಿಂದಲೇ ದೇವರು ನಮ್ಮೂರಿಗೆ ಆಗಮಿಸಿ ಕಾರ್ಯಕ್ರಮ ನಡೆಯುವುದರಿಂದ ಎಲ್ಲರೂ ಸೇರಿಕೊಂಡು ಕಾರ್ಯಕ್ರಮ ನಡೆಸಬೇಕಿದ್ದು, ಸರ್ವರ ಸಹಕಾರ ಅಗತ್ಯವಿದೆ ಎಂದರು.

ಕಟಪಾಡಿ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರ ಮಟ್ಟಾರು ದಿನೇಶ್ ಕಿಣಿ, ಅರ್ಚಕ ವಸಂತ ಮಾಧವ ಭಟ್, ಕೆನರಾ ಬ್ಯಾಂಕ್ ನಿವೃತ್ತ ಡಿ.ಎಂ. ಹರಿರಾಮ್ ಶೆಣೈ ಕಾರ್ಕಳ, ಕೋಟೆ ಶ್ರೀ ಬಬ್ಬುಸ್ವಾಮಿ ದೈವಸ್ಥಾನದ ಕರ್ತಾರರು ಡಾ.ಯು. ಕೆ. ಶೆಟ್ಟಿ ಕಟಪಾಡಿ, ಶ್ರೀ ವಿಶ್ವನಾಥ ಕ್ಷೇತ್ರದ ಗೌ. ಪ್ರಧಾನ ಕಾರ್ಯದರ್ಶಿ ಸುಧೀರ್ ಡಿ. ಬಂಗೇರ, ಸದಸ್ಯ ಭಾಸ್ಕರ್ ಪೂಜಾರಿ, ಮಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮೊಕ್ತೇಸರ ಸುನೀಲ್ ಡಿ. ಬಂಗೇರ, ಉದ್ಯಾವರ ಕೊಪ್ಲ ಸೀತಾರಾಮ ಕಲ್ಯಾಣೋತ್ಸವ ಸಮಿತಿಯ ಪದಾಧಿಕಾರಿಗಳಾದ ಜಯ ಕುಂದರ್, ರಾಜೇಶ್ ಶ್ರೀಯಾನ್, ಕಿಶೋರ್ ಕಾಂಚನ್, ಎಸ್‌ವಿಎಸ್ ಪ.ಪೂ. ಕಾಲೇಜಿನ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ಪ್ರೇಮ್ ಕುಮಾರ್, ರೋಟರಿ ಮಾಜಿ ಸಹಾಯಕ ಗವರ್ನರ್ ಜಗನ್ನಾಥ್ ಕೋಟೆ ಸಲಹೆ ಸೂಚನೆ ನೀಡಿದರು. ಸುರೇಶ್ ಕಾಮತ್ ಕಾರ್ಯಕ್ರಮ ನಿರೂಪಿಸಿದರು.

ಕೋಟ ಜನತಾ ಸಂಸ್ಥೆಯಲ್ಲಿ 55ನೇ ರಾಷ್ಟ್ರೀಯ ಸುರಕ್ಷತಾ ವಾರ ಸಮಾರೋಪ



ಕೋಟ: ಜನತಾ ಸಂಸ್ಥೆಯ ವತಿಯಿಂದ 55ನೇ ರಾಷ್ಟ್ರೀಯ ಸುರಕ್ಷತಾ ವಾರ ಹಾಗೂ ಸಂಸ್ಥೆಯ ನಾಲ್ಕನೇ ವರ್ಷದ ಸುರಕ್ಷತಾ ವಾರ ಜಾಗೃತಿ 2026 ಸಮಾರೋಪ ಸಮಾರಂಭವು ಸಂಸ್ಥೆಯ ಆವರಣದಲ್ಲಿ ಮಂಗಳವಾರ ನಡೆಯಿತು.

ಜನತಾ ಸಂಸ್ಥೆಯ ಮುಖ್ಯಸ್ಥ ಆನಂದ ಸಿ. ಕುಂದರ್ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿದ್ದ ಮನೋವೈದ್ಯ ಡಾ. ಪ್ರಕಾಶ್ ತೋಳಾರ್ ಅವರು ಸುರಕ್ಷತೆ ಎಂಬುದು ಕೇವಲ ನಿಯಮವಲ್ಲ, ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಿರಬೇಕು ಎಂದು ಹೇಳಿದರು.

ಸಂಸ್ಥೆ ಎಜಿಎಂ ಶ್ರೀನಿವಾಸ ಕುಂದರ್ ಪ್ರಸ್ತಾವನೆಗೈದು ಸುರಕ್ಷತಾ ವಾರದ ಮಹತ್ವ ವಿವರಿಸಿದರು. ನಂತರ ಸಂಸ್ಥೆಯ ಸಿಬ್ಬಂದಿ ಮಹೇಶ್ ನಾಯರಿ ಪ್ರಾರ್ಥನೆ ನಡೆಸಿದರು. ಸುರಕ್ಷತಾ ವಾರದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಈ ವೇಳೆ ಅಪಘಾತದಿಂದ ಪಾರಾದ ಸಿಬ್ಬಂದಿ ಅನುಭವ, ಅಗ್ನಿ ಅವಘಡದ ಸಂದರ್ಭದಲ್ಲಿನ ಪ್ರತಿಕ್ರಿಯೆ,ಸಂಸ್ಥೆಯೊಳಗೆ ನಡೆದ ಅಣಕು ತುರ್ತು ಕಾರ್ಯಾಚರಣೆ (ಮಾಕ್ ಡ್ರಿಲ್) ಕುರಿತ ವಿಡಿಯೋಗಳನ್ನು ಪ್ರದರ್ಶಿಸಲಾಯಿತು. ಸಂಸ್ಥೆಯ ನಿರ್ದೇಶಕರಾದ ಪ್ರಶಾಂತ್ ಕುಂದರ್, ರಕ್ಷಿತ್ ಕುಂದರ್, ಸದಸ್ಯರಾದ ದಿವ್ಯಲಕ್ಷ್ಮೀ ಪ್ರಶಾಂತ್ ಕುಂದರ್, ವೈಷ್ಣವಿ ರಕ್ಷಿತ್ ಕುಂದರ್, ಸಿಇಒ ಡಾ. ಧನೇಶ್ ಜಿವಾನಿ, ಸಿಎಫ್‌ಒ ಆಶ್ವತ್ ಜೆ. ಶೆಟ್ಟಿ ಉಪಸ್ಥಿತರಿದ್ದರು. ಫ್ಯಾಕ್ಟರಿ ಮ್ಯಾನೇಜರ್ ಮಿಥುನ್ ಕುಮಾರ್, ಎಚ್‌ಆರ್ ಶಿಲ್ಪಾ ಸಹಕರಿಸಿದರು. ಸುರಕ್ಷತಾ ಅಧಿಕಾರಿ ಕಾರ್ತಿಕ್ ಆಚಾರ್ಯ ವಂದಿಸಿದರು. ರವಿಕಿರಣ ಕೋಟ ಮತ್ತು ದೀಕ್ಷಿತಾ ಕಾರ್ಯಕ್ರಮ ನಿರೂಪಿಸಿದರು.

ಆಭರಣ್ ಮ್ಯಾರಥಾನ್ 2026: ನಿಟ್ಟೆ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ



ಕಾರ್ಕಳ: ನಿಟ್ಟೆ ಸಮೂಹ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು ಉಡುಪಿಯಲ್ಲಿ ನಡೆದ ಮ್ಯಾರಥಾನ್ ಸ್ಪರ್ಧೆಯಾದ ಆಭರಣ್ 2026 ರಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ನಿಟ್ಟೆ ಕ್ಯಾಂಪಸ್‌ಗೆ ಕೀರ್ತಿ ತಂದಿದ್ದಾರೆ.

ನಿಟ್ಟೆ ರುಕ್ಮಿಣಿ ಅಡ್ಯಂತಾಯ ಮೆಮೋರಿಯಲ್ ಪಾಲಿಟೆಕ್ನಿಕ್‌ನ ವಿದ್ಯಾರ್ಥಿನಿ ಸಾಕ್ಷಿ 18-40 ವರ್ಷ ವಯಸ್ಸಿನ ಮಹಿಳಾ ವಿಭಾಗದಲ್ಲಿ 5 ಕಿ.ಮೀ ಓಟದಲ್ಲಿ ಚಿನ್ನದ ಪದಕವನ್ನು ಪಡೆದರು. 3 ಕಿ.ಮೀ ಮಹಿಳಾ ಓಟದಲ್ಲಿ ಡಾ.ಎನ್.ಎಸ್.ಎ.ಎಂ ಕನ್ನಡ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿದರು.

ದೀಕ್ಷಿತಾ ಗಣಪತಿ ನಾಯಕ್ ಚಿನ್ನದ ಪದಕವನ್ನು ಗೆದ್ದರೆ, ದೀಪಿಕಾ ಮಂಜುನಾಥ್ ಗೊಂಡ್ ಬೆಳ್ಳಿ ಪದಕವನ್ನು ಪಡೆದರು.

ಡಾ.ಎನ್.ಎಸ್.ಎ.ಎಂ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಬಿ.ಕಾಂ ವಿದ್ಯಾರ್ಥಿನಿ ನಂದಿನಿ ಜಿ. ಅವರು 18-40 ವರ್ಷ ಮಹಿಳಾ ವಿಭಾಗದಲ್ಲಿ 10 ಕಿ.ಮೀ ಓಟದಲ್ಲಿ ಕಂಚಿನ ಪದಕ ಪಡೆದರು.

ಪುರುಷರ ವಿಭಾಗದಲ್ಲಿ, ನಿಟ್ಟೆ ರುಕ್ಮಿಣಿ ಅಡ್ಯಂತಾಯ ಮೆಮೋರಿಯಲ್ ಪಾಲಿಟೆಕ್ನಿಕ್ ನ ಶಾಶ್ವತ್ ರಾಜೇಶ್ ಪೂಜಾರಿ 18-40 ವರ್ಷ ಪುರುಷರ ವಿಭಾಗದಲ್ಲಿ 10 ಕಿ.ಮೀ ಓಟದಲ್ಲಿ ಕಂಚಿನ ಪದಕ ಗೆದ್ದರು.

ವಿದ್ಯಾರ್ಥಿಗಳಿಗೆ ಅಭಿನಂದನೆ

ಕ್ರೀಡಾಪಟುಗಳ ಸಾಧನೆಗಳು ನಿಟ್ಟೆ ಸಂಸ್ಥೆಗಳಿಗೆ ಹೆಮ್ಮೆ ತಂದಿವೆ, ಅವರ ಸಮರ್ಪಣೆ, ಶಿಸ್ತು ಮತ್ತು ಕ್ರೀಡಾ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ. ಆಭರನ್ 2026 ರಲ್ಲಿ ಅತ್ಯುತ್ತಮ ಪ್ರದರ್ಶನಕ್ಕಾಗಿ ನಿಟ್ಟೆ ವಿದ್ಯಾಸಂಸ್ಥೆಗಳ ಆಡಳಿತ ಮಂಡಳಿ ಪದಕ ವಿಜೇತರನ್ನು ಅಭಿನಂದಿಸಿರುವರು.

ನಿಮ್ಮಲಿರುವ ಪ್ರತಿಭೆಯನ್ನು ನೀವೇ ಗುರುತಿಸಿಕೊಳ್ಳಿ: ಗಣೇಶ್ ಕಾರಂತ್



ಉಡುಪಿ: ನಿಮ್ಮೊಳಗಿನ ಪ್ರತಿಭೆಯನ್ನು ಮೊದಲು ನೀವೇ ಗುರುತಿಸಿ, ಗೌರವಿಸಿ ಎಂದು ಕಲಾವಿದ ಗಣೇಶ್ ಕಾರಂತ್ ಅಭಿಪ್ರಾಯಪಟ್ಟರು.


ಅವರು ಪೂರ್ಣಂ 2026 ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪೂರ್ಣಂ ಉತ್ಸವದ ವಿಶೇಷ ಆಚರಣೆಯ ಪ್ರತೀಕವಾಗಿ ಪ್ರತಿ ಬಾರಿಯಂತೆ ಈ ಬಾರಿಯೂ ನಿಸ್ವಾರ್ಥ ಸೇವೆ ಸಲ್ಲಿಸುವ ಸಮಾಜ ಸೇವಕರನ್ನು ಗುರುತಿಸಿ ಗೌರವಿಸಲಾಯಿತು. ಈ ಬಾರಿಯ ಸಂಧ್ಯಾ ಸೇವಾ ಸೌರಭ ಪುರಸ್ಕಾರ ಪಡೆದ ರಕ್ತದಾನ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಸತೀಶ್ ಸಾಲ್ಯಾನ್ ಮಾತನಾಡಿದರು. ಉದ್ಯಮಿ ಕೃಷ್ಣಮೂರ್ತಿ ಆಚಾರ್ಯ ಶುಭ ಹಾರೈಸಿದರು. ಪ್ರಾಂಶುಪಾಲ ಡಾ.ಚಂದ್ರಕಾಂತ್ ಭಟ್ ಅಧ್ಯಕ್ಷತೆ ವಹಿಸಿಕೊಂಡಿದ್ದರು. ವೇದಿಕೆಯ ಮೇಲೆ ಪಿಐಎಂ ನ ನಿರ್ದೇಶಕ ಡಾ.ಪಿ.ಎಸ್ ಐತಾಳ್, ಐಕ್ಯುಎಸಿ ಘಟಕದ ಸಂಯೋಜಕ ಡಾ. ರಾಘವೇಂದ್ರ ಎಲ್., ವಿದ್ಯಾರ್ಥಿ ನಾಯಕ ಗಗನ್ ಜೆ. ಸುವರ್ಣ, ಪೂರ್ಣಂ 2026 ರ ಸಂಯೋಜಕರಾದ ಕು. ಅವನಿ ಆಚಾರ್ಯ, ವಿವೇಕ್. ಕೆ.ಎಂ, ಶ್ರೇಯಸ್ ನಾಯಕ್ ಉಪಸ್ಥಿತರಿದ್ದರು. ಸಮಗ್ರ ಪ್ರಶಸ್ತಿಯಲ್ಲಿ ಪ್ರಥಮ ಸ್ಥಾನವನ್ನು ಬಿ.ಬಿ.ಹೆಗ್ಡೆ ಕಾಲೇಜು ಪಡೆದುಕೊಂಡರೆ, ದ್ವಿತೀಯ ಸ್ಥಾನವನ್ನು ಪೂರ್ಣಪ್ರಜ್ಞ ಕಾಲೇಜು ತನ್ನದಾಗಿಸಿಕೊಂಡಿತು. ರಾನಿಯಾ ನಿರೂಪಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳಾದ ಡಾ.ಪ್ರಜ್ಞಾ ಮಾರ್ಪಳ್ಳಿ ಸ್ವಾಗತಿಸಿ, ವಿನಾಯಕ್ ಪೈ.ಬಿ. ವಂದಿಸಿದರು.

ಅಧಿವೇಶನದಲ್ಲಿ ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಪ್ರಶ್ನೆಗೆ ಗೃಹ ಸಚಿವರ ಉತ್ತರ

ಉಡುಪಿಯಲ್ಲಿ 90 ಪೊಲೀಸ್ ಹುದ್ದೆಗಳು ಖಾಲಿ

ಕಾಪು: ಉಡುಪಿ ಜಿಲ್ಲೆಯ ಪೊಲೀಸ್ ಇಲಾಖೆಯ ವಿವಿಧ ವೃಂದಗಳಲ್ಲಿ 1376 ಹುದ್ದೆಗಳು ಮಂಜೂರಾಗಿದ್ದು, 1286 ಹುದ್ದೆಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 90 ಹುದ್ದೆಗಳು ಖಾಲಿ ಇರುತ್ತದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.



ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಅವರು ಅಧಿವೇಶನದಲ್ಲಿ ಉಡುಪಿ ಜಿಲ್ಲೆಯಲ್ಲಿ ಪೊಲೀಸ್ ಇಲಾಖೆಯ ವಿವಿಧ ಸ್ಥರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಹಾಗೂ ಈ ಜಿಲ್ಲೆಯಲ್ಲಿ ಪೊಲೀಸ್ ನೇಮಕಾತಿ ಸಂದರ್ಭದಲ್ಲಿ ಹೊರ ಜಿಲ್ಲೆಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಅಭ್ಯರ್ಥಿಗಳು ನೇಮಕವಾಗಿ ನಂತರ ತಮ್ಮ ಸ್ವಂತ ಜಿಲ್ಲೆಗಳಿಗೆ ವರ್ಗಾವಣೆಗೊಳ್ಳುತ್ತಿದ್ದು, ಕಾನೂನು ಮತ್ತು ಸುವ್ಯವಸ್ಥೆಗೆ ಪೊಲೀಸ್ ಸಿಬ್ಬಂದಿ ಕೊರತೆ ಇರುವುದು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದರು.

ಉತ್ತರ ನೀಡಿದ ಗೃಹ ಸಚಿವರು, ಉಡುಪಿ ಜಿಲ್ಲೆಯಲ್ಲಿ ಕೌಟುಂಬಿಕ ಸಮಸ್ಯೆಗಳನ್ನು ಪರಿಗಣನೆಗೆ ತೆಗೆದುಕೊಂಡು ಹೊರ ಜಿಲ್ಲೆಗಳಿಗೆ ಪೊಲೀಸ್ ಸಿಬ್ಬಂದಿ ವರ್ಗಾವಣೆ ಮಾಡಲಾಗುತ್ತಿದ್ದು ಪ್ರಸ್ತುತ 85 ಸಿಪಿಸಿ ಹುದ್ದೆಗಳು ಖಾಲಿ ಇದ್ದು ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರ ನೀಡಿದ್ದಾರೆ.


ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಯಾಗಿಲ್ಲ

ಕಾಪು ತಾಲೂಕು ಕೇಂದ್ರವಾಗಿ ನಗರೀಕರಣದತ್ತ ದಾಪುಗಾಲು ಹಾಕುತ್ತಿದ್ದು ಸಂಚಾರ ದಟ್ಟಣೆಗಳು ಸಮಸ್ಯೆ ಹೆಚ್ಚಾಗುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಸಚಿವರು ಪ್ರತಿಕ್ರಿಯಿಸಿ, ಕಾಪು ತಾಲೂಕು ಕೇಂದ್ರಗಳಲ್ಲಿ ಕಳೆದ 3 ವರ್ಷಗಳಲ್ಲಿ 239 ಅಪರಾಧ ಪ್ರಕರಣಗಳು ದಾಖಲಾಗಿದೆ. ಕಾಪು ತಾಲೂಕು ಕೇಂದ್ರ ವ್ಯಾಪ್ತಿಯ ಸಂಚಾರ ಪೊಲೀಸ್ ಠಾಣೆ ಸೃಜಿಸುವ ಪ್ರಸ್ತಾನೆಯು ಸುತ್ತೋಲೆ ಸಂಖ್ಯೆ ಆರ್.ಎಲ್.ಎನ್ (5) 2/2017-18 ದಿನಾಂಕ 28.12.2018 ರಲ್ಲಿನ ಮಾನದಂಡಗಳನ್ನು ಪೂರೈಸಿರುವುದಿಲ್ಲ, ಸಂಚಾರ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಸಲ್ಲಿಕೆಯಾಗಿರುವುದಿಲ್ಲ, ಕಾಪು ತಾಲೂಕಿನಲ್ಲಿ ಸಂಚಾರಿ ನಿರ್ವಹಣೆಯನ್ನು ಕಾಪು ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳ ವತಿಯಿಂದ ನಿರ್ವಹಿಸಲಾಗುತ್ತಿದೆ ಎಂದು ಉತ್ತರವನ್ನು ನೀಡಿದ್ದಾರೆ.

ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಮನವಿಗೆ ಗೃಹ ಸಚಿವರ ಸ್ಪಂದನೆ

ಕುಂದಾಪುರ ಅಗ್ನಿಶಾಮಕ ಠಾಣೆ ಸ್ಥಳಾಂತರಕ್ಕೆ ಕ್ರಮ

ಕುಂದಾಪುರ: ಕುಂದಾಪುರನಗರಕ್ಕೆ ಠಾಣೆಯನ್ನು ಸ್ಥಳಾಂತರಿಸುವ ಅವಕಾಶವಿದ್ದಲ್ಲಿ ಮಾಡುತ್ತೇವೆ. ಅಲ್ಲದೆ ಖಾಲಿ ಇರುವ ಹುದ್ದೆ ಭರ್ತಿಗೂ ಕ್ರಮ ವಹಿಸುತ್ತೇವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಭರವಸೆ ನೀಡಿದ್ದಾರೆ.



ಕುಂದಾಪುರ ಅಗ್ನಿಶಾಮಕ ಠಾಣೆ ಸ್ಥಳಾಂತರ ಮಾಡುವ ಬಗ್ಗೆ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಸದನದಲ್ಲಿ ವಿಷಯ ಪ್ರಸ್ತಾಪಿಸಿ, ಕುಂದಾಪುರ ಅಗ್ನಿಶಾಮಕ ಠಾಣೆ ನಗರ ಕೇಂದ್ರದಿಂದ 6 ಕಿ.ಮೀ. ದೂರದ ಗ್ರಾಮಾಂತರದಲ್ಲಿದೆ. ಸಿಂಗಲ್ ರೋಡ್ ಆಗಿರುವುದರಿಂದ ದುರಂತ ದುರಂತ ಸ್ಥಳಗಳಿಗೆ ಜಲವಾಹನ ತಲುಪಲು ಅಡೆತಡೆಯಿದೆ. ಕಳೆದ 2 ತಿಂಗಳುಗಳಲ್ಲಿ ಕುಂದಾಪುರ ನಗರ ವ್ಯಾಪ್ತಿಯಲ್ಲಿ 6 ಅಗ್ನಿ ಅವಘಡಗಳು ನಡೆದಿವೆ. ಇದರಲ್ಲಿ ಅಂಗಡಿ, ಮನೆ ಸುಟ್ಟು ಹೋಗಿವೆ. ಬೆಳ್ವೆ ಮತ್ತು ಕೋಟೇಶ್ವರದಲ್ಲಿ ಘನತ್ಯಾಜ್ಯ ಘಟಕದಲ್ಲಿ ಅಗ್ನಿ ಅನಾಹುತ ಆಗಿದೆ. ಜಲವಾಹನ ಬರುವ ಮುಂಚಿತವಾಗಿ ಎಲ್ಲವೂ ಸುಟ್ಟುಹೋಗುವ ಸ್ಥಿತಿಯಿದೆ. ಒಂದೇ ಅಗ್ನಿಶಾಮಕ ಠಾಣೆಗೆ ಹೋಗುವ ರಸ್ತೆ ಅಗಲೀಕರಿಸಬೇಕು. ಇಲ್ಲವಾದಲ್ಲಿ ಠಾಣೆಯನ್ನು ಕುಂದಾಪುರ ನಗರಕ್ಕೆ ಸ್ಥಳಾಂತರಿಸಬೇಕು. ನಗರದಲ್ಲಿ 15 ಸೆಂಟ್ಸ್ ಸರಕಾರಿ ಜಾಗ ಮತ್ತು ಕುಡಿಯುವ ನೀರಿನ ಬಾವಿಯಿದ್ದು ಅಲ್ಲಿಗೆ ಸ್ಥಳಾಂತರಿಸುವುದಾದಲ್ಲಿ ಪ್ರಸ್ತಾವನೆ ಸಲ್ಲಿಸುವುದಾಗಿ ಕೊಡ್ಗಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಗೃಹ ಸಚಿವ ಡಾ.ಜಿ.ಪರಮೇಶ್ವರ್, ರಸ್ತೆ ಅಗಲೀಕರಣ ನಮ್ಮ ವ್ಯಾಪ್ತಿಗೆ ಬರಲ್ಲ, ಆದರೆ ಸಂಬಂಧಿತರಿಗೆ ಸೂಚಿಸಬಹುದು. ಸ್ಥಳಾಂತರಿಸುವ ಅವಕಾಶವಿದ್ದಲ್ಲಿ ಮಾಡುತ್ತೇವೆ. ಅಲ್ಲದೆ ಖಾಲಿ ಇರುವ ಹುದ್ದೆ ಭರ್ತಿಗೂ ಕ್ರಮ ವಹಿಸುತ್ತೇವೆ ಎಂದು ಹೇಳಿದ್ದಾರೆ. 15 ವರ್ಷ ಮೇಲ್ಪಟ್ಟ ವಾಹನ ಸ್ಕ್ರಾಪ್‌ಗೆ ಹಾಕುವ ಕೇಂದ್ರ ಸರಕಾರದ ಆದೇಶದ ಹಿನ್ನಲೆಯಲ್ಲಿ ಅಗ್ನಿಶಾಮಕ ಠಾಣೆಯ 443 ವಾಹನ ಸ್ಕ್ರಾಪ್‌ಗೆ ನೀಡಬೇಕಾಗುತ್ತದೆ. ಇದರಿಂದ ವಿನಾಯಿತಿ ನೀಡುವಂತೆ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಅದಕ್ಕೆ ಒಪ್ಪಿಗೆ ಸಿಕ್ಕಿಲ್ಲ, ಬದಲಿ ವಾಹನ ಖರೀದಿಗೆ ರಾಜ್ಯ ಸರಕಾರ ಮುಂದಾಗಿದ್ದು ಈಗಾಗಲೆ 270 ವಾಹನ ಖರೀದಿಸಿದ್ದೇವೆ. ಅದರಲ್ಲಿ 100 ಡೆಲಿವರಿ ಆಗಿದೆ. ಒಟ್ಟು 547 ವಾಹನ ಖರೀದಿಸಬೇಕಿದೆ ಎಂದು ಅವರು ಹೇಳಿದ್ದಾರೆ.